ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 76,200 | ನಿಫ್ಟಿ 24,021 | $/₹ 94.55

ಏಕದಿನ ರ್‍ಯಾಂಕಿಂಗ್: ಎರಡನೇ ಸ್ಥಾನಕ್ಕೆ ಗಿಲ್


ಭಾರತ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್ ಅವರು ಐಸಿಸಿ ಬುಧವಾರ ಪ್ರಕಟಿಸಿರುವ ಏಕದಿನ ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನ ಪಡೆದಿದ್ದಾರೆ



ಗೃಹಲಕ್ಷ್ಮಿ: ₹225 ಕೋಟಿ ಅಕ್ರಮ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವರಣೆ ಕೇಳಿರುವ ಸಿಎಜಿ

● ಜಯಸಿಂಹ ಆರ್.



ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಗೃಹಲಕ್ಷ್ಮಿ' ಯೋಜನೆ ಜಾರಿಯಾದ ಮೊದಲ ಎರಡು ವರ್ಷದಲ್ಲೇ ₹225 ಕೋಟಿಯಷ್ಟು ಅಕ್ರಮ ನಡೆದಿದೆ ಎಂದು ಮಹಾಲೇಖಪಾಲರು (ಸಿಎಜಿ) ಲೆಕ್ಕಪರಿಶೋಧನೆ ವೇಳೆ ಗುರುತಿಸಿದ್ದಾರೆ.

'ಈ ಬಗ್ಗೆ ವಿವರಣೆ ನೀಡಿ ಎಂದು ಹಲವು ತಿಂಗಳುಗಳ ಹಿಂದೆಯೇ ಪತ್ರ ಬರೆದಿದ್ದರೂ, ವರದಿ ಸಲ್ಲಿಸದೇ ನಿರ್ಲಕ್ಷ್ಯ ತೋರುತ್ತಿದ್ದೀರಿ' ಎಂದು ಸಿಎಜಿಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಪತ್ರ ಬರೆದು ಆಕ್ಷೇಪ ವ್ಯಕ್ತಪಡಿಸಿದೆ. ಸಿಎಜಿ ಪತ್ರವನ್ನು ಲಗತ್ತಿಸಿ ಇಲಾಖೆಯ ಕಾರ್ಯದರ್ಶಿಯು ಅಧೀನ ಅಧಿಕಾರಿಗಳಿಗೆ ಪತ್ರ ಬರೆದಿದ್ದು, 'ತಕ್ಷಣವೇ ಅಗತ್ಯ ಮಾಹಿತಿಗಳೊಂದಿಗೆ ಅನುಪಾಲನಾ ವರದಿ ಸಲ್ಲಿಸಿ' ಎಂದು ಕಟ್ಟುನಿಟ್ಟಾಗಿ ಸೂಚನೆ ನೀಡಿದ್ದಾರೆ.

2023-24 ಮತ್ತು 2024-25ನೇ ಸಾಲಿನಲ್ಲಿ ಯೋಜನೆಯ ಅನುಷ್ಠಾನ ಕುರಿತು ಸಿಎಜಿ ಲೆಕ್ಕಪರಿಶೋಧನೆ ನಡೆಸುತ್ತಿದೆ. ಇಲಾಖೆಯು ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಮತ್ತು ಹಣ ಜಮೆ ದತ್ತಾಂಶವನ್ನು ಲೆಕ್ಕ-ಪರಿಶೋಧನೆಗಾಗಿ ಸಿಎಜಿಗೆ ಸಲ್ಲಿಸಲಾಗಿತ್ತು. 'ಡೇಟಾ ಡಂಪ್' ತಂತ್ರಾಂಶ ಬಳಸಿಕೊಂಡು ಸಿಎಜಿಯು ದತ್ತಾಂಶಗಳ ಪ್ರಾಥಮಿಕ ಪರಿಶೋಧನೆ ನಡೆಸಿತ್ತು. ಈ ಹಂತದಲ್ಲಿಯೇ ಅಕ್ರಮದ ಹಲವು ಸ್ವರೂಪಗಳನ್ನು ಸಿಎಜಿ ಗುರುತಿಸಿದೆ.

ಯೋಜನೆ ಆರಂಭವಾದಾಗಿನಿಂದ ಲೆಕ್ಕಪರಿಶೋಧನೆಗೆ ಆಯ್ಕೆ ಮಾಡಿಕೊಂಡ ಅವಧಿಯಲ್ಲಿ ಒಟ್ಟು 2.88 ಲಕ್ಷ ಫಲಾನುಭವಿಗಳು ಮೃತಪಟ್ಟಿದ್ದರು. ▸12

₹116 ಕೋಟಿ 1.08 ಲಕ್ಷ ಮೃತ ಫಲಾನುಭವಿಗಳ ಖಾತೆಗೆ ಜಮೆ ಮಾಡಿರುವ ಮೊತ್ತ

₹60.70 ಕೋಟಿ 19,020 ಫಲಾನುಭವಿಗಳ ಹೆಸರಿನಲ್ಲಿ ಕೆಲವೇ ಖಾತೆಗಳಿಗೆ ಪಾವತಿ ಮಾಡಲಾದ ಮೊತ್ತ

₹46.65 ಕೋಟಿ ಫಲಾನುಭವಿ ಮತ್ತು ಬ್ಯಾಂಕ್ ಖಾತೆ ವಿವರಗಳು ಇಲ್ಲದೆ ಬಿಡುಗಡೆ ಮಾಡಲಾದ ಮೊತ್ತ

10 ಲಕ್ಷ ಫಲಾನುಭವಿಗಳಿಗೆ ಹಲವು ಖಾತೆ

ಯೋಜನೆಯ 1.23 ಕೋಟಿ ಫಲಾನುಭವಿಗಳ ಪೈಕಿ 10.06 ಲಕ್ಷ ಫಲಾನುಭವಿಗಳು ಒಂದಕ್ಕಿಂತ ಹೆಚ್ಚು ಬ್ಯಾಂಕ್ ಖಾತೆಗಳನ್ನು ಹೊಂದಿದ್ದಾರೆ ಎಂಬುದನ್ನು ಸಿಎಜಿ ಪತ್ತೆ ಮಾಡಿದೆ.

ಹೀಗೆ ಒಂದಕ್ಕಿಂತ ಹೆಚ್ಚು ಖಾತೆಗಳನ್ನು ಹೊಂದಿರುವ ಒಬ್ಬನೇ ಫಲಾನುಭವಿಯ ಎಲ್ಲ ಖಾತೆಗಳಿಗೆ ಒಂದು ತಿಂಗಳು ಹಣ ಜಮೆ ಮಾಡಿ, ನಂತರ ಕೆಲ ತಿಂಗಳು ಬಿಟ್ಟು ಮತ್ತೆ ಹಣ ಜಮೆ ಮಾಡಲಾಗಿದೆ. ಇನ್ನು ಕೆಲವು ಬಾರಿ ಅದೇ ಫಲಾನುಭವಿಯ ಕೇವಲ ಒಂದು ಖಾತೆಗೆ ಮಾತ್ರ ಹಣ ಹಾಕಿರುವುದು ಪತ್ತೆಯಾಗಿದೆ.

ಕೆಲವು ಫಲಾನುಭವಿಗಳು ಎರಡು ವರ್ಷದಲ್ಲಿ ಪದೇ-ಪದೇ ಬ್ಯಾಂಕ್ ಖಾತೆ ಬದಲಿಸಿದ್ದಾರೆ. ಒಮ್ಮೆ ಬಳಸಿದ್ದ ಖಾತೆಯನ್ನು ಐದಾರು ತಿಂಗಳ ನಂತರ ಮತ್ತೆ ಬಳಸಿದ್ದಾರೆ ಎಂದು ಸಿಎಜಿ ಹೇಳಿದೆ. ಅಂತಹ ಫಲಾನುಭವಿಗಳನ್ನು ಗುರುತಿಸಿ, ಬ್ಯಾಂಕ್ ಖಾತೆಗಳ ವಿವರಗಳನ್ನು ಪರಿಶೀಲಿಸುವಂತೆ ಇಲಾಖೆಯು ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಿದೆ. ಬೆಂಗಳೂರು ನಗರ ಒಂದರಲ್ಲೇ 1.15 ಲಕ್ಷ ಫಲಾನುಭವಿಗಳು ಹಲವು ಖಾತೆಗಳನ್ನು ಹೊಂದಿರುವುದು ಪತ್ತೆಯಾಗಿದೆ.

ನಿಯಮ ಮೀರಿ ಜಾಹೀರಾತು

ಗೃಹಲಕ್ಷ್ಮಿ ಯೋಜನೆ ಕುರಿತ ಜಾಹೀರಾತುಗಳನ್ನು ಪ್ರದರ್ಶಿಸುವ ₹3.98 ಕೋಟಿ ಮೊತ್ತದ ಗುತ್ತಿಗೆಯನ್ನು ನಿಯಮಬಾಹಿರವಾಗಿ ಝೇಂಕಾರ್ ಅಡ್ವರ್ಟೈಸಿಂಗ್ ಕಂಪನಿಗೆ ನೀಡಲಾಗಿದೆ ಎಂದು ಸಿಎಜಿ ಹೇಳಿದೆ.

ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯ ಅನ್ವಯ ಟೆಂಡರ್ ಕರೆದು, ಗುತ್ತಿಗೆ ನೀಡಬೇಕಾಗಿತ್ತು. ಆದರೆ ಇಲಾಖಾ ನಿರ್ದೇಶಕರ ಕಚೇರಿಯು ಟೆಂಡರ್ ಕರೆಯದೇ, ಖರೀದಿ ಆದೇಶವನ್ನು ಹೊರಡಿಸಿದೆ. ಜಿಲ್ಲಾ ಹಂತದಲ್ಲಿ ಹೋರ್ಡಿಂಗ್‌ಗಳನ್ನು ಹಾಕಲು ₹2.50 ಕೋಟಿ ಮೊತ್ತದ ಮತ್ತು ಮಾಲ್‌ಗಳಲ್ಲಿ ಜಾಹೀರಾತು ಪ್ರದರ್ಶಿಸಲು ₹1.48 ಕೋಟಿ ಮೊತ್ತದ ಗುತ್ತಿಗೆ ನೀಡಲಾಗಿದೆ. ಈ ಮೂಲಕ ಅಕ್ರಮ ಎಸಗಲಾಗಿದೆ. ಈ ಬಗ್ಗೆ ವಿವರಣೆ ಕೇಳಿದ್ದರೂ, ಈವರೆಗೆ ಅನುಪಾಲನಾ ವರದಿ ಬಂದಿಲ್ಲ ಎಂದು ಸಿಎಜಿ ಹೇಳಿದೆ. ಬೆಂಗಳೂರಿನ ರಾಜಾಜಿನಗರದಲ್ಲಿ ಈ ಕಂಪನಿ ತನ್ನ ಕೇಂದ್ರ ಕಚೇರಿಯನ್ನು ಹೊಂದಿದೆ.

ವಂಚನೆ: 5 ದಿನದಲ್ಲಿ ಹಣ ಮರುಪಾವತಿ

ಮುಂಬೈ: ಕ್ರೆಡಿಟ್ ಕಾರ್ಡ್ ಬಳಸಿ ವಂಚನೆಯ ಉದ್ದೇಶದ ವಹಿವಾಟು ನಡೆದಾಗ, ಬ್ಯಾಂಕ್‌ಗಳು ವಹಿವಾಟಿನ ಮೊತ್ತವನ್ನು ತಾತ್ಕಾಲಿಕವಾಗಿ ಆ ಗ್ರಾಹಕನಿಗೆ ಮರುಭರ್ತಿ ಮಾಡಿಕೊಡಬೇಕು ಎಂದು ಆರ್‌ಬಿಐ ಸೂಚನೆ ನೀಡಿದೆ. ವಿವರ ▸12

ಚಿನಕುರುಳಿ ಪ್ರಕಾಶ್ ಶೆಟ್ಟಿ



ಅಬಕಾರಿ ಹೆಚ್ಚುವರಿ ಆಯುಕ್ತರ ಮನೆಯಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಅಬಕಾರಿ ಇಲಾಖೆಯ ಬೆಳಗಾವಿ, ಕಲಬುರಗಿ, ದಾವಣಗೆರೆ ಮತ್ತು ಹೊಸಪೇಟೆ ವಿಭಾಗದ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ್ ಮತ್ತು ಆಪ್ತರಿಗೆ ಸೇರಿದ ಹಲವು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದಾರೆ.



ವೈ.ಮಂಜುನಾಥ

ಕ್ರಿಪ್ಟೋಕರೆನ್ಸಿ ಮೂಲಕ ಅಕ್ರಮವಾಗಿ ವಿದೇಶಿ ವಹಿವಾಟು ನಡೆಸಿದ ಪ್ರಕರಣದಲ್ಲಿ ತನಿಖೆ ನಡೆಸುತ್ತಿದ್ದ ಇ.ಡಿ ದೆಹಲಿ ಕೇಂದ್ರ ಕಚೇರಿ ತಂಡವು ನೀಡಿದ್ದ ಮಾಹಿತಿಯ ಮೇರೆಗೆ ಇ.ಡಿ ಬೆಂಗಳೂರು ಮತ್ತು ಗೋವಾ ವಲಯಗಳ ಅಧಿಕಾರಿಗಳು ಬುಧವಾರದ ಕಾರ್ಯಾಚರಣೆ ರೂಪಿಸಿದ್ದರು. ಬೆಳಗಾವಿಯ ಆರು, ವಿಜಯನಗರದ ಎರಡು, ಮೈಸೂರಿನ ನಾಲ್ಕು ಮತ್ತು ಬೆಂಗಳೂರಿನ ಎರಡು ಕಡೆ ದಾಳಿ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಪ್ರಕರಣದ ತನಿಖೆಯ ಭಾಗವಾಗಿ ಇನ್ನೂ ನಾಲ್ಕು ತಂಡಗಳು ಗೋವಾದ ಪಣಜಿ, ಮಹಾರಾಷ್ಟ್ರದ ಸೊಲ್ಲಾಪುರ, ಪುಣೆ ಮತ್ತು ಮುಂಬೈನ ಹಲವೆಡೆ ಶೋಧ ನಡೆಸಿವೆ. ದಾಳಿ ನಡೆದ ಸಂದರ್ಭದಲ್ಲಿ ಮಂಜುನಾಥ್ ಅವರು ಬೆಂಗಳೂರಿನ ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಇದ್ದರು ಎಂದು ಗೊತ್ತಾಗಿದೆ. ▸6

ಬಾಲಕಿಯ ಮೇಲೆ ಅತ್ಯಾಚಾರ, ಕೊಲೆ

ನವದೆಹಲಿ (ಪಿಟಿಐ): ದಕ್ಷಿಣ ದೆಹಲಿಯ ಪಾದಚಾರಿ ಮಾರ್ಗದಲ್ಲಿ ಪೋಷಕರ ಜತೆ ಮಲಗಿದ್ದ 11 ವರ್ಷದ ಬಾಲಕಿಯನ್ನು ಕ್ಯಾಬ್ ಚಾಲಕನೊಬ್ಬ ಅಪಹರಿಸಿ, ಅತ್ಯಾಚಾರ ಎಸಗಿ, ಕೊಲೆ ಮಾಡಿರುವ ಘಟನೆ ನಡೆದಿದೆ.

ಈ ಘಟನೆ ಜೂನ್ 22ರ ಮುಂಜಾನೆ ನಡೆದಿದ್ದು, ಆರೋಪಿ ಬಾಶು ಕುಮಾರ್ ಸಿಂಗ್ (29) ಎಂಬಾತನನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

'ಗಾಂಜಾ ನಶೆಯಲ್ಲಿದ್ದ ಆರೋಪಿಯು ಬಾಲಕಿಯನ್ನು ಫರೀದಾಬಾದ್- ಗುರುಗ್ರಾಮ ಗಡಿ ಬಳಿಯ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಅಲ್ಲದೆ ಬಟ್ಟೆ ತುಂಡಿನಿಂದ ಕತ್ತು ಬಿಗಿದು, ಕಲ್ಲಿನಿಂದ ಎದೆಗೆ ಹೊಡೆದು ಕೊಂದಿದ್ದಾನೆ. ನಂತರ ಕಲ್ಲುಗಳ ರಾಶಿಯಿಂದ ಬಾಲಕಿಯ ದೇಹವನ್ನು ಮುಚ್ಚಿ, ಸಾಕ್ಷ್ಯ ನಾಶಕ್ಕೂ ಯತ್ನಿಸಿದ್ದಾನೆ' ಎಂದು ಅವರು ಮಾಹಿತಿ ನೀಡಿದ್ದಾರೆ. ▸11



ದಿನಾಂಕ 25/6/2026 ಗುರುವಾರದಂದು ತುಂಗಭದ್ರಾ ಆಣೆಕಟ್ಟಿನ ನೂತನ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುತ್ತಿರುವ ಗೌರವಾನ್ವಿತ ಮುಖ್ಯಮಂತ್ರಿಗಳು, ಕೇಂದ್ರ ಜಲಸಂಪನ್ಮೂಲ ಸಚಿವರು ಹಾಗೂ ಎಲ್ಲಾ ಗಣ್ಯಮಾನ್ಯರಿಗೆ ತುಂಬು ಹೃದಯದ ಹಾರ್ದಿಕ ಸುಸ್ವಾಗತ.

ನಂ.ಶಾಸಕರು/ಯಲಬುರ್ಗಾ/2026/8 ದಿನಾಂಕ 23.06.2026

ಶ್ರೀ ಬಸವರಾಜ ರಾಯರಡ್ಡಿ
ಶಾಸಕರು, ಯಲಬುರ್ಗಾ ವಿಧಾನಸಭಾ ಕ್ಷೇತ್ರ.

ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ವಂದನೆಗಳು,

2025–26ರ ಮುಂಗಾರು ಅವಧಿಯಲ್ಲಿ ತುಂಗಭದ್ರಾ ಜಲಾಶಯದ ಒಂದು ಕ್ರಸ್ಟ್ ಗೇಟ್ ಕೊಚ್ಚಿ ಹೋಗಿ ಈ ಜಲಾನಯನ ಪ್ರದೇಶದ ರೈತರಿಗೆ ತೊಂದರೆಯಾಯಿತು. ತುಂಗಭದ್ರಾ ಅಚ್ಚುಕಟ್ಟಿನ ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರು ಹಾಗೂ ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರೂ ಆದ ಶ್ರೀ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕರಾದ ಶ್ರೀ ರಾಹುಲ್ ಗಾಂಧಿಯವರ ಮಾರ್ಗದರ್ಶನದಲ್ಲಿ ನಮ್ಮ ಸರ್ಕಾರದ ನಿಕಟಪೂರ್ವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿಗಳಾದ (ಶ್ರೀ ಡಿ.ಕೆ. ಶಿವಕುಮಾರ) ತಮ್ಮ ನೇತೃತ್ವದಲ್ಲಿ ಅತ್ಯಂತ ಕ್ಷಿಪ್ರಗತಿಯಲ್ಲಿ ಹೊಸ ಕ್ರಸ್ಟ್ ಗೇಟುಗಳನ್ನು ಅಳವಡಿಸಿ ರೈತರ ನೀರಾವರಿ ಯೋಜನೆಗೆ ಆಗುತ್ತಿದ್ದ ತೊಂದರೆಗಳನ್ನು ನಿವಾರಿಸಿರುವ ಐತಿಹಾಸಿಕ ಕ್ಷಣಗಳನ್ನು ನಾವು ಇಂದು ನೋಡುತ್ತಿದ್ದೇವೆ.

ತಾವು ಈಗ ಮುಖ್ಯಮಂತ್ರಿಗಳಾಗಿ ತುಂಗಭದ್ರಾ ಜಲಾಶಯದಲ್ಲಿ ಹೊಸ ಕ್ರಸ್ಟ್ ಗೇಟ್‌ಗಳನ್ನು ಅಳವಡಿಸಿದ ಐತಿಹಾಸಿಕ ಕಾರ್ಯಕ್ರಮದ ಉದ್ಘಾಟನೆಗೆ ಮಾನ್ಯ ಕೇಂದ್ರ ಜಲಶಕ್ತಿ ಸಚಿವರಾದ ಶ್ರೀ ಸಿ.ಆರ್. ಪಾಟೀಲ್‌ರವರು, ಆಂಧ್ರ ಪ್ರದೇಶ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡು ಹಾಗೂ ತೆಲಂಗಾಣದ ಮುಖ್ಯಮಂತ್ರಿಗಳಾದ ಶ್ರೀ ರೇವಂತ ರೆಡ್ಡಿರವರು ಹಾಗೂ ಸಂಬಂಧಪಟ್ಟ ಸಚಿವರನ್ನು ಆಹ್ವಾನಿಸಿರುವುದು ಕೇಂದ್ರ ಸರಕಾರ ಮತ್ತು ನೆರೆ ರಾಜ್ಯಗಳ ಸರಕಾರದೊಂದಿಗೆ ಸ್ನೇಹಮಯ ವಾತಾವರಣ ಕಲ್ಪಿಸುತ್ತಿರುವುದು ರಾಜ್ಯದ ಹಿತದೃಷ್ಠಿಯಿಂದ ಜಾಣ್ಮೆಯ ನಡೆಯಾಗಿದೆ. ಈ ಹಿನ್ನೆಲೆಯಲ್ಲಿ 33 ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಸಮಾರಂಭಕ್ಕೆ ತಮ್ಮನ್ನು ಕೇಂದ್ರ ಸಚಿವರು, ನೆರೆ ರಾಜ್ಯದ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಹಾಗೂ ಇನ್ನಿತರೆ ಗಣ್ಯರನ್ನು ಆದರದಿಂದ ಸ್ವಾಗತಿಸಲು ಹರ್ಷಿಸುತ್ತೇನೆ.

ಕೃಷ್ಣಾ ನದಿ ಪಾತ್ರದ ವಿಷಯಗಳ ಬಗ್ಗೆ ನಾನು ನೀರಾವರಿ ಹಾಗೂ ಕಾನೂನು ತಜ್ಞರುಗಳ ಜೊತೆ ಚರ್ಚಿಸಿ, ಕೆಳಕಂಡ ಕೆಲವು ಮಹತ್ವದ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದು, ಮಾನ್ಯ ಕೇಂದ್ರ ಜಲಶಕ್ತಿ ಸಚಿವರ ಭೇಟಿಯ ಈ ಸಂದರ್ಭದಲ್ಲಿ ತಾವು ಚರ್ಚಿಸಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಹಲವು ವರ್ಷಗಳಿಂದ ಬಾಕಿಯಿರುವ ವಿಷಯಗಳನ್ನು ಇತ್ಯರ್ಥಪಡಿಸುವಂತೆ ಕೋರುತ್ತೇನೆ.

ಎ. ತುಂಗಭದ್ರಾ ಉಪ ಜಲಾನಯನ ಪ್ರದೇಶಕ್ಕೆ (ಕೆ-8) ಸಂಬಂಧಿಸಿದ ವಿಷಯಗಳು:

1. ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದ ವಿಷಯಗಳು:

ಈ ಯೋಜನೆಗೆ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ವು 29.9 ಟಿಎಂಸಿ ನೀರನ್ನು ಹಂಚಿಕೆ ಮಾಡಿದೆ. ಈ ಯೋಜನೆಯನ್ನು 2 ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಮಾರ್ಚ್ 2025ರ ಅಂತ್ಯದವರೆಗೆ 10,693 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಆದರೆ, ಯೋಜನೆಯನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ 10,781 ಕೋಟಿ ರೂ.ಗಳ ಅಗತ್ಯವಿದೆ. ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ತಮ್ಮ 2023–24ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ಯೋಜನೆಗೆ 5,300 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದೆಂದು ಘೋಷಣೆ ಮಾಡಿದ್ದರು (ಪ್ಯಾರಾ ನಂ.39, ಪುಟ ಸಂಖ್ಯೆ.10). ಹಿಂದಿನ ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಸವರಾಜ ಬೊಮ್ಮಾಯಿಯವರು ತಮ್ಮ ಆಯವ್ಯಯ ಭಾಷಣದಲ್ಲಿ ಕೇಂದ್ರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಿದ್ದರು. ಸದರಿ ಅನುದಾನವನ್ನು ಬಿಡುಗಡೆ ಮಾಡುವಂತೆ ನಿಕಟಪೂರ್ವ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮತ್ತು ಉಪ ಮುಖ್ಯಮಂತ್ರಿಗಳಾಗಿದ್ದ ತಾವು (ಶ್ರೀ ಡಿ.ಕೆ. ಶಿವಕುಮಾರ್) ಕೇಂದ್ರ ಸರ್ಕಾರವನ್ನು ಹಲವಾರು ಬಾರಿ ಮನವಿ ಮಾಡಿದ್ದಿರಿ. ಆದರೆ ಇದುವರೆಗೂ ಘೋಷಿತ ಅನುದಾನ ಬಿಡುಗಡೆಯಾಗಿರುವುದಿಲ್ಲ. ಇಂತಹ ಅಸಹಕಾರ ಧೋರಣೆ ಕೇಂದ್ರ ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಇದರಿಂದ ಯೋಜನೆಯ ಪ್ರಗತಿಗೆ ಅಡ್ಡಿಯಾಗಿದೆ. ಆದ್ದರಿಂದ ಯೋಜನೆಯನ್ನು ಪೂರ್ಣಗೊಳಿಸಲು ಪೂರಕವಾಗುವಂತೆ ಕೇಂದ್ರ ಸರ್ಕಾರವು ರೂ.5,300 ಕೋಟಿಗಳನ್ನು ಕೂಡಲೇ ಬಿಡುಗಡೆ ಮಾಡುವಂತೆ ಕೇಂದ್ರ ಜಲಶಕ್ತಿ ಸಚಿವರನ್ನು ಒತ್ತಾಯಿಸುವಂತೆ ಕೋರಲಾಗಿದೆ.

2. ತುಂಗಭದ್ರಾ ಜಲಾಶಯಕ್ಕೆ ಸಂಬಂಧಿಸಿದ ವಿಷಯಗಳು:

- ತುಂಗಭದ್ರಾ ಜಲಾಶಯ ನಿರ್ಮಾಣವಾದಾಗ 132 ಟಿಎಂಸಿ ನೀರು ಸಂಗ್ರಹ ಸಾಮರ್ಥ ಹೊಂದಿತ್ತು. ಆದರೆ ಪ್ರಸ್ತುತ ತುಂಗಭದ್ರಾ ಜಲಾಶಯದಲ್ಲಿ 32 ಟಿಎಂಸಿಗಿಂತ ಹೆಚ್ಚು ಪ್ರಮಾಣದಲ್ಲಿ ಹೂಳು ತುಂಬಿದೆ. ಇದರಿಂದಾಗಿ ಜಲಾನಯನ ರಾಜ್ಯಗಳು, ವಿಶೇಷವಾಗಿ ಕರ್ನಾಟಕವು ಪ್ರತೀ ವರ್ಷ ಗಣನೀಯ ಪ್ರಮಾಣದ ನೀರನ್ನು ಕಳೆದುಕೊಳ್ಳುತ್ತಿದೆ (ಇದರಿಂದ ಕರ್ನಾಟಕಕ್ಕೆ ಶೇ.65ರಷ್ಟು, ಆಂಧ್ರ ಮತ್ತು ತೆಲಂಗಾಣ ರಾಜ್ಯಗಳಿಗೆ ಶೇ.35ರಷ್ಟು ನೀರಿನ ನಷ್ಟ ಉಂಟಾಗುತ್ತಿದೆ) ಹಾಗೂ ಈ ನೀರು ತೆಲಂಗಾಣ ಮತ್ತು ಆಂಧ್ರ ಪ್ರದೇಶ ರಾಜ್ಯಗಳಿಗೆ ಪ್ರಯೋಜನವಾಗುವಂತೆ ಹರಿದುಹೋಗುತ್ತಿದೆ. "ಪ್ರಮುಖ ಜಲಾಶಯಗಳ ಹೂಳು ತೆಗೆಯುವುದು ಆರ್ಥಿಕವಾಗಿ ಪ್ರಯೋಜನಕಾರಿಯಲ್ಲ ಹಾಗೂ ಈ ಸಮಸ್ಯೆಯನ್ನು ಪರಿಹರಿಸಲು ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವಿದೆ" ಎಂದು ಜಲಶಕ್ತಿ ಮಂತ್ರಾಲಯವು ಅಭಿಪ್ರಾಯಪಟ್ಟಿದೆ.
- ಇಂತಹ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಲು ಹಾಗೂ ನಂತರ 3 ರಾಜ್ಯಗಳಿಗೆ ಪ್ರಯೋಜನಕಾರಿಯಾಗುವಂತೆ ಬಳಸಲು ಕೊಪ್ಪಳ ಜಿಲ್ಲೆಯ ನವಲಿ ಗ್ರಾಮದಲ್ಲಿ ಪರ್ಯಾಯ ಜಲಾಶಯವನ್ನು ನಿರ್ಮಿಸಲು ರಾಜ್ಯ ಸರ್ಕಾರ ಯೋಜಿಸಿದೆ. 2026–27ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಈ ಯೋಜನೆಯನ್ನು ಈಗಾಗಲೇ ಘೋಷಣೆ ಮಾಡಲಾಗಿದೆ.ಈ ಯೋಜನೆಗೆ ಇತರ 2 ಜಲಾನಯನ ರಾಜ್ಯಗಳು (ತೆಲಂಗಾಣ ಮತ್ತು ಆಂಧ್ರ ಪ್ರದೇಶ) ಹಾಗೂ ತುಂಗಭದ್ರಾ ಮಂಡಳಿಗಳು (ಟಿ.ಬಿ. ಬೋರ್ಡ್) ತಾತ್ವಿಕ ಒಪ್ಪಿಗೆ ನೀಡಬೇಕು. ನವಲಿಯಲ್ಲಿ ನಿರ್ಮಿಸಬಹುದಾದ ಪರ್ಯಾಯ ಜಲಾಶಯದಲ್ಲಿ ಸಂಗ್ರಹವಾಗುವ ಹೆಚ್ಚುವರಿ ನೀರಿನಿಂದಾಗಿ ಈ ಜಲಾನಯನ ಪ್ರದೇಶದ ನೀರಾವರಿ ಸೌಲಭ್ಯಗಳ ವಿಸ್ತರಣೆಯಾಗುವುದರಿಂದ ಆಹಾರ ಭದ್ರತೆಯನ್ನು ಒದಗಿಸುತ್ತದೆ ಮತ್ತು ದೇಶದ ಜಿಡಿಪಿ ಗೆ ನೇರವಾಗಿ ಕೊಡುಗೆ ನೀಡುತ್ತದೆ. ತುಂಗಭದ್ರಾ ನದಿಯು 3 ರಾಜ್ಯಗಳನ್ನು ಒಳಗೊಂಡಿರುವ ಅಂತರ ರಾಜ್ಯ ನದಿಯಾಗಿರುವುದರಿಂದ ಮೂರೂ ರಾಜ್ಯಗಳ ರೈತರ ಹಿತಾಸಕ್ತಿಯನ್ನು ರಕ್ಷಿಸಲು ಹಾಗೂ ಹೂಳು ತೆಗೆಯುವಿಕೆಗೆ ಪರಿಹಾರವಾಗಿ ಈ ಪರ್ಯಾಯ ಜಲಾಶಯವನ್ನು ನಿರ್ಮಿಸುವುದು ಅತ್ಯವಶ್ಯಕ.
- ಈ ವಿಷಯದ ಬಗ್ಗೆ ಶೀಘ್ರವಾಗಿ ಸೂಕ್ತ ನಿರ್ಧಾರ ಕೈಗೊಳ್ಳಲು ಕೇಂದ್ರ ಜಲಶಕ್ತಿ ಸಚಿವರು ಮೂರು ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ ಕರೆಯುವಂತೆ ಹಾಗೂ ಈ ಯೋಜನೆಗೆ ಶೇ.100ರಷ್ಟು ಆರ್ಥಿಕ ನೆರವನ್ನು ನೀಡುವಂತೆ ಕೇಂದ್ರ ಜಲಶಕ್ತಿ ಮಂತ್ರಾಲಯಕ್ಕೆ ಮನವಿ ಮಾಡಬಹುದು.

3. ದೇಶದ ಎಲ್ಲಾ ಅಣೆಕಟ್ಟುಗಳ, ಅದರಲ್ಲೂ ವಿಶೇಷವಾಗಿ ಕರ್ನಾಟಕ ರಾಜ್ಯದ ಎಲ್ಲಾ ಅಣೆಕಟ್ಟುಗಳ ಹಳೆಯದಾದ ಕ್ರಸ್ಟ್ ಗೇಟುಗಳನ್ನು ಬದಲಾಯಿಸುವ ಬಗ್ಗೆ:

ಅ) ಕೇಂದ್ರ ಜಲಶಕ್ತಿ ಆಯೋಗದ (CWC) "ಗೇಟ್ ನಿರ್ದೇಶನಾಲಯ"ವು ಹಳೆಯ ಗೇಟ್‌ಗಳನ್ನು ಬದಲಾಯಿಸಲು ಯಾವುದೇ ಅವಧಿಯನ್ನು ನಿಗದಿಪಡಿಸಿರುವುದಿಲ್ಲ. ಆದ್ದರಿಂದ ವಿವಿಧ ರೀತಿಯ ಕ್ರಸ್ಟ್ ಗೇಟ್‌ಗಳಿಗೆ ನಿರ್ಧಿಷ್ಠ ಅವಧಿಯನ್ನು ನಿಗದಿಪಡಿಸಲು ಗೇಟ್ ನಿರ್ದೇಶನಾಲಯಕ್ಕೆ ಭಾರತ ಸರ್ಕಾರವು ಕೂಡಲೇ ಸೂಕ್ತ ನಿರ್ದೇಶನ ನೀಡಬೇಕು.

ಆ) ಗೇಟ್ ನಿರ್ದೇಶನಾಲಯವು ಅವಧಿಯನ್ನು ನಿಗದಿಪಡಿಸಿದ ನಂತರ ಜಲಶಕ್ತಿ ಮಂತ್ರಾಲಯವು ಅವಧಿ ಮೀರಿದ ಹಳೆಯ ಗೇಟ್‌ಗಳನ್ನು ಬದಲಾಯಿಸಲು ರಾಜ್ಯಗಳಿಗೆ ಶೇ.100ರಷ್ಟು ಆರ್ಥಿಕ ನೆರವು ನೀಡುವಂತಹ ಕೇಂದ್ರ ಯೋಜನೆಯನ್ನು ಘೋಷಿಸಬೇಕು. ಅಂತಹ ಕೇಂದ್ರ ಯೋಜನೆಯು 5–7 ವರ್ಷಗಳ ಅವಧಿಗೆ ಮಾನ್ಯವಾಗಿರಬೇಕು. ಇದರಿಂದ ದೇಶದ ಎಲ್ಲಾ ಅಣೆಕಟ್ಟುಗಳಲ್ಲಿನ ಹಳೆಯ ಗೇಟ್‌ಗಳನ್ನು ಹಂತ ಹಂತವಾಗಿ ಬದಲಾಯಿಸಲು ಸಾಧ್ಯವಾಗುತ್ತದೆ.

ಇ) ಎಲ್ಲಾ ರೀತಿಯ ಕ್ರಸ್ಟ್ ಗೇಟ್‌ಗಳ ತಯಾರಿಕೆಯಲ್ಲಿ ಸ್ಟೇಯಿನ್‌ಲೆಸ್ ಸ್ಟೀಲ್ ಬಳಕೆ ಮಾಡುವುದರಿಂದ ತುಕ್ಕು ಹಿಡಿಯುವಂತಹ ಸಮಸ್ಯೆಯನ್ನು ನಿವಾರಿಸಬಹುದಾಗಿದೆ.

4. ತುಂಗಭದ್ರಾ ಯೋಜನೆಯಲ್ಲಿನ ಕಾಲುವೆ (ಎಡದಂಡೆ ಕಾಲುವೆ) ಜಾಲದ ಆಧುನೀಕರಣಕ್ಕೆ ಸಂಬಂಧಿಸಿದ ಸಮಸ್ಯೆಗಳು:

ತುಂಗಭದ್ರಾ ಅಣೆಕಟ್ಟು ಸ್ವಾತಂತ್ರ್ಯ ಪೂರ್ವದಲ್ಲಿ ನಿರ್ಮಾಣವಾಗಿದ್ದು ಸುಮಾರು 80 ವರ್ಷಗಳಷ್ಟು ಹಳೆಯದಾಗಿದೆ. ಇದರಿಂದಾಗಿ ಕಾಲುವೆ ವ್ಯವಸ್ಥೆಯಲ್ಲಿ ಹೂಳು ತುಂಬಿಕೊಂಡಿದೆ. ಇದೀಗ ಸಂಪೂರ್ಣ ಎಡದಂಡೆ ಕಾಲುವೆ ವ್ಯವಸ್ಥೆ ಮತ್ತು ಕ್ರಾಸ್ ಡ್ರೈನೇಜ್ ಕೆಲಸಗಳನ್ನು ಆಧುನೀಕರಣಗೊಳಿಸಬೇಕಿದೆ. ಇದರಿಂದ ಇಡೀ ಯೋಜನೆಗೆ ಪುನರ್ಜನ್ಮ ನೀಡಬಹುದಾಗಿದೆ. ಇದಕ್ಕಾಗಿ Accelerated Irrigation Benefit Programme (AIBP) ಅಡಿಯಲ್ಲಿ ರೂ.1,604 ಕೋಟಿಗಳ ವೆಚ್ಚದ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರ ಕೆಲವು ವಿಷಯಗಳ ಬಗ್ಗೆ ಸ್ಪಷ್ಟನೆ ಕೋರಿದ್ದು, ಕೂಡಲೇ ಅಗತ್ಯ ಮಾಹಿತಿಯೊಂದಿಗೆ ಕೇಂದ್ರಕ್ಕೆ ವಿವರ ಸಲ್ಲಿಸಬೇಕಿದೆ. ಎಡದಂಡೆ ಕಾಲುವೆಯು ಸುಮಾರು 270 ಕಿ.ಮೀ.ಗಳಿಷ್ಟಿದ್ದು, ಹೂಳು ತುಂಬುವಿಕೆ ತಡೆಯಲು ಹಾಗೂ ನೀರಿನ ಸೋರಿಕೆ ತಡೆಗಟ್ಟಲು ಕೇಂದ್ರ ಸರ್ಕಾರಕ್ಕೆ ಕೂಡಲೇ ಅಗತ್ಯ ಮಾಹಿತಿ ಒದಗಿಸಿ AIBP ಅಡಿಯಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು.

ಬಿ. ಕೃಷ್ಣಾ ನದಿಗೆ ಸಂಬಂಧಿಸಿದ ವಿಷಯಗಳು:

1. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ-2ರ ಆದೇಶವನ್ನು ಭಾರತ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟಿಸಬೇಕು:

ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–1ರ ಆದೇಶವನ್ನು ಕೂಡಲೇ ಅಂದರೆ 31.5.1976ರಂದೇ ಭಾರತ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಆದರೆ, ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ವು ಅಂತರ ರಾಜ್ಯ ಜಲ ವಿವಾದ ಕಾಯ್ದೆ 1956ರ ಸೆಕ್ಷನ್ 5(3)ರಡಿ ದಿನಾಂಕ 29.11.2013ರಂದು ನೀಡಿದ ಆದೇಶವನ್ನು 13 ವರ್ಷಗಳು ಕಳೆದರೂ ಇನ್ನೂ ಭಾರತ ಸರ್ಕಾರದ ಗೆಜೆಟ್‌ನಲ್ಲಿ ಕೇಂದ್ರ ಸರ್ಕಾರ ಪ್ರಕಟಿಸಿರುವುದಿಲ್ಲ. ಸರ್ವೋಚ್ಛ ನ್ಯಾಯಾಲಯವು ತನ್ನ ಸಹಮತಿ ಇಲ್ಲದೆ ಸದರಿ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಿಸಬಾರದೆಂದು ದಿನಾಂಕ 16.9.2011ರಂದು ಆದೇಶ ನೀಡಿದೆ. ಆದರೆ, ಗೆಜೆಟ್‌ನಲ್ಲಿ ಪ್ರಕಟಿಸದಂತೆ ಯಾವುದೇ ತಡೆಯಾಜ್ಞೆಯನ್ನು ಸರ್ವೋಚ್ಛ ನ್ಯಾಯಾಲಯ ನೀಡಿರುವುದಿಲ್ಲ.

ಅಂತರ ರಾಜ್ಯ ಜಲ ವಿವಾದ ಕಾಯ್ದೆ 1956 ಹಾಗೂ ಸರ್ಕಾರಿಯ ಆಯೋಗಗಳ (Sarkaria Commission) ಶಿಫಾರಸ್ಸಿನಂತೆ ಯಾವುದೇ ಅಂತರ ರಾಜ್ಯ ಜಲ ವಿವಾದವನ್ನು ಗರಿಷ್ಠ 7 ವರ್ಷಗಳ ಅವಧಿಯಲ್ಲಿ ಬಗೆಹರಿಸಬೇಕು. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ರ ಆದೇಶದಲ್ಲಿನ ನಿಯಮ XXIIರ ಪ್ರಕಾರ, ಭಾರತ ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನದಂದು ಆದೇಶ ಜಾರಿಗೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಈ ಆದೇಶ ಜಾರಿಯಾಗದೇ ಇರುವುದರಿಂದ ಕರ್ನಾಟಕವು ತನ್ನ ಪಾಲಿನ 173 ಟಿಎಂಸಿ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಏತ ನೀರಾವರಿಯ 9 ಯೋಜನೆಗಳ ಜೊತೆಗೆ ಕೊಪ್ಪಳ ಏತ ನೀರಾವರಿಯ ಯೋಜನೆಗೆ ಸಂಬಧಿಸಿದ ಹುನಗುಂದ, ಬಾದಾಮಿ, ರೋಣ, ಯಲಬುರ್ಗಾ, ಕುಕನೂರ, ಕುಷ್ಟಗಿ ಹಾಗೂ ಕನಕಗಿರಿ ತಾಲೂಕಿನ ಜಮೀನುಗಳಿಗೆ ನೀರಾವರಿಯನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಈ ಎಲ್ಲಾ ಕಾನೂನಾತ್ಮಕ ಸಮಸ್ಯೆಗಳು ಗೊತ್ತಿದ್ದರು ಕೂಡ ರಾಜ್ಯ ಬಿಜೆಪಿ ಮುಖಂಡರು ತಮ್ಮದೇ ಪಕ್ಷದ ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿ ಕೊಡುತ್ತಿಲ್ಲ. ಇದರಿಂದ ನಮ್ಮ ಕೊಪ್ಪಳ ಜಿಲ್ಲೆಗೆ ನೀರಾವರಿ ಮಾಡುವಲ್ಲಿ ಅನ್ಯಯಾವಾಗುತ್ತಿದೆ. ಇದಕ್ಕೆಲ್ಲಾ ಕೇಂದ್ರ ಸರ್ಕಾರವೇ ಸಂಪೂರ್ಣ ಹೊಣೆಯಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ ಕೂಡಲೇ ಗೆಜೆಟ್‌ನಲ್ಲಿ ನ್ಯಾಯಾಧೀಕರಣದ ಆದೇಶವನ್ನು ಪ್ರಕಟಿಸಬೇಕು.

2. ಕೇಂದ್ರ ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ನ್ನು ರಾಷ್ಟ್ರೀಯ ಯೋಜನೆಯಾಗಿ (National Project) ಘೋಷಿಸಬೇಕು:

ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ನ್ನು ಜೂನ್ 1, 2000ದಂದು ರಚಿಸಬೇಕಿತ್ತು. ಆದರೆ, 4 ವರ್ಷಗಳಷ್ಟು ತಡವಾಗಿ ಅಂದರೆ 2004ರ ಏಪ್ರಿಲ್‌ನಲ್ಲಿ ರಚಿಸಲಾಯಿತು. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ವು ಅಂತರ ರಾಜ್ಯ ಜಲ ವಿವಾದ ಕಾಯ್ದೆ 1956ರ ಸೆಕ್ಷನ್ 5(3)ರಡಿ ದಿನಾಂಕ 29.11.2013ರಂದು ನೀಡಿದ ಆದೇಶವನ್ನು 13 ವರ್ಷಗಳು ಕಳೆದರೂ ಇನ್ನೂ ಭಾರತ ಸರ್ಕಾರದ ಗೆಜೆಟ್‌ನಲ್ಲಿ ಕೇಂದ್ರ ಸರ್ಕಾರ ಪ್ರಕಟಿಸಿರುವುದಿಲ್ಲ. ಒಟ್ಟಾರೆಯಾಗಿ 17 ವರ್ಷಗಳಷ್ಟು ವಿಳಂಬವಾಗಿರುವುದರಿಂದ ಭೂಸ್ವಾಧೀನದ ವೆಚ್ಚ ಏರಿಕೆಯಾಗಿದೆ. ಇದರಿಂದ ಕರ್ನಾಟಕ ರಾಜ್ಯಕ್ಕೆ ಹೆಚ್ಚು ಆರ್ಥಿಕ ಹೊರೆಯಾಗುತ್ತಿದೆ.

ಕೇಂದ್ರ ಸರ್ಕಾರ ನಿಗದಿತ ಸಮಯದೊಳಗೆ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಿದ್ದರೆ, ಭೂಸ್ವಾಧೀನದ ವೆಚ್ಚವು ಕಡಿಮೆಯಾಗುತ್ತಿತ್ತು. ಯುಕೆಪಿ–3ಕ್ಕೆ ಬೇಕಾದ ಸುಮಾರು 1,33,867 ಎಕರೆ ಸ್ವಾಧೀನಪಡಿಸಿಕೊಳ್ಳಲು ಪ್ರಸ್ತುತ ಭೂಸ್ವಾಧೀನ ವೆಚ್ಚವು ಹಲವು ಪಟ್ಟು ಹೆಚ್ಚಾಗಿದೆ. ನಮ್ಮ ಸರ್ಕಾರ ನಿಕಟಪೂರ್ವ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹಾಗೂ ತಾವು ಭೂಮಿ ಕಳೆದುಕೊಳ್ಳುವ ರೈತರೊಂದಿಗೆ ಮಾತುಕತೆ ನಡೆಸಿ ಪರಿಹಾರವಾಗಿ ಕೆಳಕಂಡಂತೆ ದರಗಳನ್ನು ನಿಗದಿಪಡಿಸಲಾಗಿದೆ.

1. ಮುಳುಗಡೆಯಾಗುವ ಭೂಮಿ: ಅ) ಒಣ ಭೂಮಿ–ಎಕರೆಗೆ ರೂ.30 ಲಕ್ಷಗಳು ಆ) ನೀರಾವರಿ ಭೂಮಿ–ಎಕರೆಗೆ ರೂ.40 ಲಕ್ಷಗಳು
2. ಕಾಲುವೆ ಜಾಲಕ್ಕಾಗಿ ಭೂಮಿ: ಅ) ಒಣ ಭೂಮಿ–ಎಕರೆಗೆ ರೂ.25 ಲಕ್ಷಗಳು ಆ) ನೀರಾವರಿ ಭೂಮಿ–ಎಕರೆಗೆ ರೂ.30 ಲಕ್ಷಗಳು

ಭೂ ಪರಿಹಾರ ಮೊತ್ತವನ್ನು ಹೆಚ್ಚಿಸಿರುವುದರಿಂದ ಭೂಸ್ವಾಧೀನಕ್ಕಾಗಿ ರಾಜ್ಯ ಸರ್ಕಾರಕ್ಕೆ ಅಗಾಧ ಪ್ರಮಾಣದ ಆರ್ಥಿಕ ಸಂಪನ್ಮೂಲದ ಅವಶ್ಯಕತೆ ಇದೆ. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ರ ರಚನೆ ಹಾಗೂ ಗೆಜೆಟ್ ಪ್ರಕಟಣೆಯಲ್ಲಿ ಕೇಂದ್ರ ಸರ್ಕಾರ ಮಾಡುತ್ತಿರುವ ವಿಳಂಬದಿಂದಾಗಿ ವೆಚ್ಚ ಏರಿಕೆಯ ಅಡ್ಡ ಪರಿಣಾಮವನ್ನು ರಾಜ್ಯ ಸರ್ಕಾರ ಎದುರಿಸುವಂತಾಗಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಸುಮಾರು ಒಂದೂವರೆ ಲಕ್ಷ ಕೋಟಿಗೂ ಹೆಚ್ಚಿನ ಆರ್ಥಿಕ ಹೊರೆ ಉಂಟಾಗಿದೆ. ಕೃಷ್ಣ ಜಲವಿವಾಧ ನ್ಯಾಯಾಧೀಕರಣ–2ರ ಆದೇಶದ 166 ಟಿಎಂಸಿ ನೀರಿನಿಂದ 20 ಲಕ್ಷಕ್ಕೂ ಹೆಚ್ಚು ಎಕರೆಗೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದ್ದು, ಇದರಿಂದ ಆಹಾರ ಉತ್ಪಾದನೆ ಹೆಚ್ಚಳವಾಗುತ್ತದೆ ಹಾಗೂ ನಿರುದ್ಯೋಗ ಸಮಸ್ಯೆ ಕಡಿಮೆಯಾಗುತ್ತದೆ ಮತ್ತು ದೇಶದ ಜಿಡಿಪಿಯು ಏರಿಕೆಯಾಗುತ್ತದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ನ್ನು ರಾಷ್ಟ್ರೀಯ ಯೋಜನೆಯಾಗಿ (National Project) ಘೋಷಿಸಬೇಕು ಹಾಗೂ ಹಿಂದಿನ ಯುಪಿಎ ಸರ್ಕಾರ ಪೋಲಾವರಂ ಯೋಜನೆಗೆ ಆರ್ಥಿಕ ಸಹಾಯ ನೀಡಿರುವಂತೆ ಈ ಯೋಜನೆಗೂ ಆರ್ಥಿಕ ನೆರವನ್ನು ಕೇಂದ್ರ ಸರ್ಕಾರ ನೀಡಬೇಕು.

3. ಭೀಮಾ ನದಿ ಮತ್ತು ಕೃಷ್ಣಾ ನದಿಗಳ ನೀರನ್ನು ಪಶ್ಚಿಮಕ್ಕೆ ತಿರುಗಿಸುವ ಯೋಜನೆಯ ಮೇಲ್ವಿಚಾರಣೆ:

ಭೀಮಾ ನದಿ ಮತ್ತು ಕೃಷ್ಣಾ ನದಿಗಳ ನೀರಿನ ನಿರ್ಧಿಷ್ಠ ಪ್ರಮಾಣವನ್ನು ಪಶ್ಚಿಮಕ್ಕೆ ತಿರುಗಿಸಲು ಮಹಾರಾಷ್ಟ್ರಕ್ಕೆ ಈಗಾಗಲೇ ಅನುಮತಿ ನೀಡಲಾಗಿದೆ. ಆದರೆ, ಮಹಾರಾಷ್ಟ್ರ ರಾಜ್ಯವು ಯೋಜನೆಯ ಬಗ್ಗೆ ಜಲಾನಯನ ಪ್ರದೇಶದ ಇತರ ರಾಜ್ಯಗಳಿಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ. ಆದ್ದರಿಂದ ಕೇಂದ್ರ ಜಲಶಕ್ತಿ ಆಯೋಗದಂತಹ ಸ್ವತಂತ್ರ ಸಂಸ್ಥೆಗಳ ಮೇಲ್ವಿಚಾರಣೆಯಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಜಲಶಕ್ತಿ ಮಂತ್ರಾಲಯ ಕ್ರಮ ಕೈಗೊಳ್ಳಬೇಕು.

4. ಜಲ ವಿವಾದಗಳನ್ನು ಪರಿಹರಿಸಲು "ಸಾಮಾನ್ಯ ನ್ಯಾಯ ಮಂಡಳಿ"ಗಳನ್ನು ಸ್ಥಾಪಿಸಬೇಕು:

2019ರ ಅಂತರ ರಾಜ್ಯ ಜಲ ವಿವಾದ ತಿದ್ದುಪಡಿ ಮಸೂದೆಯು ಜುಲೈ 31, 2019ರಂದು ಲೋಕ ಸಭೆಯಲ್ಲಿ ಅಂಗೀಕಾರವಾಗಿದೆ. ಆದರೆ, ರಾಜ್ಯ ಸಭೆಯಲ್ಲಿ ಮಸೂದೆ ಮಂಡನೆಯೇ ಆಗಲಿಲ್ಲ. ಲೋಕ ಸಭೆ ವಿಸರ್ಜನೆಯಾದ್ದರಿಂದ ಸಂವಿಧಾನದ 107ನೆಯ ವಿಧಿಯನ್ವಯ ಈ ಮಸೂದೆ ಅನೂರ್ಜಿತಗೊಂಡಿತು. ಈ ಮಸೂದೆಯನ್ನು ಸಂಸತ್ತಿನಲ್ಲಿ ಪುನ: ಮಂಡಿಸಿ ಅಂಗೀಕರಿಸಿದರೆ ಜಲ ವಿವಾದ ನ್ಯಾಯ ಮಂಡಳಿಗಳ ರಚನೆಯಲ್ಲಾಗುತ್ತಿರುವ ವಿಳಂಬವನ್ನು ತಪ್ಪಿಸಬಹುದು. ನ್ಯಾಯಾಧಿಕರಣದ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಿಸಬೇಕೆಂಬ ನಿಯಮವನ್ನು ಈ ಮಸೂದೆಯಲ್ಲಿ ಕೈಬಿಡಲಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ ಕೂಡಲೇ ಸದರಿ ಮಸೂದೆಯನ್ನು ಮರು ಮಂಡಿಸಿ ಸಾಮಾನ್ಯ ನ್ಯಾಯ ಮಂಡಳಿಯ ರಚನೆಗೆ ಕ್ರಮ ಕೈಗೊಳ್ಳಬೇಕು.

ಮೇಲ್ಕಂಡ ಅಂಶಗಳನ್ನು ತಾವು ಪರಿಗಣಿಸಿ ಕೇಂದ್ರ ಜಲಶಕ್ತಿ ಸಚಿವರೊಡನೆ ಚರ್ಚಿಸಿ, ಅವುಗಳಿಗೆ ಪರಿಹಾರ ಒದಗಿಸಿದಲ್ಲಿ, ಕಲ್ಯಾಣ ಕರ್ನಾಟಕ ಭಾಗದ ಲಕ್ಷಾಂತರ ರೈತರು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ.

ಮಾನ್ಯಶ್ರೀ ಡಿ.ಕೆ. ಶಿವಕುಮಾರ್‌ರವರು,
ಸನ್ಮಾನ್ಯ ಮುಖ್ಯ ಮಂತ್ರಿಯವರು,
ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಪ್ರತಿಯನ್ನು ವಂದನಾಪೂರ್ವಕವಾಗಿ:
1. ಶ್ರೀ ಸಿದ್ದರಾಮಯ್ಯನವರು, ನಿಕಟ ಪೂರ್ವಮುಖ್ಯಮಂತ್ರಿಗಳು, ಕಾವೇರಿ ನಿವಾಸ, ಬೆಂಗಳೂರು
2. ಶ್ರೀ ರಾಮಲಿಂಗಾರೆಡ್ಡಿರವರು, ಮಾನ್ಯ ಜಲಸಂಪನ್ಮೂಲ ಸಚಿವರು, ವಿಧಾನ ಸೌಧ, ಬೆಂಗಳೂರು

ಗೌರವಗಳೊಂದಿಗೆ,
ತಮ್ಮ ವಿಶ್ವಾಸಿ,

[ಬಸವರಾಜ ರಾಯರಡ್ಡಿ]

ಡೇಟಾ ಎಂಟ್ರಿ ಆಪರೇಟರ್ ಕೌಶಲ ಪರೀಕ್ಷೆಗೆ ತಕರಾರು

ಬೆಂಗಳೂರು ವಿಶ್ವವಿದ್ಯಾಲಯ, ಹೊರಗುತ್ತಿಗೆ ನೌಕರರ ನಡುವೆ ಸಂಘರ್ಷ

● ಎ.ಎಂ.ಸುರೇಶ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳಿಗೆ ಕೌಶಲ ಪರೀಕ್ಷೆ ಆಯೋಜಿಸಿರುವುದು ಹೊರಗುತ್ತಿಗೆ ನೌಕರರು ಮತ್ತು ವಿಶ್ವವಿದ್ಯಾಲಯದ ಆಡಳಿತ ಮಂಡಳಿ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ.

ವಿಶ್ವವಿದ್ಯಾಲಯದ ವಿವಿಧ ವಿಭಾಗ ಗಳು ಮತ್ತು ಕಚೇರಿಗಳಲ್ಲಿ 100 ಮಂದಿ ಡೇಟಾ ಎಂಟ್ರಿ ಆಪರೇಟರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ 100 ಅಂಕಗಳ ಕೌಶಲ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಇದರಲ್ಲಿ ಶೇ 50ರಷ್ಟು ಅಂಕಗಳನ್ನು ಪಡೆದರೆ ಮಾತ್ರ ಸೇವೆಯಲ್ಲಿ ಮುಂದುವರಿಸಲಾಗುತ್ತದೆ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಇದರಿಂದಾಗಿ ಹೊರಗುತ್ತಿಗೆ ನೌಕರರು ಉದ್ಯೋಗ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

ಕೆಲವು ಡೇಟಾ ಎಂಟ್ರಿ ಆಪರೇಟರ್‌ಗಳು ಕಂಪ್ಯೂಟರ್ ಜ್ಞಾನ ಹಾಗೂ ಕನ್ನಡ/ಇಂಗ್ಲಿಷ್ ಟೈಪಿಂಗ್‌ನ ಸಮರ್ಪಕವಾದ ಕೌಶಲ ಹೊಂದಿಲ್ಲ. ಆಪರೇಟರ್‌ಗಳ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಲು ಅಗತ್ಯವಾದ ಕೌಶಲವನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಕೌಶಲ ಪರೀಕ್ಷೆ ನಡೆಸಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಕುಲಸಚಿವರು ಆದೇಶದಲ್ಲಿ ತಿಳಿಸಿದ್ದಾರೆ.



ಅಂಕಿ ಅಂಶಗಳು

829 ಮಂಜೂರಾದ ಒಟ್ಟು ಹುದ್ದೆಗಳು

347 ಹಾಲಿ ಕಾರ್ಯ ನಿರ್ವಹಿಸುತ್ತಿರುವವರು

430 ಹೊರಗುತ್ತಿಗೆ ನೌಕರರು

76 ದಿನಗೂಲಿ ನೌಕರರು

ಕನ್ನಡ/ಇಂಗ್ಲಿಷ್ ಟೈಪಿಂಗ್ ವೇಗ ಮತ್ತು ನಿಖರತೆ, ಕಂಪ್ಯೂಟರ್‌ನಲ್ಲಿ ಕಾರ್ಯನಿರ್ವಹಣೆ ಮತ್ತು ಕಚೇರಿ ಕೆಲಸ, ಎಂಎಸ್ ಪವರ್ ಪಾಯಿಂಟ್, ಎಂಎಸ್ ಎಕ್ಸೆಲ್, ಎಂಎಸ್ ವರ್ಡ್ ಇತ್ಯಾದಿ ವಿಷಯಗಳ ಬಗ್ಗೆ ಮೂರು ಗಂಟೆ ಅವಧಿಯ ಕೌಶಲ ಪರೀಕ್ಷೆ ನಡೆಯಲಿದೆ.

ಈ ಪರೀಕ್ಷೆಯಲ್ಲಿ ಉತ್ತೀರ್ಣಕ್ಕೆ ನಿಗದಿಪಡಿಸಿರುವ ಶೇ 50ರಷ್ಟು ಅಂಕಗಳನ್ನು ಗಳಿಸಿದರೆ ಮಾತ್ರ ಸೇವೆಯಲ್ಲಿ ಮುಂದುವರಿಯಲು ಆದೇಶ ನೀಡಲಾಗುತ್ತದೆ. ಪರೀಕ್ಷೆ ಯಲ್ಲಿ ಅನುತ್ತೀರ್ಣರಾದರೆ, ಗೈರು ಹಾಜರಾದರೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಸೇವೆಯಲ್ಲಿ ಮುಂದುವರಿಸಲು ಪರಿಗಣಿಸುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಇದು ಹೊರಗುತ್ತಿಗೆ ನೌಕರರ ಆಕ್ರೋಶಕ್ಕೆ ಕಾರಣವಾಗಿದ್ದು, ಪರೀಕ್ಷೆ ನಡೆಸುವ ತೀರ್ಮಾನವನ್ನು ಕೈಬಿಡಬೇಕು ಎಂದು ಆಗ್ರಹಿಸಿದ್ದಾರೆ.

‘15–20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇವೆ. ಕಂಪ್ಯೂಟರ್ ಕೌಶಲ ಹೊಂದಿರುವ ಬಗ್ಗೆ ಸರ್ಟಿಫಿಕೇಟ್ ಇದೆ. ನಮ್ಮ ಸೇವೆ ತೃಪ್ತಿಕರವಾಗಿಲ್ಲ ಎಂದು ಇದುವರೆಗೆ ಯಾವುದೇ ವಿಭಾಗದ ಮುಖ್ಯಸ್ಥರು ಹೇಳಿಲ್ಲ. ಪರೀಕ್ಷೆಯಲ್ಲಿ ಶೇ 50ರಷ್ಟು ಅಂಕಗಳನ್ನು ಗಳಿಸಿಲ್ಲ ಎಂದು ಸೇವೆಯಿಂದ ತೆಗೆದರೆ ಸಂಸಾರ ನಿರ್ವಹಣೆ ಮಾಡುವುದು ಹೇಗೆ?’ ಎಂದು ಹೊರಗುತ್ತಿಗೆ ನೌಕರರು ಅಳಲು ತೋಡಿಕೊಂಡರು.

‘ವಿ.ವಿ.ಯ ಈ ತೀರ್ಮಾನ ನಮಗೆ ನುಂಗಲಾರದ ಬಿಸಿತುಪ್ಪವಾಗಿದೆ. ಕುಲಪತಿಯನ್ನು ಭೇಟಿ ಮಾಡಿ ನಮ್ಮ ಅಳಲನ್ನು ತೋಡಿಕೊಂಡಿದ್ದೇವೆ. ಮುಂದೆ ಏನು ಮಾಡುತ್ತಾರೊ ಗೊತ್ತಿಲ್ಲ. ಕಾದು ನೋಡುತ್ತೇವೆ’ ಎಂದು ಹೊರಗುತ್ತಿಗೆ ನೌಕರರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಇಂದು ಪರೀಕ್ಷೆ ಇಲ್ಲ’

ಡೇಟಾ ಎಂಟ್ರಿ ಆಪರೇಟರ್‌ಗಳಿಂದ ತೀವ್ರ ವಿರೋಧ ವ್ಯಕ್ತವಾದ ಕಾರಣ ಗುರುವಾರ ನಡೆಯಬೇಕಿದ್ದ ಕೌಶಲ ಪರೀಕ್ಷೆಯನ್ನು ಮುಂದೂಡಲಾಗಿದೆ. ಇದೇ ತಿಂಗಳ 29ರಂದು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆ ನಡೆಯಲಿದ್ದು, ಅಲ್ಲಿ ಚರ್ಚೆ ನಡೆಸಿದ ಬಳಿಕ ಹೊಸ ದಿನಾಂಕವನ್ನು ನಿಗದಿಪಡಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಕೆಲ ಆಪರೇಟರ್‌ಗಳು ಪರೀಕ್ಷೆಗೆ ಹೆಚ್ಚಿನ ಕಾಲಾವಕಾಶ ನೀಡುವಂತೆ ಕೇಳಿದ್ದರು. ಅಲ್ಲದೆ ಪರೀಕ್ಷೆ ನಡೆಸುವ ತೀರ್ಮಾನ ಬೇರೆ ಬೇರೆ ಆಯಾಮ ಪಡೆದುಕೊಳ್ಳುವ ಸಾಧ್ಯತೆ ಇರುವುದರಿಂದ ತರಾತುರಿಯಲ್ಲಿ ಮಾಡುವುದು ಬೇಡ. ಸಿಂಡಿಕೇಟ್ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಿದ ನಂತರ ತೀರ್ಮಾನಕ್ಕೆ ಬರುವುದು ಒಳ್ಳೆಯದು ಎಂಬ ಸಲಹೆಗಳು ಬಂದಿರುವುದರಿಂದ ಪರೀಕ್ಷೆಯನ್ನು ಮುಂದೂಡಲಾಗಿದೆ ಎಂದು ತಿಳಿದುಬಂದಿದೆ.

ತಪ್ಪೇನಿದೆ?

ಕೆಲಸ ಬರುತ್ತದೊ, ಇಲ್ಲವೊ ಎಂದು ತಿಳಿದುಕೊಳ್ಳಲು ಪರೀಕ್ಷೆ ಮಾಡಲಾಗುತ್ತಿದೆ. ಇದರಲ್ಲಿ ತಪ್ಪೇನಿದೆ? ಕೆಲಸಕ್ಕೆ ತೆಗೆದುಕೊಳ್ಳುವಾಗ ಪರೀಕ್ಷೆ ಮಾಡುವುದು ವಾಡಿಕೆ. ಆಗ ಮಾಡಿಲ್ಲ. ಈಗ ಮಾಡುತ್ತಿದ್ದೇವೆ. 20 ವರ್ಷ ಕೆಲಸ ಮಾಡಿದ್ದಾರೆ ಎಂಬುದಕ್ಕೆ ದಾಖಲೆ ಏನಿದೆ?

ಕೆ.ಟಿ.ಶಾಂತಲಾ, ಕುಲಸಚಿವರು (ಆಡಳಿತ), ಬೆಂಗಳೂರು ವಿ.ವಿ

ಕೆಲವೆಡೆ ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಮತ್ತು ಇಸ್ರೊ ಲೇಔಟ್ ಉಪಕೇಂದ್ರದ ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ಗುರುವಾರ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಗುಬ್ಬಲಾಳ, ಉತ್ತರಹಳ್ಳಿ ಭಾಗಶಃ, ಇಸ್ರೊ ಲೇಔಟ್ ಕೈಗಾರಿಕಾ ಪ್ರದೇಶ, ಆದರ್ಶ ಅಪಾರ್ಟ್‌ಮೆಂಟ್ 1 & 2, ಮಂತ್ರಿ ಟ್ರಾನ್‌ಕ್ವಿಲ್ ಅಪಾರ್ಟ್‌ಮೆಂಟ್, ಮಾರುತಿ ಲೇಔಟ್, ಭರತ್ ಲೇಔಟ್, ದೊಡ್ಡಕಲ್ಲಸಂದ್ರ ಕೈಗಾರಿಕಾ ಪ್ರದೇಶ, ಅಗರ ಮತ್ತು ಸುತ್ತಮುತ್ತಲ ಪ್ರದೇಶ, ಕುಮಾರಸ್ವಾಮಿ ಲೇಔಟ್, ವಿಠಲ್ ನಗರ, ಮಾರುತಿ ನಗರ, ಅರೇಹಳ್ಳಿ, ಇಟ್ಟುಮಡು, ಎಜಿಎಸ್ ಲೇಔಟ್, ಚಿಕ್ಕಲಸಂದ್ರ, ಟಿ.ಜಿ. ಲೇಔಟ್, ಭುವನೇಶ್ವರಿ ನಗರ, ಯೆಲಚೇನಹಳ್ಳಿ, ಗಂಗಾಧರ ನಗರ, ವಿವೇಕಾನಂದ ಕಾಲೊನಿ, ಪ್ರಗತಿಪುರ, ಸರಬಂಡೆಪಾಳ್ಯ, ಪ್ರತಿಭಾ ಕೈಗಾರಿಕಾ ಪ್ರದೇಶ, ಸುಪ್ರೀಮ್ ಲೆದರ್ ಗಾರ್ಮೆಂಟ್ಸ್, ಚಂದ್ರಾನಗರ, ಕಾಶಿನಗರ, ವಿಕ್ರಮ ನಗರ, ನಂಜಪ್ಪ ಲೇಔಟ್, ಟೀಚರ್ಸ್ ಕಾಲೊನಿ, ಜೆಎಚ್‌ಬಿಸಿಎಸ್ ಲೇಔಟ್, ಬೇಂದ್ರೆ ನಗರ, ಕನಕ ನಗರ, ಈಶ್ವರ ನಗರ, ಮಿನಿಯಾಜ್ ನಗರ, ಕನಕ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶ.

ಎನ್‌ಸಿಇಆರ್‌ಟಿ ಪಠ್ಯಕ್ಕೆ ಆಕ್ಷೇಪ


‘ಸಸ್ಯ ಆಹಾರವಷ್ಟೇ ಸಮತೋಲನ’ ಎಂಬ ವ್ಯಾಖ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್‌ಸಿಇಆರ್‌ಟಿ 6ನೇ ತರಗತಿಯ ಕನ್ನಡ ಪಠ್ಯಪುಸ್ತಕದ ‘ಆರೋಗ್ಯವೇ ಭಾಗ್ಯ’ ಪಾಠದಲ್ಲಿ ಸಸ್ಯ ಆಹಾರವಷ್ಟೇ ಸಮತೋಲನ ಆಹಾರ ಎಂಬ ವ್ಯಾಖ್ಯಾನಕ್ಕೆ ಆಕ್ಷೇಪ ವ್ಯಕ್ತವಾಗಿದ್ದು, ಮಾಂಸಾಹಾರವನ್ನು ಕಡೆಗಣಿಸುವ ತಂತ್ರವಾಗಿದೆ. ಮಕ್ಕಳ ಊಟದ ತಟ್ಟೆಯಲ್ಲಿ ರಾಜಕೀಯ ಮಾಡಲಾಗುತ್ತಿದೆ ಎಂದು ಶಿಕ್ಷಣ ತಜ್ಞರು ದೂರಿದ್ದಾರೆ.

‘ನಮ್ಮ ದೇಹಕ್ಕೆ ಶಕ್ತಿ ದೊರಕಲು ಸಮತೋಲನ ಆಹಾರಗಳಾದ ಹಾಲು, ಸೊಪ್ಪು, ತರಕಾರಿ, ಹಣ್ಣು, ಹಂಪಲುಗಳು ಅಗತ್ಯ. ಇವು ನಮ್ಮ ದಿನ ನಿತ್ಯದ ಆಹಾರದ ಭಾಗವಾಗಬೇಕು ಎಂದು ಹೇಳಲಾಗಿದೆ. ಕರ್ನಾಟಕದ ರಾಗಿ ಮುದ್ದೆ ದೇಹಕ್ಕೆ ಶಕ್ತಿ ತುಂಬಿ, ತಮಿಳುನಾಡಿನ ಮಧುರವಾದ ಇಡ್ಲಿ ಸಿಹಿಯೊಡನೆ ಗುಜರಾತಿನ ಕಿಚಡಿ ಎಂದು ಹೇಳುವ ಮೂಲಕ ಮಕ್ಕಳ ಮನಸ್ಸಿನಲ್ಲಿ ಸಸ್ಯಾಹಾರ ಎಂಬ ಹೊಸ ಸಂಕಥನ ಹುಟ್ಟುಹಾಕುತ್ತಿದ್ದಾರೆ’ ಎಂದು ವಿ.ಪಿ. ನಿರಂಜನಾರಾಧ್ಯ ಆರೋಪಿಸಿದ್ದಾರೆ.

‘ತಟ್ಟೆಯಲ್ಲಿ ಕೇವಲ ಸಸ್ಯದ ಆಹಾರ ಇದ್ದು ಮೀನು, ಮೊಟ್ಟೆ ಮೊದಲಾದ ಮಾಂಸ ಆಹಾರ ಕಣ್ಮರೆಯಾಗಿವೆ. ಸಾತ್ವಿಕ ಆಹಾರವೆಂದರೆ ಕೇವಲ ರೊಟ್ಟಿ, ಹಾಲು, ತರಕಾರಿ ಎಂದು ಬ್ರೈನ್‌ವಾಶ್ ಮಾಡುವ ತಂತ್ರವಾಗಿದೆ. ಕರ್ನಾಟಕ ಎಂದರೆ ರಾಗಿ ಮುದ್ದೆ, ಬಸ್ಸಾರು ಮಾತ್ರವಾ? ಹಂದಿ ಕರಿ, ಮೀನಿನ ಸಾರು, ಖೀಮಾ ಉಂಡೆ, ಕರಾವಳಿ ಮೀನು ತಿನ್ನುವ ಕೋಟಿ ಜನ ಕರ್ನಾಟಕದವರಲ್ಲವಾ? ಅದು ಸಮತೋಲನ ಆಹಾರದ ಪಟ್ಟಿಗೆ ಬರುವುದಿಲ್ಲವಾ’ ಎಂದು ಪ್ರಶ್ನಿಸಿದ್ದಾರೆ.



ನಿರಂಜನಾರಾಧ್ಯ

‘ಪಠ್ಯಪುಸ್ತಕದಲ್ಲಿ ಕರ್ನಾಟಕದ ಸಾಂಸ್ಕೃತಿಕ, ಸಾಮಾಜಿಕ ವೈವಿಧ್ಯತೆ ಪ್ರತಿಬಿಂಬಿಸುವ ಪಾಠಗಳಿಲ್ಲ. ಕರಾವಳಿ, ಉತ್ತರ ಕರ್ನಾಟಕ, ಮಲೆನಾಡು, ಹಳೆಯ ಮೈಸೂರು ಭಾಗದ ಜಾನಪದ, ಸಾಹಿತ್ಯ, ಬದುಕು ಕಾಣೆಯಾಗಿದೆ. ವಯೋಮಾನಕ್ಕೆ ತಕ್ಕ ಚಟುವಟಿಕೆ, ಪಠ್ಯ, ಚಿತ್ರ, ಕಥೆಗಳಿಲ್ಲ. ನಿರೂಪಣೆ ನೀರಸವಾಗಿದ್ದು, ಉಪದೇಶದ ಧಾಟಿ ಇದೆ’ ಎಂದು ದೂರಿದ್ದಾರೆ.

‘ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯ ನಂತರ ಭಾರತೀಯ ಜ್ಞಾನ ಪರಂಪರೆ ಹೇರಿಕೆ ಭಾಗವಾಗಿ ಎನ್‌ಸಿಆರ್‌ಟಿಇ ಪುಸ್ತಕಗಳಿಗೆ ಪುರಾಣ-ಪುಣ್ಯಕತೆ ಹಾಗೂ ದೇವರ ಧರ್ಮವನ್ನು ಶಿಕ್ಷಣದಲ್ಲಿ ತುರುಕುವ, ಕೇಸರೀಕರಣ ಮಾಡುವ ಚಾಳಿ ಶುರುವಾಗಿದೆ. 3ನೇ ತರಗತಿ ಪಠ್ಯಪುಸ್ತಕಕ್ಕೆ ಮೃದುಲಾ, 6ನೇ ತರಗತಿಗೆ ಪಠ್ಯಕ್ಕೆ ಕೃಷ್ಣ ಹೆಸರು ಇಡಲಾಗಿದೆ. ಕರ್ನಾಟಕದ ಅಸ್ಮಿತೆ ಅಡಗಿರುವುದು ಪಂಪ, ಕುವೆಂಪು, ಕಾರಂತ, ಬಸವಣ್ಣ ವೈಚಾರಿಕತೆ ಕಡೆಗಣಿಸಲಾಗಿದೆ. ಸ್ಥಳೀಯ ವೈಚಾರಿಕತೆ, ಸಂಸ್ಕೃತಿ ಬದಿಗೊತ್ತಿ ದೇವರು -ಧರ್ಮ ರಾಜಕೀಯಕ್ಕೆ ಮುಂದಾಗಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ಕರ್ನಾಟಕದಲ್ಲಿನ ಸಿಬಿಎಸ್‌ಇ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಪ್ರಥಮ, ದ್ವಿತೀಯ ಭಾಷೆಯಾಗಿ ಕಲಿಸಬೇಕು. ಕರ್ನಾಟಕದಲ್ಲಿ ಪಠ್ಯರಚನೆ ಹಾಗೂ ಎಲ್ಲಾ ಶೈಕ್ಷಣಿಕ ಕೆಲಸಗಳಿಗೆ ಶೈಕ್ಷಣಿಕ ಪ್ರಾಧಿಕಾರವಾಗಿರುವ ಡಿಎಸ್‌ಇಆರ್‌ಟಿಯನ್ನು ಬಳಸಿ ಕೊಳ್ಳದಿರುವ ಬಗ್ಗೆ ಸ್ಪಷ್ಟನೆ ನೀಡಬೇಕು. ಸಮತೋಲನ ಆಹಾರ ಪಾಠದಲ್ಲಿ ಮೊಟ್ಟೆ, ಮೀನು, ಮಾಂಸದ ಚಿತ್ರ-ಉಲ್ಲೇಖ ಸೇರಿಸಿ, ಮರುಮುದ್ರಣ ಮಾಡಬೇಕು. ಪುಸ್ತಕದ ಹೆಸರು ಬದಲಿಸಿ ಕನ್ನಡದ ಅಸ್ಮಿತೆಗೆ ಸರಿ ಹೊಂದುವ ಹೆಸರಿಡಬೇಕು’ ಎಂದು ಆಗ್ರಹಿಸಿದ್ದಾರೆ.

‘ಲಾಬಿಗೆ ಅವಕಾಶ ನೀಡಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಚಿವ ಸಂಪುಟದಲ್ಲಿ ಸ್ಥಾನ ಪಡೆಯಲು ಕೆಲವು ಶಾಸಕರು ನಾನಾ ಮಾರ್ಗಗಳ ಮೂಲಕ ತೀವ್ರ ಲಾಬಿ ನಡೆಸುತ್ತಿದ್ದು, ಅದಕ್ಕೆ ಅವಕಾಶ ಕೊಡಬೇಡಿ’ ಎಂದು ಕಾಂಗ್ರೆಸ್ ಹೈಕಮಾಂಡ್ ನಾಯಕರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕರೆ ಮಾಡಿ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಸಂಪುಟದಲ್ಲಿ ಸ್ಥಾನ ಪಡೆಯಲು ಆಕಾಂಕ್ಷಿಗಳಿಂದ ಒತ್ತಡ ಹೆಚ್ಚುತ್ತಿರುವ ಕಾರಣ ಹೈಕಮಾಂಡ್ ನಾಯಕರು ಶಿವಕುಮಾರ್ ಅವರಿಗೆ ಬುಧವಾರ ಕರೆ ಮಾಡಿ ಸೂಚನೆ ನೀಡಿದ್ದಾರೆ ಎಂದು ಗೊತ್ತಾಗಿದೆ.

‘ಅಲ್ಲದೆ, ಈ ವಿಚಾರದಲ್ಲಿ ಪಕ್ಷದ ನಾಯಕತ್ವ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸಲಿದೆ. ಸೂಕ್ತ ಸಂದರ್ಭದಲ್ಲಿ ಸಂಪುಟ ವಿಸ್ತರಣೆ ವಿಚಾರದಲ್ಲಿ ಪಕ್ಷ ತೀರ್ಮಾನ ತೆಗೆದುಕೊಳ್ಳಲಿದೆ. ಒಂದು ವೇಳೆ ಇಂತಹ ಪ್ರಯತ್ನಗಳು ಮತ್ತೆ ನಡೆದರೆ ಪಕ್ಷ ಗಂಭೀರವಾಗಿ ಪರಿಗಣಿಸಲಿದೆ’ ಎಂದು ವರಿಷ್ಠರು ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ ಎಂದು ತಿಳಿದುಬಂದಿದೆ.

‘ಕೆಲವು ಶಾಸಕರ ಬೆಂಬಲಿಗರ ಪ್ರತಿಭಟನೆ ಸೇರಿ ವಿವಿಧ ರೀತಿಯಲ್ಲಿ ಒತ್ತಡ ಹಾಕುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅಂತಹ ನಡವಳಿಕೆಗಳಿಗೂ ಕಡಿವಾಣ ಹಾಕಬೇಕು. ಇತ್ತೀಚಿನ ದಿನಗಳಲ್ಲಿ ಸಚಿವ ಸ್ಥಾನದ ಆಕಾಂಕ್ಷಿಗಳ ಬೆಂಬಲಿಗರು ಪ್ರತಿಭಟನೆ ನಡೆಸಿರುವುದು, ಸ್ವಾಮೀಜಿಗಳು ಹಾಗೂ ಧಾರ್ಮಿಕ ಗುರುಗಳ ಮೂಲಕ ಒತ್ತಡ ಹೇರುವ ಪ್ರಯತ್ನಗಳು ಮಾಧ್ಯಮಗಳಲ್ಲಿ ವರದಿಯಾಗಿವೆ. ಇಂತಹ ಘಟನೆಗಳು ಪಕ್ಷಕ್ಕೆ ಮುಜುಗರ ತಂದಿದೆ ಎಂದೂ ವರಿಷ್ಠರು ಹೇಳಿದ್ದಾರೆ’ ಎಂದು ತಿಳಿದುಬಂದಿದೆ.

‘ಹೀಗಾಗಿ, ಸಚಿವ ಸ್ಥಾನ ಬೇಡಿಕೆಯೊಂದಿಗೆ ಗುಂಪು ಗುಂಪಾಗಿ ಭೇಟಿ ಮಾಡಲು ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ಅವಕಾಶ ನೀಡಬೇಡಿ. ಸಚಿವ ಸ್ಥಾನಕ್ಕೆ ಲಾಬಿ ಮಾಡುವುದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂಬ ಸಂದೇಶವನ್ನು ಹೈಕಮಾಂಡ್ ನಾಯಕರು ನೀಡಿದ್ದಾರೆ’ ಎಂದೂ ಗೊತ್ತಾಗಿದೆ.

ಸಚಿವ ಸಂಪುಟ ವಿಸ್ತರಣೆ ವೇಳೆ ಪ್ರಾಧಾನ್ಯ ನೀಡಲೇಬೇಕೆಂದು ಹಿರಿಯ, ಕಿರಿಯ ಶಾಸಕರ ಪರವಾಗಿ ಅವರವರ ಬೆಂಬಲಿಗರು ಒತ್ತಡ ತಂತ್ರ ಅನುಸರಿಸುತ್ತಿದ್ದಾರೆ. ಮಠಾಧಿಪತಿಗಳು, ವಿವಿಧ ಸಂಘಟನೆಗಳು, ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳು, ಅಲ್ಪಸಂಖ್ಯಾತ ಸಮುದಾಯದ ಮುಖಂಡರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಸಚಿವ ಸ್ಥಾನ ನೀಡದಿದ್ದರೆ ತೀವ್ರ ಹೋರಾಟದ ಎಚ್ಚರಿಕೆಯನ್ನೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಗೆ ಈಗಾಗಲೇ ರವಾನಿಸಿದ್ದಾರೆ. ಈ ಬೆಳವಣಿಗೆ ಕಾಂಗ್ರೆಸ್ ನಾಯಕರಿಗೆ ಬಿಸಿತುಪ್ಪವಾಗಿ ಪರಿಣಮಿಸಿದೆ.

ನಿಧನ ವಾರ್ತೆ

ಉಷಾ ವಿಜಯ್



ಬೆಂಗಳೂರು: ಬಸವೇಶ್ವರ ನಗರ ನಿವಾಸಿ ಉಷಾ ವಿಜಯ್ (67) ಬುಧವಾರ ಸ್ವಗೃಹದಲ್ಲಿ ನಿಧನರಾದರು.

ಚಿತ್ರದುರ್ಗದ ದಿವಂಗತ ವಿಜಯ್ ಅವರ ಪತ್ನಿ ಉಷಾ ಅವರು ತಮ್ಮ ಮಗ, ಸಾಫ್ಟ್‌ವೇರ್ ಎಂಜಿನಿಯರ್ ಆದಿತ್ಯ ಅವರೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದರು. ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಚಾಮರಾಜಪೇಟೆ ರುದ್ರಭೂಮಿಯಲ್ಲಿ ಜೂನ್ 25ರಂದು ಮಧ್ಯಾಹ್ನ 3ಕ್ಕೆ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಾರ್ಷಿಕೋತ್ಸವ: ಅತಿಥಿಗಳು: ಕೆ.ಎನ್. ಫಣೀಂದ್ರ, ಕೆ.ಬಿ. ಕೆಂಪೇಗೌಡ, ಅಧ್ಯಕ್ಷತೆ: ಎನ್.ಆರ್. ನಂದೀಶ್, ಆಯೋಜನೆ ಹಾಗೂ ಸ್ಥಳ: ಎಂಕೆಪಿಎಂ ಆರ್‌ವಿ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಜಯನಗರ, ಬೆಳಿಗ್ಗೆ 9.45

ಸಾರ್ವಜನಿಕ ಸಮಾಲೋಚನೆ: ಮಹಿಳಾ ಮೀಸಲಾತಿ ಕಾಯ್ದೆ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚೆ, ಆಯೋಜನೆ: ನಾವೆದ್ದು ನಿಲ್ಲದಿದ್ದರೆ ಕರ್ನಾಟಕ, ಮಹಿಳಾ ಮೀಸಲಾತಿಗಾಗಿ ರಾಷ್ಟ್ರೀಯ ಒಕ್ಕೂಟ ಕರ್ನಾಟಕ, ಸ್ಥಳ: ಆಶೀರ್ವಾದ್ ಕೇಂದ್ರ, ಸೇಂಟ್ ಮಾರ್ಕ್ಸ್ ರಸ್ತೆ, ಬೆಳಿಗ್ಗೆ 10.30

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ ‘ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು’ ವಿಶೇಷ ಕಲಾ ಪ್ರದರ್ಶನ: ಆಯೋಜನೆ: ‘ಸೀಗಲ್’ ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

‘ಚಿತ್ರ ಭಾರತಿ’ ಕಲಾ ಶಿಬಿರ: ದೇಶದ ವಿವಿಧ ರಾಜ್ಯಗಳ ಚಿತ್ರ ಪ್ರಕಾರಗಳ ಕಲಾಕೃತಿಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ಬೆಳಿಗ್ಗೆ 11ರಿಂದ 1 ಮತ್ತು ಮಧ್ಯಾಹ್ನ 3ರಿಂದ ಸಂಜೆ 6

‘ರಾಷ್ಟ್ರೀಯ ಸೇವಾ ಯೋಜನೆ’ 2026–27ನೇ ಸಾಲಿನ ಚಟುವಟಿಕೆಗಳ ಉದ್ಘಾಟನೆ: ಪಾಲಾಕ್ಷ ಟಿ., ಅಧ್ಯಕ್ಷತೆ: ಕೆ.ಜಿ. ಪಾತಲಿಂಗಪ್ಪ, ಅತಿಥಿಗಳು: ಶಿವಮಾದಯ್ಯ, ಚಿಲ್ಲರ್ ಮಂಜು, ಅಶೋಕ್ ಚಕ್ರವರ್ತಿ, ಲಕ್ಷ್ಮೀ ಶರತ್, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಸ್ಥಳ: ಸರ್ಕಾರಿ ಪದವಿ ಕಾಲೇಜು, 18ನೇ ಕ್ರಾಸ್, ಮಲ್ಲೇಶ್ವರ, ಮಧ್ಯಾಹ್ನ 1.30


ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ 60 ಸಾಂಸ್ಕೃತಿಕ ಬಾಗಿನ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಭಿನಂದಿಸುವವರು: ಕೆ.ವೈ. ನಾರಾಯಣಸ್ವಾಮಿ, ಅತಿಥಿಗಳು: ಮಂಜುನಾಥಸ್ವಾಮಿ ಬಿ.ಎನ್., ಎಚ್. ಎಲ್. ಪುಷ್ಪ, ಆಯೋಜನೆ: ಅವಿರತ ಪುಸ್ತಕ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಭರತನಾಟ್ಯ ಪ್ರದರ್ಶನ: ಶಾಂತಲಾ ಆರ್ಟ್ಸ್ ಅಕಾಡೆಮಿಯ ವಿದ್ಯಾರ್ಥಿಗಳಿಂದ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಐದನೇ ಬಡಾವಣೆ ಜಯನಗರ, ಸಂಜೆ 6

26ನೇ ವರ್ಷದ ಪ್ರವಚನ ವಾಹಿನಿ: ‘ಭಾಗವತದಲ್ಲಿ ನಾರಾಯಣ ಪರ್ವ’ ಕುರಿತು ಉಪನ್ಯಾಸ: ಪವಮಾನಾಚಾರ್ ಮಡನೂರು, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ದಾಸವಾಣಿ: ಆರತಿ ಭಾಸ್ಕರ್ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

‘ಸೂಜಿ ಮಲ್ಲಿಗೆ’ ನಾಟಕ ಪ್ರದರ್ಶನ: ನಿರ್ದೇಶನ: ಸಚೇತನ್ ಭಟ್, ತಂಡ: ಕಲಾ ಗಂಗೋತ್ರಿ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30



ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಸಾಂಸ್ಕೃತಿಕ ಮುನ್ನೋಟ

‘ಸ್ವಾತಂತ್ರ್ಯದ ಓಟ’ ನಾಟಕ ಪ್ರದರ್ಶನ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಶಿವಮೊಗ್ಗದ ರಂಗಾಯಣದ ಸಹಯೋಗದಲ್ಲಿ ಇದೇ 26 ಮತ್ತು 27ರಂದು ಸಂಜೆ 5 ಗಂಟೆಗೆ ಜೆ.ಸಿ.ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ‘ಸ್ವಾತಂತ್ರ್ಯದ ಓಟ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಬೊಳುವಾರು ಮಹಮದ್ ಕುಂಞಿ ಅವರ ಕಾದಂಬರಿ ಆಧಾರಿತ ನಾಟಕ ಇದಾಗಿದೆ. ನಟರಾಜ್ ಹೊನ್ನವಳ್ಳಿ ಅವರು ನಾಟಕ ನಿರ್ದೇಶನ ಮಾಡಿದ್ದು, ಮಂಜುನಾಥ್ ಗೋಮಾರದಹಳ್ಳಿ ಅವರು ರೂಪಾಂತರಿಸಿದ್ದಾರೆ. ರಾಘವ ಕಮ್ಮಾರ ಅವರ ಸಂಗೀತವಿದೆ.


ಇದು ನಮ್ಮ ಸಮಕಾಲೀನ ಸಂದರ್ಭದ ಧಾರ್ಮಿಕ, ರಾಜಕೀಯ ಸಂಘರ್ಷಗಳಿಗೆ ಕನ್ನಡಿ ಹಿಡಿದ ನಾಟಕವಾಗಿದೆ. ಸಿಖ್ ಹೆಣ್ಣು ಮಕ್ಕಳಿಬ್ಬರಿಗೆ ಸಹಾಯ ಮಾಡಲೆಂದು ಪಾಕಿಸ್ತಾನದ ಗಡಿದಾಟಿ ಭಾರತಕ್ಕೆ ಬಂದ ಮುಸ್ಲಿಂ ಹುಡುಗ ಚಾಂದ್ ಅಲಿ, ತನ್ನ ಮಾತೃಭೂಮಿಗೆ ಹಿಂದಿರುಗಿ ಹೋಗಲಾರದ ಇಕ್ಕಟ್ಟಿಗೆ ಸಿಕ್ಕಿಕೊಂಡು ಭಾರತದಲ್ಲಿ ಉಳಿದು, ಐವತ್ತು ವರ್ಷಗಳ ಕಾಲ ನಿರಂತರವಾಗಿ ಅನುಭವಿಸುವ ಸಂತೋಷ, ನೋವು, ಹತಾಶೆ, ಸಂಕಟಗಳ ಅಭಿವ್ಯಕ್ತಿ ಈ ನಾಟಕದಲ್ಲಿ ಹರಡಿಕೊಂಡಿದೆ ಎಂದು ಆಯೋಜಕರು ತಿಳಿಸಿದ್ದಾರೆ.



‘ಮಾವ...! ಮಾವ...!! ಕಥೆ ಕೇಳು...!!!’

ಬೆಂಗಳೂರು: ರಂಗರಸಧಾರೆ ಹವ್ಯಾಸಿ ರಂಗ ತಂಡವು ಇದೇ 26ರಂದು ಸಂಜೆ 7 ಗಂಟೆಗೆ ಮಲ್ಲೇಶ್ವರದ ಸೇವಾ ಸದನದಲ್ಲಿ ‘ಮಾವ...! ಮಾವ...!! ಕಥೆ ಕೇಳು...!!!’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ಹಾಸ್ಯ ನಾಟಕದ ಕಥೆಯನ್ನು ಪಾರ್ವತೀಸುತ ಅವರು ರಚಿಸಿದ್ದು, ವಿಜಯ್ ಕಶ್ಯಪ್ ಕೆ.ಎಸ್. ಅವರು ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.





‘ಅಡವಿ’ ನಾಟಕ ಪ್ರದರ್ಶನ

ಬೆಂಗಳೂರು: ಪಯಣ ರಂಗ ತಂಡವು ಇದೇ 28ರಂದು ಸಂಜೆ 7.15ಕ್ಕೆ ಬಸವೇಶ್ವರ ನಗರದ ಕೆಇಎ ಪ್ರಭಾತ್ ರಂಗಮಂದಿರದಲ್ಲಿ ‘ಅಡವಿ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಅರುಣ್ ಸೂರ್ಯ ಅವರು ಈ ನಾಟಕ ನಿರ್ದೇಶಿಸಿದ್ದಾರೆ. ಕಾಡಿನ ನಡುವೆ ಮನುಷ್ಯನ ಅಸ್ತಿತ್ವದ ಪ್ರಶ್ನೆಯನ್ನು ಎತ್ತಿ ಹಿಡಿಯುವ ಸಂಗೀತಮಯ ನಾಟಕ ಇದಾಗಿದೆ. ನೈಜ ಚಿತ್ರಣವನ್ನು ಕಟ್ಟಿಕೊಡುವ ಈ ಕಾಲ್ಪನಿಕ ಕಥಾಹಂದರ, ಮನುಷ್ಯ ಮತ್ತು ಕಾಡಿನ ನಡುವಿನ ಸಂಘರ್ಷವನ್ನು ರೋಚಕವಾಗಿ ಅನಾವರಣಗೊಳಿಸುತ್ತದೆ. ಹಾಸ್ಯ, ರೋಮಾಂಚನ ಮತ್ತು ಮೈನವಿರೇಳಿಸುವ ಸಂಗೀತದ ಸಮ್ಮಿಶ್ರಣದಲ್ಲಿ ಸಾಗುವ ಈ ನಾಟಕ, ಕೊನೆ ಘಳಿಗೆಯ ತಿರುವುಗಳಿಂದ ಪ್ರೇಕ್ಷಕರ ಕುತೂಹಲವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.

ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

‘ನಾಯಿ ಕಳೆದಿದೆ’ ನಾಟಕ

ಬೆಂಗಳೂರು: ನಮ್ದೆ ನಟನೆ ಸಾಂಸ್ಕೃತಿಕ ಸಂಘಟನೆಯು ಇದೇ 28ರಂದು ಸಂಜೆ 7 ಗಂಟೆಗೆ ಎನ್.ಆರ್. ಕಾಲೊನಿಯ ಡಾ.ಸಿ. ಅಶ್ವತ್ಥ ಕಲಾಭವನದಲ್ಲಿ ‘ನಾಯಿ ಕಳೆದಿದೆ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರಾಜೇಂದ್ರ ಕಾರಂತ್ ಅವರು ರಚಿಸಿ ನಿರ್ದೇಶಿಸಿದ್ದಾರೆ. ಗಂಭೀರವಾದ ವಿಷಯವನ್ನು ಹಾಸ್ಯದ ಹೊನಲು ಹರಿಸುವ ಮೂಲಕ ಸಮಾಜಕ್ಕೆ ಒಂದು ಉತ್ತಮ ಸಂದೇಶವನ್ನು ನೀಡುವ ಕಥಾ ಹಂದರವನ್ನು ಈ ನಾಟಕ ಹೊಂದಿದೆ. ಟಿಕೆಟ್ ಬುಕ್ ಮೈ ಶೋ ದಲ್ಲಿ ಲಭ್ಯ.



‘ಬಾಯ್ಬಡ್ಕಿ’ ಹಾಸ್ಯ ನಾಟಕ

ಬೆಂಗಳೂರು: ಅಂತರಂಗ ಬಹಿರಂಗ ತಂಡವು ಇದೇ 27ರಂದು ಸಂಜೆ 4 ಗಂಟೆಗೆ ಎನ್.ಆರ್. ಕಾಲೊನಿಯ ಡಾ.ಸಿ. ಅಶ್ವತ್ಥ ಕಲಾಭವನದಲ್ಲಿ ‘ಬಾಯ್ಬಡ್ಕಿ’ ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಭೀಷ್ಮ ರಾಮಯ್ಯ ಅವರು ಈ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಒಂದೂವರೆ ಗಂಟೆಯ ಈ ನಾಟಕದ ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.



‘ಮತ್ತಾಯ’ ನಾಟಕ ಪ್ರದರ್ಶನ

ಬೆಂಗಳೂರು: ರಂಗನಿರಂತರ ತಂಡವು ಇದೇ 28ರಂದು ಸಂಜೆ 7 ಗಂಟೆಗೆ ಜೆ.ಸಿ.ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ‘ಮತ್ತಾಯ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಒಡನಾಡಿ ಬಂಧು ಸಿಜಿಕೆ 75 ಸಮಾರೋಪ ಸಮಾರಂಭದಲ್ಲಿ ಈ ನಾಟಕ ಪ್ರದರ್ಶಿಲಾಗುತ್ತಿದೆ. ಅರುಣ ಲಾಲ್ ಅವರು ನಿರ್ದೇಶಿಸಿದ್ದು, ಬೆಂಗಳೂರಿನಲ್ಲಿ ಪ್ರಥಮ ಪ್ರದರ್ಶನ ಕಾಣುತ್ತಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ಸಂಗೀತ ಸಂಭ್ರಮ

ಬೆಂಗಳೂರು: ಫಿ–ಟಕ್ ಸಂಗೀತ ಸಂಭ್ರಮ ಜೂನ್ 27ರಂದು ಸಂಜೆ 5ಕ್ಕೆ ಮಲ್ಲೇಶ್ವರ 14ನೇ ಅಡ್ಡರಸ್ತೆಯಲ್ಲಿರುವ ಸೇವಾ ಸದನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಪ್ತಕ್‌ನ ಜಿ.ಎಸ್. ಹೆಗ್ಡೆ, ಪೂರ್ವಿ ಇವೆಂಟ್ಸ್‌ನ ನಾರಾಯಣ ಕುಲಕರ್ಣಿ ಅತಿಥಿಗಳಾಗಿರುವರು. ನಿಖಿಲ್ ಜೋಶಿ ಅವರ ಸಿತಾರ, ಸಂಚಾರಿ ಗಂಗೂಲಿ ಅವರಿಂದ ಬೆಂಗಾಲಿ ಹಾಡು, ಪೃಥ್ವಿರಾಜ್ ನಾರಾಯಣ ಕುಲಕರ್ಣಿ ಅವರಿಂದ ಬಾನ್ಸುರಿ, ಫಿ–ಟಕ್ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ತಬಲ ವಾದನ ಇರಲಿದೆ ಎಂದು ಗಿರೀಶ್ ಹೆಗ್ಡೆ, ರೇಖಾ ನಾಗರಾಜ್ ಹೆಗ್ಡೆ ತಿಳಿಸಿದ್ದಾರೆ.

‘ಮಗಳೆಂಬ ಮಲ್ಲಿಗೆ’ ನಾಟಕ

ಬೆಂಗಳೂರು: ನಮ್ದೆ ನಟನೆ ಸಾಂಸ್ಕೃತಿಕ ಸಂಘಟನೆಯು ಇದೇ 28ರಂದು ಸಂಜೆ 4 ಗಂಟೆಗೆ ಎನ್.ಆರ್. ಕಾಲೊನಿಯ ಡಾ.ಸಿ. ಅಶ್ವತ್ಥ ಕಲಾಭವನದಲ್ಲಿ ‘ಮಗಳೆಂಬ ಮಲ್ಲಿಗೆ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರಾಜೇಂದ್ರ ಕಾರಂತ್ ಅವರು ರಚಿಸಿ ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ

ಅಪ್ಪ, ಅಮ್ಮ, ತಂಗಿ ಕೊಂದ ಯುವತಿ ಸೆರೆ

ಪುದುಚೆರಿಯಲ್ಲಿ ಬಂಧನ, ವೈಟ್‌ಫೀಲ್ಡ್ ವಿಭಾಗದ ಪೊಲೀಸರ ಕಾರ್ಯಾಚರಣೆ • ಪ್ರಿಯಕರನ ಜತೆ ಸೇರಿ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿಯಕರನ ಜತೆ ಸೇರಿ ತಂದೆ, ತಾಯಿ ಹಾಗೂ ಸಹೋದರಿಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದ ಯುವತಿಯನ್ನು ವೈಟ್‌ಫೀಲ್ಡ್ ವಿಭಾಗದ ಕೆ.ಆರ್.ಪುರ ಠಾಣೆಯ ಪೊಲೀಸರು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ಕೃತ್ಯದ ಬಳಿಕ ಪರಾರಿಯಾಗಿದ್ದ ಶ್ವೇತಾ (25) ಅವರನ್ನು ಪುದುಚೆರಿ ರೈಲು ನಿಲ್ದಾಣದ ಬಳಿ ಬಂಧಿಸಲಾಗಿದೆ. ಪ್ರಿಯಕರ ಕೆನತ್‌ಗಾಗಿ ಹುಡುಕಾಟ ಮುಂದುವರಿದಿದೆ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ಕೆ.ಆರ್. ಪುರದ ಸೀಗೇಹಳ್ಳಿಯ ಡಾಮಿನಿಕ್ ಲೇಔಟ್‌ನ ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ತಮಿಳುನಾಡಿನ ಸೋಮಸುಂದರ್ (52), ಅವರ ಪತ್ನಿ ಮುತ್ತುಲಕ್ಷ್ಮಿ (48) ಹಾಗೂ ಕಿರಿಯ ಮಗಳು ಸುಪ್ರಿಯಾ (19) ಅವರನ್ನು ಸೋಮವಾರ ರಾತ್ರಿ ಆರೋಪಿಗಳು ಕೊಲೆ ಮಾಡಿ ಪರಾರಿ ಆಗಿದ್ದರು.

ಆರೋಪಿಗಳ ಬಂಧನಕ್ಕೆ ಐದು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿತ್ತು. ಒಂದು ತಂಡವು ತಮಿಳುನಾಡು, ಮತ್ತೊಂದು ತಂಡವು ಪುದುಚೆರಿಗೆ ತೆರಳಿತ್ತು. ಅಲ್ಲಿ ವಿವಿಧೆಡೆ ಕಾರ್ಯಾಚರಣೆ ನಡೆಸಿ ಶ್ವೇತಾ ಅವರನ್ನು ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಪುದುಚೆರಿಯ ರೈಲು ನಿಲ್ದಾಣದ ಮೂಲಕ ಬೇರೆ ಊರಿಗೆ ತೆರಳುವುದಕ್ಕೆ ಆರೋಪಿ ರೈಲಿಗಾಗಿ ಕಾದಿದ್ದರು. ಖಚಿತ ಮಾಹಿತಿ ಆಧರಿಸಿ, ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆ ತರಲಾಗುತ್ತಿದೆ. ಆರೋಪಿಯನ್ನು ಪ್ರಾಥಮಿಕ ವಿಚಾರಣೆಗೆ ಒಳಪಡಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತಾಯಿ, ನನ್ನ ಜೀವನವನ್ನು ಸಂಪೂರ್ಣವಾಗಿ ನಿಯಂತ್ರಣ ಮಾಡುತ್ತಿದ್ದರು. ನಾನು ಸ್ವತಂತ್ರವಾಗಿ ಯಾವುದೇ ಕೆಲಸ ಮಾಡುವುದಕ್ಕೂ ಬಿಡುತ್ತಿರಲಿಲ್ಲ. ಯಾವುದಕ್ಕೂ ಅವಕಾಶ ಕೊಡುತ್ತಿರಲಿಲ್ಲ. ಅವರು ನನ್ನ ಜೀವನವನ್ನು ಹಾಳು ಮಾಡಿದ್ದಾರೆ. ಅದಕ್ಕಾಗಿಯೇ ನಾನೇ ಅವರ ಜೀವ ತೆಗೆದೆ ಎಂಬುದಾಗಿ ವಿಚಾರಣೆ ವೇಳೆ ಶ್ವೇತಾ ತಿಳಿಸಿದ್ದಾಳೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬಿ.ಟೆಕ್ ಪದವೀಧರರಾದ ಶ್ವೇತಾ ಮತ್ತು ಕೆನತ್, ಕಾಲೇಜಿನಲ್ಲಿ ಸಹಪಾಠಿಗಳು. ವೈಟ್‌ಫೀಲ್ಡ್ ನಿವಾಸಿಯಾದ ಕೆನತ್, ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಿ. ಪರಸ್ಪರ ಪ್ರೀತಿ ಮಾಡುತ್ತಿದ್ದ ಶ್ವೇತಾ ಮತ್ತು ಕೆನತ್, ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಸಹ ಜೀವನ ನಡೆಸುತ್ತಿದ್ದರು. ಇದಕ್ಕೆ ಶ್ವೇತಾಳ ಪೋಷಕರು ಆಕ್ಷೇಪ ವ್ಯಕ್ತಪಡಿಸಿ, ಮನೆಗೆ ವಾಪಸ್ ಬರುವಂತೆ ಹೇಳಿದ್ದರು. ಶ್ವೇತಾ ಮಾರತ್‌ಹಳ್ಳಿಯಲ್ಲಿ ಇರುವ ತಂದೆಯ ಮನೆಗೆ ವಾಪಸ್ ಬಂದಿರಲಿಲ್ಲ' ಎಂದು ಮೂಲಗಳು ಹೇಳಿವೆ.

ಶ್ವೇತಾ, ಕೆನತ್ ಸಹ ಜೀವನ ನಡೆಸುತ್ತಿದ್ದ ವಿಚಾರ ಗೊತ್ತಾಗಿ ಸೋಮಸುಂದರ್ ದಂಪತಿಯು ಕಿರಿಯ ಮಗಳ ಜತೆ ಭಾನುವಾರ ರಾತ್ರಿ ಫ್ಲ್ಯಾಟ್‌ಗೆ ಬಂದು ಉಳಿದುಕೊಂಡಿದ್ದರು. ಕೆನತ್ ಜತೆಗಿನ ಸಂಬಂಧದ ವಿಚಾರವಾಗಿ ಶ್ವೇತಾಗೆ ಬೈದಿದ್ದರು. ಜಗಳ ವಿಕೋಪಕ್ಕೆ ಹೋಗಿ ಶ್ವೇತಾ, ಕೆನತ್‌ನ ಜತೆ ಸೇರಿ ತಂದೆ, ತಾಯಿಗೆ ಚಾಕುವಿನಿಂದ ಇರಿದಿದ್ದಳು. ಬೇರೊಂದು ಕೊಠಡಿಯಲ್ಲಿದ್ದ ಸುಪ್ರಿಯಾ, ಪೋಷಕರ ಚೀರಾಟ ಕೇಳಿ ರಕ್ಷಣೆಗೆ ಧಾವಿಸಿದ್ದಳು. ಆಕೆಗೂ ಚಾಕುವಿನಿಂದ ಇರಿದರು. ಸೋಮಸುಂದರ್ ಅವರು ತಪ್ಪಿಸಿಕೊಂಡು ಹೊರಬಂದು ಮೆಟ್ಟಿಲುಗಳ ಬಳಿ ಕುಸಿದುಬಿದ್ದರು. ಅವರ ನರಳಾಟ ಕೇಳಿದ ನೆರೆಹೊರೆಯವರು ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದರು.


ಕೆನತ್


ಶ್ವೇತಾ

ಅಪರಾಧ ಸುದ್ದಿ

ಬ್ಯಾಂಕ್‌ನಿಂದ ತಂದೆಗೆ ಬಂದಿತ್ತು ನೋಟಿಸ್

ಆರೋಪಿ ಶ್ವೇತಾ ಬ್ಯಾಂಕ್‌ವೊಂದರಲ್ಲಿ ₹30 ಲಕ್ಷ ಸಾಲ ಮಾಡಿದ್ದರು. ಸಾಲ ತೀರಿಸಲು ಪರದಾಡುತ್ತಿದ್ದರು. ಸರಿಯಾಗಿ ತಿಂಗಳ ಕಂತು ಪಾವತಿ ಮಾಡುತ್ತಿರಲಿಲ್ಲ. ತಂದೆಯ ಬಳಿ ನೆರವು ಕೇಳಿದ್ದರು. ತಂದೆ ಹಣ ನೀಡಲು ನಿರಾಕರಿಸಿದ್ದರು. ಬಳಿಕ, ತಂದೆಯ ಮನೆಗೆ ಬ್ಯಾಂಕ್ ನೋಟಿಸ್ ಬಂದಿತ್ತು. ಅಲ್ಲದೆ, ಮೊಬೈಲ್‌ಗೆ ಸಾಲ ಮರುಪಾವತಿ ಬಗ್ಗೆ ಸಂದೇಶ ಬಂದಿತ್ತು. ಇದೇ ವಿಚಾರವಾಗಿ ಮಾತನಾಡಲು ಪುತ್ರಿ ಇದ್ದ ಫ್ಲ್ಯಾಟ್‌ಗೆ ಪೋಷಕರು ಹೋಗಿದ್ದರು. ಪ್ರಿಯಕರನೊಂದಿಗೆ ಇರುವುದನ್ನು ನೋಡಿ ಬೈದು ಬುದ್ಧಿ ಹೇಳಿದ್ದರು. ತಾಯಿಯ ಬುದ್ಧಿಮಾತಿನಿಂದ ಶ್ವೇತಾ ಮತ್ತಷ್ಟು ಕೋಪಗೊಂಡಿದ್ದರು' ಎಂದು ತನಿಖಾಧಿಕಾರಿಗಳು ಹೇಳಿದರು.

ಡೈರಿ ಪತ್ತೆ, ಪೊಲೀಸರಿಂದ ಪರಿಶೀಲನೆ

'ಕೃತ್ಯ ನಡೆದ ಸ್ಥಳದಲ್ಲಿ ಡೈರಿಯೊಂದು ಪತ್ತೆಯಾಗಿದೆ. ಅದನ್ನು ವಶಕ್ಕೆ ಪಡೆದುಕೊಂಡು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಶ್ವೇತಾಗೆ ಡೈರಿ ಬರೆಯುವ ಅಭ್ಯಾಸವಿತ್ತು ಎನ್ನಲಾಗಿದೆ. 'ಐ ಆ್ಯಮ್ ಸ್ಯಾಡ್, ಐ ಆ್ಯಮ್ ಲೋನ್ಲಿ, ಐ ಆ್ಯಮ್ ಡಿಪ್ರೆಸ್ಡ್, ಐ ಆ್ಯಮ್ ಸೂಪಿರಿಯರ್, ಫೀಲಿಂಗ್ ಲವ್ಡ್' ಎಂಬುದಾಗಿ ಡೈರಿಯಲ್ಲಿ ಬರೆದಿರುವುದು ಪತ್ತೆಯಾಗಿದೆ' ಎಂದು ಮೂಲಗಳು ಹೇಳಿವೆ.

ವೃದ್ಧ ದಂಪತಿ ಸಾವಿನ ಕಾರಣ ಬಯಲು

ಬೆಂಗಳೂರು: ಸಂಪಿಗೆಹಳ್ಳಿಯಲ್ಲಿ ವೃದ್ಧ ದಂಪತಿ ನಿಗೂಢ ಸಾವಿನ ಪ್ರಕರಣಕ್ಕೆ ತಿರುವು ದೊರೆತಿದೆ. ಹೃದಯಾಘಾತದಿಂದ ಪತ್ನಿ ಮೃತಪಟ್ಟಿದ್ದ ಮಾಹಿತಿ ತಿಳಿದು, ಪತಿ ನೇಣು ಹಾಕಿಕೊಂಡಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಪತ್ನಿ ಸುಮಿತ್ರಾ ಪ್ರಸಾದ್ (77) ತೀವ್ರ ಹೃದಯಾಘಾತದಿಂದ ಮೃತಪಟ್ಟಿದ್ದರು. ಪತಿ ಶಿವಾನಂದಂ ಪ್ರಸಾದ್ (83) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಅನಾರೋಗ್ಯಪೀಡಿತ ಪತ್ನಿಯನ್ನು ಕೊಲೆ ಮಾಡಿದ ಬಳಿಕ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರಂಭದಲ್ಲಿ ಭಾವಿಸಲಾಗಿತ್ತು. ಆದರೆ, ಮರಣೋತ್ತರ ಪರೀಕ್ಷೆ ವರದಿಯಿಂದ ಇಬ್ಬರ ಸಾವು ಹೇಗೆ ಸಂಭವಿಸಿದೆ ಎಂಬುದು ಪತ್ತೆ ಆಗಿದೆ.

ಸಂಪಿಗೆಹಳ್ಳಿ ವ್ಯಾಪ್ತಿಯ ನಿವಾಸದಲ್ಲಿ ಸುಮಿತ್ರಾ ಪ್ರಸಾದ್ ಹಾಗೂ ಶಿವಾನಂದಂ ಪ್ರಸಾದ್ ಮೃತದೇಹಗಳು ಪತ್ತೆ ಆಗಿದ್ದವು.

'ಅಂಧ ಹಾಗೂ ಕಿವುಡರಾಗಿದ್ದ ತಾಯಿಯನ್ನು ತಂದೆ ಕೊಲೆ ಮಾಡಿದ್ದಾರೆ. ಬಳಿಕ ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿ ಪುತ್ರ ಕಿರಣ್ ಕುಮಾರ್ ಸಂಪಿಗೆಹಳ್ಳಿ ಠಾಣೆ ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ಪೊಲೀಸರು ತನಿಖೆ ನಡೆಸಿದ್ದರು. ಅಂಬೇಡ್ಕರ್ ಆಸ್ಪತ್ರೆಯಲ್ಲಿ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಲಾಗಿತ್ತು. ಅದರ ವರದಿ ಬಂದಿದ್ದು, ಅಸಲಿ ಕಾರಣ ಬಯಲಾಗಿದೆ.

ಸುಮಿತ್ರಾ ಅವರ ದೇಹದ ಮೇಲೆ ಯಾವುದೇ ಹಲ್ಲೆಯ ಕುರುಹುಗಳಿರಲಿಲ್ಲ. ಅವರಿಗೆ ತೀವ್ರ ಹೃದಯಾಘಾತವಾಗಿ ಸಾವು ಸಂಭವಿಸಿದೆ. ಸುಮಿತ್ರಾ ಸಾವಿನ ನಂತರ ಶಿವಾನಂದಂ ಪ್ರಸಾದ್ ಸಾವು ಸಂಭವಿಸಿದೆ. ಪತ್ನಿಯ ಅಗಲಿಕೆಯನ್ನು ಸಹಿಸಲಾರದೇ ಮನನೊಂದು ಶಿವಾನಂದಂ ಪ್ರಸಾದ್ ಆತ್ಮಹತ್ಯೆಗೆ ಶರಣಾಗಿರಬಹುದು ಎಂದು ಮರಣೋತ್ತರ ಪರೀಕ್ಷೆ ವರದಿಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.


ಸುಮಿತ್ರಾ ಪ್ರಸಾದ್ ಹಾಗೂ ಶಿವಾನಂದಂ ಪ್ರಸಾದ್

ಸುದ್ದಿ 2 ನಿಮಿಷ

ಉತ್ತರ ಪ್ರದೇಶದ ಮುಖ್ಯಮಂತ್ರಿ ರೋಡ್‌ಶೋ: ಹೂಡಿಕೆಗೆ ಆಹ್ವಾನ


ಬೆಂಗಳೂರು: 'ದೇಶದ ಪ್ರಮುಖ ಮೂರು ಹೂಡಿಕೆ ರಾಜ್ಯಗಳಲ್ಲಿ ಉತ್ತರ ಪ್ರದೇಶವೂ ಒಂದಾಗಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಬನ್ನಿ' ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆಹ್ವಾನ ನೀಡಿದರು.

ನಗರದ ಹೊರವರ್ತುಲ ರಸ್ತೆಯಲ್ಲಿ ಬುಧವಾರ ರೋಡ್ ಶೋ, ಉತ್ತರ ಪ್ರದೇಶ ಜಾಗತಿಕ ಬೆಳವಣಿಗೆ ಸಂವಾದದ ಸರಣಿ ಕಾರ್ಯಕ್ರಮ ನಡೆಸಿದರು.

ಐಟಿ, ತಂತ್ರಜ್ಞಾನ, ನವೋದ್ಯಮ ಮತ್ತು ಜಿಸಿಸಿ ಕಂಪನಿಗಳ ಹೂಡಿಕೆದಾರರೊಂದಿಗೆ ದಿನವಿಡೀ ಸಂವಾದ ನಡೆಸಿದರು. ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಒಂಬತ್ತು ವರ್ಷಗಳಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಖ್ಯಮಂತ್ರಿ ವಿವರಿಸಿದರು.

ಉತ್ತರ ಪ್ರದೇಶವು ಪ್ರಸ್ತುತ ಐದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು, 11 ದೇಶೀಯ ವಿಮಾನ ನಿಲ್ದಾಣಗಳು, 16,000 ಕಿಲೋಮೀಟರ್ ರೈಲ್ವೆ ಜಾಲ, 4 ಲಕ್ಷ ಕಿಲೋಮೀಟರ್ ರಸ್ತೆ ಜಾಲ, ಸರಕು ಸಾಗಣೆ ಕಾರಿಡಾರ್, ಭಾರತದ ಮೊದಲ ಒಳನಾಡು ಜಲಮಾರ್ಗ, 27 ಕೈಗಾರಿಕಾ ಲಾಜಿಸ್ಟಿಕ್ಸ್ ಪಾರ್ಕ್‌ಗಳು ಮತ್ತು ಎಕ್ಸ್‌ಪ್ರೆಸ್‌ವೇಗಳಿಗೆ ಸಂಪರ್ಕ ಇರುವ 75,000 ಎಕರೆ ಭೂ ಬ್ಯಾಂಕ್ ಅನ್ನು ಹೊಂದಿದೆ ಎಂದು ಮಾಹಿತಿ ನೀಡಿದರು.

ಲಖನೌದಲ್ಲಿ ಪ್ರಸ್ತಾವಿತ ಬೃಹತ್ ಪ್ರಮಾಣದ ವಾಣಿಜ್ಯ ಅಭಿವೃದ್ಧಿಗಾಗಿ 'ಇನ್ವೆಸ್ಟ್ ಯುಪಿ' ಚೌಕಟ್ಟಿನಡಿಯಲ್ಲಿ ಉತ್ತರ ಪ್ರದೇಶ ಸರ್ಕಾರದೊಂದಿಗೆ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿರುವುದಾಗಿ ಎಂಬೆಸಿ ಡೆವಲಪ್‌ಮೆಂಟ್ಸ್ ಲಿಮಿಟೆಡ್ ಪ್ರಕಟಿಸಿತು. ₹ 1,500 ಕೋಟಿ ಹೂಡಿಕೆಯೊಂದಿಗೆ ರಿಯಲ್ ಎಸ್ಟೇಟ್ ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ.



ಉತ್ತರ ಪತ್ರಿಕೆ ಡಿಜಿಟಲೀಕರಣ ಪರೀಕ್ಷಾ ಮಂಡಳಿ ಪ್ರಯೋಗ

ಬೆಂಗಳೂರು: ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷೆಗಳನ್ನು ಹೊರತುಪಡಿಸಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ನಡೆಸುವ ಇತರೆ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಡಿಜಿಟಲೀಕರಣಗೊಳಿಸಲು ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ತಾಂತ್ರಿಕ ದೋಷಗಳನ್ನು ತಪ್ಪಿಸಲು ಪ್ರಾಯೋಗಿಕ ಹಂತ ಆರಂಭಿಸಲಾಗುತ್ತಿದೆ. ಉತ್ತರ ಪತ್ರಿಕೆಗಳಿಗೆ ಪಾಸ್‌ವರ್ಡ್ ಇರಲಿದ್ದು, ಆಯಾ ವಿದ್ಯಾರ್ಥಿಗಳಿಗೆ ಮಾತ್ರ ಲಭ್ಯವಾಗಲಿವೆ. ಮೊದಲ ಹಂತದಲ್ಲಿ ವೃತ್ತಿಪರ ಕೋರ್ಸ್‌ಗಳು, ಸಂಗೀತ, ನೃತ್ಯ ಸೇರಿವೆ. ಈ ವಿಷಯಗಳಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದು, ಉತ್ತರ ಪತ್ರಿಕೆಗಳ ಸಂಖ್ಯೆ ಕಡಿಮೆ ಇರುತ್ತದೆ ಎಂದು ಇಲಾಖೆ ಅಧಿಕಾರಿಗಳು ಹೇಳಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಉತ್ತರ ಪತ್ರಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಾರಣ ಒಂದೇ ಬಾರಿ ಡಿಜಿಟಲೀಕರಣ ಮಾಡಲು ಸಾಕಷ್ಟು ಸಮಯ ಬೇಕಾಗುತ್ತದೆ. ತಾಂತ್ರಿಕ ದೋಷಗಳ ಸಂಭವವೂ ಇರಬಹುದು. ಇತರೆ ಪರೀಕ್ಷೆಗಳ ಡಿಜಿಟಲೀಕರಣ ಯಶಸ್ವಿಯಾದರೆ, ಪ್ರಮುಖ ಪರೀಕ್ಷೆಗಳಿಗೂ ವಿಸ್ತರಿಸಲಾಗುತ್ತದೆ ಎಂದರು.

ಪ್ರಸ್ತುತ ವ್ಯವಸ್ಥೆಯಲ್ಲಿ, ಉತ್ತರ ಪತ್ರಿಕೆಯ ಫೋಟೊಕಾಪಿಗಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಮಾತ್ರ ಮಂಡಳಿ ಡಿಜಿಟೈಸ್/ಸ್ಕ್ಯಾನ್ ಮಾಡಿದ ಪ್ರತಿಯನ್ನು ಒದಗಿಸುತ್ತದೆ. ಆದರೆ ಡಿಜಿಟಲೀಕರಣದಡಿ ಪ್ರತಿಯೊಂದು ಉತ್ತರ ಪತ್ರಿಕೆಯನ್ನೂ ಅಪ್‌ಲೋಡ್ ಮಾಡಿ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸಾಫ್ಟ್‌ವೇರ್ ಒದಗಿಸುವ ಮೂಲಕ ಪರೀಕ್ಷಾ ಮಂಡಳಿಗೆ ಸಹಾಯ ಮಾಡುತ್ತಿದೆ. ಡಿಜಿಟಲ್ ಮೌಲ್ಯಮಾಪನ, ಮೌಲ್ಯಮಾಪನ ಪ್ರಕ್ರಿಯೆಯ ಡಿಜಿಟಲೀಕರಣ ಕುರಿತು ಬೆಂಗಳೂರು ವಿ.ವಿ ಮಂಡಳಿಯ ಸಿಬ್ಬಂದಿಗೆ ತರಬೇತಿ ನೀಡಿದೆ.

₹20 ಲಕ್ಷ ದರೋಡೆ ಪ್ರಕರಣ ಮತ್ತೆ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಐಡಿ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಜತೆ ಸೇರಿ ಕೇರಳದ ಉದ್ಯಮಿಗಳಿಂದ ₹20 ಲಕ್ಷ ದರೋಡೆ ಮಾಡಿದ್ದ ಪ್ರಕರಣದಲ್ಲಿ ಮತ್ತೆ ಮೂವರನ್ನು ಆಗ್ನೇಯ ವಿಭಾಗದ ಮಡಿವಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೇರಳದ ರಶೀದ್, ಕೊಡಗು ಜಿಲ್ಲೆಯ ಷಫಿ ಮತ್ತು ಹ್ಯಾರಿಸ್ ಬಂಧಿತರು.

ಇದೇ ಪ್ರಕರಣದಲ್ಲಿ ಇನ್‌ಸ್ಪೆಕ್ಟರ್ ಮಹೇಶ್, ಅವರ ಸಹಚರರಾದ ಕುಪೇಂದ್ರರೆಡ್ಡಿ ಮತ್ತು ವಸಂತ್‌ಕುಮಾರ್ ಅವರನ್ನು ಕಳೆದ ವಾರ ಬಂಧಿಸಲಾಗಿತ್ತು. ಇದೀಗ ಮೂವರನ್ನು ಬಂಧಿಸಲಾಗಿದ್ದು, ಬಂಧಿತರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ.

ಮಡಿವಾಳ ಉಪ ವಿಭಾಗದ ಎಸಿಪಿ ವಿ.ಕೆ.ವಾಸುದೇವ್ ನೇತೃತ್ವದ ತನಿಖಾ ತಂಡವು ಈ ಮೂವರ ಮೊಬೈಲ್ ಕರೆಗಳು ಹಾಗೂ ಚಲನವಲನಗಳ ಮೇಲೆ ನಿಗಾ ವಹಿಸಿ ನೆಲಮಂಗಲದಲ್ಲಿ ಮಂಗಳವಾರ ರಾತ್ರಿ ಬಂಧಿಸಿದೆ ಎಂದು ಮೂಲಗಳು ತಿಳಿಸಿವೆ.

'ದರೋಡೆಯಾಗಿದ್ದ ₹20 ಲಕ್ಷದ ಪೈಕಿ ₹14 ಲಕ್ಷವನ್ನು ಇದುವರೆಗೂ ನಡೆದ ಕಾರ್ಯಾಚರಣೆಯಲ್ಲಿ ಜಪ್ತಿ ಮಾಡಲಾಗಿದೆ. ಉಳಿದ ₹6 ಲಕ್ಷಕ್ಕಾಗಿ ಪತ್ತೆ ಕಾರ್ಯ ಮುಂದುವರಿದಿದೆ' ಎಂದು ಮೂಲಗಳು ಹೇಳಿವೆ.

'ಕುಪೇಂದ್ರ ರೆಡ್ಡಿಗೆ ರಶೀದ್, ಷಫಿ ಮತ್ತು ಹ್ಯಾರಿಸ್ ಪರಿಚಯವಿದ್ದರು. ಕುಪೇಂದ್ರರೆಡ್ಡಿಯೇ ಈ ಮೂವರನ್ನು ಕರೆತಂದು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಏನಿದು ಪ್ರಕರಣ?

'ಕೇರಳದ ಇಬ್ಬರು ಉದ್ಯಮಿಗಳು ಹೂಡಿಕೆ ಮಾಡಲು ₹20 ಲಕ್ಷ ತೆಗೆದುಕೊಂಡು ಮಡಿವಾಳದ ಹೋಟೆಲ್‌ಗೆ ಜೂನ್ 18ರ ರಾತ್ರಿ ಬಂದು ವಾಸ್ತವ್ಯ ಮಾಡಿದ್ದರು. ಹಣದೊಂದಿಗೆ ಉದ್ಯಮಿಗಳು ಬಂದಿರುವ ಮಾಹಿತಿ ತಿಳಿದಿದ್ದ ಇನ್‌ಸ್ಪೆಕ್ಟರ್ ಮಹೇಶ್ ಅವರು ಸಹಚರರ ಜತೆಗೆ ಸೇರಿಕೊಂಡು ದರೋಡೆ ನಡೆಸಲು ಸಂಚು ರೂಪಿಸಿದ್ದರು. ಆರು ಮಂದಿ ಪೊಲೀಸ್ ಜೀಪಿನಲ್ಲೇ ಗುರುವಾರ ರಾತ್ರಿ ಹೋಟೆಲ್ ಬಳಿಗೆ ತೆರಳಿದ್ದರು. ಇಲಾಖೆಯ ಜೀಪಿನಲ್ಲಿ ಇನ್‌ಸ್ಪೆಕ್ಟರ್ ಕುಳಿತಿದ್ದರೆ, ಉದ್ಯಮಿಗಳು ವಾಸ್ತವ್ಯ ಮಾಡಿದ್ದ ಕೊಠಡಿಗೆ ಉಳಿದ ಐವರು ಆರೋಪಿಗಳು ನುಗ್ಗಿದ್ದರು. ಇನ್‌ಸ್ಪೆಕ್ಟರ್ ಗುರುತಿನ ಚೀಟಿಯನ್ನು ತೋರಿಸಿ, 'ನಾವು ಪೊಲೀಸರು' ಎಂಬುದಾಗಿ ಆರೋಪಿಗಳು ಪರಿಚಯಿಸಿಕೊಂಡಿದ್ದರು. 'ಅಕ್ರಮವಾಗಿ ಹೂಡಿಕೆ ಮಾಡಲು ಹಣ ತಂದಿದ್ದೀರಿ' ಎಂದು ಉದ್ಯಮಿಗಳನ್ನು ಬೆದರಿಸಿ, ಅವರ ಬಳಿಯಿದ್ದ ಹಣವನ್ನು ದರೋಡೆ ಮಾಡಿದ್ದರು. ಬಳಿಕ, ಪೊಲೀಸ್ ಇಲಾಖೆಯ ವಾಹನದಲ್ಲಿಯೇ ಆರೋಪಿಗಳು ಹಣದ ಜತೆಗೆ ಪರಾರಿ ಆಗಿದ್ದರು' ಎಂದು ಮೂಲಗಳು ಹೇಳಿವೆ.

ತಲೆಮರೆಸಿಕೊಂಡಿದ್ದ ಆರೋಪಿ ಸೆರೆ • ಬಾಣಸವಾಡಿ ಪೊಲೀಸರ ಕಾರ್ಯಾಚರಣೆ

68 ಅಪರಾಧ ಕೃತ್ಯ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ, ಕೊಲೆ ಯತ್ನ, ದರೋಡೆ, ಸುಲಿಗೆ, ಮನೆ ಕಳ್ಳತನದಂತಹ 68 ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸುವಲ್ಲಿ ಬಾಣಸವಾಡಿ ಠಾಣೆ ಪೊಲೀಸರು ಕೊನೆಗೂ ಯಶಸ್ವಿ ಆಗಿದ್ದಾರೆ.

ಕಾಡುಗೋಡಿಯ ಸೈಯದ್ ಅಬ್ರಾರ್ ಬಂಧಿತ ಆರೋಪಿ.

'ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ, 30ಕ್ಕೂ ಹೆಚ್ಚು ಜಾಮೀನು ರಹಿತ ವಾರಂಟ್ ಹಾಗೂ ಐದಕ್ಕೂ ಹೆಚ್ಚು ಪ್ರೊಕ್ಲಮೇಷನ್‌ಗಳಲ್ಲಿ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿರುವುದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್‌ಗಳಾದ 331(2), 331(4) ಹಾಗೂ 62ರ ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಆರೋಪಿ ವಿರುದ್ಧ ಬೆಂಗಳೂರು, ಕೋಲಾರ ಹಾಗೂ ಯಾದಗಿರಿ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಕಳೆದ ಮಾರ್ಚ್ 23ರಂದು ಎಚ್‌ಬಿಆರ್ ಬಡಾವಣೆ ಒಂದನೇ ಬ್ಲಾಕ್‌ನ ನಿವಾಸಿಯೊಬ್ಬರು ದೂರು ನೀಡಿದ್ದರು. 'ಊರಿಗೆ ತೆರಳಿದ್ದ ಸಂದರ್ಭದಲ್ಲಿ ಮನೆಯ ಬಾಗಿಲು ಒಡೆದು ನಗದು ಕಳ್ಳತನ ಮಾಡಲಾಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು. ಆ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ, ಸೈಯದ್ ಅಬ್ರಾರ್‌ನನ್ನು ಬಂಧಿಸಲಾಯಿತು ಎಂದು ಮೂಲಗಳು ತಿಳಿಸಿವೆ.


ಸೈಯದ್ ಅಬ್ರಾರ್

ತಲೆಮರೆಸಿಕೊಂಡಿದ್ದ ರೌಡಿ ಸೆರೆ: ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ರೌಡಿ ಶಕಿಬ್ ಅಲಿಯಾಸ್ ಸೈಯದ್ ಅಕಿಬ್ ಪಾಷಾ (30) ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ವಿದ್ಯಾರಣ್ಯಪುರದ ಎಂ.ಎಸ್. ಪಾಳ್ಯದ ಶಕಿಬ್ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 11 ಅಪರಾಧ ಪ್ರಕರಣಗಳು ದಾಖಲಾಗಿದ್ದವು. ಆ ಪೈಕಿ, ಮೂರು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಹಾಜರಾಗದೇ ಶಕಿಬ್ ತಲೆಮರೆಸಿಕೊಂಡಿದ್ದರು. ಆರೋಪಿ ವಿರುದ್ಧ ನ್ಯಾಯಾಧೀಶರು ಬಂಧನ ವಾರಂಟ್ ಹೊರಡಿಸಿದ್ದರು.

ಯಲಹಂಕ ಪೊಲೀಸ್ ಠಾಣಾ ವ್ಯಾಪ್ತಿಯ ಅಲ್ಲಾಳಸಂದ್ರದ ಮೇಲ್ಸೇತುವೆ ಬಳಿ ಆರೋಪಿ ಇರುವ ಖಚಿತ ಮಾಹಿತಿ ಬಾತ್ಮೀದಾರರಿಂದ ಬಂದಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ವ್ಯಸನ ಮುಕ್ತ ಕೇಂದ್ರ'ದ ಮಾಲೀಕನ ಕೊಲೆ: ನಾಲ್ವರ ಸೆರೆ

ಬೆಂಗಳೂರು: ವ್ಯಸನ ಮುಕ್ತ ಕೇಂದ್ರದ ಮಾಲೀಕ ಶಿವಲಿಂಗಯ್ಯ (60) ಅವರನ್ನು ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದ ಪ್ರಕರಣದಲ್ಲಿ ನಾಲ್ವರನ್ನು ಚಂದ್ರಾಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನವೀನ್, ಚೇತನ್, ಕಾರ್ತಿಕ್ ಹಾಗೂ ಸುಹೈಲ್ ಪಾಷಾ ಬಂಧಿತರು.

ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಶಿವಲಿಂಗಯ್ಯ ಅವರು ರೈಲ್ವೆ ಸಮಾನಾಂತರ ರಸ್ತೆಯಲ್ಲಿ 'ನ್ಯೂ ಲೈಫ್' ಹೆಸರಿನ ವ್ಯಸನ ಮುಕ್ತ ಕೇಂದ್ರ ನಡೆಸುತ್ತಿದ್ದರು. ಮದ್ಯ ವ್ಯಸನಿಗಳಾಗಿದ್ದ ನಾಲ್ವರು ಆರೋಪಿಗಳು, ಅದೇ ಕೇಂದ್ರಕ್ಕೆ ಕೆಲವು ತಿಂಗಳ ಹಿಂದೆ ಸೇರಿದ್ದರು. ಜೂನ್ 19ರಂದು ಆರೋಪಿಗಳೇ ಸ್ವಯಂ ಸೇವಕರಾಗಿ ಬಣ್ಣ ಬಳಿಯುವ ಹಾಗೂ ಸ್ವಚ್ಛತಾ ಕೆಲಸದಲ್ಲಿ ಮಗ್ನರಾಗಿದ್ದರು. ಆಗ ಗಲಾಟೆ ನಡೆದು, ಮಾಲೀಕನ ಮೇಲೆ ರಾಡು, ಕಲ್ಲಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದರು. ಗಲಾಟೆ ಬಿಡಿಸಲು ಬಂದಿದ್ದ ಪ್ರಶಾಂತ್ ಮೇಲೆಯೂ ಹಲ್ಲೆ ನಡೆಸಲಾಗಿತ್ತು ಎಂದು ಪೊಲೀಸರು ಹೇಳಿದರು.

ಪ್ರಶಾಂತ್ ಅವರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು. ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ ನಾಲ್ವರನ್ನು ಬಂಧಿಸಲಾಗಿದೆ. ಇನ್ನೂ ನಾಲ್ವರು ತಲೆಮರೆಸಿಕೊಂಡಿದ್ದು, ಅವರಿಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಸರಿಯಾಗಿ ಊಟ ನೀಡುತ್ತಿರಲಿಲ್ಲ. ಶಿವಲಿಂಗಯ್ಯ ಅವರು ನಿಂದನೆ ಮಾಡುತ್ತಿದ್ದರು' ಎಂಬುದಾಗಿ ಆರೋಪಿಗಳು ವಿಚಾರಣೆ ವೇಳೆ ತಿಳಿಸಿದರು.

'ಕೇಂದ್ರದಿಂದ ಆರೋಪಿಗಳು ತಪ್ಪಿಸಿಕೊಳ್ಳಲು ಯತ್ನಿಸಿದ್ದರು. ಅದು ಸಾಧ್ಯವಾಗದೇ ಇರುವಾಗ ಮಾಲೀಕನನ್ನೇ ಕೊಲೆ ಮಾಡಲು ಸಂಚು ರೂಪಿಸಿದ್ದರು' ಎಂದು ಪೊಲೀಸರು ಹೇಳಿದರು.

ಸುರಂಗ ರಸ್ತೆ: ಶೇ 96ರಷ್ಟು ಹೆಚ್ಚು ಮೊತ್ತ

ಬೆಂಗಳೂರು: ಸುರಂಗ ರಸ್ತೆ ನಿರ್ಮಾಣದ ಯೋಜನೆಯ ಮೂಲ ಅಂದಾಜು ಪಟ್ಟಿಗಿಂತ ಶೇ 95.77ರಷ್ಟು ಹೆಚ್ಚು ಮೊತ್ತಕ್ಕೆ ಬಿಡ್ ಮಾಡಿರುವ ಅದಾನಿ ಎಂಟರ್‌ಪ್ರೈಸಸ್, ಪರಿಷ್ಕೃತ ಅಂದಾಜಿಗಿಂತ ಶೇ 25ರಷ್ಟು ಹೆಚ್ಚು ಮೊತ್ತವನ್ನು ಪ್ರಸ್ತಾಪಿಸಿದೆ.

ಸುರಂಗ ರಸ್ತೆಯಲ್ಲಿ 40 ವರ್ಷಗಳ ವರೆಗೂ ನಾಗರಿಕರಿಂದ ಶುಲ್ಕ ಪಾವತಿಸಲು ಕೋರಲಾಗಿದ್ದು, ಈ ಅವಧಿಯಲ್ಲಿ ಕಂಪನಿ, ಆಯಕಟ್ಟಿನ ಪ್ರದೇಶಗಳಲ್ಲಿ ಲಭ್ಯವಾಗುವ ಪ್ರದೇಶಗಳಲ್ಲಿ ವಾಣಿಜ್ಯ ಅಭಿವೃದ್ಧಿಯಿಂದ ಹೂಡಿಕೆಯನ್ನು ಮರುಸಂಗ್ರಹಿಸಲಿದೆ ಎಂದು ಲಭ್ಯವಾಗಿರುವ ದಾಖಲೆಗಳಿಂದ ತಿಳಿದುಬಂದಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವ ಸಂಪುಟದ ಮುಂದೆ ಈ ಎಲ್ಲ ಪ್ರಸ್ತಾವಗಳನ್ನು ಒಳಗೊಂಡಿರುವ ಟೆಂಡರ್ ಅನುಮೋದನೆಯ ವಿಷಯವಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನವಾಗುವ ಸಾಧ್ಯತೆ ಇದೆ. ಉಪ ಮುಖ್ಯಮಂತ್ರಿಯಾಗಿದ್ದಾಗ ಶಿವಕುಮಾರ್ ಅವರು ಹೆಬ್ಬಾಳದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ವರೆಗಿನ ಉತ್ತರ–ದಕ್ಷಿಣ ಸುರಂಗ ರಸ್ತೆ ಕಾರಿಡಾರ್ ಯೋಜನೆಯನ್ನು ರೂಪಿಸಿದ್ದರು.

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ-77605 04651
- ರಮಾಮಣಿ-ಸಿಒಒ-94481 97256
- ರಾಜೇಶ್-ಸಿಜಿಎಂ-948068 84046
- ರಾಘವೇಂದ್ರ ಪ್ರಸಾದ್-ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ನಿಮ್ಮ ಹೆಸರು ಹಾಗೂ ವಿಳಾಸವನ್ನು ಕಳಿಸಿ. ಅದನ್ನು ಪ್ರಕಟಿಸಲಾಗುತ್ತದೆ.


ಆರ್‌ಟಿ.ನಗರದ ಚೌಡಯ್ಯ ಬ್ಲಾಕ್, 3ನೇ ಕ್ರಾಸ್ ಮುಖ್ಯರಸ್ತೆಯ ಸಾಯಿ ಮೆಡಿಕಲ್ ಎದುರು ಬಿದ್ದಿರುವ ಕಸ –ರಮೇಶ್



ಶೆಟ್ಟಿಹಳ್ಳಿಯ ರಾಯಲ್ ಸ್ಟ್ರೀಟ್‌ನಲ್ಲಿ ಕಸ –ಸಂತೋಷ್


ಮೇಡಹಳ್ಳಿ ಸರ್ವಿಸ್ ರಸ್ತೆಯಲ್ಲಿನ ಕಸ, ಬಸವನಪುರ ವಾರ್ಡ್ –ಕಿರಣ್‌ಕುಮಾರ್ ಜೆ

ಮೂರು ದಿನದಿಂದ ಕಸ ಸಂಗ್ರಹಿಸಿಲ್ಲ

ಎಚ್‌ಆರ್‌ಬಿಆರ್ ಲೇಔಟ್‌ನ 3ನೇ ಬ್ಲಾಕ್ 2ನೇ ಮುಖ್ಯರಸ್ತೆಯಲ್ಲಿರುವ ಮನೆಗಳಿಂದ ಮೂರು ದಿನದಿಂದ ಕಸವನ್ನು ಸಂಗ್ರಹಿಸುತ್ತಿಲ್ಲ. ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಮೊಬೈಲ್ ಕರೆ ಮಾಡಿದರೆ ಅವರು ಸ್ವೀಕರಿಸುತ್ತಿಲ್ಲ. ಪ್ರತಿ ದಿನವೂ ನಗರ ಪಾಲಿಕೆಗೆ ದೂರು ನೀಡಿದರೂ ಯಾರೂ ಸ್ಪಂದಿಸುತ್ತಿಲ್ಲ. ಅಧಿಕಾರಿಗಳು ದಯವಿಟ್ಟು ನಾಗರಿಕರ ಸಮಸ್ಯೆಗೆ ಸ್ಪಂದಿಸಬೇಕು.

ಮೇನಕಾ ರಾಮ್
2ನೇ ಮುಖ್ಯರಸ್ತೆ, 3ನೇ ಬ್ಲಾಕ್, ಎಚ್‌ಆರ್‌ಬಿಆರ್ ಲೇಔಟ್


ಯಲಹಂಕ ನ್ಯೂಟೌನ್ ಟಾಟಾ ಇನ್‌ಸ್ಟಿಟ್ಯೂಟ್ ರಸ್ತೆ, ಎಂಐಜಿ ಸೆಕ್ಟರ್, ಉದಯ ಲೇಔಟ್‌ನಲ್ಲಿರುವ ಕಸ –ಶ್ರೀನಿವಾಸ್

ಥರ್ಡ್ ರೈಲ್, ಸಿಸಿಡಿ ಹಾನಿ ಕಾರಣ

ಮೊದಲ ಬಾರಿ ಸಮಸ್ಯೆ: ತಾಂತ್ರಿಕ ದೋಷ ಸರಿಪಡಿಸಿದ ತಂತ್ರಜ್ಞರು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಮಂಗಳವಾರ ಮೆಟ್ರೊ ಸಂಚಾರ ಸ್ಥಗಿತಗೊಳ್ಳಲು, ಸಂಪರ್ಕ ತಪ್ಪಿದ್ದ ಥರ್ಡ್ ರೈಲ್‌ನಲ್ಲಿ (ವಿದ್ಯುತ್ ಸರಬರಾಜು ವ್ಯವಸ್ಥೆ) ರೈಲು ಸಾಗಿದ್ದರಿಂದ ರೈಲಿನ ಕರೆಂಟ್ ಕಲೆಕ್ಟರ್ ಡಿವೈಸ್‌ಗೆ (ಸಿಸಿಡಿ) ಹಾನಿಯಾಗಿದ್ದೇ ಕಾರಣ' ಎಂಬುದನ್ನು ಪತ್ತೆಹಚ್ಚಿದ ಬಿಎಂಆರ್‌ಸಿಎಲ್ ತಂತ್ರಜ್ಞರು ಸಮಸ್ಯೆ ಬಗೆಹರಿಸಿದ್ದಾರೆ.

ಮೆಟ್ರೊ ಅಸ್ತವ್ಯಸ್ತ

ವೈಟ್‌ಫೀಲ್ಡ್ ಕಡೆಯಿಂದ ಚಲ್ಲಘಟ್ಟ ಕಡೆಗೆ ಹೋಗುತ್ತಿದ್ದ ರೈಲಿನಲ್ಲಿ ಮಂಗಳವಾರ ಸಂಜೆ ಸುಮಾರು 4 ಗಂಟೆಯ ಹೊತ್ತಿಗೆ ಎಂ.ಜಿ. ರಸ್ತೆ–ಕಬ್ಬನ್ ಪಾರ್ಕ್ ನಡುವೆ ಸಾಗುತ್ತಿದ್ದಾಗ ಸುರಂಗ ಮಾರ್ಗ ಪ್ರವೇಶಿಸುವ ಸಮಯದಲ್ಲಿ ಭಾರಿ ಸ್ಫೋಟದ ಸದ್ದು ಕೇಳಿಸಿ ಪ್ರಯಾಣಿಕರು ಬೆಚ್ಚಿಬಿದ್ದಿದ್ದರು. ರೈಲು ಕಬ್ಬನ್ ಪಾರ್ಕ್ ನಿಲ್ದಾಣಕ್ಕೆ ತಲುಪಿದ ನಂತರ ಮುಂದಕ್ಕೆ ಸಂಚರಿಸಲಿಲ್ಲ.

ಒಂದು ರೈಲು ಕೆಟ್ಟು ನಿಂತರೆ ಮತ್ತೆ ಅದೇ ಮಾರ್ಗದಲ್ಲಿ ಬೇರೆ ರೈಲುಗಳು ಬರಲು ಸಾಧ್ಯವಿಲ್ಲದಿರುವುದರಿಂದ, ಎಂ.ಜಿ. ರಸ್ತೆ ಸೇರಿ ಆ ಮಾರ್ಗದ ಎಲ್ಲ ನಿಲ್ದಾಣಗಳಲ್ಲಿ ಪ್ರಯಾಣಿಕರು ಕಿಕ್ಕಿರಿದು ತುಂಬುವಂತಾಗಿತ್ತು. ಪ್ರಯಾಣಿಕರಿಗೆ ಸರಿಯಾದ ಮಾಹಿತಿಯನ್ನು ಕೂಡ ಬಿಎಂಆರ್‌ಸಿಎಲ್ ನೀಡದೇ ಇದ್ದಿದ್ದು ಕೂಡ ಪರದಾಟಕ್ಕೆ ಕಾರಣವಾಗಿತ್ತು.

ವಿದ್ಯುತ್ ಇಲ್ಲದೇ ಸಂಚಾರ!: 'ಮೆಟ್ರೊ ರೈಲು ಅನಿಲ್ ಕುಂಬ್ಳೆ ಸರ್ಕಲ್ ಬಳಿಯಿಂದ ಕಬ್ಬನ್ ಪಾರ್ಕ್‌ವರೆಗೆ ಮೆಟ್ರೊ ರೈಲು ವಿದ್ಯುತ್ ಸಂಪರ್ಕವಿಲ್ಲದೇ ಸಂಚರಿಸಿತ್ತು' ಎಂದು ಬಿಎಂಆರ್‌ಸಿಎಲ್ ತಂತ್ರಜ್ಞರೊಬ್ಬರು ಮಾಹಿತಿ ನೀಡಿದ್ದಾರೆ.

ಕುಂಬ್ಳೆ ಸರ್ಕಲ್ ಬಳಿ ಎತ್ತರಿಸಿದ ಮಾರ್ಗ ಮುಗಿದು ಸುರಂಗ ಮಾರ್ಗ ಆರಂಭವಾಗುವಲ್ಲಿ ತಿರುವು ಇದೆ. ಹಳಿಯ ಪಕ್ಕದಲ್ಲಿಯೇ ಫೈಬರ್ ಕವರ್ ಇರುವ ವಿದ್ಯುತ್ ಹಳಿ (ಥರ್ಡ್ ರೈಲ್) ಇದೆ. ತಿರುವಿನಲ್ಲಿ ಉಂಟಾಗುವ ಕಂಪನದಿಂದಾಗಿ ಫೈಬರ್ ಕವರ್ ಮುಂದಕ್ಕೆ ಚಲಿಸಿತ್ತು. ರೈಲು ಹಳಿ ಮತ್ತು ವಿದ್ಯುತ್ ಹಳಿಯ ನಡುವಿನ ಅಂತರದಲ್ಲಿ ವ್ಯತ್ಯಾಸ ಉಂಟಾಗಿತ್ತು. ಆಗ ಬಂದಿದ್ದ ರೈಲಿಗೆ ವಿದ್ಯುತ್ ಪೂರೈಕೆಯಲ್ಲಿ ಏರುಪೇರಾಗಿದ್ದರಿಂದ ವೈರ್ ಸಿಡಿದು ಸ್ಫೋಟವಾಗಿ ವಿದ್ಯುತ್ ಪೂರೈಕೆ ಸಂಪೂರ್ಣ ನಿಂತಿತ್ತು. ಪರಿಣಾಮವಾಗಿ, ಥರ್ಡ್ ರೈಲ್ ಮತ್ತು ಸಿಸಿಡಿಗೆ ಹಾನಿಯಾಯಿತು. ಆದರೂ ರೈಲು ತಕ್ಷಣ ನಿಲ್ಲದೆ ಮುಂದಿನ ನಿಲ್ದಾಣ ಕಬ್ಬನ್ ಪಾರ್ಕ್‌ನಲ್ಲಿ ನಿಂತಿತು. ನಂತರ ವಿದ್ಯುತ್ ಪೂರೈಕೆ ಇಲ್ಲದೆ ಚಲಿಸಲಿಲ್ಲ' ಎಂದು ವಿವರಿಸಿದ್ದಾರೆ.

ಈ ಮಧ್ಯೆ, ಸ್ಫೋಟದ ಸದ್ದು ಕೇಳಿದ ಪ್ರಯಾಣಿಕರು ಹೆದರಿ ಮೆಟ್ರೊದಿಂದ ಹೊರಬರಲು ಆತುರ ತೋರಿದ್ದರು. ಕಬ್ಬನ್ ಪಾರ್ಕ್‌ನಲ್ಲಿ ನಿಂತಾಗ ಬಾಗಿಲು ಪೂರ್ಣ ತೆರೆಯುವ ಮೊದಲೇ ಕೆಲವರು ಇಳಿದು ಓಡಿದ್ದರಿಂದ ಭಯದ ವಾತಾವರಣ ಉಂಟಾಗಿತ್ತು.

'ಆರಂಭದಲ್ಲಿ ಅದು ರೈಲಿನ ಸಮಸ್ಯೆ ಎಂದು ತಿಳಿಯಲಾಗಿತ್ತು. ವಿದ್ಯುತ್ ಸರಬರಾಜು ಯಾಕೆ ತಪ್ಪಿದೆ ಎಂಬುದನ್ನು ಪತ್ತೆ ಹಚ್ಚಲು ಕಬ್ಬನ್ ಪಾರ್ಕ್ ನಿಲ್ದಾಣದ ನಿಯಂತ್ರಕರು ಹಳಿ ಪರಿಶೀಲನೆ ನಡೆಸಿದಾಗ ತಿರುವಿನಲ್ಲಿ ಥರ್ಡ್ ರೈಲ್ ವೈರ್ ಒಡೆದು ಹೋಗಿದ್ದು ಕಂಡಿತು' ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಇದೇ ಮೊದಲು: 'ಹಳೇ ರೈಲುಗಳನ್ನು ಬಳಸಲಾಗುತ್ತಿದೆ ಎಂದು ಕೆಲವರು ಆರೋಪಿಸಿದ್ದಾರೆ. ಆದರೆ ನಿನ್ನೆಯದ್ದು ರೈಲಿನ ಸಮಸ್ಯೆಯಲ್ಲ. ಅಲ್ಲದೇ ರೈಲುಗಳನ್ನು 40 ವರ್ಷ ಓಡಿಸಬಹುದು. ಆ ನಂತರವೂ ಸದೃಢವಾಗಿದ್ದರೆ ಸಂಬಂಧಿಸಿದ ಪ್ರಮಾಣಪತ್ರ ಪಡೆದು ಓಡಿಸಬಹುದು. ನೂರು ವರ್ಷವರೆಗೂ ಓಡಿಸಲು ಅವಕಾಶವಿದೆ. ಹಾಗಾಗಿ ಹಳೇ ರೈಲು ಎಂಬುದು ನಿರಾಧಾರ. ಅಲ್ಲದೇ, ಹೀಗೆ ಥರ್ಡ್ ರೈಲ್ ಸಮಸ್ಯೆಯು ಇದೇ ಮೊದಲ ಬಾರಿಗೆ ಉಂಟಾಗಿರುವುದು' ಎಂದು ಸ್ಪಷ್ಟಪಡಿಸಿದರು.

ಎಂದಿನಂತೆ ಸಂಚಾರ

'ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಲ್ಲಿ ಉಂಟಾಗಿದ್ದ ತಾಂತ್ರಿಕ ದೋಷವನ್ನು ಬಿಎಂಆರ್‌ಸಿಎಲ್‌ನ ಕಾರ್ಯಾಚರಣೆ ಮತ್ತು ನಿರ್ವಹಣಾ ತಂಡಗಳು ಸರಿಪಡಿಸಿವೆ. ಬುಧವಾರ ಬೆಳಿಗ್ಗೆ 5ರಿಂದ ವೇಳಾಪಟ್ಟಿಯಂತೆ ಮೆಟ್ರೊ ಸಂಚರಿಸುತ್ತಿದೆ' ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

'ಮಂಗಳವಾರ ರಾತ್ರಿ 11 ಗಂಟೆಯ ಒಳಗೆ ಸಮಸ್ಯೆ ಸರಿಪಡಿಸಲಾಗಿತ್ತು. ಪ್ರಾಯೋಗಿಕ ಸಂಚಾರ ನಡೆಸಿ ದೋಷ ನಿವಾರಣೆಯಾಗಿರುವುದನ್ನು ಖಚಿತಪಡಿಸಿಕೊಂಡು, ಬುಧವಾರ ಬೆಳಿಗ್ಗೆಯಿಂದ ಸಂಚಾರ ನಡೆಸಲಾಯಿತು' ಎಂದು ಅಧಿಕಾರಿ ಮಾಹಿತಿ ನೀಡಿದರು.



ಟ್ರಕ್, ಲಾರಿಯಲ್ಲಿ ಸಂಚಾರ

'ಪ್ರತಿ ಬಾರಿ ಮೆಟ್ರೊ ವಿಫಲವಾದಾಗ ಜನರು ತೊಂದರೆಗೆ ಸಿಲುಕುತ್ತಾರೆ. ಕ್ಯಾಬ್‌ಗಳು ಕಣ್ಮರೆಯಾಗುತ್ತವೆ. ಆಟೊದವರು ಬರಲು ನಿರಾಕರಿಸುತ್ತಾರೆ. ಉದ್ಯೋಗಿಗಳು ಕೆಲಸ ಮುಗಿಸಿ ಮನೆಗೆ ಹೋಗಲು ಟ್ರಕ್ ಮತ್ತು ಲಾರಿ ಹತ್ತಬೇಕಾಯಿತು' ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

'ಎಕ್ಸ್' ಖಾತೆಯಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದು, 'ಅವರು (ಉದ್ಯೋಗಿಗಳು) ಮತ್ತೆ ಕಚೇರಿಗಳಿಗೆ ಹಿಂತಿರುಗುತ್ತಾರೆ. ತೆರಿಗೆ ಪಾವತಿಸುತ್ತಾರೆ ಮತ್ತು ಅದೇ ಮುರಿದ ವ್ಯವಸ್ಥೆಯನ್ನು ಮತ್ತೆ ಸಹಿಸಿಕೊಳ್ಳುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಬೇಗ ಮಾಹಿತಿ ನೀಡಿ'

'ನಗರದ ಸಂಚಾರ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುವ ನಮ್ಮ ಮೆಟ್ರೊದಲ್ಲಿ ತಾಂತ್ರಿಕ ದೋಷ ಅಥವಾ ಬೇರೆ ಲೋಪಗಳಿಂದ ತೊಂದರೆಯಾದರೆ ಪ್ರಯಾಣಿಕರಿಗೆ ಸರಿಯಾದ ಮಾಹಿತಿ ನೀಡಿದರೆ ಪರದಾಡುವುದನ್ನು ತಪ್ಪಿಸಬಹುದು. ಮಾಹಿತಿ ನೀಡುವಲ್ಲಿ ಬಿಎಂಆರ್‌ಸಿಎಲ್ ತೋರಿದೆ' ಎಂದು ಪ್ರಯಾಣಿಕರಾದ ಸುರೇಶ್, ಗಂಗಾಧರ್, ರೇಣುಕಾ, ಸರಸ್ವತಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸರಿಯಾದ ಮಾಹಿತಿಯನ್ನು ತಕ್ಷಣಕ್ಕೆ ನೀಡದಿದ್ದರೆ ಪ್ರಯಾಣಿಕರು ಕಾದು ಕಾದು ಸುಸ್ತಾಗುತ್ತಾರೆ. ಮೆಟ್ರೊ ಸಂಚಾರ ಸ್ಥಗಿತಗೊಂಡಿದೆ ಎಂಬುದನ್ನು ಆರಂಭದಲ್ಲಿಯೇ ಮಾಹಿತಿ ನೀಡಿದ್ದರೆ, ನಿಲ್ದಾಣಕ್ಕೆ ಬಂದು ಜನ ಅಷ್ಟೊಂದು ಹೊತ್ತು ಕಾಯುತ್ತಿರಲಿಲ್ಲ. ಸಮಯ ಕಳೆದಂತೆ ಪ್ರಯಾಣಿಕರು ಹೆಚ್ಚಾಗಿ ನಡೆದಾಡುವುದೂ ಅಸಾಧ್ಯವಾದ ಮೇಲೆ ಮಾಹಿತಿ ನೀಡಿದರೆ ಪ್ರಯೋಜನ ಏನು?' ಎಂದು ಪ್ರಶ್ನಿಸಿದ್ದಾರೆ.

ಜುಲೈ 1ರಿಂದ ವ್ಯಾಪಾರಕ್ಕೆ ಅವಕಾಶ ಇಲ್ಲ: ಸಚಿವ

ಪಾದಚಾರಿ ಮಾರ್ಗಕ್ಕೆ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಪಾದಚಾರಿ ಮಾರ್ಗಗಳಲ್ಲಿ ಒತ್ತುವರಿಯನ್ನು ಅಂಗಡಿ ಮಾಲೀಕರು ಸ್ವಯಂ ಪ್ರೇರಿತವಾಗಿ ತೆರವುಗೊಳಿಸಿಕೊಳ್ಳಲು ಜೂನ್ 30ರವರೆಗೆ ಅವಕಾಶ ನೀಡಲಾಗಿದ್ದು, ಜುಲೈ 1ರಿಂದ 'ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ'ವನ್ನು ಆರಂಭಿಸಲಾಗುವುದು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ನಗರ ಪಾಲಿಕೆಗಳ ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಪಾದಚಾರಿ ಮಾರ್ಗದಲ್ಲಿ ನಡೆಯುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಅದರಂತೆ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಆದ್ದರಿಂದ ಒತ್ತುವರಿ ತೆರವು ಕಾರ್ಯ ಕಠಿಣವಾಗಲಿದೆ' ಎಂದರು.

ನಗರದಲ್ಲಿ ಸುಮಾರು 13 ಸಾವಿರ ಕಿ.ಮೀ ರಸ್ತೆ ಜಾಲವಿದ್ದು, ಮುಖ್ಯ, ಉಪಮುಖ್ಯ ರಸ್ತೆಗಳ ಸುಮಾರು 2,000 ಕಿ.ಮೀ ವ್ಯಾಪ್ತಿಯಲ್ಲಿ ಪಾದಚಾರಿಗಳ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅಡ್ಡಿಯಾಗಿರುವ ಎಲ್ಲಾ ಅಡೆತಡೆಗಳನ್ನು ತೆರವುಗೊಳಿಸಲು ಆಂದೋಲನ ಮಾದರಿಯಲ್ಲಿ 'ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ' ಕೈಗೊಳ್ಳಲು ತೀರ್ಮಾನಿಸಲಾಗಿದೆ ಎಂದರು.

ಪಾದಚಾರಿ ಮಾರ್ಗಗಳಲ್ಲಿ ಅಂಗಡಿಗಳ ಸಾಮಗ್ರಿಗಳು, ನಾಮಫಲಕಗಳು ಹಾಗೂ ಇತರೆ ವಸ್ತುಗಳನ್ನು ಇರಿಸುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದೆ. ಅವರೇ ಸ್ವಯಂ ಪ್ರೇರಿತವಾಗಿ ತೆರವುಗೊಳಿಸದಿದ್ದರೆ, ಪಾಲಿಕೆಯಿಂದಲೇ ತೆರವುಗೊಳಿಸಿ, ನಿಯಮಾನುಸಾರ ದುಬಾರಿ ದಂಡ ವಿಧಿಸಲಾಗುವುದು ಎಂದು ತಿಳಿಸಿದರು.

ಸುರಕ್ಷಿತ ಪಾದಚಾರಿ ಮಾರ್ಗಗಳು ಲಭ್ಯವಿದ್ದರೆ ಅಪಘಾತಗಳನ್ನು ತಡೆಯಲು ಸಾಧ್ಯ ಎಂದರು.

ಪಾದಚಾರಿ ಮಾರ್ಗ ದುರಸ್ತಿಗೆ ₹70 ಕೋಟಿ

ನಗರದ ಐದು ಪಾಲಿಕೆಗಳ ವ್ಯಾಪ್ತಿಯ ಸುಮಾರು 2,000 ಕಿ.ಮೀ ಪಾದಚಾರಿ ಮಾರ್ಗಗಳಲ್ಲಿ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸಲು ₹70 ಕೋಟಿ ಅನುದಾನ ಮೀಸಲಿಡಲಾಗಿದೆ. ಸ್ಲ್ಯಾಬ್‌ಗಳು, ಕರ್ಬ್ ಸ್ಟೋನ್‌ಗಳು, ಲೆವೆಲ್ ವ್ಯತ್ಯಾಸಗಳು ಸೇರಿದಂತೆ ಅಗತ್ಯ ದುರಸ್ತಿ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸೂಚಿಸಲಾಗಿದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ನಗರದ ಪ್ರಮುಖ ರಸ್ತೆಗಳಲ್ಲಿ ತಳ್ಳುಗಾಡಿಗಳ ಮೂಲಕ ವ್ಯಾಪಾರ ಮಾಡಲು ಅವಕಾಶ ಇರುವುದಿಲ್ಲ. ನಿಯಮ ಉಲ್ಲಂಘಿಸಿದಲ್ಲಿ ತಳ್ಳುಗಾಡಿಗಳನ್ನು ವಶಪಡಿಸಿಕೊಂಡು ದಂಡ ವಿಧಿಸಲಾಗುವುದು ಎಂದು ಹೇಳಿದರು.

'ಸರ್ಕಾರ ಹೆಲ್ಪ್‌ಲೆಸ್ ಅಲ್ಲ...'



ಅಧಿಕಾರಿಗಳು ಹೆಲ್ಪ್‌ಲೆಸ್ ಇರಬಹುದು. ಆದರೆ, ಸರ್ಕಾರ ಹೆಲ್ಪ್‌ಲೆಸ್ ಅಲ್ಲ. ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಬೇಕು. ಪಾದಚಾರಿ ಒತ್ತುವರಿ ತೆರವಿಗೆ ಅಧಿಕಾರಿಗಳು ಕಾನೂನು ಪ್ರಕಾರ ಕ್ರಮ ಜರುಗಿಸಿ ನಿಮಗೆ ಏನೇ ತೊಂದರೆ ಬಂದರೂ ನಿಮ್ಮ ಬೆನ್ನಿಗೆ ನಾನಿದ್ದೇನೆ.

ಕೃಷ್ಣ ಬೈರೇಗೌಡ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ

ಅಧಿಕಾರಿಗಳಿಗೆ ಸಚಿವರ ಸೂಚನೆ

- ಈ ಬಾರಿಯಂತೂ ಗುಂಡಿ ಮುಚ್ಚುವ ಕೆಲಸ ವೈಜ್ಞಾನಿಕವಾಗಿ ಆಗಲೇಬೇಕು
- ಯಾರೋ ಗುತ್ತಿಗೆದಾರನ ಯೋಗಕ್ಷೇಮ ವಿಚಾರಿಸಿದ್ದು ಸಾಕು, ಇನ್ನಾದರೂ ಜನಪರವಾಗಿ ಕೆಲಸ ಮಾಡಿ
- ಮೊದಲೇ ನಾವು ಮಾಡ್ತಾ ಇರೋದು ತ್ಯಾಪೇ ಹಾಕೋ ಕೆಲಸ, ಅದ್ರಲ್ಲೂ ಮತ್ತೆ ತ್ಯಾಪೇ ಹಾಕಂಗೆ ಮಾಡ್ಬೇಡಿ ನಮ್ಮ ಮರ್ಯಾದೆ ಹೋಗುತ್ತೆ
- ನಾನೇನೋ ದೊಡ್ಡ ಕೆಲಸ ಮಾಡಿ ಅಂತ ಕೇಳಿಲ್ಲ. ಕನಿಷ್ಠ ಸರಿಯಾಗಿ ಗುಂಡಿ ಮುಚ್ಚೋಕೂ ಕಷ್ಟ ಅಂದ್ರೆ ಹೇಗೆ?
- ಸಿಗ್ನಲ್‌ನಲ್ಲಿ ಯಾರಾದ್ರೂ ಹಂಪ್ ಮಾಡ್ತಾರೇನ್ರಿ. ಇಂತಹ ಅವೈಜ್ಞಾನಿಕ ಕ್ರಮಗಳ ಮೂಲಕ ಟ್ರಾಫಿಕ್ ಸಮಸ್ಯೆಯನ್ನು ನಾವೇ ಸೃಷ್ಟಿಸುತ್ತಿದ್ದೇವೆ
- ಸಿಗ್ನಲ್‌ಗಳ 75 ಮೀಟರ್ ಸುತ್ತಳತೆಯಲ್ಲಿ ಎಲ್ಲೂ ಪಾರ್ಕಿಂಗ್ ಹಾಗೂ ಬೀದಿ ವ್ಯಾಪಾರಕ್ಕೆ ಅವಕಾಶ ನೀಡಬೇಡಿ

ಇನ್ನೊಂದು ಗಾಲ್ಫ್ ಕೋರ್ಸ್ ನಿರ್ಮಿಸಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಲ್ಫ್ ಕ್ಲಬ್, ಬೆಂಗಳೂರಿನಲ್ಲಿ 'ಇನ್ನಷ್ಟು ಗಾಲ್ಫ್ ಕೋರ್ಸ್‌ಗಳನ್ನು ನಿರ್ಮಿಸಬೇಕಿತ್ತು. ಮುಂದಿನ ಐದು ವರ್ಷಗಳಲ್ಲಿ ಜಮೀನು ಪಡೆದುಕೊಂಡು ಮತ್ತೊಂದು ಗಾಲ್ಫ್ ಕೋರ್ಸ್ ನಿರ್ಮಿಸಿ' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬೆಂಗಳೂರು ಗಾಲ್ಫ್ ಕ್ಲಬ್ ಸದಸ್ಯರಿಗೆ ಹೇಳಿದರು.

ಬುಧವಾರ ನಡೆದ ಗಾಲ್ಫ್ ಕ್ಲಬ್‌ನ 150ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ನಾನು ಮುಖ್ಯಮಂತ್ರಿ ಆಗಿ ಇಲ್ಲಿಗೆ ಬಂದಿಲ್ಲ. ಕ್ಲಬ್‌ನ ಸದಸ್ಯನಾಗಿ ಬಂದಿದ್ದೇನೆ. ಈ ಕ್ಲಬ್‌ಗೆ ದೊಡ್ಡ ಇತಿಹಾಸವಿದೆ. ನೀವು ಯಾರೂ ಸಣ್ಣವರಲ್ಲ. ಈ ವೇಳೆಗಾಗಲೇ ಬೆಂಗಳೂರಿನಲ್ಲಿ ಇನ್ನೂ ಐದಾರು ಗಾಲ್ಫ್ ಕೋರ್ಸ್‌ಗಳನ್ನು ನಿರ್ಮಿಸಬೇಕಿತ್ತು. ನಿಮಗೆ ಏನು ಕಡಿಮೆಯಾಗಿತ್ತು' ಎಂದು ಕೇಳಿದರು.



ಡಿ.ಕೆ. ಶಿವಕುಮಾರ್

'ಈ ಹಿಂದೆ ಕ್ಲಬ್‌ನ ನವೀಕರಣಕ್ಕಾಗಿ ನೀವು ಬಂದಾಗ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದರು. ಅವರಾಗಿದ್ದಕ್ಕೆ ಯಾವುದೇ ಷರತ್ತು ಹಾಕದೆ ನವೀಕರಣಕ್ಕೆ ಒಪ್ಪಿಗೆ ನೀಡಿದ್ದಾರೆ. ನಾನಾಗಿದ್ದರೆ, 'ಇನ್ನಷ್ಟು ಗಾಲ್ಫ್ ಕೋರ್ಸ್‌ಗಳನ್ನು ನಿರ್ಮಿಸಬೇಕು' ಎಂದು ಷರತ್ತು ಹಾಕಿ ಸಹಿ ಹಾಕುತ್ತಿದ್ದೆ' ಎಂದರು.

'ನೀವು ನನ್ನನ್ನು ಬೈದುಕೊಂಡರೂ ಪರವಾಗಿಲ್ಲ. ನನ್ನ ಮಾತು ನಿಮ್ಮನ್ನು ಮುಟ್ಟಬೇಕು ಅಷ್ಟೆ. ಮುಂದಿನ ಐದು ವರ್ಷಗಳಲ್ಲಿ ಜಾಗ ಪಡೆದುಕೊಳ್ಳಿ. ಮತ್ತೊಂದು ಗಾಲ್ಫ್ ಕೋರ್ಸ್ ನಿರ್ಮಾಣಕ್ಕೆ ನನ್ನನ್ನು ಕರೆಸಿ ಶಂಕುಸ್ಥಾಪನೆ ಮಾಡಿಸಿ' ಎಂದರು.

'ಸುರಂಗ ರಸ್ತೆ ಮಾರ್ಗ ಯೋಜನೆಯನ್ನು ಟೀಕಿಸುವವರಿದ್ದಾರೆ. ಬೆಂಗಳೂರು ಯೋಜಿತವಲ್ಲದ ನಗರ. ಇಲ್ಲಿನ ಸಮಸ್ಯೆಗಳನ್ನು ಸರಿಪಡಿಸಲು 200 ಎಕರೆಯಷ್ಟು ಭೂಮಿ ಬೇಕು. ಅದನ್ನು ಹುಡುಕಿಕೊಡಲು ಸಾಧ್ಯವೇ? ಬೆಂಗಳೂರು ನಗರದಲ್ಲಿರುವ ಕಟ್ಟಡಗಳನ್ನು ಒಡೆದು ಹಾಕಲು ಸಾಧ್ಯವೇ? ಟೀಕೆ ಮಾಡುವವರು ಮಾಡಲಿ. ಬೆಂಗಳೂರು ಅಭಿವೃದ್ಧಿಗೆ ಏನು ಬೇಕೋ ಅದನ್ನು ಮಾಡಲೇಬೇಕಾಗುತ್ತದೆ' ಎಂದು ಹೇಳಿದರು.

'ಮೈಸೂರು ಮಹಾರಾಜರು ನಿರ್ಮಿಸಿದ ಗಾಲ್ಫ್ ಕ್ಲಬ್ ಅನ್ನು ಉಳಿಸುವುದು ಎಲ್ಲರ ಕರ್ತವ್ಯ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

'ಹೈಕೋರ್ಟ್ ಸೇರಿ ಟರ್ಫ್ ಕ್ಲಬ್‌ನಲ್ಲಿ ಕೆಲವು ಕಟ್ಟಡಗಳನ್ನು ನಿರ್ಮಿಸುವ ಪ್ರಸ್ತಾವಗಳನ್ನು ಮುಖ್ಯಮಂತ್ರಿ ಮರುಪರಿಶೀಲಿಸಬೇಕು. ಹಸಿರು ವಲಯ ಉಳಿಯಬೇಕು' ಎಂದರು.

ಕ್ಯಾಪ್ಟನ್ ಅರವಿಂದ್ ಕುಮಾರ್ ರಾಜು, ಸಂಸದ ಪಿ.ಸಿ. ಮೋಹನ್, ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ಬಿ.ಎಸ್. ಪಾಟೀಲ್ ಪಾಲ್ಗೊಂಡಿದ್ದರು.



ದೇವನಹಳ್ಳಿ ಭೂಸ್ವಾಧೀನ: ಎಕರೆಗೆ ₹2.70 ಕೋಟಿ ಪರಿಹಾರಕ್ಕೆ ಶಿಫಾರಸು

ಬೆಂಗಳೂರು: ದೇವನಹಳ್ಳಿ ತಾಲ್ಲೂಕಿನ ಗೋಕರೆಬಚ್ಚೇನಹಳ್ಳಿ, ಹ್ಯಾಡಾಳ ಗ್ರಾಮದ ರೈತರು 120 ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಸ್ವಯಂಪ್ರೇರಿತವಾಗಿ ಬಿಟ್ಟುಕೊಡಲು ಒಪ್ಪಿದ್ದಾರೆ. ಆ ಜಮೀನಿಗೆ ಪ್ರತಿ ಎಕರೆಗೆ ₹2.70 ಕೋಟಿ ಪರಿಹಾರ ನಿಗದಿಪಡಿಸಿ, ಭೂದರ ನಿರ್ಧಾರಣಾ ಸಲಹಾ ಸಮಿತಿಯು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) ಶಿಫಾರಸು ಮಾಡಿದೆ.

ಮಂಡಳಿ ಕಚೇರಿಯಲ್ಲಿ ಬುಧವಾರ ನಡೆದ ಅಧಿಕಾರಿಗಳು, ರೈತರ ಜಂಟಿ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಮಿತಿಯ ಶಿಫಾರಸನ್ನು ಕೆಐಎಡಿಬಿ ಅನುಮೋದನೆಗಾಗಿ ಕಳುಹಿಸಲಾಗುವುದು. ಹಣದ ರೂಪದ ಪರಿಹಾರ ತೆಗೆದುಕೊಳ್ಳಲು ಒಪ್ಪದ ರೈತರಿಗೆ, ಪ್ರತಿ ಎಕರೆ ಕೃಷಿ ಭೂಮಿ ಬದಲಾಗಿ ಮಂಡಳಿ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶದಲ್ಲಿ 10,781 ಚದರ ಅಡಿ ಜಾಗ ನೀಡಲಾಗುತ್ತದೆ ಎಂದು ಕೆಐಎಡಿಬಿ ವಿಶೇಷ ಜಿಲ್ಲಾಧಿಕಾರಿ ಎ.ಎನ್. ರಘುನಂದನ್ ತಿಳಿಸಿದ್ದಾರೆ.

ಎಸ್.ಎಂ. ಕೃಷ್ಣ ರಸ್ತೆ: ದಕ್ಷಿಣ– ಪಶ್ಚಿಮ ಸಂಪರ್ಕ

ಬಿಡಿಎದಿಂದ ನಿರ್ಮಾಣ • ಕೆಂಪೇಗೌಡ ಜಯಂತಿಯಂದು ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಿಗ್ನಲ್ ಇಲ್ಲದೆ, ಟೋಲ್ ಇಲ್ಲದೆ ಅತಿ ಕಡಿಮೆ ಸಮಯದಲ್ಲಿ ಸಂಪರ್ಕ ಕಲ್ಪಿಸುವ 'ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ರಸ್ತೆ'ಯು ನಾಡಪ್ರಭು ಕೆಂಪೇಗೌಡ ಜಯಂತಿಯ ದಿನವಾದ ಜೂನ್ 27ರಂದು ಸಂಚಾರಕ್ಕೆ ಮುಕ್ತವಾಗಲಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಪ್ರಮುಖ ಸಂಪರ್ಕ ರಸ್ತೆಯಾಗಿ ನಿರ್ಮಿಸಿರುವ ಎಂಎಆರ್ ರಸ್ತೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 'ಎಸ್.ಎಂ.ಕೃಷ್ಣ ರಸ್ತೆ' ಎಂದು ನಾಮಕರಣ ಮಾಡಿದೆ. ಮೈಸೂರು ರಸ್ತೆ ಚಲ್ಲಘಟ್ಟ ಮೆಟ್ರೊ ನಿಲ್ದಾಣದಿಂದ ಮಾಗಡಿ ರಸ್ತೆಯ ಕಡಬಗೆರೆ ಕ್ರಾಸ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯು ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಲ್ಲಾ ಒಂಬತ್ತು ಬ್ಲಾಕ್‌ಗಳ ಸಂಚಾರಕ್ಕೂ ಕೊಂಡಿಯಾಗಿದೆ.

ಕಂಬೀಪುರ, ಕೊಮ್ಮಘಟ್ಟ, ಕೆಂಚನಪುರ ಪ್ರದೇಶಗಳಿಗೆ ಈ ರಸ್ತೆಯು ಸುಗಮ ಸಂಪರ್ಕ ಒದಗಿಸಲಿದೆ. ಜೊತೆಗೆ ಮೈಸೂರು, ಮಾಗಡಿ, ಹಾಸನ, ಕುಣಿಗಲ್, ಮಂಡ್ಯ, ರಾಮನಗರ ಭಾಗಗಳಿಂದ ಬೆಂಗಳೂರಿಗೆ ಸಂಚರಿಸುವ ಸಾವಿರಾರು ಪ್ರಯಾಣಿಕರಿಗೆ ಸಮಯ ಉಳಿಸುವ ಮಾರ್ಗವಾಗಲಿದೆ. ದಕ್ಷಿಣ ಮತ್ತು ಪಶ್ಚಿಮ ಬೆಂಗಳೂರಿನ ನಡುವೆ ಸಂಪರ್ಕ ಬೆಸೆಯುವಲ್ಲಿ ಹೊಸ ಅಧ್ಯಾಯ ಆರಂಭಿಸಲಿದ್ದು, ಸಂಚಾರ ದಟ್ಟಣೆ ನಿವಾರಣೆಗೆ ಸಹಕಾರಿಯಾಗಲಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಸಾವಿರಾರು ಕುಟುಂಬಗಳಿಗೆ ನಿವೇಶನ, ರಸ್ತೆ, ಉದ್ಯಾನ, ಕುಡಿಯುವ ನೀರು ಮತ್ತು ಇತರೆ ಮೂಲ ಸೌಕರ್ಯಗಳನ್ನು ಒದಗಿಸಿದ್ದು, ಅದಕ್ಕೆ ಹೊಂದಿಕೊಂಡಿರುವ 11 ಗ್ರಾಮಗಳಲ್ಲಿ ನೈರ್ಮಲ್ಯ ಕಾಪಾಡಲು ಒಳಚರಂಡಿ ವ್ಯವಸ್ಥೆಯನ್ನು ಬಿಡಿಎ ಕಲ್ಪಿಸಿದೆ.

ಎಲೆಕ್ಟ್ರಾನಿಕ್ ಸಿಟಿ ಬಳಿ ಹೊಸೂರು ರಸ್ತೆಯಿಂದ ಪ್ರಾರಂಭಿಸಿ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ-ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಪಿಆರ್‌ಆರ್–2 ರಸ್ತೆಗೆ 'ಎಸ್.ಎಂ. ಕೃಷ್ಣ ರಸ್ತೆ ಕೊಂಡಿಯಾಗಿ, ಬಿಬಿಸಿ ರಸ್ತೆಗೆ ಸಂಪರ್ಕ ಕಲ್ಪಿಸಲಿದೆ.

₹631 ಕೋಟಿ ವೆಚ್ಚದ ಯೋಜನೆ

- ₹631 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಯೋಜನೆ
- 3 ಪ್ರಮುಖ ಅಂಡರ್ ಪಾಸ್‌ಗಳು, 11 ಸೇತುವೆಗಳು, 270 ಮೀಟರ್ ಉದ್ದದ ಸುರಂಗ ಮಾರ್ಗ
- 3 ಮೀಟರ್ ಅಗಲದ ರಸ್ತೆ ವಿಭಜಕ, ಆಧುನಿಕ ಸರ್ವಿಸ್ ರಸ್ತೆ, ಸೈಕಲ್ ಟ್ರ್ಯಾಕ್ ವ್ಯವಸ್ಥೆ
- 10.7 ಕಿ.ಮೀ ಉದ್ದದ, 100 ಮೀಟರ್ ಅಗಲದ (330 ಅಡಿ), 10 ಲೇನ್‌ಗಳ ರಸ್ತೆ
- ಎರಡೂ ಬದಿಗಳಲ್ಲಿ 27 ಮೀಟರ್ ಅಗಲದ ಪ್ರದೇಶದಲ್ಲಿ ಮರದ ತೋಪು, ಹಸಿರು ವಲಯ
- ಭವಿಷ್ಯದಲ್ಲಿ ಬೆಂಗಳೂರು ಮೆಟ್ರೊ ಜಾಲವನ್ನು ವಿಸ್ತರಿಸಲು ಅವಕಾಶ





ಮೈಸೂರು ರಸ್ತೆ ಬಳಿ ಆರಂಭವಾಗುವ 'ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ರಸ್ತೆ' (ಎಡಚಿತ್ರ). ಎಸ್.ಎಂ. ಕೃಷ್ಣ ರಸ್ತೆಯ ಪಕ್ಷಿನೋಟ

ಕೃಷ್ಣ ಅವರ ದೂರದೃಷ್ಟಿಗೆ ಗೌರವ

ಕೆಂಪೇಗೌಡರ ಕನಸು, ಎಸ್.ಎಂ.ಕೃಷ್ಣ ಅವರ ಅಭಿವೃದ್ಧಿಯ ದೃಷ್ಟಿಕೋನಕ್ಕೆ ಗೌರವ ಸಲ್ಲಿಸುವ ಕಾರ್ಯವನ್ನು ಬಿಡಿಎ ಮಾಡಿದೆ. ಕೆಂಪೇಗೌಡರ ಜಯಂತಿ ಸಂದರ್ಭದಲ್ಲಿ ಲೋಕಾರ್ಪಣೆ ಆಗುತ್ತಿರುವ 'ಎಸ್.ಎಂ.ಕೃಷ್ಣ ರಸ್ತೆ' ಬೆಂಗಳೂರು ನಗರ ಮೂಲಸೌಕರ್ಯ ಅಭಿವೃದ್ಧಿಯ ಹೊಸ ಅಧ್ಯಾಯಕ್ಕೆ ಸಾಕ್ಷಿಯಾಗಲಿದೆ. ಬೆಂಗಳೂರು ನಗರವನ್ನು ಆಧುನಿಕ ಮತ್ತು ಜಾಗತಿಕ ನಗರವನ್ನಾಗಿ ರೂಪಿಸುವ ಕನಸು ಕಂಡ ಎಸ್.ಎಂ. ಕೃಷ್ಣ ಅವರ ದೂರದೃಷ್ಟಿಗೆ ಗೌರವ ಸಮರ್ಪಿಸುವುದರ ಜೊತೆಗೆ ಸಂಚಾರ ದಟ್ಟಣೆ ತಗ್ಗಿಸುವುದಕ್ಕಾಗಿ ನಿರ್ಮಿಸಲು ಉದ್ದೇಶಿಸಿರುವ ಪಿಆರ್‌ಆರ್‌ಗೆ ಮೊದಲ ಕೊಂಡಿಯಾಗಿ ಮಹತ್ತರ ಪಾತ್ರವಹಿಸಲಿದೆ.

–**ಡಿ.ಕೆ.ಶಿವಕುಮಾರ್**, ಮುಖ್ಯಮಂತ್ರಿ

40 ನಿಮಿಷ ಉಳಿತಾಯ


'ಎಸ್.ಎಂ. ಕೃಷ್ಣ' ರಸ್ತೆಯು ನೈಸ್‌ಗೆ ಪರ್ಯಾಯ ಮಾರ್ಗವಾಗಿದೆ. ಪಶ್ಚಿಮ ಮತ್ತು ಉತ್ತರ ಬೆಂಗಳೂರಿನ ಸಂಪರ್ಕ ವ್ಯವಸ್ಥೆಗೆ ಪ್ರಮುಖ ರಸ್ತೆ ಜಾಲ. ಮಾಗಡಿ ರಸ್ತೆಯಿಂದ ಮೈಸೂರು ರಸ್ತೆ ಸಂಪರ್ಕಿಸುವ ವಾಹನಗಳು ಪ್ರಸ್ತುತ ನಾಯಂಡಹಳ್ಳಿ, ಸುಮನಹಳ್ಳಿ ಜಂಕ್ಷನ್ ಮುಖಾಂತರ ಚಲಿಸಬೇಕಾಗಿದೆ. ಈ ಹೊಸ ರಸ್ತೆಯಿಂದ ಸಂಚಾರದ ಅವಧಿ 60 ನಿಮಿಷದಿಂದ 20 ನಿಮಿಷಕ್ಕೆ ತಗ್ಗಲಿದೆ. ಅಲ್ಲದೆ ಈ ರಸ್ತೆಯು ಮಾಚೋಹಳ್ಳಿ, ಕೊಡಿಗೆಹಳ್ಳಿ, ಕನ್ನಳ್ಳಿ, ಕೆಂಚನಪುರ, ಸೂಲಿಕೆರೆ, ಕೊಮ್ಮಘಟ್ಟ ಹಾಗೂ ಚಲ್ಲಘಟ್ಟ ಗ್ರಾಮಗಳಿಗೆ ಹೊಂದಿಕೊಂಡಂತಿದ್ದು, ಗ್ರಾಮಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

ಬಾಕ್ಸ್–ಪುಷಿಂಗ್ ತಂತ್ರಜ್ಞಾನ

ಬೆಂಗಳೂರು-ಮೈಸೂರು ಜೋಡಿ ಮಾರ್ಗದ ರೈಲ್ವೆ ಹಳಿಗಳ ಕೆಳಗೆ 'ಬಾಕ್ಸ್ ಪುಷಿಂಗ್' ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಬಿಡಿಎ, ಮೂರು ತಿಂಗಳಲ್ಲಿ ಹಳಿಯ ಕೆಳಗೆ ಸೇತುವೆಯನ್ನು ರೈಲು ಸಂಚಾರಕ್ಕೆ ತಡೆಯಾಗದಂತೆ ಪೂರ್ಣಗೊಳಿಸಿತು. ರೈಲ್ವೆ ಇಲಾಖೆಯ ಅನುಮೋದನೆಯೊಂದಿಗೆ ರೈಲ್ವೆ ಒಡೆತನದ ಸ್ಥಳದಲ್ಲಿ 40 ಮೀಟರ್ ಉದ್ದದ 14 ಮೀಟರ್ ಅಗಲದ ಎರಡು ಕೆಳಸೇತುವೆ ನಿರ್ಮಿಸಲಾಗಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಮೋಹನ್‌ದಾಸ್ ಪೈ, ಮಾದಾರ ಚೆನ್ನಯ್ಯ ಶ್ರೀಗೆ ಕೆಂಪೇಗೌಡ ಪ್ರಶಸ್ತಿ

ಬೆಂಗಳೂರು: ಕೆಂಪೇಗೌಡರ 517ನೇ ಜನ್ಮ ದಿನಾಚರಣೆ ಪ್ರಯುಕ್ತ ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಇನ್ಫೊಸಿಸ್‌ನ ಸಹ ಸಂಸ್ಥಾಪಕ, ಉದ್ಯಮಿ ಟಿ.ವಿ.ಮೋಹನ್‌ದಾಸ್ ಪೈ, ಚಿತ್ರದುರ್ಗದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಮತ್ತು ನಿವೃತ್ತ ಅಧಿಕಾರಿ ಎ.ಸಿ. ಲಕ್ಷ್ಮಣ್ ಭಾಜನರಾಗಿದ್ದಾರೆ.



ಮೋಹನ್‌ದಾಸ್ ಪೈ



ಮಾದಾರ ಚೆನ್ನಯ್ಯ ಶ್ರೀ

ಬುಧವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಶಾಸಕ ಡಾ.ಸಿ. ಎನ್. ಅಶ್ವತ್ಥನಾರಾಯಣ, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಅಧ್ಯಕ್ಷ ಕೃಷ್ಣೇಗೌಡ ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಪ್ರಕಟಿಸಿದರು.

ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹2 ಲಕ್ಷ ಹಾಗೂ 200 ಗ್ರಾಂ ಬೆಳ್ಳಿಯ ಸ್ಮರಣಿಕೆ, ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತರಾದ 15 ಮಂದಿಗೆ ತಲಾ ₹25 ಸಾವಿರ ನಗದು ನೀಡಿ ಗೌರವಿಸಲಾಗುತ್ತದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 27ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದ್ದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಮತ್ತಿತರ ಗಣ್ಯರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತರು: ಎಸ್.ವಿ.ರಂಗನಾಥ್, ಎಚ್. ಎ.ರಂಗನಾಥ್, ಎಂ.ಆರ್.ಜೈಶಂಕರ್, ಬಿ.ಎಂ. ಕೊಕರೆ, ಡಾ.ವಾಮದೇವಪ್ಪ, ಕೇಶವ ಅಮ್ಮೆ, ವಿಕ್ರಮ್ ಮುತ್ತಣ್ಣ, ಜಯಪ್ರಕಾಶ ಗೌಡ, ರವಿಕುಮಾರ್, ಯಶಸ್ವಿನಿ ಶರ್ಮ, ಪ್ರೇಮಾ ಗಣೇಶ್, ರಶ್ಮಿ ಸಾವಂತ್, ತ್ರಿಸ್ತಾ ರಾಮಮೂರ್ತಿ, ಧರ್ಮೇಂದ್ರ, ಮಹೇಶ್ ಗೌಡ.

'ಪರಿಶ್ರಮ'ಕ್ಕೆ ಸಿಎ ನಿವೇಶನ ಹಂಚಿಕೆ ಯಥಾಸ್ಥಿತಿಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗರಿಕ ಬಳಕೆಗೆ ಕಾಯ್ದಿರಿಸಲಾಗಿದ್ದ ಮೂರು ಸಿಎ ನಿವೇಶನಗಳನ್ನು ಚಿಕ್ಕಬಳ್ಳಾಪುರ ಕ್ಷೇತ್ರದ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಒಡೆತನದ 'ಪರಿಶ್ರಮ' ಸಂಸ್ಥೆಗೆ, ಹಂಚಿಕೆ ಮಾಡಿರುವ ಬಗ್ಗೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ (ಸಿಯುಡಿಎ) ನಿರ್ಣಯವನ್ನು ಪ್ರಶ್ನಿಸಿ ಗುಜರಾತ್‌ನ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾದ 'ಪದ್ಮ ವಿಜಯ ಫೌಂಡೇಷನ್' ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಎಂ.ಎಸ್ ಶ್ಯಾಮ್‌ಸುಂದರ್, 'ಅರ್ಜಿ ಸ್ವೀಕರಿಸಲು ಅಂತಿಮ ದಿನಕ್ಕೆ ಮೊದಲೇ ನಾಗರಿಕ ಬಳಕೆಯ ನಿವೇಶನ ಹಂಚಿಕೆಗೆ ನಿರ್ಣಯ ಕೈಗೊಳ್ಳಲಾಗಿದೆ. ಇದು ಸಿಯುಡಿಎ ಕೈಗೊಂಡ ಕಾನೂನುಬಾಹಿರ ಕ್ರಮ. ನಿವೇಶನಗಳನ್ನು ಏಕಪಕ್ಷೀಯವಾಗಿ ಶಾಸಕರ ಟ್ರಸ್ಟ್‌ಗೆ ಹಂಚಿಕೆ ಮಾಡಲಾಗಿದೆ' ಎಂದು ಆರೋಪಿಸಿದರು.

'ಅರ್ಜಿದಾರರು ಸಲ್ಲಿಸಿದ್ದ ಅರ್ಜಿಯನ್ನು ಪ್ರಾಧಿಕಾರ ಹಲವು ಬಾರಿ ಸ್ವೀಕರಿಸಲು ನಿರಾಕರಿಸಿ ಕೊನೆಯ ದಿನ ಅರ್ಜಿಯನ್ನು ಸ್ವೀಕರಿಸಿದೆ. ಆದರೆ, ಸ್ಥಳೀಯ ಶಾಸಕರು ಪ್ರಭಾವ ಬೀರಿ ಸಿಎ ನಿವೇಶನಗಳನ್ನು ಮಂಜೂರು ಮಾಡಿಸಿಕೊಂಡಿದ್ದಾರೆ. ಹಾಗಾಗಿ, ಹಂಚಿಕೆ ರದ್ದುಗೊಳಿಸಬೇಕು. ಮಧ್ಯಂತರ ಪರಿಹಾರವಾಗಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ವ್ಯಾಜ್ಯ ಹೈಕೋರ್ಟ್ ಪರಿಗಣನೆಯಲ್ಲಿ ಇರುವ ಕಾರಣ ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಪ್ರತಿವಾದಿಗಳಿಗೆ ನಿರ್ದೇಶಿಸಿತು. ಅಂತೆಯೇ, ರಾಜ್ಯ ಸರ್ಕಾರ, ಸಿಯುಡಿಎ, ಜಿಲ್ಲಾಧಿಕಾರಿ ಹಾಗೂ ಪರಿಶ್ರಮ ಎಜುಕೇಶನ್ ಟ್ರಸ್ಟ್‌ಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಆಗಸ್ಟ್ 14ಕ್ಕೆ ಮುಂದೂಡಿತು.

ಪ್ರಕರಣವೇನು?: ನಂದಿ ಹೋಬಳಿಯ ಬೀಡಗಾನಹಳ್ಳಿಯಲ್ಲಿ 2,484 ಚದರ ಮೀಟರ್ ವಿಸ್ತೀರ್ಣದ ಮೂರು ನಿವೇಶನಗಳನ್ನು ಶಾಸಕ ಪ್ರದೀಪ್ ಈಶ್ವರ್‌ಗೆ ಸೇರಿದ ಪರಿಶ್ರಮ ಎಜುಕೇಶನ್ ಟ್ರಸ್ಟ್‌ಗೆ ಹಂಚಿಕೆ ಮಾಡಿ 2026ರ ಜನವರಿ 14ರಂದು ಸಿಯುಡಿಎ ನಿರ್ಣಯ ಅಂಗೀಕರಿಸಿತ್ತು. ಅರ್ಜಿದಾರರು ಇದನ್ನು ಪ್ರಶ್ನಿಸಿದ್ದಾರೆ.

'ಬಾಹ್ಯಾಕಾಶ: ಅವಕಾಶ ಬಳಸಿಕೊಳ್ಳಿ'

ಬೆಂಗಳೂರು: 'ಜಾಗತಿಕ ಬಾಹ್ಯಾಕಾಶ ಆರ್ಥಿಕತೆಯು ವೇಗವಾಗಿ ವಿಸ್ತರಿಸುತ್ತಿದ್ದು, ಈ ಕ್ಷೇತ್ರದಲ್ಲಿ ಇರುವ ಅವಕಾಶಗಳನ್ನು ಬ್ರಿಕ್ಸ್ ದೇಶಗಳ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳು ಬಳಸಿಕೊಳ್ಳಬೇಕು' ಎಂದು ಕೇಂದ್ರ ವಿಜ್ಞಾನ–ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಹೇಳಿದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಆತಿಥ್ಯದಲ್ಲಿ ನಗರದಲ್ಲಿ ನಡೆದ ಎರಡು ದಿನಗಳ, 'ಬ್ರಿಕ್ಸ್ ಬಾಹ್ಯಾಕಾಶ ಸಂಸ್ಥೆಗಳ ಮುಖ್ಯಸ್ಥರ ಸಭೆ'ಯ ಸಮಾರೋಪ ಕಾರ್ಯಕ್ರಮದಲ್ಲಿ ಬುಧವಾರ ಅವರು ಮಾತನಾಡಿದರು.

'ಬ್ರಿಕ್ಸ್ ದೇಶಗಳು ಬಾಹ್ಯಾಕಾಶ ಕ್ಷೇತ್ರಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ, ಸಂಶೋಧನಾ ಮತ್ತು ಅಭಿವೃದ್ಧಿ ಕೌಶಲ ಹಾಗೂ ತಯಾರಿಕಾ ಸಾಮರ್ಥ್ಯ ಹೊಂದಿವೆ. ಅದನ್ನು ಸರಿಯಾಗಿ ಬಳಸಿಕೊಂಡರೆ, ಬ್ರಿಕ್ಸ್ ದೇಶಗಳು ಈ ಕ್ಷೇತ್ರದಲ್ಲಿ ಪ್ರಾಬಲ್ಯ ಸಾಧಿಸಬಹುದು' ಎಂದರು.

ಅನುವಾದ ಪ್ರಶಸ್ತಿ ಗಡುವು ವಿಸ್ತರಣೆ

ಬೆಂಗಳೂರು: ದ್ರಾವಿಡ ಭಾಷಾ ಅನುವಾದಕರ ಸಂಘ ನೀಡುವ 2026ನೇ ಸಾಲಿನ ಅನುವಾದ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಗಡುವನ್ನು ಜುಲೈ 15ರವರೆಗೆ ವಿಸ್ತರಿಸಲಾಗಿದೆ.

ದ್ರಾವಿಡ ಭಾಷೆಗಳಿಂದ ತೆಲುಗು ಭಾಷೆಗೆ ಅನುವಾದಗೊಂಡು, 2024 ಮತ್ತು 2025ರಲ್ಲಿ ಪ್ರಕಟವಾದ ಕೃತಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

ಅರ್ಜಿ ಸಲ್ಲಿಸುವವರು ಅನುವಾದಿತ ಕೃತಿಯ ಮೂರು ಪ್ರತಿಗಳನ್ನು ಕಳಿಸಬೇಕಾದ ವಿಳಾಸ: ಅಧ್ಯಕ್ಷರು, ಡಿಬಿಟಿಎ, ಶ್ರೀ ಭೈರವೇಶ್ವರ ನಿಲಯ, ಇಮ್ಮಡಿಹಳ್ಳಿ ಮುಖ್ಯ ರಸ್ತೆ, ಹಗದೂರು, ವೈಟ್‌ಫೀಲ್ಡ್, ಬೆಂಗಳೂರು – 560066.

ವಿಜೇತರಿಗೆ ₹11,111 ನಗದು ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಯನ್ನು ಸೆಪ್ಟೆಂಬರ್ ತಿಂಗಳಲ್ಲಿ ನಡೆಯುವ ಸಂಘದ ಐದನೇ ವಾರ್ಷಿಕೋತ್ಸವದಲ್ಲಿ ನೀಡಲಾಗುವುದು ಎಂದು ಸಂಘದ ಸಂಸ್ಥಾಪಕ ಅಧ್ಯಕ್ಷೆ ಡಾ. ಸುಷ್ಮಾ ಶಂಕರ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9901041889, 8147212724

‘ರಾಮಮಂದಿರ ಸ್ಫೋಟಕ್ಕೆ ಸಂಚು’

ಬಂಧಿತ ಶಂಕಿತ ಉಗ್ರನ ಮೊಬೈಲ್‌ನಲ್ಲಿ ಪಾಕಿಸ್ತಾನದ ಹಲವು ಫೋನ್ ಸಂಖ್ಯೆ ಪತ್ತೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಿಲ್ಲೆಯ ಹರಿಹರ ತಾಲ್ಲೂಕಿನ ಬನ್ನಿಕೋಡ ಗ್ರಾಮದ ಬಳಿಯ ಮನೆಯೊಂದರಲ್ಲಿ ಬಂಧಿಸಲಾದ ಶಂಕಿತ ಉಗ್ರ, ಉತ್ತರಪ್ರದೇಶ ಮೂಲದ ಸೊಹೇಲ್, ಅಯೋಧ್ಯೆಯ ರಾಮಮಂದಿರವನ್ನು ಸ್ಫೋಟಿಸುವ ಸಂಚು ರೂಪಿಸಿದ್ದ ಎಂಬುದು ಪೊಲೀಸರ ತನಿಖೆಯಿಂದ ಬಹಿರಂಗವಾಗಿದೆ.

ಉತ್ತರಪ್ರದೇಶದ ಶಹಜಹಾನ್‌ಪುರದ ಸೊಹೇಲ್ ಎರಡು ವಾರಗಳ ಹಿಂದಷ್ಟೇ ಹರಿಹರಕ್ಕೆ ಬಂದಿದ್ದ. ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದ ಶಂಕಿತನ ಮೊಬೈಲ್ ಫೋನ್ ಹಲವು ಸುಳಿವುಗಳನ್ನು ನೀಡಿದೆ. ದೇಶದ ಹಲವೆಡೆ ವಿಧ್ವಂಸಕ ಕೃತ್ಯ ಎಸಗಲು ಸಿದ್ಧತೆ ನಡೆಸಿದ್ದು ಕೂಡ ಗೊತ್ತಾಗಿದೆ.

ಆರೋಪಿಯ ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ ಸೇರಿ ಹಲವು ಸಾಮಾಜಿಕ ಜಾಲತಾಣಗಳು ಈತ ದೇಶ ವಿರೋಧಿ ಮನಸ್ಥಿತಿ ಹೊಂದಿದ್ದ ಎಂಬುದನ್ನು ಖಚಿತಪಡಿಸಿವೆ. ಪಾಕಿಸ್ತಾನದ ದೂರವಾಣಿ ಸಂಖ್ಯೆಗಳನ್ನು ‘ರಾಣಾ ಜಿ’ ಎಂಬ ಹೆಸರಿನಲ್ಲಿ ಮೊಬೈಲ್‌ನಲ್ಲಿ ಇಟ್ಟುಕೊಂಡಿದ್ದು ತನಿಖೆಯಿಂದ ಬೆಳಕಿಗೆ ಬಂದಿದೆ. ದೇಶದ ವಿವಿಧೆಡೆ ವಿಧ್ವಂಸಕ ಕೃತ್ಯಗಳನ್ನು ನಡೆಸಲು ಕೆಲವರೊಂದಿಗೆ ಚರ್ಚಿಸಿದ ಆಡಿಯೊ ಫೈಲ್‌ಗಳು ಕೂಡ ಲಭ್ಯವಾಗಿವೆ.

ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸುವವರೇ ಹೆಚ್ಚಾಗಿರುವ ‘ರಾಣಾ ಭಾಯಿ’, ‘ಬಟ್ಟು’ ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗಳ ಸದಸ್ಯನಾಗಿದ್ದ. ಶಸ್ತ್ರಾಸ್ತ್ರಗಳೊಂದಿಗೆ ಸೊಹೇಲ್ ತೆಗೆಸಿಕೊಂಡ ಫೋಟೊಗಳು ಪೊಲೀಸರಿಗೆ ಸಿಕ್ಕಿವೆ.

ಭಯೋತ್ಪಾದನಾ ಚಟುವಟಿಕೆಗಳಿಗೆ ಸಾಮಾಜಿಕ ಜಾಲತಾಣವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾನೆ. ಭಯೋತ್ಪಾದನಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೆಲ ಯುವಕರಿಗೆ ತರಬೇತಿ ನೀಡಲು ಆರೋಪಿ ಸಿದ್ಧತೆ ಮಾಡಿಕೊಂಡಿದ್ದ. ಶಂಕಿತ ಉಗ್ರನೊಂದಿಗೆ ಬಂದಿದ್ದ ಇತರ 10 ಜನರ ವಿಚಾರಣೆಯನ್ನೂ ಪೊಲೀಸರು ನಡೆಸುತ್ತಿದ್ದಾರೆ.

‘ಆರೋಪಿಯ ವಿಚಾರಣೆ ನಡೆಸಿದಾಗ ಹಲವು ಮಾಹಿತಿಗಳು ಲಭ್ಯವಾಗಿವೆ. ಪಾಕಿಸ್ತಾನದ ಅನೇಕರೊಂದಿಗೆ ಸಂಪರ್ಕದಲ್ಲಿದ್ದ ಎಂಬುದಕ್ಕೆ ಮೊಬೈಲ್ ಫೋನ್ ಸಾಕ್ಷ್ಯ ಒದಗಿಸಿದೆ. ಕೆಲವು ಆಡಿಯೊ ಫೈಲ್‌ಗಳು ಲಭ್ಯವಾಗಿದ್ದು, ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಟಿ. ಶೇಖರ್ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಹಲವು ಸುಳಿವು ನೀಡಿದ ಮೊಬೈಲ್ ಫೋನ್
- ಫೋಟೊಗಳು, ಆಡಿಯೊ ಫೈಲ್ ಲಭ್ಯ
- ಉಗ್ರರಿಗೆ ತರಬೇತಿ ನೀಡಲು ಸಿದ್ಧತೆ

ಸಾಮಾಜಿಕ ಜಾಲತಾಣಗಳ ಮೂಲಕ ಹಲವು ಉಗ್ರರೊಂದಿಗೆ ಆರೋಪಿ ಸಂಪರ್ಕ ನಡೆಸಿದ್ದಾನೆ. ತುಮಕೂರಿನಲ್ಲಿ ಬಂಧಿತರಾದ ಶಂಕಿತ ಉಗ್ರರ ಪ್ರಕರಣಕ್ಕೂ ಇದಕ್ಕೂ ಸಾಮ್ಯತೆ ಇದೆ

ಎಚ್.ಟಿ. ಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

133 ಜನೌಷಧ ಕೇಂದ್ರಗಳಿಗೆ ನೋಟಿಸ್

ಬೆಂಗಳೂರು: ಬ್ರ್ಯಾಂಡೆಡ್ ಔಷಧಗಳನ್ನು ಮಾರಾಟ ಮಾಡಿದ ಆರೋಪದಲ್ಲಿ 133 ಪ್ರಧಾನಮಂತ್ರಿ ಜನೌಷಧ ಕೇಂದ್ರಗಳಿಗೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ನೋಟಿಸ್ ನೀಡಿದೆ. ಇಲಾಖೆ ಅಧಿಕಾರಿಗಳು ಎರಡು ದಿನಗಳ ಅವಧಿಯಲ್ಲಿ ರಾಜ್ಯದ ವಿವಿಧೆಡೆ ಒಟ್ಟು 172 ಜನೌಷಧ ಕೇಂದ್ರಗಳನ್ನು ಪರಿಶೀಲಿಸಿದ್ದರು. ‘ಜನೌಷಧ ಕೇಂದ್ರಗಳಲ್ಲಿ ಬ್ರ್ಯಾಂಡೆಡ್ ಔಷಧಗಳ ಮಾರಾಟ ಮಾಡಬಾರದು’ ಎಂಬ ನಿಯಮವಿದೆ. ಇದರ ಉಲ್ಲಂಘನೆ ಕುರಿತು ಪರಿಶೀಲನೆಗೆ ಸಿದ್ಧತೆ ನಡೆಸಿದ್ದಾಗಿ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಮರಿ ನೀರಾನೆ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್



ಮಂಗಳೂರಿನ ಪಿಲಿಕುಳ ಜೈವಿಕ ಉದ್ಯಾನದಲ್ಲಿ ನೀರಾನೆ ‘ಕವಿತಾ’ ಜೂನ್ 17ರಂದು ಮರಿ ಹಾಕಿದ್ದು, ಒಂದು ವಾರದ ಗಂಡು ಮರಿಯ ಚಿನ್ನಾಟ ಪ್ರವಾಸಿಗರ ಪಾಲಿಗೆ ಪ್ರಮುಖ ಆಕರ್ಷಣೆಯಾಗಿದೆ

ಕೃಷಿ ಮಾಧ್ಯಮ ಪ್ರಶಸ್ತಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ರಂಗದಲ್ಲಿ ತಂತ್ರಜ್ಞಾನಗಳ ಪ್ರಸರಣದ ವೇಗವನ್ನು ಹೆಚ್ಚಿಸಲು, ಮಾಧ್ಯಮಗಳಲ್ಲಿ ಕೃಷಿ ವಿಷಯಗಳನ್ನು ಪ್ರೋತ್ಸಾಹಿಸಲು ಹಾಗೂ ಕೃಷಿ ವಿಸ್ತರಣಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರಿಗಾಗಿ ಬೆಂಗಳೂರಿನ ಹೆಬ್ಬಾಳದಲ್ಲಿರುವ ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘವು ಸ್ಥಾಪಿಸಿರುವ ಮಾಧ್ಯಮ ಮತ್ತು ‘ಹೊಂಬಾಳೆ’ ಸಂಸ್ಥೆ ಹರಿಣಿಕುಮಾರ್ ಕೃಷಿ ಮಾಧ್ಯಮ ಪ್ರಶಸ್ತಿ 2026ಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ಪ್ರಮಾಣಪತ್ರ ಹಾಗೂ ₹10 ಸಾವಿರ ನಗದು ಬಹುಮಾನವನ್ನು ಒಳಗೊಂಡಿದೆ. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದ ಪತ್ರಕರ್ತರು, ನಿರೂಪಕರು, ಅಧಿಕಾರಿಗಳು ಹಾಗೂ ಕೃಷಿ ವಿಸ್ತರಣಾ ಕಾರ್ಯಕರ್ತರು ಜುಲೈ 31ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಸಂಘದ ಕಾರ್ಯದರ್ಶಿ ಕೆ.ಎಂ. ಹರಿಣಿಕುಮಾರ್ ತಿಳಿಸಿದ್ದಾರೆ.

ವಿಳಾಸ: ಹಳೆಯ ವಿದ್ಯಾರ್ಥಿಗಳ ಸಂಘ (ರಿ), ಕೃಷಿ ವಿಶ್ವವಿದ್ಯಾನಿಲಯ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು – 560 024. **ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:** 080-23410754, **ಇಮೇಲ್:** alumniuasb83@gmail.com **ವೆಬ್‌ಸೈಟ್:** www.alumniuasb.in

ಚಿಟಿಕೆ ಸುದ್ದಿ

‘ಬಸ್‌ಪಾಸ್ ಶುಲ್ಕ ವಾಪಸ್‌ಗಾಗಿ ಸೇವಾಸಿಂಧು ಬಳಸಿ’

ಬೆಂಗಳೂರು: ಹಣ ಪಾವತಿಸಿ ಬಸ್ ಪಾಸ್ ಪಡೆದಿರುವ ವಿದ್ಯಾರ್ಥಿಗಳು ಪಾಸ್‌ನ ಹಣ ಮರು ಪಾವತಿಗೆ ಕಚೇರಿಗೆ ಸರ್ಕಾರದ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

sevasindhuservices.karnataka.gov.in/buspassservices/ ಸೇವಾಸಿಂಧು ಪೋರ್ಟಲ್ ಐಡಿಯಲ್ಲಿ ಮೊಬೈಲ್ ಸಂಖ್ಯೆ ನಮೂದಿಸಬೇಕು. ಆಧಾರ್ ಆಧಾರಿತ ಇ-ಕೆವೈಸಿ ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳು ತಮ್ಮ ಅಥವಾ ಪೋಷಕರ ಬ್ಯಾಂಕ್ ಖಾತೆ ವಿವರಗಳನ್ನು ನಮೂದಿಸಬೇಕು.

ಅರ್ಜಿ ಸಲ್ಲಿಸಿದ 7 ದಿನಗಳ ಒಳಗೆ ಮೊತ್ತ ಮರು ಪಾವತಿಯಾಗಲಿದೆ.

‘ಬಿಡದಿ: ಎಚ್‌ಡಿಕೆ ಟೌನ್‌ಶಿಪ್ ರದ್ದು ಪಡಿಸಬೇಕಿತ್ತು’

ವಿಜಯಪುರ: ‘2006ರಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದ ವೇಳೆಯೇ ಟೌನ್‌ಶಿಪ್ ಯೋಜನೆ ಆರಂಭಿಸಿ, ನೋಟಿಫಿಕೇಷನ್ ಸಹ ಮಾಡಿದ್ದರು. ಡಿಎಲ್‌ಎಫ್ ಸಂಸ್ಥೆಯವರು ಟೌನ್‌ಶಿಪ್ ಮಾಡಲು ಬಂದಿದ್ದರು. ಆಗಲೇ ಅವರು ಈ ಯೋಜನೆ ಕೈಬಿಡಬೇಕಿತ್ತು’ ಎಂದು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಇಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕುಮಾರಸ್ವಾಮಿ ಅವರೇ ನೋಟಿಫಿಕೇಷನ್ ರದ್ದು ಮಾಡಬೇಕಿತ್ತು. ಈಗ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದ ಬಳಿಕ ವಿರೋಧ ಮಾಡುತ್ತಿದ್ದಾರೆ. ಕುಮಾರಸ್ವಾಮಿ ಅವರ ವಿರೋಧ ರೈತರ ಪರವಲ್ಲ, ಬದಲಿಗೆ ಕೇವಲ ರಾಜಕೀಯಕ್ಕಾಗಿ’ ಎಂದು ಆರೋಪಿಸಿದರು.

₹1.5 ಲಕ್ಷ ಲಂಚ: ಲೋಕಾಯುಕ್ತ ಬಲೆಗೆ ಪಿಡಿಒ

ರಾಯಚೂರು: ಲೇಔಟ್ ನಿರ್ಮಾಣದ ಎರಡು ಎಕರೆ ಜಮೀನಿನ ಖಾತಾ ಉತಾರ ನೀಡಲು ವ್ಯಕ್ತಿಯೊಬ್ಬರಿಂದ ₹1.5 ಲಕ್ಷ ಲಂಚ ಪಡೆದ ತಾಲ್ಲೂಕಿನ ಬಿಜನಗೇರಾ ಗ್ರಾಮದ ಪಿಡಿಒ ಲಕ್ಷ್ಮೀ ಪ್ಯಾಟಿ ಬುಧವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಲಕ್ಷ್ಮೀ ಪ್ಯಾಟಿ

ಬಿಜನಗೇರಾದ ಮೆಹಬೂಬ್ ಅಲಿ ಅವರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಂಡ್ರಾಳದೊಡ್ಡಿ ಗ್ರಾಮದಲ್ಲಿ ಲೇಔಟ್ ನಿರ್ಮಾಣಕ್ಕೆ ಎರಡು ಎಕರೆ ಜಮೀನಿನ ಖಾತಾ ಉತಾರ ಕೇಳಿದ್ದರು. ಉತಾರ ಕೊಡಲು ಪಿಡಿಒ ಅವರು ₹2 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದು, ತಮ್ಮ ಪತಿಗೆ ಯುಪಿಐ ಮೂಲಕ ₹1.50 ಲಕ್ಷ ನೀಡುವಂತೆ ಸೂಚಿಸಿದ್ದರು.

ಈ ಕುರಿತು ಮೆಹಬೂಬ್ ಅಲಿ ಲೋಕಾಯುಕ್ತ ಠಾಣೆಗೆ ದೂರು ನೀಡಿದ್ದರು. ಅಲಿ ಅವರು ಲಕ್ಷ್ಮೀ ಪ್ಯಾಟಿ ಅವರ ಪತಿಗೆ ಹಣ ವರ್ಗಾವಣೆ ಮಾಡಿದ ಬಳಿಕ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಲಕ್ಷ್ಮೀ ಅವರನ್ನು ವಶಕ್ಕೆ ಪಡೆದಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ
University with Potential for Excellence
'A' Grade NAAC Accredited
ಪಾವಟೆನಗರ, ಧಾರವಾಡ – 580 003
ದೂ.: 0836-2215270, ಇ-ಮೇಲ್: academic.pg@kud.ac.in

No.: K.U./Aca/P.G./Ph.D/NHT/2026-27/81 ದಿನಾಂಕ: 23-06-2026

2026-27 ನೇ ಸಾಲಿನ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಕ್ಕಾಗಿ ಅಧಿಸೂಚನೆ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ 2026-27 ನೇ ಸಾಲಿಗೆ ಎಲ್ಲ ಸ್ನಾತಕೋತ್ತರ / ಸ್ನಾತಕೋತ್ತರ ಡಿಪ್ಲೊಮಾ / ಡಿಪ್ಲೊಮಾ / ಅಲ್ಪಾವಧಿ ಡಿಪ್ಲೊಮಾ ಸರ್ಟಿಫಿಕೇಟ್ ಪದವಿಗಳ ಮೊದಲನೇ ಸೆಮಿಸ್ಟರ್‌ಗಳಿಗೆ ದಿನಾಂಕ: 25-06-2026 ರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರವೇಶ ಅರ್ಹತೆ, ಪ್ರವೇಶ ಮಿತಿ, ಪ್ರವೇಶ ಪರೀಕ್ಷಾ ದಿನಾಂಕ, ಪ್ರವೇಶ ಕೌನ್ಸೆಲಿಂಗ್ ದಿನಾಂಕಗಳನ್ನು ಮುಂತಾದ ಮಾಹಿತಿಯನ್ನು ಕ.ವಿ.ವಿ. ವೆಬ್‌ಸೈಟ್: www.kud.ac.in ಮುಖಾಂತರ ಪಡೆಯುವುದು ಅಥವಾ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಿಂದ ಮಾಹಿತಿ ಪಡೆದುಕೊಳ್ಳುವುದು.

ಸಹಿ/– ಕುಲಸಚಿವರು, ಕ.ವಿ.ವಿ., ಧಾರವಾಡ.

ಡಿಐಪಿಆರ್/ಧಾರವಾಡ/353/ಮಣಿಪಾಲ್/2026-27

ಕರ್ನಾಟಕ ಸರ್ಕಾರ — ಜಿಲ್ಲಾ ಪಂಚಾಯತ್, ಚಿತ್ರದುರ್ಗ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.
ಇ-ಮೇಲ್:zped.cta@gmail.com ದೂರವಾಣಿ ಸಂ:08194-222372

ಸಂ:ಪಂರಾಇವಿ/ಚಿದು/ಇ/ಶಾ.ಶಾ/ಟೆಂಡರ್/2026-27/797 ದಿನಾಂಕ: 23.06.2026

ಮರು ಟೆಂಡರ್ ಪ್ರಕಟಣೆ
(Through e-Procurement Portal Only)

ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ವ್ಯಾಪ್ತಿಯ ವಿವಿಧ ಯೋಜನೆಯಡಿ ಅನುಮೋದನೆಯಾಗಿರುವ 04-(ಇಂಡೆಂಟ್ ಸಂ: 18597, 26833, 26831, 24479/Call-2) ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ.9.00 ಲಕ್ಷಗಳು ಗರಿಷ್ಠ ರೂ.70.00 ಲಕ್ಷಗಳು ಒಟ್ಟು ರೂ: 125.60 ಲಕ್ಷಗಳಿಗೆ ಮರು ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:-
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 07.07.2026ರ ಸಮಯ:11.00
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 08.07.2026ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.07.2026ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 10.07.2026ರ : ಸಮಯ 16.02
ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ವಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194-222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

RO.No.189:DIPR/CTA/KSMCA/2026-27

ಸಹಿ/– ಕಾರ್ಯಪಾಲಕ ಅಭಿಯಂತರರು
ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ, ಟೆಂಡರ್ ವಿಚಾರಣೆ ಸಂಖ್ಯೆ: ಬೆವಿಕಂ/2026-27/ಇಎಲ್/ವರ್ಕ್_ಇಂಡೆಂಟ್ 1147 ರ ಅನ್ವಯ ರಾಮನಗರ ವೃತ್ತದ ಮಾಗಡಿ ವಿಭಾಗದ ತಾವರೆಕೆರೆ ಉಪ-ವಿಭಾಗದಲ್ಲಿ ವಿದ್ಯುತ್ ಜಾಲತಾಣಗಳನ್ನು ಬಲಪಡಿಸಲು ಹೆಚ್‌ಟಿ/ಎಲ್‌ಟಿ ಮೇಲುಮಾರ್ಗಗಳನ್ನು ಕವರ್ಡ್ ಕಂಡಕ್ಟರ್/ಎಬಿ ಕೇಬಲ್‌ಗೆ ಬದಲಾಯಿಸುವ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ಟೆಂಡರನ್ನು ಆಹ್ವಾನಿಸಿದೆ.

ಬಿಡ್ ದಾಖಲಾತಿಗಳು ಲಭ್ಯವಿರುವ ದಿನಾಂಕ: **25.06.2026 ರಿಂದ.** ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **ಪ್ರಕಟಣೆಯ ದಿನಾಂಕದಿಂದ 30 ದಿನಗಳು.** ಬಿಡ್‌ಗಳನ್ನು **ಪ್ರಕಟಣೆಯ ದಿನಾಂಕದಿಂದ 31ನೇ ದಿನ ತೆರೆಯಲಾಗುವುದು.**

ಬಿಡ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು. ಆಸಕ್ತ ಬಿಡ್ದುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿ ಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ: (+91-80 46010000, +91-8068948777, 09240214000 & 09240214001) ನ್ನು ಸಂಪರ್ಕಿಸಿ ಅಥವಾ ಇ-ಮೇಲ್: support@eprochelpdesk.com

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿದ್ಯುತ್), ಖರೀದಿ, ಬೆವಿಕಂ, ಬೆಂಗಳೂರು-560 001.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 10/2026.27 ದಿನಾಂಕ: 22.06.2026

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–1, 2 & 4ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗಳಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.119.64 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.3.22 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 06–07–2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/274/ಕೆಎಸ್‌ಎಂಸಿಎ/2026–27

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. MANMOHAN SINGH BENGALURU CITY UNIVERSITY
Office of the Registrar, Central College Campus, Dr. B.R Ambedkar Veedhi, Bengaluru – 560 001. E-mail: registrar@bcu.ac.in

ಟೆಂಡರ್ ಸಂಖ್ಯೆ: BCU/2026-27/IND0028 ದಿನಾಂಕ: 24–06–2026

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

ಕೆಲಸದ ಹೆಸರು	Supply, Installation and Commissioning of Secure Wired and Wireless Networking & RF Connectivity at Bangalore City University, Central College Campus, Bengaluru
ಇ.ಎಮ್.ಡಿ	ರೂ. 7,50,000/–
ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	01–07–2026 16.30 ಗಂಟೆಗಳವರೆಗೆ
ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ:	02–07–2026 11.30 ಗಂಟೆಗೆ ಕುಲಸಚಿವರ ಕಛೇರಿ, ಆಡಳಿತ ಕಟ್ಟಡ, ಸೆಂಟ್ರಲ್ ಕಾಲೇಜು ಆವರಣ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	16–07–2026, 16.30 ಗಂಟೆಗಳವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	17–07–2026 16.35 ಗಂಟೆಗೆ

ಸೂಚನೆ : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕ್ರಿಯೆ ಶುಲ್ಕ ಮತ್ತು ಇ.ಎಮ್.ಡಿ ಮೊತ್ತವನ್ನು ಪಾವತಿಸುವುದು.

ವಾಸಸಂಇ/ವಾ.ಪ್ರ/1336/ಎಸ್‌ಎಸ್‌ಸಿ/2026–27

ಸಹಿ/–
ಕುಲಸಚಿವರು

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ದಾಮಪಾ/ಸಾಆವಿ/ಪೌ.ನೇ/ಸಿಬ್ಬಂದಿ/3/ಸಿಆರ್/111/2026–27 ದಿನಾಂಕ:23–06–2026

ಅಧಿಸೂಚನೆ

ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ನಡವಳಿ ಆದೇಶ ಸಂಖ್ಯೆ:1572124/DMA/EST3/GRPD/5/2024. ದಿನಾಂಕ: 13–01–2026 ಪ್ರಕಾರ ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ: ನಅಇ 171 ಎಂಎನ್‌ಇ 2022(ಇ), ದಿನಾಂಕ:23.11.2022ರ ಅಧಿಸೂಚನೆ ಅನ್ವಯ ಮತ್ತು ಸರ್ಕಾರದ ಪತ್ರ ಸಂಖ್ಯೆ: ಯುಡಿಡಿ 188 ಎಂಎನ್‌ಇ 2022(ಇ) ದಿನಾಂಕ:20–12–2022 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಸೇಹಿಮ 2026, ದಿನಾಂಕ:13–05–2026 ರನ್ವಯ ದಾವಣಗೆರೆ ಮಹಾನಗರ ಪಾಲಿಕೆಗಳಲ್ಲಿ ದಿನಾಂಕ:07–08–2017 ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಮಾತ್ರ ನೇರ ನೇಮಕಾತಿಗೆ ಅರ್ಹರಿರುತ್ತಾರೆ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು–2022ರಡಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ	ಅರ್ಹತೆಗಳು
1	ಪೌರಕಾರ್ಮಿಕರು (ವೇತನ ಶ್ರೇಣಿ: ರೂ. 27,000–46,675)	15	(1) ಕನ್ನಡ ಮಾತನಾಡಲು ಗೊತ್ತಿರಬೇಕು. (2) ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ನೇರಪಾವತಿ ಪೌರಕಾರ್ಮಿಕರು, ನೇರಪಾವತಿ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಟ 2 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರುವ ಮತ್ತು ದಾವಣಗೆರೆ ಮಹಾನಗರ ಪಾಲಿಕೆಗಳಲ್ಲಿ ದಿನಾಂಕ: 07–08–2017 ರ ಪೂರ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. (3) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ:13–05–2026 ರನ್ವಯ ಹುದ್ದೆಗಳ ವರ್ಗೀಕರಣ ಮಾಡಲಾಗಿದೆ. (4) ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ: ನಅಇ 171 ಎಂಎನ್‌ಇ 2022(ಇ), ದಿನಾಂಕ: 23.11.2022ರ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಗರಿಷ್ಠ ವಯೋಮಿತಿ 55 ವರ್ಷಗಳನ್ನು ಮೀರತಕ್ಕದ್ದಲ್ಲ.

ಹುದ್ದೆಗಳ ವರ್ಗೀಕರಣ:

ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ 15 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದರ ವಿವರ

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ	ಯೋ.ನಿ	ಕ.ಮಾ.ಅ	ಅಂ.ವಿ	ತೃ.ಲಿಂ	ಒಟ್ಟು
ಪ.ಜಾ	1	0	0	0	0	0	0	0	1
ಪ.ಪಂ	0	1	0	0	0	0	0	0	1
ಪ್ರ–1	0	0	0	0	0	0	0	0	0
ಪ್ರ–2ಎ	0	0	1	0	1	0	0	0	2
ಪ್ರ–2ಬಿ	0	0	0	1	0	0	0	0	1
ಪ್ರ–3ಎ	0	0	0	1	0	0	0	0	1
ಪ್ರ–3ಬಿ	0	1	0	0	0	0	0	0	1
ಸಾ.ಅ	1	3	3	0	0	0	1	0	8
ಒಟ್ಟು	2	5	4	2	1	0	1	0	15

ಅರ್ಜಿ ವಿವರ	ದಿನಾಂಕ	ಕಛೇರಿ ವಿಳಾಸ
ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ	24–06–2026	ದಾವಣಗೆರೆ ಮಹಾನಗರ ಪಾಲಿಕೆ ಕೇಂದ್ರ ಕಛೇರಿ, ರೈಲ್ವೆ ನಿಲ್ದಾಣ ಎದುರು, ಪಿ.ಬಿ ರಸ್ತೆ, ದಾವಣಗೆರೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	23–07–2026	

ವಿಶೇಷ ಸೂಚನೆ:
1. ಅಧಿಸೂಚನೆಯನ್ನು ದಾವಣಗೆರೆ ಮಹಾನಗರ ಪಾಲಿಕೆ ವೆಬ್‌ಸೈಟ್ www.davanagerecity.mrc. gov.in ಹಾಗೂ ಕೇಂದ್ರ ಕಛೇರಿ ಸೂಚನಾ ಫಲಕದಲ್ಲಿ ವೀಕ್ಷಿಸಬಹುದು.
2. ಈ ನೇಮಕಾತಿಯು ಸರ್ಕಾರದ/ಪೌರಾಡಳಿತ ನಿರ್ದೇಶನಾಲಯದಿಂದ ಕಾಲ ಕಾಲಕ್ಕೆ ಹೊರಡಿಸಲಾಗುವ ಆದೇಶ/ಸುತ್ತೋಲೆ/ಅಧಿಸೂಚನೆಗಳ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿದೆ.

ವಾಸಾಇ/ದಾವಣಗೆರೆ/175/ಕೆಎಸ್‌ಎಂಸಿಎ/2026–27

ಸಹಿ/– ಅಧ್ಯಕ್ಷರು,
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಆಯುಕ್ತರು, ಮಹಾನಗರ ಪಾಲಿಕೆ ದಾವಣಗೆರೆ.

ನಗರ ಸಿವಿಲ್ ನ್ಯಾಯಾಲಯ
ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯ, ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು–560009.

ಸಂ : ಆ.ವಿ.1(ಎ)/432/2026 ದಿನಾಂಕ : 24.06.2026

ನೇಮಕಾತಿ ಬಗ್ಗೆ ಸಂಕ್ಷಿಪ್ತ ಪ್ರಕಟಣೆ

ನೇಮಕಾತಿ ಅಧಿಸೂಚನೆ ಸಂಖ್ಯೆ ಎಡಿಎಂ–1(ಎ)/428/2026 ದಿನಾಂಕ: 24.06.2026 ಉಳಿಕೆ ಮೂಲ ವೃಂದ ನೇಮಕಾತಿ ಅಧಿಸೂಚನೆ ಸಂಖ್ಯೆ ಎಡಿಎಂ–1(ಎ)/429/2026 ದಿನಾಂಕ: 24.06.2026 – ಕಲ್ಯಾಣ ಕರ್ನಾಟಕ ಪ್ರದೇಶ (371 ಜೆ).

ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ಘಟಕದಲ್ಲಿ ಖಾಲಿಯಿರುವ ಕೆಳಕಂಡ ಹುದ್ದೆಗಳಿಗೆ ನಿಯಮಾನುಸಾರ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಸ್ವೀಕರಿಸಲು ದಿನಾಂಕ 1 ನೇ ಜುಲೈ 2026 ರಿಂದ ಆರಂಭಗೊಂಡು ದಿನಾಂಕ 30 ನೇ ಜುಲೈ 2026 ರ ರಾತ್ರಿ 11.59 ಗಂಟೆಗೆ ಕೊನೆಗೊಳ್ಳಲಿದೆ. ಹುದ್ದೆಗಳ ಮಾಹಿತಿ ಕೆಳಕಂಡಂತಿದೆ.

ಕಲ್ಯಾಣ ಕರ್ನಾಟಕ ಪ್ರದೇಶ (371–ಜೆ)

1. ಶೀಘ್ರಲಿಪಿಗಾರರು ಗ್ರೇಡ್–III ಹುದ್ದೆಗಳು – ಒಟ್ಟು 6 ಹುದ್ದೆಗಳು (01+05 ಹಿಂಬಾಕಿ ಹುದ್ದೆಗಳು), 2. ಬೆರಳಚ್ಚುಗಾರರ ಹುದ್ದೆಗಳು – ಒಟ್ಟು 7 ಹುದ್ದೆಗಳು (06+01 ಹಿಂಬಾಕಿ ಹುದ್ದೆ), 3. ಚಾಲಕರ ಹುದ್ದೆ – 01 ಹುದ್ದೆ, 4. ಆದೇಶ ಜಾರಿಕಾರರ ಹುದ್ದೆ – 01 ಹುದ್ದೆ, 5. ಜವಾನ ಹುದ್ದೆಗಳು – 7 ಹುದ್ದೆಗಳು

ಉಳಿಕೆ ಮೂಲ ವೃಂದ

1. ಚಾಲಕರ ಹುದ್ದೆ – 07 ಹುದ್ದೆ, 2. ಜವಾನ ಹುದ್ದೆಗಳು – 81 ಹುದ್ದೆಗಳು

ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವ ಅರ್ಹ ಅಭ್ಯರ್ಥಿಗಳು ಮೀಸಲಾತಿಯ ವಿವರ, ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ ಪಾವತಿಸುವ ವಿಧಾನ, ಆಯ್ಕೆ ವಿಧಾನ ಮತ್ತಿತರ ವಿವರಗಳಿಗೆ ನಗರ ಸಿವಿಲ್ ನ್ಯಾಯಾಲಯದ ಜಾಲತಾಣ https://bengaluru.dcourts.gov.in/recruitment-status-ccc/ ರಲ್ಲಿ ಪ್ರಕಟವಾಗಿರುವ ನೇರ ನೇಮಕಾತಿ ಅಧಿಸೂಚನೆಗಳನ್ನು ಓದುವುದು.

ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ಆದೇಶದ ಮೇರೆಗೆ,

ಸಹಿ/–
ವಿಲೇಖನಾಧಿಕಾರಿಗಳು,
ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು.

DIPR/CP/1329/Zen/2026-27

ಪುರಸಭೆ ಕಾರ್ಯಾಲಯ, ರೋಣ
ರೋಣ – 582209. ಜಿಲ್ಲೆ ಗದಗ. ದೂರವಾಣಿ : 08381–267234
ಇಮೇಲ್ : itstaff_ulb_ron@yahoo.in

ಸಂಖ್ಯೆ : ಪು.ಸ.ರೋ./C.M.I.D.P. & Scarcity/ವಹಿ/2026–27
ದಿನಾಂಕ : 23–06–2026

ಮರು ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ)

ರೋಣ ಪುರಸಭೆಯಿಂದ ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ – 2000 ರ ಪ್ರಕಾರ “ಕೆ.ಪಿ.ಪಿ.ಪಿ. ಪೋರ್ಟಲ್” ಪದ್ಧತಿಯಲ್ಲಿ ಸನ್ 2025–26 ನೇ ಸಾಲಿನ CMIDP & SFC Scarcity 2026–27 ಅನುದಾನದಲ್ಲಿ ಮಂಜೂರಾದ ಕ್ರಿಯಾಯೋಜನೆಯ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ–1, ಕೆ.ಡಬ್ಲ್ಯೂ–3, “ಕೆ.ಪಿ.ಪಿ.ಪಿ. ಪೋರ್ಟಲ್” ನೊಂದಾಯಿತ ಅರ್ಹ ಗುತ್ತಿಗೆದಾರರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ್ನು “ಕೆ.ಪಿ.ಪಿ.ಪಿ. ಪೋರ್ಟಲ್” ವೆಬ್‌ಸೈಟ್ : www.ronatown.mrc.gov.in/Tenders ಅಥವಾ http://kppp.karnataka.gov.in ಮೂಲಕ ಷರತ್ತುಗಳಂತೆ ಟೆಂಡರ್‌ನಲ್ಲಿ ಭಾಗವಹಿಸಲು ಪ್ರಚಾರ ಪಡಿಸಲಾಗಿದೆ.

ಅ. ನಂ.	ಇಂಡೆಂಟ್ ನಂಬರ್	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಮಿಸಲಾತಿ
	CMIDP		
01	DMA/2025-26/OW/WORK_INDENT52995/CALL-2	84.00	SC
02	DMA/2025-26/OW/WORK_INDENT52998/CALL-2	74.30	ST
	SFC Scarcity 2026-27		
01	DMA/2026-27/WS/WORK_INDENT58373/CALL-2	6.00	Other
	Total	164.30	

ನಿರ್ಧಾರಿತ ದಿನಾಂಕಗಳ ವಿವರ : 1) ದಿನಾಂಕ : 10–07–2026 ರ ಸಂಜೆ 5.30 ಘಂಟೆವರೆಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್‌ಗೆ ಅರ್ಜಿ ಸಲ್ಲಿಸಬಹುದು. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 13–07–2026. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ : 15–07–2026.

ಸೂಚನೆ : ಸದರ ಟೆಂಡರಗಳಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ರೋಣ.
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ರೋಣ.

ಡಿಐಪಿಆರ್/ಗದಗ/137/ಮಣಿಪಾಲ್/2026–27

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಕೆಂಗೇರಿ ವಿಭಾಗ, ರಾಜರಾಜೇಶ್ವರಿನಗರ ವಲಯ, ಬೃ.ಬೆಂ.ಮ.ಪಾಲಿಕೆ ಕಚೇರಿ ಕಟ್ಟಡ, ಸಿಎ ಸಂ–3, 1ನೇ ಮುಖ್ಯರಸ್ತೆ, ಹೊರವರ್ತುಲ ರಸ್ತೆ, ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು –560 060

ಸಂಖ್ಯೆ: ಕಾಪಾಅ/ಕೆಂಗೇರಿ/ಟೆಂಡರ್/04/2026–27 ದಿನಾಂಕ: 24–06–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ) 1ನೇ ಕರೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಇವರು ಆಯುಕ್ತರು ಬೆಂ.ಪ.ನ.ಪಾಲಿಕೆ, ವಲಯ–1 ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಹೊಸ ವಾರ್ಡ್ ಸಂಖ್ಯೆ–16 ಉಲ್ಲಾಳದ (ಹಳೆ ವಾರ್ಡ್ ಸಂಖ್ಯೆ–29 ಉಲ್ಲಾಳ) ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ ಕಾಲೋನಿ ಅಂಬೇಡ್ಕರ್‌ನಗರದಲ್ಲಿ ಕಾಮಗಾರಿಗಳ ಸಮಗ್ರ ಅಭಿವೃದ್ಧಿ ಮಾಡುವುದು. **ಟೆಂಡರ್‌ಗಿಟ್ಟ ಅಂದಾಜು ಮೊತ್ತ ₹.400.31 ಲಕ್ಷಗಳು, ಇಎಂಡಿ ಮೊತ್ತ: ₹.6,00,500/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **25–06–2026**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **01–07–2026**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ ವಲಯ, ಬೆಂಗಳೂರು–98 ರಲ್ಲಿ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **07–07–2026**ರ ಸಂಜೆ **4:00** ಗಂಟೆಯವರೆಗೆ. (4) ಬಿಡ್‌ಗಳನ್ನು ದಿನಾಂಕ **08–07–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕೆಂಗೇರಿ ವಿಭಾಗ, ಬೆಂ.ಪ.ನ.ಪಾಲಿಕೆ, ವಲಯ–1.

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010.
ಕರ್ನಾಟಕ. ದೂರವಾಣಿ: 080-23407011-25, ಫ್ಯಾಕ್ಸ್:080–23389526
ಇ–ಮೇಲ್:agmca.kssidc@karnataka.gov.in, ವೆಬ್‌ಸೈಟ್:www.kssidc.co.in

Ref. No. KSSIDC/FIN/FD/E-Bidding/2026 Date:24.06.2026

ಇ–ಹರಾಜು ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು (ಕೆಎಸ್‌ಎಸ್‌ಐಡಿಸಿ) ತನ್ನ ಹೆಚ್ಚುವರಿ ನಿಧಿಯನ್ನು ರಾಷ್ಟ್ರೀಕೃತ / ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ದೀರ್ಘಾವಧಿಯ ಠೇವಣಿಗಳಲ್ಲಿ ಹೂಡಿಕೆ ಮಾಡಲು ಉದ್ದೇಶಿಸಿದೆ. ದೀರ್ಘಾವಧಿಯ ಠೇವಣಿಗಳಲ್ಲಿ ಇಡಬೇಕಾದ ಮೊತ್ತ ಮತ್ತು ಅವಧಿಯ ವಿವರಗಳು ಕೆಳಕಂಡಂತಿವೆ:

ಕ್ರ.ಸಂ.	ಮೊತ್ತ	ಅವಧಿ	ವಿವರ
1	ರೂ.50.00 ಕೋಟಿಗಳು	ಒಂದು ವರ್ಷ(365ದಿನಗಳು)	Callable
2	ರೂ.200.00 ಕೋಟಿಗಳು	ಒಂದು ವರ್ಷ(365ದಿನಗಳು)	Non- Callable
ಒಟ್ಟು ರೂ.250.00 ಕೋಟಿಗಳು			

ಇ–ಹರಾಜಿನ ಸಂಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು:

ಇ–ಹರಾಜಿನ ವೇಳಾಪಟ್ಟಿ ಕೆಳಕಂಡಂತಿದೆ:

ಕ್ರ. ಸಂ.	ವಿವರಗಳು	ದಿನಾಂಕ
1	ಇ–ಹರಾಜಿನ ದಸ್ತಾವೇಜು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	25.06.2026ರ ಬೆಳಿಗ್ಗೆ 11.00 ಗಂಟೆಯಿಂದ
2	ಇ–ಪೋರ್ಟಲ್‌ನಲ್ಲಿ ಅನುಬಂಧ–ಬಿ ಯಲ್ಲಿ ಘೋಷಣೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	06.07.2026ರ ಸಂಜೆ 16.30 ಗಂಟೆಯವರೆಗೆ
3	ನೇರ ಹರಾಜು	08.07.2026 ರ ಮಧ್ಯಾಹ್ನ 12.30 ಗಂಟೆಗೆ ಪ್ರಾರಂಭ & ಮಧ್ಯಾಹ್ನ 14.30 ಗಂಟೆಗೆ ಮುಕ್ತಾಯ

ವಾಸಾಸಂಇ/ವಾಪ್ರ/ಜಿಎ/1326/2026–27

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಚೇರಿ, ರಾಮಮೂರ್ತಿನಗರ ವಿಭಾಗ,
ಎನ್‌ಆರ್‌ಐ ಲೇಔಟ್ ಮುಖ್ಯರಸ್ತೆ (ಇಂದಿರಾ ಕ್ಯಾಂಟೀನ್ ಹತ್ತಿರ), ಕಲ್ಕೆರೆ, ಬೆಂಗಳೂರು–560016.

ಸಂಖ್ಯೆ: ಕಾಪಾಅ/ರಾಮೂನ/ಬೆಂಪೂನಪಾ/ಟೆಂಡರ್/04/2026–27 ದಿನಾಂಕ: 24.06.2026

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಅಲ್ಪಾವಧಿ)
(ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಮಮೂರ್ತಿನಗರ ವಿಭಾಗ, ಬಿಇಸಿಸಿ, ಬೆಂಗಳೂರು ಇವರು ಆಯುಕ್ತರು, ಬಿಇಸಿಸಿ ಇವರ ಪರವಾಗಿ ಈ ಕೆಳಕಂಡ ನಿರ್ಮಾಣ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ರಾಮಮೂರ್ತಿನಗರ ವಿಭಾಗದಲ್ಲಿನ ಕಲ್ಕೆರೆ ಖಾನೆ ಮುಖ್ಯ ರಸ್ತೆ, ಸಂಕಲ್ಪ ಲೇಔಟ್, ಕಲ್ಕೆರೆ ರಿಚಸ್ ರೀಗಲ್ ಲೇಔಟ್, ಕಲ್ಕೆರೆ ಓಂ ಶಕ್ತಿ ದೇವಸ್ಥಾನ, ವಿಜಯಲಕ್ಷ್ಮಿ ಲೇಔಟ್, ಕಲ್ಕೆರೆ ಗ್ರಾಮ, ಕಲ್ಕೆರೆ ಮುನಿವೆಂಕಟಪ್ಪ ಲೇಔಟ್, ಕಲ್ಕೆರೆ ಎಂ.ಆರ್. ರಿಚಸ್ ಗಾರ್ಡನ್ ಪುಣ್ಯಭೂಮಿ ಲೇಔಟ್, ಎನ್.ಆರ್.ಐ. ಲೇಔಟ್ ಹಂತ–1, ಎನ್‌ಆರ್‌ಐ ಲೇಔಟ್, ನಂದಿ ರಿಚಸ್ ಗಾರ್ಡನ್, 11ನೇ ಮೇನ್ ಸುಂದ್ರ ಆಂಜನೇಯ ದೇವಸ್ಥಾನ ರಸ್ತೆ, ನಾಗಪ್ಪ ರೆಡ್ಡಿ ಲೇಔಟ್, ನರಸಿಂಹಯ್ಯ ಲೇಔಟ್, ಗಾಯತ್ರಿ ಲೇಔಟ್, ಮಂಜುನಾಥ ಲೇಔಟ್, ಕೊತ್ತೂರು ಗ್ರಾಮ, ಅಂಬೇಡ್ಕರ್ ನಗರ, ಮಿನಿ ತಾಜಮಹಲ್ ರಸ್ತೆ, ಸುಬ್ರಮಣಿ ಲೇಔಟ್, ಯಲ್ಲಮ್ಮ ದೇವಸ್ಥಾನಗಳಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆಗಳು ಹಾಗೂ ಕಲ್ವರ್ಟ್‌ಗಳ ನಿರ್ಮಾಣ ಕಾಮಗಾರಿ (ಅನುಬಂಧ–2, ಕ್ರ.ಸಂ. 57 ರಿಂದ 67 ವರೆಗೆ, 11 ಕಾಮಗಾರಿಗಳು). ಅಂದಾಜು ಮೊತ್ತ : **ರೂ. 1300.00 ಲಕ್ಷಗಳು.** ಇಎಂಡಿ: **ರೂ. 13.00 ಲಕ್ಷ** (ಕೆಪಿಪಿ ಪೋರ್ಟಲ್ ಮೂಲಕ ರೂ. 1.00 ಲಕ್ಷ ಮತ್ತು ಬಿಡ್ ಡಾಕ್ಯುಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ ರೂ. 12.00 ಲಕ್ಷ). ಪೂರ್ಣಗೊಳಿಸುವ ಅವಧಿ: **09 ತಿಂಗಳುಗಳು.**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.inನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **30.06.2026ರಂದು ಮಧ್ಯಾಹ್ನ 3.00 ಗಂಟೆಯೊಳಗೆ.** (3) ಪೂರ್ವ–ಬಿಡ್ ಸಭೆಯ ದಿನಾಂಕ: **30.06.2026ರಂದು ಸಂಜೆ 4.00 ಗಂಟೆಗೆ.** (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **04.07.2026ರ ಸಂಜೆ 4.00 ಗಂಟೆಯವರೆಗೆ.** (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **06.07.2026ರಂದು ಸಂಜೆ 4.30 ಗಂಟೆಗೆ.** (6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **07.07.2026ರಂದು ಸಂಜೆ 4.00 ಗಂಟೆಗೆ.** (7) ಟೆಂಡರ್ ಕಾಲಾವಧಿ: **180 ದಿನಗಳು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ರಾಮಮೂರ್ತಿನಗರ ವಿಭಾಗ, ವಲಯ–2, ಬಿಇಸಿಸಿ

ಮುಂದಿನ ಪುಟಕ್ಕೆ ಮುಂದುವರೆದಿದೆ.....

ಮುಂದುವರಿದ ಆರ್ಥಿಕ ತಃಖ್ತೆಗಳು

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

b) Sector-wise Advances and Gross NPAs / ವಲಯವಾರು ಸಾಲಗಳು ಮತ್ತು ಅನುತ್ಪಾದಕ ಸಾಲಗಳು (Rs.in Lakhs) / (ರೂ ಲಕ್ಷಗಳಲ್ಲಿ)

Sl. No.	Sector*	Current Year / ಪ್ರಸಕ್ತ ವರ್ಷ 31.03.2026 Outstanding Total Advances	Gross NPAs	Percentage of Gross NPAs to Total Advances in that sector	Previous Year / ಹಿಂದಿನ ವರ್ಷ 31.03.2025 Outstanding Total Advances	Gross NPAs	Percentage of Gross NPAs to Total Advances in that sector
i)	**Priority Sector** / ಆದ್ಯತಾ ಸಾಲಗಳು						
a)	Agriculture and allied activities ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು	599.14	105.35	17.58%	781.95	80.09	10.24%
b)	Advances to industries sector eligible as priority sector lending / ಆದ್ಯತಾ ವಲಯದ ಕೈಗಾರಿಕಾ ವಲಯ ಸಾಲಗಳು	8348.85	637.54	7.64%	2374.65	338.33	14.25%
c)	Services / ಸೇವೆ ಸಂಬಂಧ	87179.17	6592.42	7.56%	87416.79	7865.89	9.00%
d)	Personal loans/other loans ವೈಯಕ್ತಿಕ ಸಾಲಗಳು / ಇತರೆ ಸಾಲಗಳು	13519.44	469.48	3.47%	16594.47	1159.49	6.99%
	Subtotal (i) / ಒಟ್ಟು (i)	109646.60	7804.79	7.12%	107167.86	9443.80	8.81%
ii)	**Non-priority Sector** / ಆದ್ಯತಾ ವಲಯ ಅಲ್ಲದ್ದು						
a)	Agriculture and allied activities ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು	11.00	-	-	6.99	-	-
b)	Industry / ಕೈಗಾರಿಕಾ ವಲಯ						
c)	Services / ಸೇವೆ ಸಂಬಂಧ	609.72	16.22	2.66%	566.45	64.75	11.43%
d)	Personal loans (other loans) ವೈಯಕ್ತಿಕ ಸಾಲಗಳು / ಇತರೆ ಸಾಲಗಳು	42276.36	1078.89	2.55%	30410.33	910.38	2.99%
	Sub-total (ii) / ಒಟ್ಟು (ii)	42897.08	1095.11	2.55%	30983.77	975.13	3.15%
	Total (I + ii) / ಒಟ್ಟು	**152543.68**	**8899.90**	**5.83%**	**138151.63**	**10418.93**	**7.54%**

c) Particulars of resolution plan and restructuring

		Agriculture and allied activities		Corporates (excluding MSME)		Micro, Small andMedium Enterprises (MSME)		Retail (excluding agriculture and MSME)		Total	
		Current Year	Previous Year	Current Year	Previous Year	Current Year	PreviousYear	Current Year	PreviousYear	Current Year	Previous Year
Standard	Number of borrowers										
	Gross Amount (₹ crore)										
	Provision held (₹ crore)										
Sub-standard	Number of borrowers										
	Gross Amount (₹ crore)										
	Provision held (₹ crore)					-Nil-					
Doubtful	Number of borrowers										
	Gross Amount (₹ crore)										
	Provision held (₹ crore)										
Total	Number of borrowers										
	Gross Amount (₹ crore)										
	Provision held (₹ crore)										

d) Divergence in assets Classification and Provisioning / ಆಸ್ತಿ ವಿಂಗಡಣೆ ಮತ್ತು ಅವಕಾಶಗಳಲ್ಲಿ ಭಿನ್ನತೆಗಳು ***(in Crores)***

Sl.No./ಕ್ರ.ಸಂ.	Particulars / ವಿವರ	Amount / ಮೊತ್ತ
1.	Gross NPAs as on March 31, 2025 as reported by the bank / ಬ್ಯಾಂಕಿನ ವರದಿಯಂತೆ ಒಟ್ಟು ಅನುತ್ಪಾದಕ ಸಾಲಗಳು ದಿನಾಂಕ 31.03.2025 ರಂತೆ	104.19
2.	Gross NPAs as on March 31, 2025 as assessed by Reserve Bank of India/RBI ರವರ ವರದಿಯಂತೆ ಒಟ್ಟು ಅನುತ್ಪಾದಕ ಸಾಲಗಳು ದಿನಾಂಕ 31.03.2025ರಂತೆ	107.03
3.	Divergence in Gross NPAs (2-1) / ಒಟ್ಟು ಅನುತ್ಪಾದಕ ಆಸ್ತಿಯಲ್ಲಿ ಭಿನ್ನತೆ	2.84
4.	Net NPAs as on March 31, 2025 as reported by the bank / ಬ್ಯಾಂಕಿನ ವರದಿಯಂತೆ ನಿವ್ವಳ ಅನುತ್ಪಾದಕ ಸಾಲಗಳು ದಿನಾಂಕ 31.03.2025 ರಂತೆ	0.00
5.	Net NPAs as on March 31, 2025 as assessed by Reserve Bank of India / RBI ವರದಿಯಂತೆ ನಿವ್ವಳ ಅನುತ್ಪಾದಕ ಸಾಲಗಳು ದಿನಾಂಕ 31.03.2025 ರಂತೆ	0.00
6.	Divergence in Net NPAs (5-4) / ನಿವ್ವಳ ಅನುತ್ಪಾದಕ ಆಸ್ತಿಯಲ್ಲಿ ಭಿನ್ನತೆ.	0.00
7.	Provisions for NPAs as on March 31, 2025 as reported by the bank / ಬ್ಯಾಂಕಿನ ವರದಿಯಂತೆ ಅನುತ್ಪಾದಕ ಸಾಲಗಳಿಗೆ ಅವಕಾಶಗಳು ದಿನಾಂಕ 31.03.2025 ರಂತೆ	246.59
8.	Additional Provisions for NPAs as on March 31, 2025 as assessed by Reserve Bank of India RBI ವರದಿಯಂತೆ ಅನುತ್ಪಾದಕ ಸಾಲಗಳಿಗೆ ಹೆಚ್ಚಿನ ಅವಕಾಶಗಳು ದಿನಾಂಕ 31.03.2025 ರಂತೆ	0.00
9.	Divergence in provisioning (8-7) / ಅವಕಾಶಗಳಲ್ಲಿ ಭಿನ್ನತೆ	0.00
10	Reported Profit before Provisions and Contingencies for the year ended March 31, 2025 ಬ್ಯಾಂಕಿನ ವರದಿಯಂತೆ ಅವಕಾಶಗಳ ಮುಂಚೆ ಲಾಭಗಳು ದಿನಾಂಕ 31.03.2025 ರಂತೆ	66.36
11.	Reported Net Profit after Tax (PAT) for the year ended March 31, 2025 / ಬ್ಯಾಂಕಿನ ವರದಿಯಂತೆ ತೆರಿಗೆ ನಂತರ ನಿವ್ವಳ ಲಾಭಗಳು ದಿನಾಂಕ 2025 ರಂತೆ	28.78
12.	Adjusted (notional) Net Profit after Tax (PAT) for the year ended March 31, 2025 after considering the divergence in provisioning ಭಿನ್ನತೆಗೆ ಸಂಬಂಧಿಸಿದಂತೆ ಅವಕಾಶಗಳೂ ಒಳಗೊಂಡಂತೆ ತೆರಿಗೆ ನಂತರದ ನಿವ್ವಳ ಲಾಭಗಳು ದಿನಾಂಕ 31.03.2025 ರಂತೆ.	28.78

e) Fraud accounts / ವಂಚನೆ ಲೆಕ್ಕಗಳು

Particulars / ವಿವರ	Current Year 31.03.2026	During the year	Previous year 31.03.2025
Number of frauds / ವಂಚನೆಗಳ ಸಂಖ್ಯೆ	5	-	5
Amount involved in fraud (₹ crore) / ವಂಚನೆಯಲ್ಲಿ ಒಳಗಾದ ಮೊಬಲಗು (ಕೋಟಿಗಳಲ್ಲಿ)	2.88	-	2.88
Amount of provision made for such frauds (₹ crore) / ವಂಚನೆ ಸಂಬಂಧ ಮಾಡಿದ ಅವಕಾಶಗಳು	2.88	-	2.88
Amount of Unamortised provision debited from 'other reserves' as at the end of the year (₹ crore)	-	-	-

f) Disclosure under Resolution Framework for COVID-19-related Stress / ಕೋವಿಡ್-19 ಸಂಬಂಧವಾಗಿ ***Resolution Framework*** ಅಡಿಯಲ್ಲಿನ ವಿವರ (Rs. in Lakhs) / (ರೂ ಲಕ್ಷಗಳಲ್ಲಿ)

Type of borrower ಸಾಲಗಾರರ ವಿಧ	Exposure to accounts classified as Standard consequent to implementation of resolution plan– Position as at the end of the previous year (A) ಕಳೆದ ಸಾಲಾಂತ್ಯಕ್ಕೆ ಪುನರಚನೆಯಾದ ನಿಮಿತ್ತ ಸಾಲ ಉತ್ಪಾದಕವಾಗಿರುವುದು (A)	Of (A), aggregate debt that slipped into NPA during the year ವರದಿ ಸಾಲಿನಲ್ಲಿ (A) ಪೈಕಿ ಸಾಲ NPA ಆಗಿರುವುದು	Of (A) amount written off during the year ವರದಿ ಸಾಲಿನಲ್ಲಿ (A) ಪೈಕಿ ಸಾಲ ಮನ್ನಾ ಮಾಡಿರುವುದು	Of (A) amount paid by the borrowers during the year ವರದಿ ಸಾಲನಲ್ಲಿ (A) ಪೈಕಿ ಸಾಲಗಾರರು ಪಾವತಿಸಿರುವುದು	Exposure to accounts classified as Standard consequent to implementation of resolution plan – Position as at the end of this year ವರದಿ ಸಾಲಾಂತ್ಯಕ್ಕೆ ಪುನರಚನೆ ನಿಮಿತ್ತ ಸಾಲ ಉತ್ಪಾದಕವಾಗಿರುವುದು
Personal Loans ವೈಯಕ್ತಿಕ ಸಾಲಗಳು					
Corporate persons* ಕಾರ್ಪೊರೇಟ್ ವ್ಯಕ್ತಿಗಳು					
Of which MSMEs ಅವುಗಳಲ್ಲಿ MSME ಗಳು	25748.40	1003.91	-	5707.96	19036.53
Others / ಇತರೆ	3828.14	166.81	-	842.70	2818.63
Total / ಒಟ್ಟು	**29576.54**	**1170.72**		**6550.66**	**21855.16**

g) Exposure to real estate sector / ರಿಯಲ್ ಎಸ್ಟೇಟ್ ವಲಯಕ್ಕೆ ಸಾಲಗಳು (Rs.in Lakhs)

Category / ವರ್ಗ	Current Year / ಪ್ರಸಕ್ತ ವರ್ಷ 31.03.2026	Previous Year / ಹಿಂದಿನ ವರ್ಷ 31.03.2025
i) Direct exposure / ನೇರ ಸೌಲಭ್ಯ a) Residential Mortgages – ವಸತಿ ಅಡಮಾನ Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits. ವಸತಿ ಉದ್ದೇಶಕ್ಕೆ, ಸ್ವಂತ ವಾಸಕ್ಕೆ ಅಥವಾ ಬಾಡಿಗೆ ನೀಡಲು ಸೇರಿದಂತೆ ವ್ಯಕ್ತಿಗಳಿಗೆ ಅಡಮಾನ ಆಧಾರ ನೀಡಿದ ಸಾಲಗಳು, ವ್ಯಕ್ತಿಗಳಿಗೆ ನೀಡಿದ ಗೃಹ ಸಾಲಗಳು, ಆದ್ಯತಾ ವಲಯಕ್ಕೆ ಸೇರಿದ್ದಲ್ಲಿ ಬೇರೆಯೇ ತೋರಿಸುವುದು. (of which to priority sector)	29454.65	29251.97
b) Commercial Real Estate – ವಾಣಿಜ್ಯ ಉದ್ದೇಶದ ರಿಯಲ್ ಎಸ್ಟೇಟ್ Lending secured by mortgages on commercial real estate (office buildings, retail space, multipurpose commercial premises, multifamilyresidential buildings, multi tenanted commercial premises, industrial orwarehouse space, hotels, land acquisition, development and construction, etc.). Exposure would also include non-fund based (NFB)limits; ವಾಣಿಜ್ಯ ಉದ್ದೇಶದ ರಿಯಲ್ ಎಸ್ಟೇಟ್ ಆಧಾರ ನೀಡಿದ ಸಾಲಗಳು c) Investments in Mortgage-Backed Securities (MBS) and othersecuritized exposures – i. Residential, ii. Commercial Real Estate *ii) Indirect Exposure* Fund based and non-fund-based exposures on National Housing Bankand Housing Finance Companies.	1635.61	1837.28
Total Exposure to Real Estate Sector	**31090.26**	**31089.25**

h) Unsecured advances / ಆಧಾರರಹಿತ ಸಾಲಗಳು (Rs. in Lakhs) / (ರೂ ಲಕ್ಷಗಳಲ್ಲಿ)

Particulars / ವಿವರ	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
Total unsecured advances of the bank / ಬ್ಯಾಂಕಿನ ಒಟ್ಟು ಆಧಾರರಹಿತ ಸಾಲಗಳು	535.67	555.73
Out of the above, amount of advances for which intangible securities such as charge over the rights, licenses, authority, etc. have been taken ಮೇಲಿನದರಲ್ಲಿ ಯಾವುದಾದರೂ ಅಮೂರ್ತ ಆಸ್ತಿ ಅಂದರೆ ಹಕ್ಕು, ಲೈಸನ್ಸ್, ಅಧಿಕಾರತ್ವ ಇತ್ಯಾದಿ ಪಡೆದಿರುವುದು	-	-
Estimated value of such intangible securities / ಅಮೂರ್ತ ಆಸ್ತಿಗಳ ಅಂದಾಜು ಮೌಲ್ಯ.	-	-

i) Loans against gold collateral: a) Details of loans extended against eligible gold collateral

Particulars	Loan out standing ₹crore	As % of Total Loans	Average ticket size (₹crore)	Average LTV ratio	Gross NPA (%)
1.**Opening balance of the FY** [(a)+(b)]	77.90	5.64%	0.015	0.03	1.90%
(a) Consumption loans	69.06		0.01	0.03	
Of which bullet repayment loans	58.76		0.01	0.03	
(b) Income generating loans	8.84		0.02	0.03	
2. **New loans sanctioned and disbursed during the FY** [(c)+(d)]	168.19		0.02	0.04	NA
(c) Consumption loans	165.99		0.02	0.04	NA
Of which bullet repayment loans	165.42		0.02	0.04	NA
(d) Income generating loans	2.20		0.03	0.07	NA
3. **Renewals sanctioned and disbursed during the FY**	-	-	-	-	NA
4.**Top-up loans sanctioned and disbursed during the FY**	-	-	-	-	NA
5.**Loans repaid during the FY**[(e)+(f)]	82.55			NA	NA
(e) Consumption loans	73.60			NA	NA
of which bullet repayment loans	62.94			NA	NA
(f) Income generating loans	8.95			NA	NA
6. **Non-Performing Loans recovered during the FY** [(g) + (h)]				NA	NA
(g) Consumption loans	1.37			NA	NA
of which bullet repayment loans				NA	NA
(h) Income generating loans				NA	NA
7. **Loans written off during the FY**[(i)+(j)]				NA	NA
(i) Consumption loans				NA	NA
of which bullet repayment loans				NA	NA

Particulars	Loan out standing		Average	Average	Gross NPA
(j) Income generating loans				NA	NA
8.**Closing balance at the end of FY** [(k)+(l)]	163.54	10.72%	0.02	0.04	0.07%
(k) Consumption loans	161.44		0.02	0.04	
of which bullet repayment loans	161.24		0.02	0.04	
(l) Income generating loans	2.10		0.03	0.04	

b) Details of gold and silver collateral and auctions

Sr.No.	Particulars	
(a)	Unclaimed gold or silver collateral at the end of the financial year (ingrams)	Gold 208 grams (6 packets) Silver 581 grams (1 packet)
(b)	Number of loan accounts in which auctions were conducted	Nil
(c)	Total outstanding in loan accounts mentioned in (b)	Nil
(d)	Gold or silver collateral acquired during the FY due to default of loans (in grams)	Nil
(e)	Gold or silver collateral auctioned during the FY (in grams)	Nil
(f)	Recovery made through auctions during the FY (in ₹ crore)	Nil
(g)	Recovery percentage :	Nil
(h)	as % of value of gold or silver collateral	Nil
(i)	as % of outstanding loan	Nil

j) Details of exposures to related parties (Amount in ₹ crore)

Sr.No.	Particulars	Previous Year	Current Year
A. Loans to Related Parties			
1	Aggregate value of loans sanctioned to related parties during the year	Nil	Nil
2	Aggregate value of outstanding loans to related parties as on 31st March	Nil	Nil
3	Aggregate value of outstanding loans to related parties as a proportion of total credit exposure as on 31st March (in %)	Nil	Nil
4	Aggregate value of outstanding loans to related parties which are categorized as:	Nil	Nil
	(i) Special Mention Accounts as on 31st March	Nil	Nil
	(ii) Non-Performing Assets as on 31stMarch	Nil	Nil
5	Amount of provisions held in respect of loans to related parties as on 31st March	Nil	Nil
B. Contracts and Arrangements involving Related Parties			
6	Aggregate value of contracts and arrangements awarded to related parties during the year	Nil	Nil
7	Aggregate value of outstanding contracts and arrangements involving related parties as on 31st March	Nil	Nil

5) Concentration of deposits, advances, exposures and NPAs / ಠೇವಣಿ, ಸಾಲಗಳು ಮತ್ತು ಅನುತ್ಪಾದಕ ಸಾಲಗಳಲ್ಲಿ ಏಕಾಗ್ರತೆ

a) Concentration of deposits / ಠೇವಣಿಯಲ್ಲಿ ಏಕಾಗ್ರತೆ (Rs.in Lakhs)

Particulars / ವಿವರ	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
Total deposits of the twenty largest depositors / ಅತಿ ಹೆಚ್ಚು ಠೇವಣಿ ಇರಿಸಿರುವ ಇಪ್ಪತ್ತು ಠೇವಣಿದಾರರ ಠೇವಣಿಗಳು	8452.44	8392.15
Percentage of deposits of twenty largest depositors to total deposits of the bank / ಒಟ್ಟು ಠೇವಣಿಗೆ ಅದರ ಶೇಕಡವಾರು	3.64%	3.89%

b) Concentration of advances / ಸಾಲಗಳಲ್ಲಿ ಏಕಾಗ್ರತೆ (Rs. in Lakhs)

Particulars/ವಿವರ	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
Total advances of the twenty largest borrowers / ಅತಿ ಹೆಚ್ಚು ಸಾಲ ಹೊಂದಿರುವ ಇಪ್ಪತ್ತು ಸಾಲಗಾರರ ಸಾಲಗಳು	10934.81	9737.80
Percentage of advances to twenty largest borrowers to total advances of the bank / ಒಟ್ಟು ಸಾಲಗಳಿಗೆ ಅದರ ಶೇಕಡವಾರು	7.17%	7.05%

c) Concentration of NPAs / ಅನುತ್ಪಾದಕ ಸಾಲಗಳಲ್ಲಿ ಏಕಾಗ್ರತೆ (Rs. in Lakhs)

Particulars / ವಿವರ	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
Total Exposure to the top twenty NPA accounts / ಅತಿ ಹೆಚ್ಚು ಇಪ್ಪತ್ತು NPA ಸಾಲಗಳು	3896.88	4220.74
Percentage of exposures to the twenty largest NPA exposure to total Gross NPAs. / ಒಟ್ಟು NPA ಗಳಿಗೆ ಅದರ ಶೇಕಡವಾರು	45.62%	40.51%

6. Transfers to Depositor Education and Awareness Fund (DEA Fund) / ವರ್ಗಾವಣೆಗಳು DEA Fund ಗೆ (Amount in Lakhs)

Sl.No. ಕ್ರಮ ಸಂಖ್ಯೆ	Particulars / ವಿವರ	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
i)	Opening balance of amounts transferred to DEA Fund / DEA Fund ಗೆ ಪ್ರಾರಂಭ ಬಾಕಿ	651.80	628.83
ii)	Add: Amounts transferred to DEA Fund during the year / ಕೂಡು : ವರದಿ ವರ್ಷದಲ್ಲಿ DEA Fund ವರ್ಗಾಯಿಸಿದ್ದು.	107.43	56.45
iii)	Less: Amounts reimbursed by DEA Fund towards claims. / ಕಳೆ : ವರದಿ ವರ್ಷದಲ್ಲಿ DEA Fund ಇಂದ ಕ್ಲೇಮು ಪಡೆದಿದ್ದು	15.77	33.48
iv)	Closing balance of amounts transferred to DEA Fund / ಅಂತಿಮ ಬಾಕಿ DEA Fund ನಲ್ಲಿರುವುದು	743.46	651.80

7. Disclosure of complaints / ದೂರುಗಳ ಮಾಹಿತಿ: ***a) Summary information on complaints received by the bank from customers and from the Offices of Ombudsman*** / ಗ್ರಾಹಕರಿಂದ ಮತ್ತು ಓಂಬಡ್ಸ್‌ಮನ್ ಕಛೇರಿಯಿಂದ ಸ್ವೀಕರಿಸಿದ ದೂರುಗಳ ಸಾರಾಂಶ

Sl.No. ಕ್ರಮ ಸಂಖ್ಯೆ		Particulars / ವಿವರ	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
		Complaints received by the bank from its customers / ಗ್ರಾಹಕರಿಂದ ಬ್ಯಾಂಕು ಸ್ವೀಕರಿಸಿದ ದೂರುಗಳು		
1.		Number of complaints pending at beginning of the year / ವರ್ಷಾರಂಭದಲ್ಲಿ ಗ್ರಾಹಕರಿಂದ ಸ್ವೀಕರಿಸಿದ ದೂರುಗಳ ಸಂಖ್ಯೆ	-	
2.		Number of complaints received during the year / ವರದಿ ವರ್ಷದಲ್ಲಿ ಸ್ವೀಕರಿಸಿದ ದೂರುಗಳ ಸಂಖ್ಯೆ	1	-
3.		Number of complaints disposed during the year / ವರದಿ ವರ್ಷದಲ್ಲಿ ವಿಲೇವಾರಿಯಾದ ದೂರುಗಳ ಸಂಖ್ಯೆ	1	-
	3.1	Of which, number of complaints rejected by the bank / ಇವುಗಳಲ್ಲಿ ಬ್ಯಾಂಕು ತಿರಸ್ಕರಿಸುವ ದೂರುಗಳ ಸಂಖ್ಯೆ	-	-
4.		Number of complaints pending at the end of the year / ವರ್ಷಾಂತ್ಯದಲ್ಲಿ ಗ್ರಾಹಕ ದೂರೂಗಳ ಬಾಕಿ ಇರುವ ಸಂಖ್ಯೆ	-	-
		Maintainable complaints received by the bank from Office of Ombudsman / ಬ್ಯಾಂಕ್ ಓಂಬಡ್ಸ್‌ಮನ್ ಕಛೇರಿಯಿಂದ ಸ್ವೀಕರಿಸಿದ ನಿರ್ವಹಿಸಬೇಕಾದ ದೂರುಗಳ ಸಂಖ್ಯೆ		
5.		Number of maintainable complaints received by the bank from Office of Ombudsman ಓಂಬಡ್ಸ್‌ಮನ್ ಕಛೇರಿಯಿಂದ ಸ್ವೀಕರಿಸಿದ ನಿರ್ವಹಿಸಬೇಕಾದ ದೂರುಗಳ ಸಂಖ್ಯೆ.	2	7
	5.1.	Of 5, number of complaints resolved in favour of the bank by Office of Ombudsman 5 ರಲ್ಲಿ ಓಂಬಡ್ಸ್‌ಮನ್ ಕಛೇರಿಯಿಂದ ಬ್ಯಾಂಕಿನ ಪರವಾಗಿ ದೂರುಗಳೂ ಖೈದುಗೊಂಡಿರುವ ಸಂಖ್ಯೆ.	2	7
	5.2	Of 5, number of complaints resolved through conciliation/mediation/advisories issued by Office of Ombudsman 5 ರಲ್ಲಿ ಓಂಬಡ್ಸ್‌ಮನ್ ಕಛೇರಿಯಿಂದ ಸಂಧಾನ / ಮಧ್ಯಸ್ಥಿಕೆ / ಸಲಹೆ ಮೂಲಕ ಮುಕ್ತಾಯಗೊಂಡ ದೂರುಗಳ ಸಂಖ್ಯೆ		-
	5.3	Of 5, number of complaints resolved after passing of Awards by Office of Ombudsman against the bank 5 ರಲ್ಲಿ ಓಂಬಡ್ಸ್‌ಮನ್ ಕಛೇರಿಯಿಂದ ಆವಾರ್ಡ ನೀಡಿಕೆ ಮೂಲಕ ಮುಕ್ತಾಯಗೊಂಡ ದೂರುಗಳ ಸಂಖ್ಯೆ		
6.		Number of Awards unimplemented within the stipulated time (other than those appealed) ಆವಾರ್ಡ್ ಆಗಿ ನಿಗದಿತ ಅವಧಿಯಲ್ಲಿ ಜಾರಿಯಾಗದ ದೂರುಗಳ ಸಂಖ್ಯೆ (ಅಪೀಲು ಇಲ್ಲದ)	-	-

Note: Maintainable complaints refer to complaints on the grounds specifically mentioned in Integrated Ombudsman Scheme, 2021 (Previously Banking Ombudsman Scheme, 2006) and covered within the ambit of the Scheme.

b) Top five grounds of complaints received by the bank from customers / ಗ್ರಾಹಕರಿಂದ ಸ್ವೀಕರಿಸಿದ ದೂರುಗಳಲ್ಲಿ ಅಗ್ರ 5 ಕಾರಣಗಳು

Grounds of complaints, (i.e. complaints relating to)	Number of complaints pending at the beginning of the year	Number of complaints received during the year	% increase/ decrease in the number of complaints received over the previous year	Number of complaints pending at the end of the year	Of 5, number of complaints pending beyond 30 days
1	2	3	4	5	6
	Current Year				
Ground – 1 / ATM ಎ.ಟಿ.ಎಂ					
Ground – 2 /Deposits ಠೇವಣಿ		1			
Ground – 3 / Loans and Advances ಸಾಲ ಮತ್ತು ಮುಂಗಡಗಳು					
Ground – 4 / Levy of charges ಶುಲ್ಕ ವಿಧಿಸುವುದು					
Ground – 5 / Staff Behavior ಸಿಬ್ಬಂದಿ ನಡವಳಿಕೆ					
Others / ಇತರೆ		2			
Total / ಒಟ್ಟು		3			
	Previous Year / ಹಿಂದಿನ ವರ್ಷ				
Ground - 1					
Ground - 2		1		NIL	NIL
Ground - 3		6		NIL	NIL
Ground - 4					
Ground - 5				NIL	NIL
Others / ಇತರೆ					
Total / ಒಟ್ಟು		7			

a) Business ratios / ವ್ಯವಹಾರ ಅನುಪಾತಗಳು

Particulars / ವಿವರ	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
i) Interest Income as a percentage to Working Funds / ದುಡಿಯುವ ಬಂಡವಾಳಕ್ಕೆ ಬಡ್ಡಿ ಆದಾಯ ಶೇಕಡವಾರು	8.90%	8.90%
ii) Non-interest income as a percentage to Working Funds / ದುಡಿಯುವ ಬಂಡವಾಳಕ್ಕೆ ಬಡ್ಡಿಯೇತರ ಆದಾಯ ಶೇಕಡವಾರು	0.37%	0.34%
iii) Cost of Deposits/ಠೇವಣಿ ವೆಚ್ಚ ಶೇಕಡವಾರು	6.95%	6.94%
iv) Net Interest Margin/ನಿವ್ವಳ ಬಡ್ಡಿ ಮಾರ್ಜಿನ್ ಶೇಕಡವಾರು	3.86%	3.90%
v) Operating Profit as a percentage to Working Funds/ದುಡಿಯುವ ಬಂಡವಾಳಕ್ಕೆ ನಿರ್ವಹಣಾ ಲಾಭ ಶೇಕಡವಾರು	2.19%	2.33%
vi) Return on Assets/ಆಸ್ತಿಗಳ ಮೇಲೆ ಹಿಂತಿರುಗಿ ಬಂದದ್ದು ಶೇಕಡವಾರು	0.99%	1.04%
vii) Business (deposits plus advances) per employee (in Lakhs) / ಸಿಬ್ಬಂದಿಯೊಬ್ಬರಿಗೆ ಒಟ್ಟು ವ್ಯವಹಾರ	1513.78	1573.51
viii) Profit per employee (in Lakhs) / ಸಿಬ್ಬಂದಿಯೊಬ್ಬರಿಗೆ ಲಾಭ	10.09	12.79
ix) Average working fund (in Lakhs) / ಸರಾಸರಿ ದುಡಿಯುವ ಬಂಡವಾಳ	292379.06	277384.53

b) Details of Fees / Commissions earned in respect of Insurance Business / ವಿಮಾ ವ್ಯವಹಾರದಲ್ಲಿ ಗಳಿಸಿದ ಫೀ / ಕಮಿಷನ್ ವಿವರ (Rs.in Lakhs)

Particulars / ವಿವರ	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
Commission Received / ಕಮೀಷನ್ ಸ್ವೀಕರಿಸಿದ್ದು	4.78	6.29

c) Disclosures regarding Priority Sector Lending Certificates (PSLCs) sold & purchased sector wise / ಆದ್ಯತಾ ವಲಯ ಸಾಲ ಸರ್ಟಿಫಿಕೇಟ್ ಮಾರಾಟ / ಖರೀದಿ ವಿವರ ವಲಯವಾರು

Current Year/ಪ್ರಸಕ್ತ ವರ್ಷ 31.03.2026	Previous Year / ಹಿಂದಿನ ವರ್ಷ 31.03.2025
Nil	Nil

d) Provisions and contingencies / ಅವಕಾಶ ಮತ್ತು ಆಕಸ್ಮಿಕಗಳು (Rs. in Lakhs)

Provision debited to Profit and Loss Account / ಲಾಭ ನಷ್ಟ ಖಾತೆಗೆ ಖರ್ಚು ಹಾಕಿರುವ ಅವಕಾಶಗಳು	Current Year/ಪ್ರಸಕ್ತ ವರ್ಷ 31.03.2026	Previous Year/ಹಿಂದಿನ ವರ್ಷ 31.03.2025
i) Provisions for NPI / NPI ಗೆ ಅವಕಾಶಗಳು		--------
ii) Provision towards NPA / NPA ಗೆ ಅವಕಾಶಗಳು		--------
iii) Provision made towards Income tax / ಆದಾಯ ತೆರಿಗೆಗೆ ಅವಕಾಶಗಳು	724.81	1449.41
iv) Other Provisions and Contingencies (with details) / ಇತರೆ ಅವಕಾಶಗಳು		
Provision towards SPL BDDR (IT) / ವಿಶೇಷ BDDR (IT) ಅವಕಾಶಗಳು	286.00	550.00
Provision towards SPL BDDR (IT Housing) / ವಿಶೇಷ BDDR (IT Housing) ಅವಕಾಶಗಳು	58.00	102.00
Provision towards SPL BDDR (Covid-19 related) / ವಿಶೇಷ BDDR (Covid-19 related) ಅವಕಾಶಗಳು		-
Provision of Int. remission / ಬಡ್ಡಿ ರಿಯಾಯಿತಿ ಸೌಲಭ್ಯಕ್ಕಾಗಿ ಅವಕಾಶಗಳು	120.00	120.00
Provision of Co-op. Edu Fund / ಸಹಕಾರ ಶಿಕ್ಷಣ ನಿಧಿ ಅವಕಾಶಗಳು	53.00	66.00
Provision for Staff Welfare Expenses / ಸಿಬ್ಬಂದಿ ಕ್ಷೇಮ ವೆಚ್ಚ ಅವಕಾಶಗಳು	-	15.00
Provision for Court cost receivables / ಕೋರ್ಟ್ ಶುಲ್ಕ ವೆಚ್ಚ ಅವಕಾಶಗಳು	-	34.62
Provision for BDDR / BDDR ಅವಕಾಶಗಳು	-	1382.00
Provision for IDR / IDR ಅವಕಾಶಗಳು	2369.10	-
Provision for Deferred Tax / Deferred Tax ಅವಕಾಶಗಳು	14.60	25.67
Provision for IFR / ಗುಂತಾಯ ಆಕಸ್ಮಿಕ ನಿಧಿ ಅವಕಾಶಗಳು		-
Provision for Interest Reserve on NBA Acquisition/ಬ್ಯಾಂಕೇತರ ಆಸ್ತಿಗಳು ಖರೀದಿ ಸಂಬಂಧ ಬಡ್ಡಿ ಅವಕಾಶಗಳು		-
Total	**3625.51**	**3744.70**

e) Payment of DICGC Insurance Premium / DICGC ಠೇವಣಿ ವಿಮಾ ಪ್ರೀಮಿಯಂ ಪಾವತಿ

ಠೇವಣಿ ವಿಮಾ ಯೋಜನೆಗೆ ಸಂಬಂಧಿಸಿದಂತೆ ಠೇವಣಿ ವಿಮಾ ಪ್ರೀಮಿಯಂ ಪಾವತಿಯನ್ನು ನಿಗದಿತ ಅವಧಿಯಲ್ಲಿ DICGC ರವರಿಗೆ ಪಾವತಿಸಿದೆ

Deposit Insurance Premium as applicable has been Paid to DICGC within the prescribed timelines

f) Disclosure of facilities granted to directors and their relatives/ ಆಡಳಿತ ಮಂಡಳಿ ಸದಸ್ಯರು ಮತ್ತು ಅವರ ಸಂಬಂಧಿಗಳಿಗೆ ನೀಡಿದ ಸೌಲಭ್ಯಗಳ ವಿವರ

Current Year/ಪ್ರಸಕ್ತ ವರ್ಷ 31.03.2026	Previous Year / ಹಿಂದಿನ ವರ್ಷ 31.03.2025
Nil	Nil

ಎ.ವಿ. ವಲ್ಲಭರಾಜು	ಅಪ್ಪಾಜಯ್ಯ. ಸಿ.ಎನ್	ಪಿ. ಮಂಜುನಾಥ	ಅಶ್ವಿನಿ ಸತೀಶ್	ಡಾ॥ ದೇವರಾಜ್.ಟಿ.ಎಂ	ಆವಲಹಳ್ಳಿ ಚಂದ್ರಪ್ಪ. ಆರ್
ಸಹಾಯಕ ಪ್ರಧಾನ ವ್ಯವಸ್ಥಾಪಕರು	ಉಪ ಪ್ರಧಾನ ವ್ಯವಸ್ಥಾಪಕರು	ಪ್ರಧಾನ ವ್ಯವಸ್ಥಾಪಕರು	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

"ದೃಢೀಕರಣ"

ಈ ಮೇಲ್ಕಂಡ "ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಚಾಮರಾಜಪೇಟೆ, ಬೆಂಗಳೂರು-18" ಇದರ 2025-26ನೇ ಸಾಲಿನ ಲೆಕ್ಕ ಪತ್ರಗಳನ್ನು ನಾವು ಪರಿಶೀಲಿಸಿರುತ್ತೇವೆ. ಈ ಬಗ್ಗೆ ಅವಶ್ಯಕವಾದ ಮಾಹಿತಿಗಳನ್ನು ಮತ್ತು ಸಮಜಾಯಿಷಿಗಳನ್ನು ಪಡೆದಿರುತ್ತದೆ. ಸದರಿ ಆಸ್ತಿ-ಜವಾಬ್ದಾರಿ ತಃಖ್ತೆಯು ಬ್ಯಾಂಕಿನಲ್ಲಿರತಕ್ಕ ಲೆಕ್ಕ ಪುಸ್ತಕಗಳಿಗೆ ಅನುಸಾರವಾಗಿಯೂ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಒದಗಿಸಿದ ಸಮಜಾಯಿಷಿಗಳಿಗೆ ಅನುಗುಣವಾಗಿಯೂ ಹಾಗೂ ಅಲಾಯಿದೆ ಲಗತ್ತಿಸಿರತಕ್ಕ ನಮ್ಮಗಳ ಲೆಕ್ಕ ಪರಿಶೋಧನಾ ವರದಿಗೆ ಒಳಪಟ್ಟು ದಿನಾಂಕ: 31.03.2026 ರಲ್ಲಿದ್ದಂತೆ ಬ್ಯಾಂಕಿನ ನಿಜವಾದ ಹಾಗೂ ಕರಾರುವಕ್ಕಾದ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಅಭಿಪ್ರಾಯಪಡುತ್ತೇವೆ.

M/s. B P S S Y & Co
ಚಾರ್ಟರ್ಡ್ ಅಕೌಂಟೆಂಟ್ಸ್,
FRN: 012443S
ಸಿ.ಎ. ಪಂಪಣ್ಣ ಬಿ.ಇ
ಪಾಲುದಾರರು, MN: 220424
UDIN: 26220424VRRXCL8368

ಸ್ಥಳ : ಬೆಂಗಳೂರು
ದಿನಾಂಕ : 12.06.2026

ವಿಬಿ–ಜಿ ರಾಮ್ ಜಿ: ಜುಲೈ 1ರಿಂದ ಜಾರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎರಡು ದಶಕಗಳಿಂದ ಗ್ರಾಮೀಣ ಭಾಗದ ಕೂಲಿ ಕಾರ್ಮಿಕ ಕುಟುಂಬಗಳಿಗೆ ಉದ್ಯೋಗವನ್ನು ಖಾತ್ರಿಪಡಿಸುತ್ತಾ ಬಂದಿದ್ದ ನರೇಗಾ ಯೋಜನೆಯ ಬದಲಾದ ಸ್ವರೂಪ 'ವಿಬಿ-ಜಿ ರಾಮ್ ಜಿ' ಜುಲೈ 1ರಿಂದ ಆರಂಭವಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನರೇಗಾ ಯೋಜನೆಯನ್ನು ಬದಲಾಯಿಸಿದ್ದರಿಂದ ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಹೊರೆಯಾಗುತ್ತದೆ. ಹಾಗಾಗಿ, ಯೋಜನೆಯನ್ನು ಮೊದಲಿದ್ದಂತೆ ಕೇಂದ್ರ–ರಾಜ್ಯಗಳ ಪಾಲು 90:10ರ ಅನುಪಾತದಲ್ಲಿ ಮುಂದುವರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ.

ಈಗಿರುವ ನಿಯಮದ ಪ್ರಕಾರ ಕೇಂದ್ರ–ರಾಜ್ಯಗಳು 60:40ರ ಅನುಪಾತದಲ್ಲಿ ವೆಚ್ಚ ಭರಿಸಬೇಕಾಗಿದೆ. ರಾಜ್ಯ ಸರ್ಕಾರಕ್ಕೆ ಹೊರೆಯಾದರೂ ಗ್ರಾಮೀಣ ಜನರು, ಮಹಿಳೆಯರು, ದುರ್ಬಲರ ಹಿತಾಸಕ್ತಿ ಕಾಪಾಡಲು ಯೋಜನೆ ಜಾರಿಗೆ ಸಮ್ಮತಿಸಲಾಗಿದೆ. ನರೇಗಾ ಅಡಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 7,000ಕ್ಕೂ ಹೆಚ್ಚು ಸಿಬ್ಬಂದಿಯ ಜೀವನೋಪಾಯಕ್ಕೆ ತೊಂದರೆ ಆಗದ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿದೆ' ಎಂದರು.

2006ರಿಂದ 2026ರವರೆಗೆ ಕೇಂದ್ರ ಸರ್ಕಾರ ನರೇಗಾ ಯೋಜನೆಗೆ ₹56,492 ಕೋಟಿ ಭರಿಸಿದ್ದರೆ, ರಾಜ್ಯ ಸರ್ಕಾರ ₹4,821 ಕೋಟಿ ಭರಿಸಿದೆ. ಸುಮಾರು 182 ಕೋಟಿ ಮಾನವ ದಿನಗಳ ಉದ್ಯೋಗ ಸೃಜಿಸಿತ್ತು. ಆದರೆ ಈಗ ಒಂದೇ ವರ್ಷಕ್ಕೆ ₹3,806 ಕೋಟಿ ವೆಚ್ಚ ಭರಿಸಬೇಕಿದೆ. 2026–27ನೇ ಸಾಲಿಗೆ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ₹5,709 ಕೋಟಿ ಹಂಚಿಕೆ ಮಾಡಿದೆ. ಯಾವ ರಾಜ್ಯಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಕೇಂದ್ರದ ಈ ನಿರ್ಧಾರವನ್ನು ಸುಪ್ರೀಂ ಕೋರ್ಟ್‌ನಲ್ಲೂ ಪ್ರಶ್ನಿಸಲಾಗಿದೆ. ತಕ್ಷಣಕ್ಕೆ 80:20ರ ಅನುಪಾತ ನಿಗದಿ ಮಾಡಲು ಒತ್ತಾಯಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬೇಸಾಯದ ಸಮಯದಲ್ಲಿ 60 ದಿನಗಳು ಉದ್ಯೋಗ ನೀಡದಿರುವಂತೆ ನಿಯಮ ರೂಪಿಸಲಾಗಿದೆ. ಈಗ ಅತ್ಯಾಧುನಿಕ ಕೃಷಿ ಯಂತ್ರೋಪಕರಣ ಬಂದಿದ್ದು, ಗ್ರಾಮೀಣ ಕುಟುಂಬಗಳಿಗೆ ಬೇಸಾಯದ ಸಮಯದಲ್ಲೂ ಕೃಷಿ ಉದ್ಯೋಗ ಲಭಿಸುವುದಿಲ್ಲ. ಈ ಹಿಂದೆ ಇದ್ದಂತೆ ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಬೇಕು ಎನ್ನುವುದು ರಾಜ್ಯ ಸರ್ಕಾರದ ಬೇಡಿಕೆ. ಈಗಾಗಲೇ ರಾಜ್ಯ ಸರ್ಕಾರ ₹375 ಕೂಲಿ ನಿಗದಿ ಮಾಡಿದೆ. ಕೇಂದ್ರವೂ ಕನಿಷ್ಠ ಕೂಲಿ ದರ ಹೆಚ್ಚಳ ಮಾಡಬೇಕು' ಎಂದರು ಹೇಳಿದರು.

> ದೆಹಲಿಯಲ್ಲಿ ಜೂನ್ 28ರಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ಎಲ್ಲ ರಾಜ್ಯಗಳ ಸಚಿವರ ಸಭೆ ನಿಗದಿಯಾಗಿದ್ದು, ಈ ಸಭೆಯಲ್ಲಿ ಹೊಸ ಕಾಯ್ದೆಯಿಂದ ರಾಜ್ಯಗಳಿಗೆ ಆಗುವ ಸಮಸ್ಯೆಗಳ ಕುರಿತು ಪ್ರಸ್ತಾಪಿಸಲಾಗುವುದು
>
> **ಈಶ್ವರ ಖಂಡ್ರೆ,** ಗ್ರಾಮೀಣಾಭಿವೃದ್ಧಿ ಸಚಿವ

ಸುದ್ದಿ 2 ನಿಮಿಷ

ಜೆಸ್ಕಾಂ ಕಚೇರಿಗೆ ಬೆಂಕಿ: ಗ್ರಾಹಕ ಸೆರೆ

ಸಿರವಾರ (ರಾಯಚೂರು ಜಿಲ್ಲೆ): ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರಿಂದ ಆಕ್ರೋಶಗೊಂಡ ಬಿಲ್ ಬಾಕಿ ಉಳಿಸಿಕೊಂಡಿದ್ದ ಗ್ರಾಹಕರೊಬ್ಬರು ತಾಲ್ಲೂಕಿನ ಮಲ್ಲಟ ಗ್ರಾಮದ ಜೆಸ್ಕಾಂ ಉಪ ಕಚೇರಿಗೆ ಪೆಟ್ರೋಲ್ ಸುರಿದು ಬೆಂಕಿ ಹಾಕಿದ್ದಾರೆ.

ವಿದ್ಯುತ್ ಬಿಲ್ ₹11 ಸಾವಿರ ಬಾಕಿ ಉಳಿಸಿಕೊಂಡಿದ್ದಎನ್. ಹೊಸೂರು ಗ್ರಾಮದ ಶಿವಪ್ಪ ಬಸನಗೌಡ ಗಡಿಗಿ ಈ ಕೃತ್ಯ ಎಸಗಿದ್ದು, ಪೊಲೀಸರು ಅವರನ್ನು ಬಂಧಿಸಿದ್ದಾರೆ.

'ಶಿವಪ್ಪ ಅವರ ಮನೆಗೆ ಬಾಕಿ ವಸೂಲಿಗೆ ಹೋಗಿದ್ದ ಜೆಸ್ಕಾಂ ಸಿಬ್ಬಂದಿ ರಿಚರ್ಡ್, ಮೇಲಧಿಕಾರಿಗಳ ಸೂಚನೆಯ ಮೇರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರು. ಇದರಿಂದ ರೊಚ್ಚಿಗೆದ್ದ ಶಿವಪ್ಪ, ಕಚೇರಿಗೆ ನುಗ್ಗಿ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದಾರೆ. ಬಳಿಕ ಕಚೇರಿಯೊಳಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾನೆ' ಎಂದು ಜೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.



'ಅಗ್ನಿ ಅವಘಡದಲ್ಲಿ ದಾಖಲೆಗಳು, ಕಂಪ್ಯೂಟರ್, ಲ್ಯಾಪ್‌ಟಾಪ್, ಬ್ಯಾಟರಿ ಹಾಗೂ ಸಾವಿರಾರು ರೂಪಾಯಿ ಸೇರಿ ಅಪಾರ ಆಸ್ತಿ ನಾಶವಾಗಿದೆ. ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಸಾರ್ವಜನಿಕ ಆಸ್ತಿ ನಾಶ ಮಾಡಿದ ಶಿವಪ್ಪ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಜೆಸ್ಕಾಂ ಅಧಿಕಾರಿಗಳು ಸಿರವಾರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಜಾಮೀನಿಗೆ ನಿರ್ಬಂಧ: 'ಸುಪ್ರೀಂ'ಗೆ ನಟ ದರ್ಶನ್ ಅರ್ಜಿ

ನವದೆಹಲಿ: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ನೇತೃತ್ವದ ಪೀಠವು ಮೇ 15ರಂದು ನೀಡಿದ್ದ ಆದೇಶದ ಬಗ್ಗೆ ಸ್ಪಷ್ಟನೆ ಕೋರಿ ನಟ ದರ್ಶನ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ದರ್ಶನ್ ಜಾಮೀನು ಅರ್ಜಿಯನ್ನು ವಜಾಗೊಳಿಸಿದ್ದ ಪೀಠವು, 'ಪ್ರಕರಣದ ಸಾಕ್ಷಿಗಳ ವಿಚಾರಣೆಯನ್ನು ವಿಚಾರಣಾ ನ್ಯಾಯಾಲಯವು ಒಂದು ವರ್ಷದೊಳಗೆ ಮುಗಿಸಬೇಕು. ಒಂದು ವೇಳೆ, ಈ ಅವಧಿಯಲ್ಲಿ ವಿಚಾರಣೆ ಪೂರ್ಣಗೊಳ್ಳದಿದ್ದರೆ ಒಂದು ವರ್ಷದ ಬಳಿಕ ದರ್ಶನ್ ಜಾಮೀನಿಗೆ ಅರ್ಜಿ ಸಲ್ಲಿಸಬಹುದು' ಎಂದು ಸ್ಪಷ್ಟಪಡಿಸಿತ್ತು. 60 ಪ್ರಮುಖ ಸಾಕ್ಷಿಗಳ ವಿಚಾರಣೆಯೊಂದಿಗೆ ಪ್ರಾರಂಭಿಸಿ, ದಿನನಿತ್ಯದ ಆಧಾರದ ಮೇಲೆ ವಿಚಾರಣೆಯನ್ನು ನಡೆಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ಪೀಠ ನಿರ್ದೇಶನ ನೀಡಿತ್ತು. ಒಂದು ವರ್ಷದ ಜಾಮೀನು ನಿಷೇಧದ ಕುರಿತು ಸ್ಪಷ್ಟನೆ ಕೋರಿ ದರ್ಶನ್ ಇದೀಗ ಅರ್ಜಿ ಸಲ್ಲಿಸಿದ್ದಾರೆ.

ವಿಚಾರಣೆಯಲ್ಲಿ ಅರ್ಥಪೂರ್ಣ ಪ್ರಗತಿಯ ಕೊರತೆ, ದೀರ್ಘಕಾಲದ ಸೆರೆವಾಸ, ನಿರ್ಣಾಯಕ ಪ್ರಾಸಿಕ್ಯೂಷನ್ ಸಾಕ್ಷಿಗಳ ವಿಚಾರಣೆ ಬಾಕಿ, ವೈದ್ಯಕೀಯ ತುರ್ತುಸ್ಥಿತಿಗಳು, ಮಾನವೀಯ ಕಾರಣಗಳು ಅಥವಾ ಅವರ ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಪರಿಣಾಮ ಬೀರುವ ಸಂದರ್ಭಗಳು ಇದ್ದಲ್ಲಿ ಸೂಕ್ತ ಪರಿಹಾರ ಪಡೆಯಲು ಅರ್ಜಿದಾರರು ಅರ್ಹರು ಎಂಬುದನ್ನು ಸ್ಪಷ್ಟಪಡಿಸುವಂತೆ ಅರ್ಜಿಯಲ್ಲಿ ಕೋರಲಾಗಿದೆ.

'ರೈತರು ಬೇಡ ಎಂದರೆ ಟೌನ್‌ಶಿಪ್ ಕೈ ಬಿಡುತ್ತೇವೆ'

ಪ್ರಜಾವಾಣಿ ವಾರ್ತೆ



ಹರಿಪ್ರಸಾದ್

ಹುಬ್ಬಳ್ಳಿ: 'ಬಿಡದಿಯಲ್ಲಿ ಟೌನ್‌ಶಿಪ್ ಸ್ಥಾಪನೆ ಬೇಡವೆಂದು ನಿಜವಾದ ರೈತರು ಹೇಳಿದರೆ, ನಾವು ಆ ಯೋಜನೆ ಕೈ ಬಿಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು.

'ಟೌನ್‌ಶಿಪ್ ಕುರಿತು ರಾಜಕೀಯ ಹೋರಾಟ ನಡೆದಿದೆ. ರೈತರು ಬೇಡವೆಂದರೆ, ನಾವು ಅಲ್ಲಿ ಟೌನ್‌ಶಿಪ್ ಮಾಡಲ್ಲ. ಕೃಷಿ ಭೂಮಿಯ ಸ್ವಾಧೀನಕ್ಕೆ, ಮಾರುಕಟ್ಟೆಯ ದರಕ್ಕಿಂತ ಮೂರುಪಟ್ಟು ಹಣ ನೀಡಬೇಕು' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಶಾಸಕರಿಗೂ ಸಚಿವರಾಗುವ ಅವಕಾಶವಿದೆ. ಕೆಲ ಶಾಸಕರ ಅಭಿಮಾನಿಗಳು, ತಮ್ಮ ಶಾಸಕರಿಗೆ ಸಚಿವ ಸ್ಥಾನ ನೀಡುವಂತೆ ಹಕ್ಕೊತ್ತಾಯ ಮಾಡಿದ್ದಾರೆ. ಜನಾಭಿಪ್ರಾಯ ಪರಿಗಣಿಸಿ, ಪಕ್ಷದ ಚೌಕಟ್ಟಿನಲ್ಲಿ ಸಚಿವ ಸ್ಥಾನ ನೀಡಲಾಗುವುದು' ಎಂದರು.

'ಭೂ ಹಗರಣ: ಖರ್ಗೆ ಕುಟುಂಬ ಭಾಗಿ'

ಮಾಧ್ಯಮಗೋಷ್ಠಿ ನಡೆಸಿ ಬಿಜೆಪಿ ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವರು ತಮ್ಮ ಅಧಿಕಾರ ಮತ್ತು ಪ್ರಭಾವ ದುರುಪಯೋಗಪಡಿಸಿಕೊಂಡು ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಭೂಮಿ ಕಬಳಿಸಿದ್ದಾರೆ ಎಂದು ಬಿಜೆಪಿ ಬುಧವಾರ ಆರೋಪಿಸಿದೆ.

ಇಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಪಕ್ಷದ ವಕ್ತಾರ ಪ್ರದೀಪ್ ಭಂಡಾರಿ, 'ಖರ್ಗೆ ಮತ್ತು ಪ್ರಿಯಾಂಕ್ ಅವರು ಸಿದ್ಧಾರ್ಥ ವಿಹಾರ ಟ್ರಸ್ಟ್ ಮೂಲಕ ಭೂಕಬಳಿಕೆಯಲ್ಲಿ ತೊಡಗಿದ್ದಾರೆ. ಈ ವಿಷಯದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೌನ ತಾಳಿರುವುದು ಏಕೆ' ಎಂದು ಪ್ರಶ್ನಿಸಿದರು.

ರಾಬರ್ಟ್ ವಾದ್ರಾ ಹಾಗೂ ರಾಹುಲ್ ಗಾಂಧಿ ಅವರಿಂದ ಪ್ರೇರಿತರಾಗಿ ಖರ್ಗೆ ಕುಟುಂಬ ಭೂಹಗರಣದಲ್ಲಿ ಭಾಗಿಯಾಗಿದೆ ಎಂದೂ ದೂರಿದರು.

ಬೆಂಗಳೂರಿನಲ್ಲಿರುವ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಏರೋಸ್ಪೇಸ್ ಮತ್ತು ರಕ್ಷಣಾ ವಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಕಾಂಗ್ರೆಸ್ ಸರ್ಕಾರ ₹100 ಕೋಟಿ ಮೌಲ್ಯದ 5 ಎಕರೆ ನೀಡಿದೆ ಅವರು ಆರೋಪಿಸಿದರು.

ಕಾಂಗ್ರೆಸ್ ಸರ್ಕಾರವು 2016 ರಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಟ್ರಸ್ಟ್‌ಗೆ 30 ವರ್ಷಗಳ ಅವಧಿಗೆ 19 ಎಕರೆ ನೀಡಿತು. ನಂತರ ಅದನ್ನು ಖರ್ಗೆ ಕುಟುಂಬದ ಶಾಶ್ವತ ಆಸ್ತಿಯನ್ನಾಗಿ ಮಾಡಲು ಶಾಶ್ವತ ಗುತ್ತಿಗೆಯಾಗಿ ಪರಿವರ್ತಿಸಲಾಯಿತು. 2018ರಲ್ಲಿ ಸಿಎಜಿ ವರದಿಯು ಈ ವಿಷಯವನ್ನು ಬಹಿರಂಗಪಡಿಸಿದೆ ಎಂದರು.

ಖರ್ಗೆ, ಅವರ ಪತ್ನಿ ಮತ್ತು ಮಗ ಸದಸ್ಯರಾಗಿರುವ ಟ್ರಸ್ಟ್, ಕಸ್ತೂರಿ ಬಾಯಿ ಎಂಬ ಕಾಲ್ಪನಿಕ ಮಾರಾಟಗಾರರನ್ನು ಸೃಷ್ಟಿಸುವ ಮೂಲಕ ಕಲಬುರಗಿಯಲ್ಲಿ 7.18 ಎಕರೆ ಕಬಳಿಸಿದೆ ಎಂದು ಅವರು ದೂರಿದರು.

ಗೃಹ ಸಚಿವರು ಬಳಸುವ ಕಾರಿನ ಮೇಲೆ ದಂಡ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ್ದಕ್ಕೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಬಳಸುತ್ತಿರುವ ಕೆಎ 42 ಜಿಎ 0099 ಕಾರಿನ ಮೇಲೆ ₹2,500 ದಂಡವಿದ್ದು, ಶೇ 50ರ ರಿಯಾಯಿತಿ ಬಳಸಿಕೊಂಡು ದಂಡ ಪಾವತಿ ಮಾಡುವಂತೆ ಕರ್ನಾಟಕ ಬಿಜೆಪಿ ಘಟಕವು 'ಎಕ್ಸ್' ಮೂಲಕ ಮನವಿ ಮಾಡಿದೆ.

'ಸೀಟ್‌ಬೆಲ್ಟ್ ಧರಿಸುವುದು, ವೇಗ ಮಿತಿಯನ್ನು ಪಾಲಿಸುವುದು ನಿಮಗೆ ಅನ್ವಯ ಆಗುವುದಿಲ್ಲವೇ? ನೀವು ಬಳಸುತ್ತಿರುವ ವಾಹನವು ಅತಿ ವೇಗದಲ್ಲಿ ಚಾಲನೆಯಾಗಿದೆ. ಅಲ್ಲದೇ ರಸ್ತೆ ಸುರಕ್ಷತಾ ನಿಯಮಗಳ ಉಲ್ಲಂಘನೆಯನ್ನೂ ಮಾಡಲಾಗಿದೆ. ₹2,500 ಮೊತ್ತದ ನಾಲ್ಕು ಬಾಕಿ ಇ–ಚಲನ್‌ಗಳು ಇವೆ' ಎಂದು ಬಿಜೆಪಿ ತಿಳಿಸಿದೆ.

'ನೋಂದಣಿ ದಾಖಲೆ ತರುತ್ತಾರೊ ನೋಡೋಣ'



ಪ್ರಿಯಾಂಕ್

ಬೆಂಗಳೂರು: 'ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಬೆಂಗಳೂರಿಗೆ ಬರುತ್ತಿದ್ದಾರೆ, ತಮ್ಮ ಸಂಸ್ಥೆಯ ನೋಂದಣಿ ದಾಖಲೆಗಳನ್ನು ಅವರು ತರುತ್ತಾರೋ ಇಲ್ಲವೋ ನೋಡೋಣ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನನ್ನ ಪ್ರಶ್ನೆಗಳಿಗೆ ಉತ್ತರ ನೀಡುವ ಬದಲು ಅಧಿಕಾರ ದುರ್ಬಲಗೊಳಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ' ಎಂದರು.

'ಯಾಕೆ ನಾನು ಸೂಟು ಹಾಕಬಾರದೇ? ಆರ್‌ಎಸ್‌ಎಸ್ ಬಗ್ಗೆ ಕೇಳಿದರೆ ವೈಯಕ್ತಿಕವಾಗಿ ಮಾತನಾಡುತ್ತಿದ್ದಾರೆ. ಆರ್‌ಎಸ್‌ಎಸ್‌ನ ಆದಾಯ ಕೇಳಿದರೆ ಇವರಿಗೇಕೆ (ಬಿಜೆಪಿ) ಕೋಪ. ಒಬ್ಬ ದಲಿತ ಆರ್‌ಎಸ್‌ಎಸ್ ಬಗ್ಗೆ ಕೇಳಲೇಬಾರದೇ' ಎಂದು ಪ್ರಶ್ನಿಸಿದರು.

ಚಿಣ್ಣರ ಹುಲಿವೇಷ

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ



ಹುಬ್ಬಳ್ಳಿ ಬಮ್ಮಾಪೂರ ಓಣಿಯಲ್ಲಿ ಮೊಹರಂ ಹಬ್ಬದ ಅಂಗವಾಗಿ ಹುಲಿ ವೇಷಧಾರಿಗಳು

ದಾಖಲೆ ಇಲ್ಲದ ಹಳೆಯ ಮನೆಗಳಿಗೂ ಇ–ಸ್ವತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮಠಾಣಾ ವ್ಯಾಪ್ತಿಯಲ್ಲಿ ದಾಖಲೆ ಇಲ್ಲದ ಹಳೆಯ ಮನೆಗಳಿಗೆ ಇ-ಸ್ವತ್ತು ನೀಡಲು ನಿಯಮಗಳಿಗೆ ತಿದ್ದುಪಡಿ ತರಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಅಧಿಕಾರಿಗಳ ಜತೆ ವಿಬಿ–ಜಿ ರಾಮ್ ಜಿ ಮತ್ತು ಇ-ಸ್ವತ್ತು ವಿಷಯಗಳ ಕುರಿತು ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ರಾಜ್ಯದಲ್ಲಿ ಸುಮಾರು 65 ಲಕ್ಷ ಆಸ್ತಿಗಳು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುತ್ತವೆ. ಪೂರ್ವಜರಿಂದ ಬಂದ ಬಳುವಳಿಯಾಗಿದ್ದು, ಕೆಲವರ ಬಳಿ ತಮ್ಮ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಇಲ್ಲ. ಹೀಗಾಗಿ ಒಂದು ಬಾರಿ ನಿಯಮ ಸರಳಗೊಳಿಸಿ 100 ದಿನಗಳ ಒಳಗಾಗಿ ಗ್ರಾಮಠಾಣಾ ಆಸ್ತಿಗಳಿಗೆ ಇ-ಖಾತಾ ವಿತರಿಸಲಾಗುವುದು. ಗ್ರಾಮೀಣ ಜನರಿಗೆ ತೊಂದರೆ ಆಗದಂತೆ ಮತ್ತು ಸರ್ಕಾರದ ಆಸ್ತಿ (ಖರಾಬು, ಗೋಮಾಳ ಇತ್ಯಾದಿ) ಗಳನ್ನು ಸಂರಕ್ಷಿಸಿಕೊಂಡು, ಸ್ವಾಧೀನದಲ್ಲಿರುವವರಿಗೆ ಖಾತಾ ನೀಡಲು ಕ್ರಮ ವಹಿಸಲಾಗುವುದು' ಎಂದರು.

11ಬಿ ಅರ್ಜಿ ಸಲ್ಲಿಸಲು ಕಾಲಾವಕಾಶ ವಿಸ್ತರಣೆ: 'ಆಸ್ತಿಗಳಿಗೆ ನಮೂನೆ 11ಬಿ ಅರ್ಜಿ ಸಲ್ಲಿಸಲು ಸೆಪ್ಟೆಂಬರ್‌ವರೆಗೆ ಕಾಲಾವಕಾಶ ವಿಸ್ತರಿಸಲು ಚರ್ಚಿಸಲಾಗಿದೆ. ಈವರೆಗೆ 10.16 ಲಕ್ಷ ಆಸ್ತಿಗಳಿಗೆ ಬಿ–ಖಾತಾ ನೀಡಲಾಗಿದೆ. ಇನ್ನೂ 90 ಲಕ್ಷ ಆಸ್ತಿಗಳಿಗೆ ಎ–ಮತ್ತು ಬಿ–ಖಾತಾ ನೀಡಬೇಕು. ವಸತಿ ಬಡಾವಣೆಯಲ್ಲಿ ಸರ್ಕಾರಿ ಎ ಮತ್ತು ಬಿ–ಖರಾಬು ಜಮೀನು ಬಳಸಿಕೊಂಡು ನಿರ್ಮಾಣ ಮಾಡಿದ ಲೇಔಟ್ ಆಸ್ತಿಗಳಿಗೆ ಇ-ಸ್ವತ್ತು ನೀಡದಂತೆ ಸೂಚಿಸಲಾಗಿದೆ. ಇಂತಹ ಸ್ವತ್ತುಗಳನ್ನು ದಿಶಾಂಕ್ ಆ್ಯಪ್‌ನಲ್ಲಿ ಖರಾಬು ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಈ ಸಮಸ್ಯೆಗೆ ಶೀಘ್ರ ಪರಿಹಾರ ಕಂಡುಕೊಳ್ಳಲಾಗುವುದು' ಎಂದರು.

'5,928 ಗ್ರಾ.ಪಂ. ವ್ಯಾಪ್ತಿಯಲ್ಲಿ 1.50 ಕೋಟಿ ಆಸ್ತಿಗಳಿವೆ. 53.53 ಸ್ವತ್ತುಗಳಿಗೆ ಇ-ಸ್ವತ್ತು ನೀಡಲಾಗಿದೆ. ಉಳಿದ ಆಸ್ತಿಗಳಿಗೆ ಇ-ಸ್ವತ್ತು ನೀಡಲು ಸೂಚಿಸಲಾಗಿದೆ ಎಂದರು.

826 ಹಳ್ಳಿಗಳಲ್ಲಿ ನೀರಿನ ಸಮಸ್ಯೆ

ರಾಜ್ಯದಲ್ಲಿ ಜೂನ್‌ವರೆಗೆ ಶೇ 42ರಷ್ಟು ಮಳೆ ಕೊರತೆ ಆಗಿದೆ. ಪ್ರಸ್ತುತ 826 ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಇದೆ ಎಂದು ಈಶ್ವರ ಖಂಡ್ರೆ ಹೇಳಿದರು.

ರಾಜ್ಯದಲ್ಲಿ ಅಂತರ್ಜಲ ಮಟ್ಟವೂ ಕುಸಿದಿದೆ. ಕಳೆದ ಬೇಸಿಗೆಯಲ್ಲಿ 1 ಸಾವಿರ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇತ್ತು. ಹೊಸ ಕೊಳವೆ ಬಾವಿ ಕೊರೆದು ನೀರು ಪೂರೈಸಲಾಗುತ್ತಿತ್ತು. ಈ ಬಾರಿ ಗ್ರಾಮಗಳಿಗೆ ನೀರು ಪೂರೈಕೆಗೆ ಹಣಕಾಸಿನ ಕೊರತೆ ಇಲ್ಲ. ರಾಜ್ಯ ಸರ್ಕಾರ ಈಗಾಗಲೇ ₹1,017 ಕೋಟಿ ಮುಂಗಡ ಬಿಡುಗಡೆ ಮಾಡಿದೆ ಎಂದರು.

'ಕೃಷ್ಣಾ'ದಲ್ಲಿ ಸಿ.ಎಂ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧಿಕೃತ ಗೃಹ ಕಚೇರಿ 'ಕೃಷ್ಣಾ' ಕಾರ್ಯಾರಂಭಗೊಂಡಿದೆ. ಕುಮಾರಕೃಪಾ ರಸ್ತೆಯಲ್ಲಿರುವ ಈ ಕಚೇರಿಯಲ್ಲಿ ತಮ್ಮ ಆರಾಧ್ಯ ದೈವ ಅಜ್ಜಯ್ಯನ ಭಾವಚಿತ್ರವನ್ನು ಅವರು ಅಳವಡಿಸಿರುವುದು ಗಮನ ಸೆಳೆದಿದೆ.

ತಮ್ಮ ಈ ಕಚೇರಿಯಲ್ಲಿ ಶಿವಕುಮಾರ್ ಅವರು ಬುಧವಾರ ವಿಶೇಷ ಪೂಜೆ ನೆರವೇರಿಸುವ ಮೂಲಕ ಆಡಳಿತಾತ್ಮಕ ಕಾರ್ಯಗಳಿಗೆ ಚಾಲನೆ ನೀಡಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಬೆನ್ನಲ್ಲೆ ಕುಮಾರಕೃಪ ಅತಿಥಿಗೃಹದ ಮುಖ್ಯ ಕಟ್ಟಡವನ್ನು ಪರಿಶೀಲಿಸಿದ್ದ ಶಿವಕುಮಾರ್, ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಅಲ್ಲಿ ಗೃಹ ಕಚೇರಿ ಮಾಡಲು ಉದ್ದೇಶಿಸಿದ್ದರು.

'ಸಿದ್ದರಾಮಯ್ಯ ಅವರು 'ಕೃಷ್ಣಾ'ವನ್ನು ತೆರವುಗೊಳಿಸಿರುವುದರಿಂದ, ಅದನ್ನೇ ಅಧಿಕೃತ ಕಚೇರಿಯಾಗಿ ಮಾಡಲು ಶಿವಕುಮಾರ ತೀರ್ಮಾನಿಸಿದ್ದಾರೆ. ಕುಮಾರಕೃಪ ಅತಿಥಿಗೃಹದ ಮುಖ್ಯ ಕಟ್ಟಡದ ಒಳಭಾಗದಲ್ಲಿ ನವೀಕರಣ ಕಾಮಗಾರಿ ಕೈಗೊಂಡು ಅದನ್ನು ಮುಖ್ಯಮಂತ್ರಿಯ ಅಧಿಕೃತ ನಿವಾಸವಾಗಿ ಮಾಡಿಕೊಳ್ಳಲು ಶಿವಕುಮಾರ್ ಉದ್ದೇಶಿಸಿದ್ದಾರೆ' ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಇನ್ನು ಮುಂದೆ ಎಲ್ಲರನ್ನೂ 'ಕೃಷ್ಣಾ'ದಲ್ಲಿ ಭೇಟಿ ಮಾಡುತ್ತೇನೆ. ಅನಿವಾರ್ಯ ಕಾರಣಗಳಿಂದ ಇನ್ನು ಮುಂದೆ ಸದಾಶಿವನಗರದಲ್ಲಿರುವ ನಿವಾಸದಲ್ಲಿ ಯಾರನ್ನೂ ಭೇಟಿ ಮಾಡುವುದಿಲ್ಲ' ಎಂದು ಶಿವಕುಮಾರ್ ಹೇಳಿದ್ದಾರೆ.

'ಅಪಪ್ರಚಾರಕ್ಕೆ ಕಾನೂನಿನ ಉತ್ತರ'

ಪ್ರಜಾವಾಣಿ ವಾರ್ತೆ



ಅನಿತಾ

ಬೆಂಗಳೂರು: ತಮ್ಮ ಹೆಸರಿನಲ್ಲಿ 100 ಎಕರೆ ಜಮೀನು ಇದೆ ಎಂದು ಸಚಿವ ಎಂ.ಬಿ. ಪಾಟೀಲ ಅವರು ನೀಡಿದ್ದ ಹೇಳಿಕೆಗೆ ಅನಿತಾ ಕುಮಾರಸ್ವಾಮಿ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಕಾನೂನು ಮೂಲಕ ಉತ್ತರ ನೀಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

'ನನ್ನ ಹೆಸರಿನಲ್ಲಿ ಇರುವುದು 32 ಎಕರೆ ಜಮೀನು ಮಾತ್ರ, ಎಂ.ಬಿ.ಪಾಟೀಲ ಅವರು ಹೇಳಿರುವಂತೆ 100 ಎಕರೆ ಅಲ್ಲ. ರಾಜಕೀಯ ದುರುದ್ದೇಶಕ್ಕಾಗಿ ಕುಟುಂಬದವರನ್ನು ಎಳೆದು ತಂದು ಅಪಪ್ರಚಾರ ಮಾಡುವುದು ಯಾರಿಗೂ ಶೋಭೆ ತರುವುದಿಲ್ಲ' ಎಂದು ಅನಿತಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಮಾನನಷ್ಟ ಮೊಕದ್ದಮೆ ಹೂಡುತ್ತೇವೆ': ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, 'ನಮ್ಮ ಕುಟುಂಬದ ಹೆಸರಿನಲ್ಲಿ 100 ಎಕರೆ ಜಮೀನು ಇದೆ ಎಂಬುದನ್ನು ಎಂ.ಬಿ. ಪಾಟೀಲ ಅವರು ಸಾಬೀತು ಮಾಡಿದರೆ, ನಾನು ಅವರಿಗೆ ತಲೆಬಾಗುತ್ತೇನೆ. ಇಲ್ಲದೇ ಇದ್ದರೆ ಅವರು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು. ಮಾನನಷ್ಟ ಮೊಕದ್ದಮೆಯನ್ನೂ ಹಾಕುತ್ತೇವೆ' ಎಂದಿದ್ದಾರೆ.

ಪೋಸ್ಟರ್ ಅಭಿಯಾನದಂತಹ ಕೀಳು ಪ್ರಚಾರವನ್ನು ಯಾರೂ ಮಾಡಬಾರದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಚಿವ ವಿಷಾದ

'ಈ ವಿಚಾರದಲ್ಲಿ ನನಗೆ ಯಾವ ವೈಯಕ್ತಿಕ ದ್ವೇಷವೂ ಇಲ್ಲ. ನನ್ನ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇನೆ' ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ರಾಜಕೀಯ ದುರುದ್ದೇಶದಿಂದ ಈ ಹೇಳಿಕೆ ನೀಡಿಲ್ಲ. ಅನಿತಾ ಕುಮಾರಸ್ವಾಮಿ ಅವರ ಹೆಸರಿನಲ್ಲಿ 100 ಎಕರೆ ಜಮೀನು ಇದೆ ಎಂದು ಕುಮಾರಸ್ವಾಮಿ ಅವರೇ ವೇದಿಕೆಯೊಂದರಲ್ಲಿ ಹೇಳಿದ್ದರು. ಅದನ್ನೇ ನಾನು ಉಲ್ಲೇಖಿಸಿದ್ದೇನೆ ಅಷ್ಟೆ. ಹೀಗಿದ್ದೂ ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ಪ್ರಶ್ನೆಗೆ ಉತ್ತರಿಸಿದರು.

ಕಾರ್ಮಿಕ ಆತ್ಮಹತ್ಯೆ: ಉದ್ವಿಗ್ನ ಪರಿಸ್ಥಿತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಹಿಂಡಾಲ್ಕೊ ಕಂಪನಿ ಕಾರ್ಮಿಕ ಶಂಕರ ತಳವಾರ (31) ಅವರು ಬುಧವಾರ ಕಂಪನಿಯ ಆವರಣದಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಿಂದ ಆಕ್ರೋಶಗೊಂಡ ಮೃತನ ಕುಟುಂಬದವರು ಮತ್ತು ಗ್ರಾಮಸ್ಥರು ಕಂಪನಿಯ ಕಚೇರಿಗೆ ನುಗ್ಗಿ, ದಾಂಧಲೆ ನಡೆಸಿದರು. ತಲೆದೋರಿದ ಉದ್ವಿಗ್ನ ಪರಿಸ್ಥಿತಿಯನ್ನು ಪೊಲೀಸರು ಹತೋಟಿಗೆ ತಂದರು.

ಕಲ್ಲು ತೂರಾಟ ನಡೆಸಿ, ಕಿಟಕಿಗಳನ್ನು ಒಡೆದರು. ಪೀಠೋಪಕರಣ ಹಾಗೂ ಎಲೆಕ್ಟ್ರಾನಿಕ್ ಸಾಮಗ್ರಿಗಳನ್ನು ಧ್ವಂಸ ಮಾಡಿದರು. ಮಾಹಿತಿ ತಿಳಿದ ತಕ್ಷಣ ಕಂಪನಿ ಆವರಣದಲ್ಲಿ ಭಾರಿ ಪ್ರಮಾಣದ ಪೊಲೀಸ್ ಬಂದೋಬಸ್ತ್ ಮಾಡಲಾಯಿತು.

'ಮುತ್ಯಾನಟ್ಟಿ ನಿವಾಸಿ ಶಂಕರ ಆರು ವರ್ಷಗಳಿಂದ ಹಿಂಡಾಲ್ಕೊ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿ ಕಿರುಕುಳ ಮತ್ತು ಕೆಲಸಕ್ಕೆ ಸಂಬಂಧಿತ ಸಮಸ್ಯೆಗಳಿದ್ದವು. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಕುಟುಂಬದವರು ಆರೋಪಿಸಿದರು. ಸಾವಿಗೂ ಮುನ್ನ ಶಂಕರ, ಕುಟುಂಬ ಸದಸ್ಯರಿಗೆ ವಾಟ್ಸ್‌ಆ್ಯಪ್ ಮೂಲಕ ಸಂದೇಶ ಕಳುಹಿಸಿದ್ದು, 'ಕಂಪನಿಯಲ್ಲಿ ಸ್ಥಳೀಯ ಯುವಕ ರಿಗೆ ಅನ್ಯಾಯ ಆಗುತ್ತಿದೆ. ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ ಆದವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ.ಕಾಯ ಮಾತಿಗೆ ಭರವಸೆ ನೀಡಿ, ಕೆಲವರು ಹಣ ಕೂಡ ಪಡೆದಿದ್ದಾರೆ. ಆದರೆ, ಮರಳಿ ಕೊಡುತ್ತಿಲ್ಲ' ಎಂದು ದೂರಿದ್ದಾರೆ. ಎಂದು ಮೂಲಗಳು ಖಚಿತಪಡಿಸಿವೆ.

> ಆತ್ಮಹತ್ಯೆ ಮಾಡಿಕೊಂಡ ಯುವಕನ ಮನೆಯ ಇಬ್ಬರಿಗೆ ಹಿಂಡಾಲ್ಕೊ ಕಂಪನಿಯಲ್ಲೇ ಕಾಯಂ ನೌಕರಿ ಕೊಡಬೇಕು ಎಂದು ಸೂಚನೆ ನೀಡಿದ್ದೇನೆ
>
> **ಮೊಹಮ್ಮದ್ ರೋಷನ್,** ಜಿಲ್ಲಾಧಿಕಾರಿ



ಕಾರ್ಮಿಕ ಆತ್ಮಹತ್ಯೆ ಮಾಡಿಕೊಂಡ ಕಾರಣ, ಕುಟುಂಬದವರು ಹಾಗೂ ಮುತ್ಯಾನಟ್ಟಿ ಗ್ರಾಮಸ್ಥರು ಕಂಪನಿಯ ಕಚೇರಿಗೆ ಮುತ್ತಿಗೆ ಹಾಕಿದರು

ಇ.ಡಿಯಿಂದ ಶೋಧ

ಒಂದನೇ ಪುಟದಿಂದ...

ಮಂಜುನಾಥ್ ಅವರು 2012ರಲ್ಲಿ ಮೈಸೂರಿನಲ್ಲಿ ಅಬಕಾರಿ ಹೆಚ್ಚುವರಿ ಆಯುಕ್ತ ಆಗಿದ್ದ ವೇಳೆ ಅವರ ಅಧೀನ ಸಿಬ್ಬಂದಿ ಆಗಿದ್ದ ಯಮುನಾ ಎಂಬುವವರ ಮನೆಯಲ್ಲಿಯೂ ಶೋಧ ನಡೆದಿದೆ. ಯಮುನಾ ಅವರ ಬ್ಯಾಂಕ್ ಲಾಕರ್‌ಗಳನ್ನು ಪರಿಶೀಲಿಸಲಾಗಿದೆ. ಜತೆಗೆ ರಾಜ್ಯದ ವಿವಿಧೆಡೆ ಅವರೊಂದಿಗೆ ಕಾರ್ಯನಿರ್ವಹಿಸಿದ್ದ ಹಲವು ಅಧಿಕಾರಿಗಳ ಮನೆಗಳ ಮೇಲೆ ದಾಳಿ ಮಾಡಿ, ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಂಜುನಾಥ್ ಅವರ ಮನೆಗಳಲ್ಲಿ ನೂರಕ್ಕೂ ಹೆಚ್ಚು ಮದ್ಯದಂಗಡಿಗಳ ಸನ್ನದು, ಲೆಕ್ಕಪತ್ರಗಳು, ಷೇರು ಹೂಡಿಕೆ ಪತ್ರಗಳು, ಆಸ್ತಿ ಪತ್ರಗಳು ಪತ್ತೆಯಾಗಿವೆ. ಅಪಾರ ಪ್ರಮಾಣದ ಚಿನ್ನಾಭರಣ, ಚಿನ್ನದ ಬಿಸ್ಕತ್‌ಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ. ಆದರೆ, ಇ.ಡಿ ಈ ಬಗ್ಗೆ ಪ್ರಕಟಣೆ ನೀಡಿಲ್ಲ. ಬುಧವಾರ ರಾತ್ರಿಯೂ ಶೋಧ ಮುಂದುವರೆದಿತ್ತು.

ಮಂಜುನಾಥ್ ಅವರು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಬಿಜೆಪಿ ಶಾಸಕರಾದ ರಮೇಶ ಮತ್ತು ಬಾಲಚಂದ್ರ ಜಾರಕಿಹೊಳಿ ಅವರ ಸೋದರಿಯ ಪತಿ. ಬಿಜೆಪಿಯ ಮಾಜಿ ಸಂಸದ ವೈ.ದೇವೇಂದ್ರಪ್ಪ ಅವರ ಮಗ.

'ನನ್ನ ಮೇಲೆಯೂ ದಾಳಿ ಆಗಬಹುದು'

'ಕೇಂದ್ರ ತನಿಖಾ ಸಂಸ್ಥೆಗಳಾದ ಇ.ಡಿ, ಐಟಿ ಹಾಗೂ ಸಿಬಿಐ ಕೇಂದ್ರ ಸರ್ಕಾರದ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ನನ್ನ ಮೇಲೆಯೂ ಇ.ಡಿ ದಾಳಿ ನಡೆಯುವ ಸಾಧ್ಯತೆ ಇದೆ. ಇವತ್ತಲ್ಲ, ನಾಳೆ ಅದು ಆಗಬಹುದು' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಕಳೆದ 12 ವರ್ಷಗಳಲ್ಲಿ ದೇಶದಾದ್ಯಂತ ಸಾವಿರಾರು ಇ.ಡಿ ದಾಳಿಗಳು ನಡೆದಿದ್ದರೂ, ಅವುಗಳಲ್ಲಿ ಅಪರಾಧ ಸಾಬೀತಾದ ಪ್ರಕರಣಗಳ ಪ್ರಮಾಣ ಶೇ1.5ಕ್ಕಿಂತ ಕಡಿಮೆ. ದಾಳಿಗಳು ರಾಜಕೀಯ ಪ್ರೇರಿತವಾಗಿವೆ ಎಂಬುದನ್ನು ಈ ಅಂಕಿಅಂಶಗಳು ಸ್ಪಷ್ಟಪಡಿಸುತ್ತವೆ' ಎಂದು ಪ್ರತಿಪಾದಿಸಿದರು.

'ಯಾವಾಗ ಬೇಕೋ ಆಗ ಕೇಂದ್ರ ತನಿಖಾ ಸಂಸ್ಥೆಗಳನ್ನು ಛೂ ಬಿಡಲಾಗುತ್ತಿದೆ' ಎಂದೂ ಆರೋಪಿಸಿದರು.

ರಾಜಕೀಯ ಪಕ್ಷಗಳ ಗುಲಾಮರಾದ ನಾಯಕರು • ಕಾರ್ಯಕರ್ತರಿಗಿಂತ ನಾಯಕರೇ ಹೆಚ್ಚು- ವಿಷಾದ

ಶಕ್ತಿ ಕಳೆದುಕೊಂಡ ದಲಿತ ಚಳವಳಿ: ರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಚಳವಳಿಗಳಲ್ಲಿ ಕಾರ್ಯಕರ್ತರಿಗಿಂತ ನಾಯಕರೇ ಹೆಚ್ಚಾಗಿದ್ದಾರೆ. ಎಲ್ಲರೂ ರಾಜಕೀಯ ಪಕ್ಷಗಳ ಗುಲಾಮರಾಗಿದ್ದಾರೆ. ಹೀಗಾಗಿ ದಲಿತ ಶಕ್ತಿಯೇ ಇಲ್ಲವಾಗಿದೆ' ಎಂದು ದಲಿತ ಚಳವಳಿಯ ಮುಖಂಡ ಕೋಟಿಗಾನಹಳ್ಳಿ ರಾಮಯ್ಯ ವಿಷಾದಿಸಿದರು.

ಬುದ್ಧ, ಬಸವ ಮತ್ತು ಅಂಬೇಡ್ಕರ್ ಜಯಂತಿ ಅಂಗವಾಗಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯು ನಗರದ ಗಾಂಧೀ ಭವನದಲ್ಲಿ ಬುಧವಾರ 'ಪ್ರಜಾಪ್ರಭುತ್ವದಲ್ಲಿ ದಲಿತರ ಸ್ಥಾನ–ಮಾನ' ಕುರಿತು ಏರ್ಪಡಿಸಿದ್ದ ವಿಚಾರಸಂಕಿರಣದಲ್ಲಿ ಮಾತನಾಡಿದ ಅವರು, '70 ರ ದಶಕದಲ್ಲಿ ದಲಿತ ಶಕ್ತಿ ಇತ್ತು. ಈಗ ಇಲ್ಲ. ದಲಿತ ನಾಯಕರು ಆಳುವ ನಾಯಕರ ತಂತ್ರಗಳನ್ನು ಅರ್ಥ ಮಾಡಿಕೊಂಡಿಲ್ಲ. ತಮ್ಮದೇ ರಾಜಕೀಯ ಪಕ್ಷವನ್ನು ಕಟ್ಟುವ ದಿಟ್ಟತನವನ್ನೂ ತೋರುತ್ತಿಲ್ಲ' ಎಂದು ದೂರಿದರು.



ವಿಚಾರ ಸಂಕಿರಣದಲ್ಲಿ ಶ್ಯಾಮರಾವ್ ಘಾಟ್ಕೆ, ಕೆಂಪಯ್ಯ ಸಾಗ್ಯ, ಕೋಟಿಗಾನಹಳ್ಳಿ ರಾಮಯ್ಯ, ಸುಗತಪಾಲ ಬಂತೇಜಿ ಮತ್ತು ಸಿ. ಸಿದ್ದಲಿಂಗಯ್ಯ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

'ಹಲವು ಬಣಗಳನ್ನಿಟ್ಟುಕೊಂಡು ದಲಿತರು ಆಳುವ ವರ್ಗವಾಗುವುದಾದರೂ ಹೇಗೆ? ಬಣಗಳಿರುವುದರಿಂದಲೇ ಬಿಜೆಪಿಯ ಅಮಿತ್ ಶಾ ನಮ್ಮನ್ನು ತುಕಡೆ ಗ್ಯಾಂಗ್ ಎಂದು ಅವಮಾನಿಸಿದರೂ ಅದಕ್ಕೆ ಪ್ರತೀಕಾರ ಪಡೆಯುವ ಶಕ್ತಿಯೂ ನಮಗಿಲ್ಲ. ಹಿಂದುತ್ವದ ಸೈನ್ಯವನ್ನು ಎದುರಿಸಲು ಆಗುತ್ತದೆಯೇ? ಎಸ್‌ಐಆರ್‌ನಂಥ ನೂರು ಹುನ್ನಾರಗಳು ಇನ್ನು ಮುಂದೆಯೂ ಬರಬಹುದು' ಎಂದು ಆತಂಕ ವ್ಯಕ್ತಪಡಿಸಿದರು.

'ದಲಿತರ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂದು ಇನ್ನು ಮುಂದೆ ಹಾಡಬೇಡಿ. ಹೋರಾಟದ ಸಾಗರ ಕರಗಿ ಹೋಗಿದೆ. ನದಿಗಳೂ ಇಲ್ಲವಾಗಿವೆ. ಪಿಚ್ಚಳ್ಳಿ ಶ್ರೀನಿವಾಸ್, ಗೊಲ್ಲಹಳ್ಳಿ ಶಿವಪ್ರಸಾದ್ ಅಂಥ ಹಾಡುಗಾರರು ಈಗಲೂ ಅವೇ ಹಾಡುಗಳನ್ನೇ ಹಾಡುತ್ತಿದ್ದಾರೆ. ಅವೆಲ್ಲವೂ ಈಗ ಬುದ್ಧ, ಬಸವ, ಅಂಬೇಡ್ಕರ್ ಕುರಿತ ಭಜನೆಗಳಂತೆ ಮಾತ್ರ ಕೇಳಿಸುತ್ತಿವೆ' ಎಂದರು.

'ಹೋರಾಟದ ಹಾಡುಗಳ ಆಶಯಗಳಲ್ಲಿದ್ದ ಜಗತ್ತು ಕಳೆದುಹೋಗಿದೆ. ಜೈಭೀಮ್, ಜೈಜೈ ಭೀಮ್ ಎಂದು ಘೋಷಣೆ ಕೂಗಿದರಷ್ಟೇ ಸಾಕಾಗುವುದಿಲ್ಲ. ಹೊಸ ಕಾಲಘಟ್ಟದಲ್ಲಿ ಚಿಂತನೆಗಳ ಮರುಚಿಂತನೆಯಾಗಬೇಕು. ಹೊಸ ಹಾಡುಗಳನ್ನು ಕಟ್ಟಬೇಕು' ಎಂದು ಪ್ರತಿಪಾದಿಸಿದರು.

'ವಿದ್ಯಾವಂತ, ಉದ್ಯೋಗಸ್ಥ ದಲಿತರ ಮನೆಗಳಲ್ಲಿ ಕನಿಷ್ಠ ಹತ್ತು ಪುಸ್ತಕಗಳ ಗ್ರಂಥಾಲಯವೂ ಇರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಶಿಕ್ಷಣ–ಸಂಘಟನೆ–ಹೋರಾಟ ಎಂಬ ಅಂಬೇಡ್ಕರ್ ತತ್ವದ ಬಗ್ಗೆ ಮಕ್ಕಳಲ್ಲಿ ಅರಿವು ಹೇಗೆ ಮೂಡುತ್ತದೆ? ನೌಕರಸ್ಥ ಪೀಳಿಗೆಗೆ ಬುದ್ಧ, ಬಸವ, ಅಂಬೇಡ್ಕರ್ ಬೇಕಾಗಿಲ್ಲ' ಎಂದು ವಿಷಾದಿಸಿದರು.

'7ರಿಂದ 17 ವರ್ಷ ವಯಸ್ಸಿನ ಮಕ್ಕಳಲ್ಲಿ ಭವಿಷ್ಯದ ಭಾರತ ಅಡಗಿದೆ. ಘೋಷಣೆ ಕೂಗುವುದಕ್ಕಿಂತಲೂ ನಂಬಿದ ಹೋರಾಟದ ಸಿದ್ಧಾಂತವನ್ನು ನೆಲೆಗೊಳಿಸುವುದು ಮುಖ್ಯ. ಅದಕ್ಕಾಗಿ ಮಕ್ಕಳನ್ನು ತರಬೇತುಗೊಳಿಸಲು ಕೋಲಾರದ ಬುದ್ಧಿದೀಪ ಸಂಸ್ಥೆಯು ಸಿದ್ಧವಾಗಿದೆ. ಎಲ್ಲರನ್ನೂ ಸೇರಿಸಿ ಸಮಗ್ರ ದಲಿತ ಚಳವಳಿಯನ್ನು ರೂಪಿಸುವೆ' ಎಂದು ತಿಳಿಸಿದರು.

ಕರಾದಸಂಸ ರಾಜ್ಯ ಸಂಚಾಲಕ ಶ್ಯಾಮರಾವ್ ಘಾಟ್ಕೆ ಅಧ್ಯಕ್ಷತೆ ವಹಿಸಿದ್ದರು.

> ದಲಿತ ಚಳವಳಿಯ ನಾಯಕರು ಬರೆದಿರುವ ಹತ್ತಾರು ಆತ್ಮಚರಿತ್ರೆಗಳು ಕೇವಲ ವ್ಯಕ್ತಿಗತ ನೋಟವಾಗಿಯಷ್ಟೇ ಉಳಿದಿವೆ. ನಿಜವಾದ ಹೋರಾಟದ ಕಥನ ಇನ್ನೂ ಬರಬೇಕಾಗಿದೆ
>
> **ಕೋಟಿಗಾನಹಳ್ಳಿ ರಾಮಯ್ಯ,** ದಲಿತ ಚಳವಳಿಯ ಮುಖಂಡ

ಕರ್ನಾಟಕದಲ್ಲಿ ಮಳೆ ಕೊರತೆ: 40 ಟಿಎಂಸಿ ನೀರು ಹರಿಸಲು ತಮಿಳುನಾಡು ಸರ್ಕಾರ ಪಟ್ಟು ಹಿಡಿದಿರುವುದು ಸರಿಯೇ?

• ಹೌದು • ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ವಾರ್ತಾ ಇಲಾಖೆ ಆಯುಕ್ತರಾಗಿ ಎಂ.ಎನ್.ಅನುಚೇತ್

ಬೆಂಗಳೂರು: ಪೊಲೀಸ್ ನೇಮಕಾತಿ ವಿಭಾಗದ ಡಿಐಜಿಪಿಯಾಗಿದ್ದ ಎಂ.ಎನ್. ಅನುಚೇತ್ ಅವರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ವಾರ್ತಾ ಇಲಾಖೆಯ ಆಯುಕ್ತರಾಗಿದ್ದ ಹೇಮಂತ್ ಎಂ.ನಿಂಬಾಳ್ಕರ್ ಅವರನ್ನು ವರ್ಗ ಮಾಡಲಾಗಿದೆ. ಹುದ್ದೆ ತೋರಿಸಿಲ್ಲ. ಅನುಚೇತ್‌ಗೆ ಯುವಜನ ಸೇವೆ, ಕ್ರೀಡಾ ಇಲಾಖೆಯ ಆಯುಕ್ತರಾಗಿ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ.

ಬ್ಯಾಂಕ್‌ನಲ್ಲಿರುವ ಹಣ ಟ್ಯೂಬ್‌ನಲ್ಲಿರುವ ಟೂತ್ ಪೇಸ್ಟ್‌ನಂತೆ. ಸರಳವಾಗಿ ಹೊರ ತೆಗೆಯಬಹುದು. ಆದರೆ ಅದನ್ನು ಮತ್ತೆ ಒಳಗೆ ಸೇರಿಸುವುದು ಬಹಳ ಕಷ್ಟ
ಅರಲ್ ವಿಲ್ಸನ್, ಲೇಖಕ

ದುಡ್ಡಿನಂಥಾ ಮಾತು

ಬಿಸಿನೆಸ್ ಸಾಲ, ಅಡಮಾನ ಸಾಲ: ಎಂಎಸ್‌ಎಂಇಗೆ ಯಾವುದು ಸೂಕ್ತ?

• ಉಮೇಶ್ ಅರೋರ

'ಸಾಲವು ಪುಕ್ಕಟೆಯಾಗಿ ಸಿಗುವ ಹಣ ಅಲ್ಲ; ಅದು ಉದ್ಯಮದ ಬೆಳವಣಿಗೆಯ ಪಾಲುದಾರ. ಆ ರೀತಿಯಲ್ಲಿ ಸಾಲವನ್ನು ಕಂಡಾಗ ಮಾತ್ರ ಅದರಿಂದ ಒಳಿತಾಗುತ್ತದೆ' ಎನ್ನುವ ಈ ಬರಹ ಎಂಎಸ್‌ಎಂಇ ಉದ್ದಿಮೆಗಳಿಗೆ ಯಾವ ಸಾಲ ಒಳಿತು ಎಂಬುದನ್ನು ಹೇಳುತ್ತದೆ.



ಯಶಸ್ಸು ಕಾಣುವ ಪ್ರತಿ ಉದ್ಯಮ ಕೂಡ ಹೆಚ್ಚಿನ ಬಂಡವಾಳದ ಅಗತ್ಯ ಎದುರಾಗುವ ಹಂತವನ್ನು ತಲುಪುತ್ತದೆ. ಹೆಚ್ಚಿನ ಬಂಡವಾಳದ ಅಗತ್ಯವು ಹೊಸ ಯಂತ್ರೋಪಕರಣ ಖರೀದಿಗೆ, ದಾಸ್ತಾನು ಹೆಚ್ಚಿಸಿಕೊಳ್ಳಲು, ಹೆಚ್ಚಿನ ಜನರನ್ನು ನೌಕರಿಗೆ ಸೇರಿಸಿಕೊಳ್ಳಲು, ಇನ್ನೊಂದು ಘಟಕವನ್ನು ತೆರೆಯಲು ಆಗಿರಬಹುದು. ಅಥವಾ ಕಾರ್ಯಾಚರಣೆ ಬಂಡವಾಳದ ರೂಪದಲ್ಲಿ ಹೆಚ್ಚಿನ ಹಣದ ಅಗತ್ಯ ಎದುರಾಗಬಹುದು.

'ಯಾವ ಬಗೆಯ ಸಾಲವನ್ನು ಪಡೆಯಬೇಕು' ಎಂಬುದು ಉದ್ಯಮಿಗಳ ಪೈಕಿ ಹಲವರು ಕೇಳುವ ಮೊದಲ ಪ್ರಶ್ನೆ. ಇದಕ್ಕೆ ಉತ್ತರವಾಗಿ ಎರಡು ಸ್ವರೂಪದ ಸಾಲಗಳ ಹೆಸರು ಉಲ್ಲೇಖಿಸಬಹುದು. ಮೊದಲನೆಯದು, ವಾಣಿಜ್ಯ ಉದ್ದೇಶದ ಸಾಲ (ಬಿಸಿನೆಸ್ ಲೋನ್); ಎರಡನೆಯದು, ಆಸ್ತಿ ಅಡಮಾನ ಇರಿಸಿ ಪಡೆಯುವ ಸಾಲ (ಎಲ್‌ಎಪಿ).

ಇವುಗಳಲ್ಲಿ ಪೈಕಿ ಎಲ್ಲ ಸಂದರ್ಭಗಳಲ್ಲಿಯೂ ಸೂಕ್ತ ಆಗಬಹುದಾದುದು ಯಾವುದೂ ಇಲ್ಲ. ಯಾವ ಉದ್ದೇಶಕ್ಕಾಗಿ ಸಾಲ ಪಡೆಯಲಾಗುತ್ತಿದೆ, ಹಣದ ಅವಶ್ಯಕತೆ ಎಷ್ಟರಮಟ್ಟಿಗೆ ತುರ್ತಾಗಿದೆ, ಉದ್ಯಮ ಮಾಲೀಕನ ಹಣಕಾಸಿನ ಸ್ಥಿತಿ ಹೇಗಿದೆ ಎಂಬುದನ್ನು ಆಧರಿಸಿ ಸೂಕ್ತ ಆಯ್ಕೆ ಮಾಡಿಕೊಳ್ಳಬಹುದು.

ಇದನ್ನು ಈ ಬಗೆಯಲ್ಲಿ ಆಲೋಚಿಸಿ: ವಾಣಿಜ್ಯ ಉದ್ದೇಶದ ಸಾಲ ಅಂದರೆ 100 ಮೀಟರ್ ಓಟದ ಸ್ಪರ್ಧೆಗೆ ವೇಗದ ಓಟಗಾರರನ್ನು ನೇಮಕ ಮಾಡಿಕೊಂಡಂತೆ. ಆಸ್ತಿಯನ್ನು ಅಡಮಾನವಾಗಿ ಇರಿಸಿ ಸಾಲ ಪಡೆಯುವುದು ಅಂದರೆ ಮ್ಯಾರಥಾನ್ ಓಟಗಾರರನ್ನು ನೇಮಕ ಮಾಡಿಕೊಂಡಂತೆ. ಇಬ್ಬರೂ ಅಪಾರ ಸಾಮರ್ಥ್ಯ ಹೊಂದಿರುವವರೇ ಆಗಿರುತ್ತಾರೆ. ಆದರೆ ಅವರಿಬ್ಬರ ಓಟದ ಉದ್ದೇಶ ಭಿನ್ನ.

ಬಿಸಿನೆಸ್ ಸಾಲ ಪಡೆಯುವಾಗ, ಸಾಲ ಪಡೆಯುತ್ತಿರುವ ವ್ಯಕ್ತಿಯು ತನ್ನ ಆಸ್ತಿಯನ್ನು ಅಡಮಾನವಾಗಿ ಇರಿಸುವ ಅಗತ್ಯ ಇರುವುದಿಲ್ಲ. ಈ ಬಗೆಯ ಸಾಲದ ಅರ್ಜಿಗಳನ್ನು ವೇಗವಾಗಿ ಮುಂದಕ್ಕೆ ಒಯ್ಯಲಾಗುತ್ತದೆ. ಇವು ಹಬ್ಬದ ಸಂದರ್ಭದಲ್ಲಿ ಹೊಸದಾಗಿ ದಾಸ್ತಾನು ಇರಿಸಿಕೊಳ್ಳುವುದಕ್ಕೆ, ತುರ್ತಾಗಿ ಕಾರ್ಯಾಚರಣೆ ಬಂಡವಾಳ ಒದಗಿಸುವುದಕ್ಕೆ, ದಿಢೀರ್ ಎದುರಾಗುವ ಕೆಲವು ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವುದು ಹಾಗೂ ಈ ಬಗೆಯ ಇತರ ಅಲ್ಪ ಅವಧಿಯ ಅಗತ್ಯಗಳಿಗೆ ಸೂಕ್ತ. ಈ ಅನುಕೂಲ ಪಡೆದುಕೊಳ್ಳುವಲ್ಲಿ ಒಂದಿಷ್ಟು ಬೆಲೆ ತೆರಬೇಕಾಗುತ್ತದೆ ಎಂಬುದೂ ನಿಜ. ಈ ಬಗೆಯ ಸಾಲಗಳಿಗೆ ವಿಧಿಸುವ ಬಡ್ಡಿದರವು ತುಸು ಹೆಚ್ಚಿರಬಹುದು, ಸಾಲ ಮರುಪಾವತಿ ಅವಧಿಯು ಕಿರಿದಾಗಿರಬಹುದು.

ಅಡಮಾನ ಸಾಲವು ಉದ್ದಿಮೆಯ ಮಾಲೀಕರಿಗೆ ತಮ್ಮ ವಸತಿ ಉದ್ದೇಶದ ಆಸ್ತಿ ಅಥವಾ ವಾಣಿಜ್ಯ ಉದ್ದೇಶದ ಆಸ್ತಿಯನ್ನು ಅಡಮಾನದ ರೂಪದಲ್ಲಿ ಇರಿಸಿ ಸಾಲ ಪಡೆದುಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಸಾಲ ನೀಡುವ ಸಂಸ್ಥೆಗೆ ಮೂರ್ತರೂಪದ ಭದ್ರತೆಯೊಂದು ಸಿಕ್ಕಿರುತ್ತದೆಯಾದ ಕಾರಣ, ಸಾಲ ಪಡೆಯುವ ವ್ಯಕ್ತಿಯು ಹೆಚ್ಚಿನ ಮೊತ್ತವನ್ನು ತುಲನಾತ್ಮಕವಾಗಿ ಕಡಿಮೆ ಬಡ್ಡಿ ದರಕ್ಕೆ ಪಡೆಯಬಹುದು ಹಾಗೂ ದೀರ್ಘ ಮರುಪಾವತಿ ಅವಧಿಯ ಅನುಕೂಲ ಪಡೆಯಬಹುದು. ಇದರಿಂದಾಗಿ ಎಲ್‌ಎಪಿಯು ವಿಸ್ತರಣಾ ಯೋಜನೆಗಳಿಗೆ, ಹೊಸ ಸಾಮರ್ಥ್ಯ ಸೃಷ್ಟಿಗೆ ಅಥವಾ ಹಲವು ವರ್ಷಗಳ ನಂತರದಲ್ಲಿ ವರಮಾನ ಸೃಷ್ಟಿಸಿಕೊಡುವ ಹೂಡಿಕೆಗಳಿಗೆ ಆಕರ್ಷಕ ಆಯ್ಕೆಯಾಗುತ್ತದೆ. ಆದರೆ ಬಡ್ಡಿ ದರವನ್ನು ಮಾತ್ರವೇ ಗಮನಿಸಿ ಯಾವತ್ತೂ ತೀರ್ಮಾನ ತೆಗೆದುಕೊಳ್ಳಬಾರದು.

ಜವಳಿ ಉತ್ಪನ್ನಗಳನ್ನು ಸಿದ್ಧಪಡಿಸುವ ಉದ್ಯಮಿಯೊಬ್ಬರು ಹಬ್ಬದ ಋತುವಿನ ಬೇಡಿಕೆ ಪೂರೈಸಲು ₹20 ಲಕ್ಷ ಮೌಲ್ಯದ ವಸ್ತುಗಳನ್ನು ಹೆಚ್ಚುವರಿಯಾಗಿ ಖರೀದಿಸಲು ಬಯಸಿದ್ದಾರೆ, ಅದನ್ನು ಆರು ತಿಂಗಳಲ್ಲಿ ಮಾರಾಟ ಮಾಡುವ ನಿರೀಕ್ಷೆ ಹೊಂದಿದ್ದಾರೆ ಎಂದು ಭಾವಿಸಿ. ಇಂತಹ ಪರಿಸ್ಥಿತಿಯಲ್ಲಿ ಬಿಸಿನೆಸ್ ಸಾಲ ಪಡೆಯುವುದು ಒಂದು ಆಯ್ಕೆಯಾಗಬಹುದು, ಏಕೆಂದರೆ ಇದು ಅಲ್ಪ ಅವಧಿಯ ಔದ್ಯಮಿಕ ವಹಿವಾಟಿಗೆ ಸಂಬಂಧಿಸಿದ್ದಾಗಿದೆ.

ಆಹಾರ ಸಂಸ್ಕರಣಾ ಉದ್ಯಮದಲ್ಲಿ ಇರುವ ವ್ಯಕ್ತಿಯೊಬ್ಬರು ಹೊಸ ತಯಾರಿಕಾ ಘಟಕವೊಂದನ್ನು ಆರಂಭಿಸಲು ಆಲೋಚನೆ ನಡೆಸಿದ್ದಾರೆ, ಅದಕ್ಕೆ ಅವರಿಗೆ ₹1 ಕೋಟಿ ಹೂಡಿಕೆಯ ಅಗತ್ಯವಿದೆ ಎಂದು ಭಾವಿಸಿ. ಹೀಗಿದ್ದಾಗ, ಸಾಲದ ಅವಧಿ, ಮರುಪಾವತಿಯ ಸ್ವರೂಪ ಮತ್ತು ಉದ್ದಿಮೆಯಲ್ಲಿನ ನಗದು ಹರಿವಿನ ಆಸ್ತಿಯನ್ನು ಅಡಮಾನವಾಗಿ ಇರಿಸಿ ಸಾಲ ಪಡೆಯುವ ಆಯ್ಕೆಯು ಮರುಪಾವತಿಯ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ನೆರವಾಗಬಹುದು.

ಹಣ ಸಿಗುತ್ತದೆ ಎಂಬ ಒಂದೇ ಕಾರಣಕ್ಕೆ ಹಲವು ಎಂಎಸ್‌ಎಂಇ ಉದ್ದಿಮೆಗಳು ತಮ್ಮ ಮರುಪಾವತಿ ಸಾಮರ್ಥ್ಯ ಮೀರಿ ಸಾಲ ಪಡೆಯುವ ತಪ್ಪನ್ನು ಮಾಡುತ್ತವೆ. ಆದರೆ, ಸಾಲವು ಸುಲಭವಾಗಿ ಸಿಗುತ್ತದೆ ಎಂಬುದು ಅತಿಯಾಗಿ ಸಾಲ ಮಾಡುವುದಕ್ಕೆ ದಾರಿ ಮಾಡಿಕೊಡಬಾರದು. ಉದ್ದಿಮೆಯ ಅಗತ್ಯಕ್ಕೆ ನಿಜಕ್ಕೂ ಅಗತ್ಯವಿರುವ ಮೊತ್ತವನ್ನು, ಭವಿಷ್ಯದ ನಗದು ಹರಿವನ್ನು ಬಳಸಿ ಸುಲಭವಾಗಿ ತೀರಿಸಬಹುದಾದ ಮೊತ್ತವನ್ನು ಮಾತ್ರ ಸಾಲವಾಗಿ ಪಡೆಯಬೇಕು.



ಇನ್ನೊಂದು ಮುಖ್ಯವಾದ ಅಂಶ, ಅಡಮಾನವಾಗಿ ಇರಿಸುತ್ತಿರುವ ಆಸ್ತಿಯ ಕುರಿತಾಗಿ ಹೊಂದಿರುವ ಭಾವನಾತ್ಮಕ ಮೌಲ್ಯ. ಅಡಮಾನವಾಗಿ ಇರಿಸುತ್ತಿರುವ ಆಸ್ತಿಯು ಕುಟುಂಬದ ಪ್ರಾಥಮಿಕ ವಸತಿ ಕಟ್ಟಡವಾಗಿದ್ದರೆ, ಅದನ್ನು ಅಡಮಾನವಾಗಿ ಇರಿಸುವ ಮೊದಲು ಉದ್ಯಮಿಗಳು ಅದರಲ್ಲಿ ಇರುವ ರಿಸ್ಕ್‌ಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಈ ಎರಡು ಬಗೆಯ ಸಾಲಗಳ ಪೈಕಿ ಯಾವುದೇ ಸಾಲ ಪಡೆಯುವ ಮೊದಲು ಉದ್ಯಮದ ಮಾಲೀಕರು ಐದು ಸರಳ ಪ್ರಶ್ನೆಗಳನ್ನು ತಮಗೆ ತಾವೇ ಕೇಳಿಕೊಳ್ಳಬೇಕು:

- ನನಗೆ ಈ ಸಾಲ ಏಕೆ ಬೇಕು?
- ಈ ಹೂಡಿಕೆಯು ಎಷ್ಟು ತ್ವರಿತವಾಗಿ ವರಮಾನ ತಂದುಕೊಡುತ್ತದೆ?
- ಪ್ರತಿ ತಿಂಗಳ ನಗದು ಹರಿವು ಸಾಲದ ಇಎಂಐ ಮೊತ್ತವನ್ನು ಆರಾಮವಾಗಿ ಪಾವತಿಸಲು ಸಾಕಾಗುತ್ತದೆಯೇ?
- ಸಾಲವಾಗಿ ಪಡೆಯುವ ಹಣವು ಭವಿಷ್ಯದಲ್ಲಿ ಬೆಳವಣಿಗೆಗೆ ಅನುವು ಮಾಡಿಕೊಡುತ್ತದೆಯೇ ಅಥವಾ ಅದು ಈಗಿನ ನಷ್ಟವನ್ನು ತುಂಬುವುದಕ್ಕೆ ಮಾತ್ರವೇ?
- ಉದ್ಯಮದಲ್ಲಿ ಅನಿರೀಕ್ಷಿತವಾಗಿ ಕುಸಿತ ಎದುರಾದರೆ ಅದನ್ನು ನಿಭಾಯಿಸುವ ಸಾಮರ್ಥ್ಯವಿದೆಯೇ?

ಭಾರಿ ಮೊತ್ತವನ್ನು ಸಾಲವಾಗಿ ಪಡೆಯುವ ಉದ್ದಿಮೆಗಳು ಬಹಳ ಆರೋಗ್ಯಕರವಾಗಿ ಇವೆ ಎಂದು ಅರ್ಥೈಸಬೇಕಿಲ್ಲ. ಆದರೆ ಅತ್ಯಂತ ಹೆಚ್ಚಿನ ಶಿಸ್ತಿನಿಂದ ಸಾಲ ಪಡೆಯುವ ಉದ್ದಿಮೆಗಳು ಆರೋಗ್ಯಕರವಾಗಿ ಇರುತ್ತವೆ. ಸಾಲವನ್ನು ಯಾವಾಗಲೂ ಬೆಳವಣಿಗೆಗೆ ನೆರವಾಗುವ ಪಾಲುದಾರ ಎಂಬುದಾಗಿ ಕಾಣಬೇಕೇ ವಿನಾ ಅದನ್ನು ಪುಕ್ಕಟೆಯಾಗಿ ಸಿಗುವ ಹಣ ಎಂದು ತಿಳಿಯಬಾರದು. ವಿವೇಕದಿಂದ ಪಡೆದ ಸಾಲವು ಎಂಎಸ್‌ಎಂಇಗಳಿಗೆ ತಮ್ಮ ಕಾರ್ಯಾಚರಣೆಯನ್ನು ಹೆಚ್ಚಿಸಿಕೊಳ್ಳಲು, ಉದ್ಯೋಗ ಸೃಷ್ಟಿಸಲು ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚುಮಾಡಲು ನೆರವಾಗಬಹುದು. ಇದೇ ಸಂದರ್ಭದಲ್ಲಿ ಸರಿಯಾಗಿ ಆಲೋಚನೆ ಮಾಡದೆ ಪಡೆದ ಸಾಲವು ನಗದು ಹರಿವಿನ ಮೇಲೆ ಕೆಟ್ಟ ಪರಿಣಾಮ ಬೀರಿ, ಭವಿಷ್ಯದಲ್ಲಿನ ಅವಕಾಶಗಳನ್ನು ತಗ್ಗಿಸಬಹುದು.

ದೇಶದ ಎಂಎಸ್‌ಎಂಇ ವಲಯವು ಆರ್ಥಿಕ ಬೆಳವಣಿಗೆಗೆ ಇಂಬು ಕೊಡುವ ಕೆಲಸ ಮಾಡುತ್ತಿದೆ, ಹೊಸ ಆವಿಷ್ಕಾರಗಳಿಗೆ ನೆರವಾಗುತ್ತಿದೆ. ಸರಿಯಾದ ಔದ್ಯಮಿಕ ಅವಕಾಶವನ್ನು ಆಯ್ಕೆ ಮಾಡುವುದು ಎಷ್ಟು ಮುಖ್ಯವೋ ಸರಿಯಾದ ಬಗೆಯ ಸಾಲವನ್ನು ಪಡೆಯುವುದು ಕೂಡ ಅಷ್ಟೇ ಮುಖ್ಯ ಎಂಬುದನ್ನು ಉದ್ಯಮಿಗಳು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಪಡೆಯುವುದು ಬಿಸಿನೆಸ್ ಸಾಲವಾಗಿರಲಿ, ಅಡಮಾನ ಸಾಲವಾಗಿರಲಿ, ಸಾಲದ ಉತ್ಪನ್ನದಲ್ಲಿ ಯಶಸ್ಸು ಅಡಗಿರುವುದಿಲ್ಲ. ಪಡೆದ ಸಾಲವನ್ನು ಸ್ಪಷ್ಟತೆ, ಉದ್ದೇಶ, ಹಣಕಾಸಿನ ಶಿಸ್ತಿನಿಂದ ಬಳಸುವುದರಲ್ಲಿ ಯಶಸ್ಸು ಅಡಗಿದೆ.

ಅತ್ಯಂತ ಒಳ್ಳೆಯ ಸಾಲ ಎಂದರೆ ಅತ್ಯಂತ ತ್ವರಿತವಾಗಿ ಸಿಗುವ ಸಾಲವೇ ಆಗಬೇಕೆಂದಿಲ್ಲ, ಅತ್ಯಂತ ಕಡಿಮೆ ಇಎಂಐ ಮೊತ್ತ ಇರುವ ಸಾಲವೂ ಆಗಬೇಕೆಂದಿಲ್ಲ. ಉದ್ದಿಮೆಯ ದೀರ್ಘಾವಧಿ ಬೆಳವಣಿಗೆಗೆ ಅಡ್ಡಿ ಮಾಡದೆ, ಅದರ ಸುಸ್ಥಿರ ಬೆಳವಣಿಗೆಗೆ ನೆರವಾಗುವ ಸಾಲವೇ ಒಳ್ಳೆಯ ಸಾಲ.

ಈ ಲೇಖನ ಮಾಹಿತಿ ಉದ್ದೇಶಕ್ಕಾಗಿ ಮಾತ್ರ. ಇದು ಸಲಹೆ ಅಲ್ಲ.
ಲೇಖಕ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಹಿರಿಯ ಅಧಿಕಾರಿ


ಭಾರತದಲ್ಲಿ ಡಿಜಿಟಲ್ ವಂಚನೆ ಹೆಚ್ಚು

ಕಳೆದ ಕ್ಯಾಲೆಂಡರ್ ವರ್ಷದಲ್ಲಿ ಡಿಜಿಟಲ್ ವಂಚನೆಯಿಂದ ದೇಶದ ಜನರು ಕಳೆದುಕೊಂಡ ಸರಾಸರಿ ಮೊತ್ತ ₹2.03 ಲಕ್ಷದಷ್ಟಿದೆ (2,265 ಅಮೆರಿಕನ್ ಡಾಲರ್).

ಜಾಗತಿಕ ಮಟ್ಟದಲ್ಲಿ ಈ ಮೊತ್ತವು ಸರಾಸರಿ ₹1.57 ಲಕ್ಷದಷ್ಟಿದೆ. ಇದಕ್ಕೆ ಹೋಲಿಸಿದರೆ ಭಾರತದ ಪ್ರಮಾಣವು ಶೇ 36ರಷ್ಟು ಅಧಿಕವಿದೆ. ಆದರೆ, ಇದೇ ವೇಳೆ ಡಿಜಿಟಲ್ ವಂಚನೆಗೆ ತುತ್ತಾಗುವವರ ಪ್ರಮಾಣ ದೇಶದಲ್ಲಿ ಶೇ 7.1ಕ್ಕೆ ಇಳಿದಿದೆ. 2024ರಲ್ಲಿ ಇದು ಶೇ 13.1ರಷ್ಟಿತ್ತು. ಡಿಜಿಟಲ್ ಸಾಕ್ಷರತೆ, ಶಿಕ್ಷಣ, ಮೊಬೈಲ್ ಸಂಖ್ಯೆ ದೃಢೀಕರಣದಿಂದ (ವೆರಿಫಿಕೇಷನ್) ಈ ಪ್ರಮಾಣ ಇಳಿದಿದೆ. ಜಾಗತಿಕ ಮಟ್ಟದಲ್ಲಿ ಇದು ಸರಾಸರಿ ಶೇ 3.8ರಷ್ಟಿದ್ದರೆ, ಭಾರತದಲ್ಲಿ ದುಪ್ಪಟ್ಟು ಇದೆ ಎಂದು ಟ್ರಾನ್ಸ್‌ಯೂನಿಯನ್ ವರದಿ ತಿಳಿಸಿದೆ.

ಡಿಜಿಟಲ್ ಸುರಕ್ಷತಾ ಕ್ರಮಗಳಿಂದ ವಂಚನೆ ಪ್ರಕರಣಗಳ ಸಂಖ್ಯೆ ಇಳಿದಿವೆ. ಆದರೆ, ವೈಯಕ್ತಿಕ ಮಾಹಿತಿಯನ್ನು ಕಳ್ಳತನ ಮಾಡಿ ವಂಚನೆ ಮಾಡುವ ಪ್ರಕರಣಗಳು ಮತ್ತು ನಂಬಿಕೆ ಹುಟ್ಟಿಸಿ ವಂಚನೆ ಮಾಡುವ ಪ್ರಕರಣಗಳು ಹೆಚ್ಚಿವೆ ಎಂದು ತಿಳಿಸಿವೆ.


ಡಿಜಿಟಲ್ ವಂಚನೆ ಪ್ರಕರಣಗಳು ಈ ಮೂಲದಿಂದ ಆಗಿರಬಹುದು ಎಂಬ ಶಂಕೆ



39% ಇಷ್ಟು ಪ್ರಮಾಣದ ಜೆನ್ ಝೀ ವಯೋಮಾನದವರು ಡಿಜಿಟಲ್ ವಂಚನೆಯಿಂದ ಹಣ ಕಳೆದುಕೊಂಡಿದ್ದಾರೆ

ಜಾಗತಿಕ ಮಟ್ಟದಲ್ಲಿ ಡಿಜಿಟಲ್ ವಂಚನೆಗಳು

(ಶೇಕಡವಾರು)



ವಂಚನೆಗೆ ಪ್ರಮುಖ ಕಾರಣಗಳು

27% ದೂರವಾಣಿ ಕರೆ ಮೂಲಕ ಖಾಸಗಿ ಮಾಹಿತಿಯನ್ನು ಕದಿಯುವ ಹಗರಣ (ವಿಶಿಂಗ್)

26% ಕಳ್ಳಮಾರ್ಗದಲ್ಲಿ ಖಾತೆ ಪ್ರವೇಶ

28% ಗುರುತು ಕಳವು ಮಾಡುವುದು

27% ನಕಲಿ ಜಾಲತಾಣಗಳನ್ನು ಬಳಸಿ ಗ್ರಾಹಕರನ್ನು ವಂಚಿಸುವುದು (ಫಿಶಿಂಗ್)

16% ಕ್ರೆಡಿಟ್ ಕಾರ್ಡ್ ಮಾಹಿತಿಯನ್ನು ಕಳವು ಮಾಡುವುದು

22% ಎಸ್‌ಎಂಎಸ್ ಮೂಲಕ ನಡೆಯುವ ವಂಚನೆ (ಸ್ಮಿಶಿಂಗ್)

21% ಉದ್ಯೋಗಕ್ಕೆ ಸಂಬಂಧಿಸಿದ ವಂಚನೆ

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಬ್ರೋಕರೇಜ್ ಮಾತು

ಸಿದ್ಧ ಉಡುಪು ತಯಾರಿಕಾ ವಲಯದ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್‌ನ ಷೇರಿನ ಬೆಲೆ ₹1,110ಕ್ಕೆ ತಲುಪಬಹುದು ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ತಿಳಿಸಿದೆ.

ಭಾರತ, ಕೀನ್ಯಾ ಮತ್ತು ಇಥಿಯೋಪಿಯಾದಲ್ಲಿ ಕಂಪನಿಯು ದಿರಿಸು ತಯಾರಿಕಾ ಘಟಕಗಳನ್ನು ಹೊಂದಿದ್ದು, ವಾರ್ಷಿಕವಾಗಿ 9.2 ಕೋಟಿಯಷ್ಟು ಉಡುಪು ತಯಾರಿಸುತ್ತದೆ. ಈ ಪೈಕಿ 5.2 ಕೋಟಿ ಭಾರತದಲ್ಲಿ ಮತ್ತು 4 ಕೋಟಿ ಪೂರ್ವ ಆಫ್ರಿಕಾದ ಅಟ್ರಾಕೊದಲ್ಲಿ ತಯಾರಾಗುತ್ತದೆ.

ಕಂಪನಿಯು ಬಿಆರ್‌ಎಫ್‌ಎಲ್ ಟೆಕ್ಸ್‌ಟೈಲ್ಸ್ ಪ್ರೈವೆಟ್ ಲಿಮಿಟೆಡ್‌ನಲ್ಲಿ (ಬಿಟಿಪಿಎಲ್) ಶೇ 19ರಷ್ಟು ಷೇರು ಹೊಂದಿದೆ. ಇದು ಕಂಪನಿಯ ವಹಿವಾಟಿಗೆ ಸದೃಢತೆ ನೀಡುತ್ತಿದೆ. 2025-26ರಿಂದ 2027–28ರ ಆರ್ಥಿಕ ವರ್ಷದವರೆಗೆ ದೇಶದ ಗಾರ್ಮೆಂಟ್ಸ್ ಉದ್ಯಮದ ಬೆಳವಣಿಗೆಯು ವಾರ್ಷಿಕ ಶೇ 10ರಷ್ಟು ಆಗುವ ನಿರೀಕ್ಷೆ ಇದ್ದು, ಲಾಭದ ಪ್ರಮಾಣವು ಶೇ 12ರಿಂದ ಶೇ 13ರಷ್ಟು ಇರಬಹುದು.

ಅಟ್ರಾಕೊ ಇದೇ ಅವಧಿಯಲ್ಲಿ ಶೇ 26ರಷ್ಟು ಪ್ರಗತಿ ಸಾಧಿಸಬಹುದು. 2027-28ರ ವೇಳೆಗೆ ಬಿಟಿಪಿಎಲ್ ₹660 ಕೋಟಿ ವರಮಾನ ಪಡೆಯಲಿದೆ.

2025–26ರಿಂದ 2027–28ರ ಆರ್ಥಿಕ ವರ್ಷದ ಅವಧಿಯಲ್ಲಿ ಕಂಪನಿಯ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇ 18ರಷ್ಟು, ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನವು (ಇಬಿಐಟಿಡಿಎ) ಶೇ 33 ಎಂದು ಹೇಳಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆಯು ₹861 ಆಗಿದೆ.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಸಮಾಜ ಅಧ್ಯಯನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಕನ್ನಡ ಮಾಧ್ಯಮ

Second Language ENGLISH
Unit-2 PROSE

There's a Girl by the Tracks!

12) The Dalai Lama says, "Love and Compassion are the true religions to me. But to develop this, we do not need to believe in any religion," Does this relate to the lesson "There is a Girl by the Tracks". How? Discuss with your friends.

Ans: Sage Dalai Lama's words are very true in relation to the lesson "There is a Girl by the Tracks". Let us see the key characters in this lesson. Roma, Baleshwar, ***(…Contd)*** tempo driver and the doctor. Baleshwar, tempo driver and the doctor help Roma beyond call their normal duty, even when they did not know the religion of Roma, they even did not know her! For, all of them love and compassion was true religion. Hence, Baleshwar impulsively pulls emergency stop chain, rushes to help Roma when co passenger do not respond to his request to help her, jumps out from running train, carry her for a long distance without his slippers over bitumen and tracks, tries to stop innumerable vehicles in vain, finds hospital better than cop. Similarly a tempo driver stops his vehicle and carries Roma to hospital and leaves the place without taking even a thanks. The doctor seeing Roma's injury admits her to ICU without any paper work for a quick treatment. It is love and compassion of these three gentlemen that Roma survives.

Enrich your vocabulary

Task 1: Verbs related to different actions are given below. Pick them and put them in their respective columns. Note that some words may fit into more than one column. Refer to a dictionary if necessary.

Tell, grab, pray, squeeze, glance, hurtle, observe, chat, snatch, plead, peep, utter, had beg, shove, talk, clutch, implore, rush. Stare, hold, appeal, dash, gaze, articulate, run

Words related to

Observing	Moving	Holding	Speaking	Requesting
1	1	1	1	1
2	2	2	2	2
3	3	3	3	3
4	4	4	4	4
5	5	5	5	5
6	6	6	6	6

Ans:-

Enrich your vocabulary

Observing	Moving	Holding	Speaking	Requesting
Glance	Rush	Grab	Tell	Pray
Peep	*Dash*	*Snatch*	*Chat*	*Plead*
Stare	*Run*	*Had*	*Talk*	*Beg*
Gaze	*Hurtle*	*Clutch*	*Utter*	*Appeal*
	Shove	*Squeeze*	*Talk*	*Implore*
		Hold	*Articulate*	

Task-2: Use the above words meaningfully to fill in the blanks in the following sentences. You can change the form of the word if required.

1. Five of us ……... ourselves into the back seats.
Ans: squeezed
2. English people love to……... about the weather.
Ans: chat
3. Arun …... Shaila close and wiped away her tears.
Ans: held
4. I haven't ……….to Steve about all this.
Ans: talked
5. All club members have been ……….to attend the annual meeting.
Ans: appealed
6. Sudha ………………. over her shoulder.
Ans: glanced
7. The thief has ……… her purse and ran away.
Ans: snatched
8. Would you mind going to …….……… the kids from school?
Ans: bring
9. Veena ………. me to fetch water.
Ans: gazed
10. Many people are unable to ………. the unhappiness they feel.
Ans: Utter

Look at these sentences used in the text, as also the phrases underlined.

*. 'Who can I call?' asked Baleshwar fearing she would <u>black out</u> once more. (para - 13)
*A nurse helped him to <u>take the woman in</u>.(Para-12)
* Dinesh was <u>wrapping</u> up his day's work when his phone rang. (Para - 14)

Look at the underlined words. Their meanings are different from the ordinary meanings of each separate word. For example **<u>black out</u>** means lose consciousness, **<u>take the woman in</u>** means **<u>admite the women</u>** and **<u>wrapping up</u>** means **<u>closing the business</u>**.

Task 3: A paragraph is given below based on the text. Some words are underlined. Substitute these words with the phrases and idioms making use of the clues given in brackets with necessary changes or additions.

Baleshwar Mishra was a bold young man. Even when <u>his life was at risk</u> (face-to-face……death), he never had a second thought. Rather he <u>determined</u> (make….mind) to save the life of the girl. He was doing all he could do, while others stood watching him <u>silently</u> (tongue tie). None <u>supported</u> (back…..up) except a tempo truck driver. After a while, he carried the girl to a hospital and <u>forced</u> (arm twist) the duty doctor to admit the girl. "What can we make out from this incident?" Some people like Baleshwar <u>remain undisturbed</u> (keep cool) in moments of crisis.

ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

REPRODUCTION

Human Reproduction

4. Mention some of the differences between Morula and Blastocyst.

Ans:- Differences between Morula & Blastocyst

Morula	*Blastocyst*
1. It is a solid ball of cells called blastomeres.	It is a hollow ball of cells due to development of a blastocoel.
2. All the cells are similar.	There are atleast two types of cells, trophoblast and inner cell mass.
3. All the cells are nearly rounded.	Some cells are flat while others are rounded.
4. Zona pellucida forms a tight covering around the morula.	Zona pollucida is stretched and liable to break.
5. Morula is early stage in embryo development.	It is later stage in embryo development.
6. The size is the same as that of egg.	The size is larger.
7. Divisions are nearly synchronous	Synchrony is absent in division of cells.

5. What is Chorion? What are its functions?

Ans:- Chorion is the outermost foetal membrane which is formed by the outer layer of trophoblast. It forms villi and other foetal parts of placenta.

The functions of Chorion are –

(a) It forms the foetal part of placenta.
(b) It provides attachment to foetus.
(c) Foetus obtains nutrients from the mother through chorionic structures.
(d) Excretory materials of the foetus are transferred to mother's blood through chorion.
(e) It is the site of exchange of gases between foetus and the mother.

6. What is Amnion? What are its functions?

Ans:- Amnion is the innermost foetal membrane which is formed by the inner layer of trophoblast. It lies immediately around the embryo. It encloses a cavity called amniotic cavity. The cavity is filled with a clear fluid called the amniotic fluid.

The functions of Amnion are –

(a) Amniotic fluid surrounds the embryo. It protects the embryo from any injury by functioning as shock absorber. Amniotic fluid regulates pressure and temperature around the embryo.
(b) It prevents desiccation of the embryo.
(c) It allows for growth and movement of the foetus.
(d) Amniotic fluid can be taken out with the help of a needle and studied for foetal cells so as to know the genetic defects, if any.

7. Mention some of the differences between Blastula and Gastrula.

Ans:- Differences between Blastula & Gastrula

Blastula	*Gastrula*
1. It is early stage of embryo.	It is later stage of embryo.
2. It contains a cavity called blastocoel.	It contains a cavity called archenteron.
3. The embryo is single layered.	The embryo comes to have three layers.
4. There are no cell movements.	A lot of cell movements occur in gastrula stage.

8. What is Allantois?

Ans:- Allantois is a membrane lined small sac which develops from embryonic gut close to yolk sac. It forms blood vessels for the placenta. Because of it, human placenta is called chorioallantoic.

9. What is Yolk Sac?

Ans:- Yolk Sac is a membrane lined sac which develops from the embryonic gut. The sac contains yolk in egg laying animals. It is non-functional in mammals where yolk is not stored. It contains a clear fluid which is believed to help in the synthesis of blood corpuscles in the early embryo before the function is taken up by liver. It shrinks afterwards.

Multiple Choice questions:-

1. Role of placenta is to
A) Provide nutrition to developing embryo
B) Protect embryo from shock
C) Act as storage organ
D) Convey nerve impulses

2. In mammals, failure of testis to descend into the scrotum is known as
A) Paedogenesis
B) Castration
C) Cryptrochidism
D) Impotency

3. Gastrulation involves the differentiation of
A) Ectoderm and endoderm
B) Ectoderm, endoderm & mesoderm
C) Ectoderm and mesoderm
D) Mesoderm and endoderm

4. Eutherian placenta is derived from
A) Allantois B) Amnion
C) Chorion and allantois
D) Yolk sac

(Contd…)

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅತ್ಯುತ್ತಮ ಪುಸ್ತಕಗಳು ನಾಡಿನ ಸಂಸ್ಕೃತಿಯ ಪ್ರತೀಕ.

–ಜವಾಹರಲಾಲ್ ನೆಹರೂ

ಸಂಪಾದಕೀಯ

ವ್ಯಕ್ತಿ ಘನತೆ ರಕ್ಷಣೆಗೆ ಪೊಲೀಸ್ ಒತ್ತು ಕರ್ತವ್ಯಲೋಪ ಸರಿಪಡಿಸುವ ಕ್ರಮ

ಖಾಸಗಿ ಕ್ಷಣಗಳ ಛಾಯಾಚಿತ್ರಗಳು ಅಥವಾ ವಿಡಿಯೊಗಳನ್ನು ಅನುಮತಿ ಇಲ್ಲದೆ ಪ್ರಕಟಿಸುವ ಅಥವಾ ಪ್ರಸಾರ ಮಾಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತಕ್ಷಣವೇ ಪ್ರಥಮ ಮಾಹಿತಿ ವರದಿ (ಎಫ್ಐಆರ್) ದಾಖಲಿಸಬೇಕು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಅವರು ನೀಡಿರುವ ಮಾರ್ಗಸೂಚಿ ಸಹಿತ ಆದೇಶವು ಬಹಳ ಹಿಂದೆಯೇ ಜಾರಿಗೆ ಬರಬೇಕಾಗಿದ್ದ ಹಾಗೂ ಪ್ರಸ್ತುತ ವಿಳಂಬವಿಲ್ಲದೆ ಜಾರಿಗೊಳ್ಳಬೇಕಾದ ಕ್ರಮವಾಗಿದೆ. ಫೋಟೊ ತೆಗೆಯುವುದಕ್ಕೆ ಅಥವಾ ಚಿತ್ರೀಕರಣಕ್ಕೆ ಸಮ್ಮತಿ ಇತ್ತು ಎನ್ನುವ ಕಾರಣದಿಂದ, ಖಾಸಗಿ ಛಾಯಾಚಿತ್ರ–ವಿಡಿಯೊಗಳ ಪ್ರಸಾರದ ಸಂದರ್ಭದಲ್ಲಿ ಪ್ರಕರಣ ದಾಖಲಿಸಿಕೊಳ್ಳಲು ಪೊಲೀಸರು ಹಿಂಜರಿಯುತ್ತಿದ್ದರು. ಈ ಹೊಣೆಗಾರಿಕೆಯ ಗಂಭೀರ ಲೋಪವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಲೀಂ ಅವರ ಪ್ರಯತ್ನಕ್ಕೆ ಮಹತ್ವವಿದೆ. ಫೋಟೊ ಅಥವಾ ವಿಡಿಯೊ ತೆಗೆಯಲು ನೀಡಿದ ಸಮ್ಮತಿಯು ಅದನ್ನು ಹಂಚಿಕೊಳ್ಳಲಿಕ್ಕೆ ಅಥವಾ ಪ್ರಸಾರ ಮಾಡಲಿಕ್ಕೆ ನೀಡಿದ ಒಪ್ಪಿಗೆಯಲ್ಲ ಎನ್ನುವ ಮೂಲಭೂತ ಕಾನೂನು ತತ್ತ್ವವನ್ನು ಪೊಲೀಸ್ ಮಹಾನಿರ್ದೇಶಕರ ಆದೇಶ ಸರಿಯಾಗಿ ಗ್ರಹಿಸಿದೆ. ಇಂಥದ್ದೊಂದು ಸ್ಪಷ್ಟೀಕರಣ ಅಗತ್ಯವಾಗಿತ್ತು ಎನ್ನುವುದೇ ಅಚ್ಚರಿಯ ಸಂಗತಿ. ಭಾರತೀಯ ನ್ಯಾಯಸಂಹಿತೆ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯ ವ್ಯಾಪ್ತಿಗೆ ಬರುವ ಈ ಪ್ರಕರಣಗಳು ಸಂಜ್ಞೇಯ ಅಪರಾಧಗಳಾಗಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನಿನಲ್ಲಿ ಯಾವುದೇ ಗೊಂದಲವಿಲ್ಲ. ಸಂಜ್ಞೇಯ ಅಪರಾಧದ ಮಾಹಿತಿ ದೊರೆತಾಗ ಎಫ್ಐಆರ್ ದಾಖಲಿಸಲೇಬೇಕು ಎನ್ನುವುದು ಪ್ರತಿ ಪೊಲೀಸ್ ಅಧಿಕಾರಿ ತಿಳಿದಿರಬೇಕಾದ ಸಂಗತಿಯಾಗಿದೆ. ದೂರು ದಾಖಲಿಸಿಕೊಳ್ಳುವುದನ್ನು ನಿರಾಕರಿಸುವುದು ಅಥವಾ ಸಂತ್ರಸ್ತರು ಠಾಣೆಯಿಂದ ಠಾಣೆಗೆ ಅಲೆಯುವ ಪರಿಸ್ಥಿತಿ ಸೃಷ್ಟಿಸುವುದು ಅಸೂಕ್ಷ್ಮ ವರ್ತನೆ ಮಾತ್ರವಲ್ಲ, ಕರ್ತವ್ಯಲೋಪವೂ ಆಗಿದೆ.



ವ್ಯಕ್ತಿಯ ಖಾಸಗಿತನ ಮತ್ತು ಘನತೆ ರಕ್ಷಿಸುವ ಪ್ರಯತ್ನಗಳಲ್ಲಿ ಪೊಲೀಸರ ಕಾನೂನು ಕ್ರಮದೊಂದಿಗೆ, ಸಾಮಾಜಿಕ ಜಾಲತಾಣ ಸಂಸ್ಥೆಗಳ ತಕ್ಷಣದ ಪ್ರಾಮಾಣಿಕ ಸ್ಪಂದನವೂ ಅಗತ್ಯ.

ಕರ್ನಾಟಕ ಪೊಲೀಸರು ತಪ್ಪು ಕಾರಣಗಳಿಗಾಗಿ ಪದೇ ಪದೇ ಸುದ್ದಿಯಾಗುತ್ತಿರುವುದು ದುರದೃಷ್ಟಕರ. ನ್ಯಾಯಾಲಯಗಳ ಸ್ಪಷ್ಟ ತೀರ್ಪುಗಳು ಹಾಗೂ ಕಾನೂನು ಹೊಣೆಗಾರಿಕೆ ಇದ್ದರೂ ಎಫ್ಐಆರ್ ದಾಖಲಿಸಲು ಪೊಲೀಸರು ನಿರಾಕರಿಸುವುದರ ಬಗ್ಗೆ ದೂರುಗಳು ಆಗಾಗ್ಗೆ ವರದಿಯಾಗುತ್ತಿವೆ. ಇಂಥ ನಿರಾಕರಣೆಗಾಗಿ ಎಷ್ಟು ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗಿದೆ ಎನ್ನುವುದನ್ನು ಸರ್ಕಾರ ಬಹಿರಂಗಪಡಿಸಬೇಕು. ಆದೇಶಗಳ ಜೊತೆಗೆ ಉತ್ತರದಾಯಿತ್ವ ಇಲ್ಲದೆ ಹೋದರೆ, ಅತ್ಯುತ್ತಮ ಆದೇಶಗಳು ಕಾಗದದ ಮೇಲಷ್ಟೇ ಉಳಿಯುತ್ತವೆ. ನಿಷ್ಕ್ರಿಯತೆಯ ಪರಿಣಾಮಗಳು ಗಂಭೀರವಾಗಿರಬಹುದು, ವಿಶೇಷವಾಗಿ ಮಹಿಳೆಯರಿಗೆ ಹೆಚ್ಚಿನ ಗಾಸಿ ಉಂಟುಮಾಡಬಹುದು. ಸಮ್ಮತಿಯಿಲ್ಲದೆ ಬಹಿರಂಗಪಡಿಸಲಾದ ಖಾಸಗಿ ಕ್ಷಣಗಳ ಒಂದು ಛಾಯಾಚಿತ್ರ ಅಥವಾ ವಿಡಿಯೊ ವ್ಯಕ್ತಿಯ ಗೌರವ, ವೃತ್ತಿ ಹಾಗೂ ಸಂಬಂಧಗಳನ್ನು ಹಾಳುಮಾಡಬಲ್ಲದು. ಸಂತ್ರಸ್ತರು ಅವಮಾನ, ಮಾನಸಿಕ ಒತ್ತಡ, ಸೈಬರ್ ಸ್ಟಾಕಿಂಗ್ ಮತ್ತು ಬ್ಲ್ಯಾಕ್‌ಮೇಲ್‌ಗೆ ಒಳಗಾಗುವ ಸಾಧ್ಯತೆಯೂ ಇದೆ. ಡೀಪ್‌ಫೇಕ್ ಹಾಗೂ ಡಿಜಿಟಲ್ ತಂತ್ರಜ್ಞಾನದಿಂದ ಮಾರ್ಪಡಿಸಲಾದ ವಿಷಯಗಳು ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸಬಹುದು; ಘಟಿಸದ ದೃಶ್ಯಗಳನ್ನು ದುರುದ್ದೇಶದಿಂದ ಸೃಷ್ಟಿಸುವ ಘಟನೆಗಳಲ್ಲಿ ಸಂತ್ರಸ್ತರು ಬಲಿಪಶುಗಳಾಗಬಹುದು. ಸಾಮಾಜಿಕ ಜಾಲತಾಣಗಳ ಕಾಲಘಟ್ಟದಲ್ಲಿ ಒಂದು ಪೋಸ್ಟ್ ಪ್ರಕಟಗೊಂಡ ಕೆಲವೇ ನಿಮಿಷಗಳಲ್ಲಿ ಲಕ್ಷಾಂತರ ಜನರನ್ನು ತಲಪಬಲ್ಲದು. ಅದರಿಂದ ಉಂಟಾಗುವ ಹಾನಿಯನ್ನು ಸರಿಪಡಿಸುವುದು ಅಸಾಧ್ಯ.

ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 79ರ ಅನ್ವಯ, ಬಳಕೆದಾರರು ಪ್ರಕಟಿಸುವ ವಿಷಯಗಳಿಗೆ ಸಂಬಂಧಿಸಿದ ನೇರ ಹೊಣೆಗಾರಿಕೆಯಿಂದ ಡಿಜಿಟಲ್ ವೇದಿಕೆಗಳಿಗೆ ದೊರೆಯುವ 'ಸೇಫ್ ಹಾರ್ಬರ್' ರಕ್ಷಣೆಯು ಸಮಸ್ಯೆ ಸಂಕೀರ್ಣಗೊಳ್ಳಲು ಕಾರಣವಾಗಿದೆ. ಮೂರನೇ ವ್ಯಕ್ತಿಗಳು ಪ್ರಕಟಿಸುವ ಅಥವಾ ಪ್ರಸಾರ ಮಾಡುವ ವಿಷಯಕ್ಕೆ ಸಂಬಂಧಿಸಿದ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ವೇದಿಕೆಗಳು, ಅದೇ ಅಪಾಯಕಾರಿ ವಿಷಯಗಳಿಂದ ಲಾಭ ಮಾಡಿಕೊಳ್ಳುತ್ತವೆ. ವೇದಿಕೆಗಳಿಂದ ಕಾನೂನುಬಾಹಿರ ವಿಷಯಗಳನ್ನು ತೆಗೆದುಹಾಕುವಂತೆ ಸಂತ್ರಸ್ತರು ಮನವಿ ಮಾಡಿಕೊಂಡ ಸಂದರ್ಭಗಳಲ್ಲಿ, ಸ್ವಯಂಚಾಲಿತ ಉತ್ತರಗಳು ಎದುರಾಗುತ್ತವೆ ಹಾಗೂ ಮನವಿಗೆ ಸಂಬಂಧಿಸಿದ ಪ್ರತಿಕ್ರಿಯೆ ವಿಳಂಬದಿಂದ ಕೂಡಿರುತ್ತದೆ. ಇಂಥ ಪ್ರಕರಣಗಳಲ್ಲಿ ಎಫ್ಐಆರ್ ದಾಖಲಿಸುವುದು ಕಾನೂನು ಕ್ರಮದ ಮೊದಲ ಹೆಜ್ಜೆಯಾಗಿರುತ್ತದೆ. ದೂರು ಸ್ವೀಕರಿಸಿದ ಕ್ಷಣದಿಂದಲೇ ಪೊಲೀಸರು ಸಂಬಂಧಿಸಿದ ವೇದಿಕೆಗಳನ್ನು ಸಂಪರ್ಕಿಸಿ, ಕಾನೂನುಬಾಹಿರ ವಿಷಯವನ್ನು ತೆಗೆದುಹಾಕುವಂತೆ ಸೂಚಿಸಬೇಕಾಗಿದೆ. ಈ ಪ್ರಕ್ರಿಯೆಯಲ್ಲಿ ಆಗಬಹುದಾದ ಪ್ರತಿ ನಿಮಿಷದ ವಿಳಂಬ ಹಾನಿಕಾರಕ ವಿಷಯವು ಹೆಚ್ಚು ಜನರನ್ನು ತಲಪುವಂತೆ ಮಾಡುತ್ತದೆ. ಪ್ರಮುಖ ಸಾಮಾಜಿಕ ಜಾಲತಾಣಗಳು ಕಾನೂನು ಜಾರಿ ಸಂಸ್ಥೆಗಳೊಂದಿಗೆ ದಿನದ ಎಲ್ಲ ಸಮಯದಲ್ಲೂ ಸಮನ್ವಯ ಹೊಂದುವುದಕ್ಕಾಗಿ ವಿಶೇಷ ಸಂಪರ್ಕಾಧಿಕಾರಿಗಳನ್ನು ರಾಜ್ಯಗಳಲ್ಲಿ ನೇಮಿಸುವುದು ಅಗತ್ಯ. ಡಿಜಿಟಲ್ ಕಾಲಘಟ್ಟದಲ್ಲಿ ವ್ಯಕ್ತಿಯ ಖಾಸಗಿತನ ಮತ್ತು ಘನತೆಯನ್ನು ರಕ್ಷಿಸಲು ಪೊಲೀಸರ ಕಾನೂನು ಕ್ರಮ ಮಾತ್ರವಲ್ಲ, ತಂತ್ರಜ್ಞಾನ ಸಂಸ್ಥೆಗಳ ಸಮಾನ ವೇಗದ ಸಹಕಾರವೂ ಅಗತ್ಯವಾಗಿದೆ.

ಚಾಲಡಣ (ಚಾವಡಿ)

ಸ್ಥಳೀಯ ಸಂಸ್ಕೃತಿಗಳ ಸ್ಪರ್ಶ



ಕಾರ್ಕಳದಲ್ಲಿ ಇರುವ ರಂಗಾಯಣಕ್ಕೆ 'ಯಕ್ಷ' ಪದವನ್ನು ಸೇರಿಸಿ 'ಯಕ್ಷ ರಂಗಾಯಣ' ಎಂದು ಮಾಡಲಾಗಿತ್ತು. ಈಗ ಆ ಹೆಸರನ್ನು 'ಕರಾವಳಿ ರಂಗಾಯಣ' ಎಂದು ಸರಿಯಾಗಿಯೇ ಬದಲಾಯಿಸಲಾಗಿದೆ. ಇದರಿಂದ ಯಕ್ಷಗಾನಕ್ಕೇನೂ ಅವಮಾನವಾಗಿಲ್ಲ. ಏಕೆಂದರೆ, ಯಕ್ಷಗಾನಕ್ಕೂ ಸರ್ಕಾರ ಒಂದು ಅಕಾಡೆಮಿ ಮಾಡಿದೆ. ಈ ಬಗೆಯ ಪ್ರಾದೇಶಿಕ ರಂಗಾಯಣಗಳು ಆಯಾ ಪ್ರದೇಶದ ಸ್ಥಳೀಯ ಸಂಸ್ಕೃತಿಗಳನ್ನು ಒಳಗೊಂಡು ಬೆಳೆಯಬೇಕಾಗಿದೆ.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕಿಡಿನುಡಿ



'ಉಡ್ತಾ ಪಂಜಾಬ್' ರೀತಿಯಲ್ಲಿ 'ಉಡ್ತಾ ಕರ್ನಾಟಕ' ಆಗುವ ಸಾಧ್ಯತೆ ಹೆಚ್ಚಾಗುತ್ತಿದೆ. ಡ್ರಗ್ ಪೆಡ್ಲರ್‌ಗಳು ರಾಜ್ಯವನ್ನು ಹಾಳುಗೆಡುವುತ್ತಿದ್ದರೆ, ಗೃಹ ಸಚಿವರು ಇದ್ಯಾವುದೂ ತನ್ನ ಜವಾಬ್ದಾರಿಯಲ್ಲ ಎನ್ನುವಂತಿದ್ದಾರೆ. ಗೃಹ ಸಚಿವರಿಗೆ ಅವರ ಜವಾಬ್ದಾರಿಯನ್ನು ನೆನಪಿಸಬೇಕಾಗಿ ಬರುತ್ತಿರುವುದು ರಾಜ್ಯದ ದುರ್ದೈವ.

ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 25-6-2001

● ನಕ್ಸಲೀಯರ ಸೆರೆ, ಶಸ್ತ್ರಾಸ್ತ್ರ ವಶ

ರಾಯಚೂರು, ಜೂ. 24– ನಕ್ಸಲೀಯ ಸಂಘಟನೆಯನ್ನು ಬಲಪಡಿಸಿ ಸರ್ಕಾರದ ವಿರುದ್ಧ ಸಶಸ್ತ್ರ ಹೋರಾಟ ನಡೆಸಲು ಸಿದ್ಧತೆ ನಡೆಸುತ್ತಿದ್ದ ನಾಲ್ವರು ನಕ್ಸಲೈಟ್‌ಗಳನ್ನು ಪೊಲೀಸರು ಭಾನುವಾರ ಬೆಳಗ್ಗೆ ಬಂಧಿಸಿ ಶಸ್ತ್ರಾಸ್ತ್ರ ವಶಪಡಿಸಿಕೊಂಡಿದ್ದಾರೆ.

ನಾಗರಸಿ ಕ್ಯಾಂಪ್‌ನ ಡಬ್ಬಲ ಸವಾರಪ್ಪ ಹನುಮಂತಪ್ಪ, ಸಾಲಿ ಹನುಮಂತ ಅಲಿಯಾಸ್ ಹನುಮಂತ ತಂದೆ ಬೂಪಣ್ಣ, ಪೋತಲ ಜಂಗ್ಲಪ್ಪ ಅಲಿಯಾಸ್ ಜಗದೀಶ್ ತಂದೆ ಪೋತಲ ಸವಾರೆಪ್ಪ ಹಾಗೂ ಗೋಸ್ಬುರಿ ಪೆದ್ದಸವಾರಪ್ಪ ತಂದೆ ಹನುಮಣ್ಣ ಎಂಬುವವರೇ ಬಂಧಿತರು.

ಬಂಧಿತರು ಚಂದ್ರಬಂಡಂ ದಳಂಗೆ ಸೇರಿದವರು ಎನ್ನಲಾಗಿದೆ.

75 ವರ್ಷಗಳ ಹಿಂದೆ

ಸೋಮವಾರ, 25-6-1951

● ಜಿಲ್ಲಾ ನ್ಯಾಯಾಧೀಶರ ಸಂಬಳ 1,200 ರೂ.: ನಿರ್ಣಯ

ಮದರಾಸ್, ಜೂ. 24– ಜಿಲ್ಲಾ ನ್ಯಾಯಾಧೀಶರುಗಳ ಮಾಹೆಯಾನ ಸಂಬಳವು 1,200ರಿಂದ 1,800ರ ವರೆಗೆ ಗೊತ್ತು ಮಾಡಲ್ಪಡಬೇಕೆಂದು ಸಂಸ್ಥಾನ ಸರ್ಕಾರವನ್ನು ಮತ್ತು ಶ್ರೇಷ್ಠ ನ್ಯಾಯಸ್ಥಾನವನ್ನೂ ಒತ್ತಾಯಪಡಿಸಿ ಮದರಾಸ್ ಸಂಸ್ಥಾನದ ನ್ಯಾಯಸ್ಥಾನ ಸಂಬಂಧದ ಅಧಿಕಾರಿಗಳ ಸಮ್ಮೇಳನವು ನಿರ್ಣಯ ಮಾಡಿದೆ.

ಸಬ್ ಜಡ್ಜ್‌ಗಳ ಮತ್ತು ಜಿಲ್ಲಾ ನ್ಯಾಯಾಧೀಶರುಗಳ ಅಧಿಕಾರಗಳನ್ನು ಒಂದುಗೂಡಿಸಿ ಜಿಲ್ಲಾ ನ್ಯಾಯಾಧೀಶರುಗಳಿಗೆ ಈ ಕೆಲಸಕ್ಕಾಗಿ 150 ರೂಪಾಯಿಗಳನ್ನು ವಿಶೇಷ ಸಂಬಳವನ್ನಾಗಿ ಕೊಡಬೇಕೆಂದು ಇನ್ನೊಂದು ನಿರ್ಣಯ ಮಾಡಲಾಯಿತು.

ಉದ್ಯೋಗ ನಿರಾಕರಣೆ ಗುರಿಯೆ?

ವಿಶ್ಲೇಷಣೆ

ಶಾರದಾ ಗೋಪಾಲ, ಚಕ್ರಧರ ಬುದ್ಧ

ಗ್ರಾಮೀಣ ಜನರಿಗೆ ಉದ್ಯೋಗ ಕೊಟ್ಟು ಅವರನ್ನು ಅವರ ಊರುಗಳಲ್ಲಿಯೇ ನೆಲೆಗೊಳಿಸಿ ಬದುಕನ್ನು ಕಟ್ಟಿಕೊಳ್ಳಲು ಪೂರಕವಾಗಿದ್ದ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ' (ಮನರೇಗಾ) ಯೋಜನೆ, ಉದ್ಯೋಗ ಭದ್ರತೆಯ ಜೊತೆಗೆ ಸಾಮಾಜಿಕ ನ್ಯಾಯದ ಸಂಕೇತವೂ ಆಗಿತ್ತು. ಈ ಕಾಯ್ದೆಯನ್ನು ಕಿತ್ತೊಗೆದು, ಅದಕ್ಕೆ ಪರ್ಯಾಯವಾಗಿ ಬಂದಿರುವ 'ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಆಜೀವಿಕ ಮಿಷನ್' (ವಿಬಿ–ಜಿ ರಾಮ್ ಜಿ) ಸ್ವರೂಪ ಹೇಗಿರಬಹುದೆನ್ನುವ ಕುತೂಹಲ ದೇಶದಲ್ಲೆಡೆ ಇದೆ. ಹಳೆಯ ಕಾನೂನೇ ಇರಲಿ ಎಂದು ದೇಶದಾದ್ಯಂತ ಹೋರಾಟಗಳು ನಡೆದರೂ, ಕೆಲವು ರಾಜ್ಯ ಸರ್ಕಾರಗಳು ಹೊಸ ಕಾನೂನನ್ನು ತಿರಸ್ಕರಿಸಿದರೂ, ಕಾನೂನು ಬದಲಾವಣೆಯ ತನ್ನ ನಿಲುವಿಗೆ ಕೇಂದ್ರ ಸರ್ಕಾರ ಅಂಟಿಕೊಂಡಿದೆ. ಚರ್ಚೆಗೂ ಅವಕಾಶವಿಲ್ಲದಂತೆ ರೂಪುಗೊಂಡ ಹೊಸ ಕಾನೂನಿಗೆ ನಿಯಮಾವಳಿಗಳ ರೆಕ್ಕೆಪುಕ್ಕವಿಲ್ಲದೇ ಮೂರು ತಿಂಗಳು ಕಳೆದೇಹೋಯಿತು.

ಜೂನ್ 21ರೊಳಗಾಗಿ ಸಾರ್ವಜನಿಕರು ತಮ್ಮ ಅಭಿಪ್ರಾಯ, ಸಲಹೆ, ಸೂಚನೆಗಳನ್ನು ನೀಡಬಹುದೆಂದು ಹೇಳಿ 'ವಿಬಿ–ಜಿ ರಾಮ್ ಜಿ' ಯೋಜನೆಗೆ ನಿಯಮಾವಳಿಗಳನ್ನು ಮೇ 23ರಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿತ್ತು. ಜುಲೈ 1ರಿಂದ ಹೊಸ ಕಾಯ್ದೆ ಜಾರಿಗೆ ಬರುತ್ತದೆ ಎಂದು ಕೂಡ ಅದೇ ಉಸಿರಿನಲ್ಲಿ ಹೇಳಿತು. ಅಂದರೆ, ಸಾರ್ವಜನಿಕರ ಸಲಹೆಗಳನ್ನು ಪರಿಗಣಿಸಲು ಒಂದು ತಿಂಗಳು ಕೂಡ ಸಮಯವಿಲ್ಲ!

ಉದ್ಯೋಗಕ್ಕಾಗಿ ಅರ್ಜಿ ಕೊಟ್ಟಾಗ ಸ್ವೀಕಾರವಾಗುತ್ತದೆ, ಮಾಡಿದ ಕೆಲಸಕ್ಕೆ ಸರಿಯಾದ ಸಮಯಕ್ಕೆ ಹಣ ಪಾವತಿಯಾಗುತ್ತದೆ ಮತ್ತು ಅದಕ್ಕೆ ಸರ್ಕಾರ ಬೆಂಬಲವಾಗಿ ನಿಲ್ಲುತ್ತದೆ ಎಂಬ ಖಾತರಿ, ಭರವಸೆಯನ್ನು ಹೊಸ ಕಾನೂನು ನೀಡಬೇಕಾಗಿತ್ತು. ಈಗ ಹೊರಬಿದ್ದಿರುವ ನಿಯಮಾವಳಿಗಳನ್ನು ಅವಲೋಕಿಸಿದರೆ, ಅಂತಹ ಭರವಸೆಯೇನೂ ಕಾಣಿಸುತ್ತಿಲ್ಲ. ಬದಲಿಗೆ, ಕೂಲಿ ಕಾರ್ಮಿಕರ ಮೇಲೆ ಅಪನಂಬಿಕೆ ಕಾಣಿಸುತ್ತಿದೆ. ನೂರೆಂಟು ನಿಯಮಗಳು ಕಿಕ್ಕಿರಿದಿದ್ದು, ಉದ್ಯೋಗದ ಹಕ್ಕಿನ ಜಾಗದಲ್ಲಿ ಅಧಿಕಾರಿಗಳ ನಿಯಂತ್ರಣವೇ ಖಾತರಿಯಾಗಿ ಬಂದು ಕುಳಿತಿದೆ. 'ಮನರೇಗಾ' ಯೋಜನೆಯಲ್ಲಿ, ಕೆಲಸ ಕೊಡದಿದ್ದರೆ ಅಥವಾ ಸಂಬಳವನ್ನು ಸರಿಯಾದ ಸಮಯಕ್ಕೆ ಪಾವತಿ ಮಾಡದಿದ್ದರೆ ತಪ್ಪಿತಸ್ಥ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ, ಅವರಿಗೆ ದಂಡ ವಿಧಿಸಬಹುದಾಗಿತ್ತು. ಹಳೆಯ ವ್ಯವಸ್ಥೆಯಲ್ಲಿ ಉದ್ಯೋಗ ಕೇಳುವುದು ಜನರ ಹಕ್ಕಾಗಿತ್ತು. ಅದನ್ನೇ 'ವಿಬಿ–ಜಿ ರಾಮ್ ಜಿ' ದುರ್ಬಲಗೊಳಿಸಿರುವಂತಿದೆ.

ಹೊಸ ವ್ಯವಸ್ಥೆಯಲ್ಲಿ ಉದ್ಯೋಗದ ಹಕ್ಕನ್ನು ನಿರಾಕರಿಸುವುದಕ್ಕೆ ಅವಕಾಶವಿದೆ. ಹಾಗೆಯೇ, ಯಾವ ರಾಜ್ಯ, ಯಾವ ಜಿಲ್ಲೆಗೆ 'ಕೆಲಸ' ಕೊಡಬೇಕೆಂದು ನಿರ್ಧರಿಸುವ ಅಧಿಕಾರವನ್ನು ಕೇಂದ್ರ ಸರ್ಕಾರ ತನ್ನಲ್ಲೇ ಉಳಿಸಿಕೊಂಡಿದೆ. ಒಂದು ವೇಳೆ, ರಾಜ್ಯವೊಂದು ತನಗೆ ಮೀಸಲಾದ ಹಣಕ್ಕಿಂತ ಹೆಚ್ಚಿನ ಪ್ರಮಾಣದ ಕೆಲಸ ಕೊಟ್ಟರೆ, ಆ ಹೆಚ್ಚುವರಿ ಮೊತ್ತ ಭರಿಸುವ ಹೊಣೆಗಾರಿಕೆಯನ್ನು ರಾಜ್ಯವೇ ಹೊರಬೇಕಾದ ಸ್ಥಿತಿ ಹೊಸ ಯೋಜನೆಯಲ್ಲಿದೆ.

'ವಿಬಿ–ಜಿ ರಾಮ್ ಜಿ' ವ್ಯವಸ್ಥೆಯಲ್ಲಿ ಕೆಲಸ ಕೊಡದಿದ್ದವನೇ ಜಾಣ ಎನ್ನುವ ಪರಿಸ್ಥಿತಿಯಲ್ಲಿದೆ. ಉದ್ಯೋಗ ಅಪೇಕ್ಷಿಸಿ ಬರುವ ಅರ್ಜಿಗಳನ್ನು ಸ್ವೀಕರಿಸದಿರಲು ನಿಯಮಾವಳಿಗಳು ಪ್ರೋತ್ಸಾಹ ಕೊಡುವಂತಿವೆ. ಅರ್ಜಿಗಳು ನೋಂದಣಿ ಆಗಬಾರದು, ಕೆಲಸದ ಜಾಗ ತೆರೆದುಕೊಳ್ಳಬಾರದು, ನಿರುದ್ಯೋಗ ಭತ್ಯೆಯ ಗದ್ದಲ ಕೇಳಿಬರಬಾರದು... ಕೆಲಸ ಕೇಳಿಬಂದವರ ಬಾಯಿ ಬಂದ್ ಮಾಡಿದರೆ ರಾಜ್ಯ ಸರ್ಕಾರ ಗೆದ್ದಂತೆ! ಅಂದರೆ, 'ವಿಬಿ–ಜಿ ರಾಮ್ ಜಿ' ಎನ್ನುವುದು ಉದ್ಯೋಗ ಖಾತರಿ ಯೋಜನೆ ಆಗಿರದೆ, 'ನಿರುದ್ಯೋಗ ಭರವಸೆ ಯೋಜನೆ' ಆಗಿದೆ!

ಕೆಲಸ ಕೇಳಲು ಬರುವವರು ಹತ್ತಾರು ನಿಯಮಗಳಿಗೆ ಬದ್ಧರಾಗಬೇಕಾಗಿದೆ. ಮೊಬೈಲ್ ಹಾಜರಾತಿ, ಡಿಜಿಟಲ್ ಅಥೆಂಟಿಫಿಕೇಶನ್, ಇ–ಕೆವೈಸಿ, ಫೇಶಿಯಲ್ ರೆಕಗ್ನಿಶನ್ ಮತ್ತು ಆಧಾರ್ ಆಧರಿತ ಕೂಲಿಪಾವತಿ! ಇವಳೇ/ಇವನೇ ಕೆಲಸ ಮಾಡಿದ್ದಾನೆಂದು ದೃಢೀಕರಿಸಲು ಇರುವ ನಿಯಮಗಳು ಒಂದೆರಡಲ್ಲ. ಹೋಗಲಿ, ಉದ್ಯೋಗ ಕೋರಿ ಬರುವ ಎಲ್ಲರಿಗೂ ಆ ದಿನ ಕೆಲಸ ಸಿಕ್ಕೇ ಸಿಗುತ್ತದೆನ್ನುವ ಖಾತರಿಯೂ ಇಲ್ಲ. ಕೆಲಸ ಮಾಡಿದವರಿಗೂ ಕೂಲಿ ಪಾವತಿ ಆಗಿಯೇ ಆಗುತ್ತದೆಂಬ ಖಾತರಿಯೂ ಇಲ್ಲ. 'ಕೆಲಸ ಕೊಡಿ, ಕೂಲಿ ಕೊಡಿ' ಎನ್ನುವಷ್ಟು ಸರಳವಾಗಿದ್ದ ಉದ್ಯೋಗ ಖಾತರಿ ಯೋಜನೆ, ಈಗ ಕಣ್ಣಿನ ಪಾಪೆಯ ಚಿತ್ರೀಕರಣದವರೆಗೆ ಬಂದು ನಿಂತಿದೆ; ಕ್ಯಾಮೆರಾದ ಎದುರು ಕಣ್ಣು ಪಿಳುಕಿಸುವುದರಲ್ಲಿಯೇ ಕೂಲಿ ಕಾರ್ಮಿಕರ ಅಮೂಲ್ಯ ಸಮಯ ಕಳೆದುಹೋಗುವ ಸ್ಥಿತಿ ಉದ್ಯೋಗದ ಸ್ಥಳಗಳಲ್ಲಿ ರೂಪುಗೊಳ್ಳುವ ಸಾಧ್ಯತೆಯಿದೆ. ಕೆಲಸ ಆರಂಭಗೊಳ್ಳುವ ಮೊದಲು ಕ್ಯಾಮೆರಾ ಮುಂದೆ ಗುರುತು ಸಾಬೀತುಪಡಿಸುವ ಕಸರತ್ತು, ಅಂದಿನ ಕೆಲಸ ಮುಗಿದ ನಂತರ ಮತ್ತೆ ಕ್ಯಾಮೆರಾ ಮುಂದೆ ಬೆಳಗಿನದೇ ಪ್ರಹಸನದ ಪುನರಾವರ್ತನೆ. ಮುಖ ತೊಳೆದು, ಪೌಡರ್ ಹಚ್ಚಿಕೊಂಡು ಕ್ಯಾಮೆರಾದ ಮುಂದೆ ಕಣ್ಣು ಪಿಳುಕಿಸುತ್ತ ನಿಲ್ಲುವುದು ಗ್ರಾಮೀಣ ಕೆಲಸಗಾರರ ಪಾಲಿಗೆ ನುಂಗಲಾರದ ತುತ್ತು. ಆ ಕಣ್ಣುಗಳನ್ನು ಕ್ಯಾಮೆರಾ ಗುರ್ತಿಸದಿದ್ದರೆ? ತಾಂತ್ರಿಕ ಅವಲಂಬನೆಯ ಈ ಕ್ರಮ ಬೇಡವೆಂದು ಅದೆಷ್ಟು ಬೇಡಿಕೊಂಡರೂ ಸರ್ಕಾರ ಕರಗುತ್ತಿಲ್ಲ, ನಿರ್ಧಾರ ಬದಲಿಸಿಲ್ಲ.

'ವಿಬಿ–ಜಿ ರಾಮ್ ಜಿ' ಯೋಜನೆಯ ನಿಯಮಾವಳಿಗಳು ಗ್ರಾಮೀಣ ಜನರಿಗೆ ಆದ್ಯತೆ ಕೊಡುವ ಬದಲು, ಡಿಜಿಟಲ್ ವ್ಯವಸ್ಥೆಗೆ ಒತ್ತು ನೀಡುತ್ತಿವೆ. ಈ ಡಿಜಿಟಲ್ ವ್ಯವಸ್ಥೆಯು ಕಾರ್ಮಿಕರನ್ನು ಅಪನಂಬಿಕೆಯಿಂದ ನೋಡುವಂತಿದೆ. ಉದ್ಯೋಗ ನೀಡುವುದಕ್ಕಿಂತಲೂ ನಿರಾಕರಿಸುವುದೇ ನಿಯಮಗಳ ಒಳ ಉದ್ದೇಶ ಇರುವಂತಿದೆ.

ಗ್ರಾಮೀಣ ಕೂಲಿ ಕಾರ್ಮಿಕರೊಂದಿಗೆ 'ಡಿಜಿಟಲ್ ಆಟ'ವನ್ನು 'ವಿಬಿ–ಜಿ ರಾಮ್ ಜಿ' ಯೋಜನೆ ಕಾನೂನಾತ್ಮಕವಾಗಿ ತನ್ನೊಳಗಿನ ಅವಿಭಾಜ್ಯ ಅಂಗವನ್ನಾಗಿಸಿಕೊಂಡಿದೆ. ಕಾರ್ಮಿಕರ ಮುಖವನ್ನು ಕ್ಯಾಮೆರಾ ಗುರ್ತಿಸದೆ ಇದ್ದ ಸಂದರ್ಭಗಳಲ್ಲಿ, ಬದಲಿಗೆ ಏನು ಮಾಡಬಹುದು ಎಂದು ಹೊಸ ಕಾನೂನಿನ ನಿಯಮಾವಳಿಗಳು ಹೇಳುವುದಿಲ್ಲ. ಕೆಲಸ ಕೇಳಿ ಬಂದವರನ್ನು ಹೊರಹಾಕುವುದೇ ಮೂಲ ಉದ್ದೇಶ ಇರುವಾಗ ಬದಲಿ ವ್ಯವಸ್ಥೆಯನ್ನು ಸೂಚಿಸುವ ಪ್ರಶ್ನೆಯೇ ಇಲ್ಲವಲ್ಲ. ಹೊಸ ತಂತ್ರಜ್ಞಾನಗಳು ಬಂದಾಗ ನಡೆಯುತ್ತಿರುವ ಕೆಲಸವನ್ನು ಬೆಂಬಲಿಸುವಂತೆ ಇರಬೇಕು, ಆದರೆ, ಇಲ್ಲಿ ಅದೇ ಅಂತಿಮ ನಿರ್ಣಾಯಕ ಆಗಿರುವುದು ಅಕ್ಷಮ್ಯ.

ಕೆಲಸ ಮಾಡುವ ಕೂಲಿಕಾರರು ಹಾಗೂ ಕೆಲಸ ಕೊಡುವ ಪಂಚಾಯಿತಿಯಲ್ಲಿ ಬದಲಾವಣೆಯೇನೂ ಆಗಿಲ್ಲ. ಬದಲಾಗುತ್ತಿರುವುದು ಕಾನೂನು ಮಾತ್ರ. ಹಳೆಯ ಯೋಜನೆಯಿಂದ ಹೊಸ ಯೋಜನೆಗೆ ದಾಟುವಾಗ ದಾರಿ ಸುಗಮವಾಗಿರಬೇಕಿತ್ತು, ತಂತ್ರಜ್ಞಾನ ಅಡ್ಡಬಂದು ಇಬ್ಬರನ್ನೂ ಪರಸ್ಪರ ಅಪರಿಚಿತರನ್ನಾಗಿಸಿದೆ; ಕೆಲಸ ಮಾಡಿದ ನಂತರವೂ ಆ ಕೆಲಸವನ್ನು ತಂತ್ರಜ್ಞಾನ ದೃಢೀಕರಿಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿದೆ.

ಉದ್ಯೋಗ ನೀಡುವ ಪ್ರಕ್ರಿಯೆ ಕೂಡ ಪಂಚಾಯಿತಿಯಿಂದ ಪಂಚಾಯಿತಿಗೆ ಭಿನ್ನವಾಗಿರುತ್ತದೆ. ಒಂದು ಪಂಚಾಯಿತಿ ತನ್ನ ಪ್ರದೇಶದಲ್ಲಿ ಇರುವ ಎಲ್ಲಾ ಜನರ ಉದ್ಯೋಗ ಚೀಟಿಗಳನ್ನು ಮಾಡಿಸಿರದೆ ಇರಬಹುದು. ಕಾನೂನಿನಡಿ ಕೆಲಸ ಕೊಡುತ್ತೇವೆಂದು ಜನಕ್ಕೆ ಹೇಳದೆ ಇರಬಹುದು. ಉದಾಹರಣೆಗೆ ಗಿರಿಜನರ ಹಾಡಿಗಳು. ಪಂಚಾಯಿತಿಯಿಂದ ಹಾಡಿಗಳು ಬಹಳ ದೂರದಲ್ಲಿರಬಹುದು. ಇದೆಲ್ಲದರ ಅರ್ಥ ಅಲ್ಲಿ ಜನರಿಂದ ಕೆಲಸಕ್ಕೆ ಬೇಡಿಕೆ ಇಲ್ಲವೆಂದಲ್ಲ. ಬೇಡಿಕೆಗಳು ದಾಖಲಾಗಿಲ್ಲವಷ್ಟೇ. ಜಿಲ್ಲಾ ಕೇಂದ್ರಗಳಿಂದ ದೂರ, ಬ್ಯಾಂಕ್‌ನಿಂದ ದೂರ ಇರುವ, ಕಾಡು, ಗುಡ್ಡಬೆಟ್ಟಗಳಲ್ಲಿರುವ ಪಂಚಾಯಿತಿಗಳು, ಸಂಪರ್ಕ ವ್ಯವಸ್ಥೆ ಸರಿಯಾಗಿಲ್ಲದ ಪಂಚಾಯಿತಿಗಳು, ಸರಿಯಾಗಿ ನೆಟ್‌ವರ್ಕ್ ಸಿಗದ ಪಂಚಾಯಿತಿಗಳು, ಇವೆಲ್ಲವೂ ಡಿಜಿಟಲೀಕರಣದಿಂದ ಯಾವಾಗಲೂ ದೂರವೇ. ಜನರಿಗೆ ಕೂಲಿ ತಲಪಿತೋ, ಅವರ ಕುಂದುಕೊರತೆಗಳು ನಿವಾರಣೆ ಆದುವೋ ಇವೆಲ್ಲಕ್ಕೆ ಉತ್ತರ ಕಂಪ್ಯೂಟರಿನಲ್ಲಿ ಸಿಗುವುದಿಲ್ಲ. ಅಂಥಲ್ಲಿ ಜನಕ್ಕೆ ಉದ್ಯೋಗ ಸಿಗಬೇಕಾಗಿದ್ದು ಅತಿ ಅವಶ್ಯಕ. ಆದರೆ, ಹೊಸ ಯೋಜನೆಯ ನಿಯಮಾವಳಿಗಳು ಅಂಥಲ್ಲಿಯೇ ಕೆಲಸವನ್ನು ನಿರಾಕರಿಸುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ತಲೆದೋರಬಹುದಾದ ಯಾವ ಸಮಸ್ಯೆಗೂ ಡಿಜಿಟಲ್ ವ್ಯವಸ್ಥೆಯಲ್ಲಿ ಉತ್ತರವಿಲ್ಲ. ಇಲ್ಲಿ ಪರಸ್ಪರ ಮುಖ ನೋಡಿ, ಮಾತನಾಡಿ ರೂಢಿ. ಪತ್ರವನ್ನು ಕೊಡಬೇಕು, ರಸೀದಿಯನ್ನು ಪಡೆಯಬೇಕು, ಕಡತದಲ್ಲಿ ಹೆಸರು ನೋಂದಾಯಿಸಬೇಕು, ಗ್ರಾಮಸಭೆಗಳಾಗಬೇಕು, ಸಹಿಗಳಾಗಬೇಕು. ಈ ವ್ಯವಸ್ಥೆಗೆ ಒಗ್ಗಿಕೊಂಡಿರುವ ಜನರ ಮಧ್ಯೆ ಎಲ್ಲವನ್ನೂ ಡಿಜಿಟಲೀಕರಣ ಮಾಡುತ್ತೇವೆಂದರೆ, ಹೊಸ ವ್ಯವಸ್ಥೆಗೆ ಸಮಾಜ ಒಮ್ಮೆಗೇ ಒಪ್ಪುವುದು ಕಷ್ಟ. ಬದಲಾವಣೆ ಸಂದರ್ಭದಲ್ಲಿ ಮೊದಲು ಅದಕ್ಕೆ ತರಬೇತಿ ನಡೆಯಬೇಕು. ಮುಖ್ಯವಾಗಿ, ತಂತ್ರಜ್ಞಾನ ಜನರನ್ನು ತಲಪುವಷ್ಟು ವೇಗವೂ ಸರಳವೂ ಆಗಿರಬೇಕು. ಪರಸ್ಪರ ಪರಿಚಯವಾಗಬೇಕು, ಒಪ್ಪಿಕೊಳ್ಳಬೇಕು. ಅಲ್ಲಿಯವರೆಗೆ ಸರ್ಕಾರ ತಾಳ್ಮೆಯಿಂದ ಪ್ರಯತ್ನ ಮಾಡುತ್ತ, ಹಳೆಯದು ಮತ್ತು ಹೊಸತು ಎರಡೂ ಪದ್ಧತಿಗಳನ್ನೂ ಜಾರಿಯಲ್ಲಿಟ್ಟಿರಬೇಕು.

125 ದಿನ ಕೆಲಸ ಕೊಡುತ್ತೇವೆ ಎಂದು ಪತಾಕೆ ಹಾರಿಸುತ್ತ ಬಂದ 'ವಿಬಿ–ಜಿ ರಾಮ್ ಜಿ' ಅಗ್ನಿಪರೀಕ್ಷೆ ಎದುರಿಸುತ್ತಿದೆ. ಅತಿ ಅವಶ್ಯಕತೆ ಇರುವ ವ್ಯಕ್ತಿಗೆ ಅದು ಕೆಲಸ ಕೊಟ್ಟಿತೆ? ಕೆಲಸ ಕೊಡದಿದ್ದರೆ ನಿರುದ್ಯೋಗ ಭತ್ಯೆ ಕೊಟ್ಟಿತೆ? ಕೂಲಿಯನ್ನು ಸರಿಯಾದ ಸಮಯಕ್ಕೆ ತಲಪಿಸಿ ಕಾರ್ಮಿಕರ ಕೆಲಸವನ್ನು ಗೌರವಿಸಿತೆ? ಈ ಎಲ್ಲ ಪ್ರಶ್ನೆಗಳಿಗೆ ಯೋಜನೆ ಮುಂದಿನ ದಿನಗಳಲ್ಲಿ ಉತ್ತರಿಸಬೇಕಿದೆ. ಈಗ ಹೊರಬಿದ್ದಿರುವ ನಿಯಮಾವಳಿಯಂತೂ ಈ ಪರೀಕ್ಷೆಯಲ್ಲಿ 'ವಿಬಿ–ಜಿ ರಾಮ್ ಜಿ' ಯೋಜನೆಯನ್ನು ನಪಾಸು ಮಾಡುವಂತಿದೆ. ಇಲ್ಲಿ ಜನರಿಗೆ ಕೆಲಸ ಕೊಡುವುದು ಆದ್ಯತೆ ಆಗುವುದಕ್ಕಿಂತ ಡಿಜಿಟಲೀಕರಣವೇ ಮುಖ್ಯವಾಗಿದೆ. ಕೇಳಿ ಕೆಲಸ ಪಡೆಯುವ ಬಡಕೂಲಿಕಾರ/ಳ ಹಕ್ಕಿನ ಮೇಲೆ ಅಧಿಕಾರಿಗಳು, ಸ್ಮಾರ್ಟ್‌ಫೋನ್, ಕಂಪ್ಯೂಟರ್, ನೆಟ್‌ವರ್ಕ್‌ಗಳ ಯಜಮಾನಿಕೆಯನ್ನು ಹೇರಿ, ಹಿಂದಿನ ಊಳಿಗಮಾನ್ಯ ವ್ಯವಸ್ಥೆ ಬಲಪಡಿಸುವ ಪ್ರಯತ್ನದಂತೆ 'ವಿಬಿ–ಜಿ ರಾಮ್ ಜಿ' ಯೋಜನೆ ಕಾಣಿಸುತ್ತಿದೆ.



ವಾಚಕರ ವಾಣಿ

ಕಾವೇರಿ: ಸಂಕಷ್ಟ ಸೂತ್ರಕ್ಕೆ ಒತ್ತಾಯಿಸಲಿ

ಕಾವೇರಿ ನ್ಯಾಯಮಂಡಳಿಯ ತೀರ್ಪನ್ನು ಮಾರ್ಪಡಿಸಿ 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದಾಗ, ಕರ್ನಾಟಕದಲ್ಲಿ ಮಳೆಯ ಅಭಾವ ಉಂಟಾದ ಸಂಕಷ್ಟದ ಪರಿಸ್ಥಿತಿಯಲ್ಲಿ ಪರಿಹಾರದ ಬಗ್ಗೆ ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡುವ ಕೆಲಸವಾಗಲಿಲ್ಲ. ಆ ಸಂದರ್ಭದಲ್ಲೇ ಸುಪ್ರೀಂ ಕೋರ್ಟ್‌ಗೆ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿದ್ದರೆ ಸಂಕಷ್ಟ ಸೂತ್ರಕ್ಕೆ ದಾರಿ ಸಿಗುತ್ತಿತ್ತು. ಕಾವೇರಿ ನದಿ ನೀರಿನ ಬಗ್ಗೆ ತಮಿಳುನಾಡು ಸರ್ಕಾರ ಕರ್ನಾಟಕದ ನೈಜ ಸ್ಥಿತಿ ಅರಿಯದೆ ಕ್ಯಾತೆ ತೆಗೆಯುವುದು ಸರಿಯಲ್ಲ. ತಮಿಳುನಾಡು ರೈತರು ವರ್ಷದಲ್ಲಿ ಮೂರು ಬೆಳೆ ಬೆಳೆಯುತ್ತಾರೆ. ಆದರೆ, ಕರ್ನಾಟಕದ ರೈತರು ಮಳೆಗಾಲದಲ್ಲಿ ಮಳೆ ಕೊರತೆಯಾದರೆ ಒಂದು ಬೆಳೆಯೂ ಇಲ್ಲದೆ ಪರಿತಪಿಸುತ್ತಾರೆ. ಈ ಬಾರಿ ಮುಂಗಾರು ಕೈಕೊಟ್ಟಿದ್ದು, ಬೆಳೆಗೆ ಮಾತ್ರವಲ್ಲ, ಕುಡಿಯುವುದಕ್ಕೂ ನೀರಿನ ಕೊರತೆ ಎನ್ನುವ ಪರಿಸ್ಥಿತಿ ಸೃಷ್ಟಿಯಾಗಿದೆ. ಈಗಿನ ಪರಿಸ್ಥಿತಿಯಲ್ಲೇ ಸಂಕಷ್ಟ ಸೂತ್ರ ರೂಪಿಸುವಂತೆ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ನ್ಯಾಯ ದೊರಕಿಸಿಕೊಡುವಂತೆ ಕೋರಬೇಕಿದೆ.

ಸಿ. ಸಿದ್ದರಾಜು ಆಲಕೆರೆ, ಮಂಡ್ಯ

ಪಾಲಕರ ಕೊಲ್ಲುವಷ್ಟು ಪ್ರೇಮ ಕುರುಡೆ?

ಕೆ.ಆರ್. ಪುರದಲ್ಲಿ ಅಪ್ಪ, ಅಮ್ಮ, ತಂಗಿಯನ್ನು ಪ್ರಿಯಕರನ ಜೊತೆ ಸೇರಿ ಹತ್ಯೆ ಮಾಡಿದ ಯುವತಿ ಹಾಗೂ ಪುಣೆಯಲ್ಲಿ ಯುವತಿಯೊಬ್ಬಳು ಭಾವಿ ಪತಿಯನ್ನು ಪ್ರಿಯಕರನೊಂದಿಗೆ ಸಂಚು ಮಾಡಿ ಕಣಿವೆಗೆ ನೂಕಿದ ಪ್ರಕರಣಗಳು ಬೆಚ್ಚಿಬೀಳಿಸುವಂತಿವೆ. ನಮ್ಮ ಸಮಾಜ ಎತ್ತ ಸಾಗುತ್ತಿದೆ? ಇಂತಹ ಕೃತ್ಯಗಳನ್ನು ಎಸಗಲು ಹಾಗೂ ಎಸಗಿ ಪಾರಾಗಬಹುದು ಎಂಬುದನ್ನು ಯೋಚಿಸದಷ್ಟು ಪ್ರೇಮ ಕುರುಡೆ? ದುಷ್ಕೃತ್ಯ ಎಸಗಿ ಉಳಿದ ಜೀವನವನ್ನು ಜೈಲಿನ ಕಂಬಿಗಳ ಹಿಂದೆ ಕಳೆಯಬೇಕಾಗುತ್ತದೆ ಎಂಬ ಅರಿವು ಯುವಕ, ಯುವತಿಯರಿಗೆ ಇಲ್ಲದಂತಾಗಿದೆ. ಪ್ರೇಮ ಸಂಬಂಧಗಳನ್ನು ಹೆಚ್ಚು ವಿವೇಕ, ವಿವೇಚನೆಯಿಂದ ನಿಭಾಯಿಸುವುದು ಪ್ರೇಮಿಗಳಿಗೂ, ಅವರ ಕುಟುಂಬಕ್ಕೂ ಹೆಚ್ಚು ಹಿತಕರ.

ವೆಂಕಟೇಶ ಮಾಚಕನೂರ, ಧಾರವಾಡ

ಬಣ್ಣದ ಘಮ ಮತ್ತು ಖರೀದಿ ಮನಃಸ್ಥಿತಿ

ಸುಳ್ಯದಲ್ಲಿ ಇತ್ತೀಚೆಗೆ ನಡೆದ ಹಲಸಿನ ಮೇಳಕ್ಕೆ ಹೋಗಿದ್ದೆ. ಅಲ್ಲಿ ಒಂದು ಕಡೆ ದೊಡ್ಡ ಬಾಣಲೆಯಲ್ಲಿ ಗೋಬಿ ಮಂಚೂರಿ ತಯಾರಿಸಿ ಮಾರುತ್ತಿದ್ದರು. ಮಂಚೂರಿಯ ಕೇಸರಿ ಬಣ್ಣ ಕಣ್ಣಿಗೆ ರಾಚುತ್ತಿತ್ತು. ಅವರ ಬಳಿಗೆ ಹೋಗಿ, 'ಗೋಬಿ ಮಂಚೂರಿ ತಯಾರಿಕೆಯಲ್ಲಿ ಕೃತಕ ಬಣ್ಣ ಬಳಸಬಾರದೆಂಬ ಕಾನೂನಿದೆ, ಗೊತ್ತಿಲ್ಲವೆ?' ಎಂದೆ. ಅದಕ್ಕೆ ಅವರು, 'ಏನು ಮಾಡುವುದು? ಬಣ್ಣ ಹಾಕದಿದ್ದರೆ ಜನ ಬರುವುದಿಲ್ಲ. ನಮಗೆ ವ್ಯಾಪಾರ ಆಗಬೇಕಲ್ಲ?' ಎಂದರು. ಬಣ್ಣ ಹಾಕುವುದನ್ನು ಕಾನೂನು ಅಸ್ತ್ರದಿಂದ ತಡೆಯಲಾಗದು. ಜನರೇ ಎಚ್ಚತ್ತುಕೊಳ್ಳಬೇಕು. ಕೃತಕ ಬಣ್ಣದಿಂದ ಆರೋಗ್ಯದ ಮೇಲಾಗುವ ಹಾನಿಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಇಂದಿನ ತುರ್ತು.

ಸಹನಾ ಕಾಂತಬೈಲು, ಮಡಿಕೇರಿ

ಬೋಧಕರ ಕಾರ್ಯಭಾರ ಕೊರತೆಗೆ ಮದ್ದು

ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ 9 ಮತ್ತು 10ನೇ ತರಗತಿಗೆ ಬೋಧಿಸಲು ಸರ್ಕಾರವು ನಿಯಮಾವಳಿ ತಂದಿರುವುದು ಸ್ವಾಗತಾರ್ಹ. ಕಳೆದ ಕೆಲವು ವರ್ಷಗಳಿಂದ ಪಿಯು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಸಿಯುತ್ತಾ ಬಂದಿದೆ. ಮತ್ತೊಂದೆಡೆ ಕಳೆದ ಒಂದು ದಶಕದಿಂದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಕಲಿಕಾ ಗುಣಮಟ್ಟ ಕಡಿಮೆಯಾಗುತ್ತಿದೆ. ಉಪನ್ಯಾಸಕರಿಗೆ ಕಾರ್ಯಭಾರದ ಕೊರತೆಯಿಂದ ಕೆಲಸವಿಲ್ಲದೆ ಕೂರುವಂತಾಗಿತ್ತು. ಪದವಿಪೂರ್ವ ಶಿಕ್ಷಣ ಕಲಿಯುವ ವಿದ್ಯಾರ್ಥಿಗಳು 18 ವರ್ಷಕ್ಕಿಂತ ಕೆಳಗಿನವರಾಗಿದ್ದಾರೆ. ಪ್ರೌಢಶಾಲೆಯ ವಿದ್ಯಾರ್ಥಿಗಳು ಅಪ್ರಾಪ್ತರೇ ಆಗಿದ್ದಾರೆ. ಹೀಗಿರುವಾಗ ಪದವಿಪೂರ್ವ ಮತ್ತು ಪ್ರೌಢಶಾಲೆಗಳೆರಡರಲ್ಲೂ ಬೋಧಿಸುವುದರಲ್ಲಿ ಯಾವುದೇ ಶೈಕ್ಷಣಿಕ ಅಥವಾ ಆಡಳಿತಾತ್ಮಕ ವ್ಯತ್ಯಾಸಗಳಾಗುವುದಿಲ್ಲ.

ಅನಿಲ್ ಕುಮಾರ್ ಕೆ.ಬಿ., ಮಂಗಳೂರು

ಪುಸ್ತಕ ಮನೆ ಸಂರಕ್ಷಣೆ: ಸ್ವಾಗತಾರ್ಹ ಕ್ರಮ

ಪದ್ಮಶ್ರೀ ಅಂಕೇಗೌಡರ ಪುಸ್ತಕಗಳ ಸಂಗ್ರಹಕ್ಕೆ ಎರಡು ಎಕರೆ ಜಾಗ ಮಂಜೂರು ಮಾಡಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೂಚಿಸಿರುವ ಸುದ್ದಿ ಓದಿ ಖುಷಿಯಾಯಿತು. ಅಂಕೇಗೌಡರು ದಶಕಗಳ ಪರಿಶ್ರಮದಿಂದ ಸುಮಾರು 20 ಲಕ್ಷ ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಇಂತಹ ಅಪರೂಪದ ಜ್ಞಾನ ಭಂಡಾರವು ಮುಂದಿನ ಪೀಳಿಗೆಗೆ ಉಳಿಯುವುದು ಅತ್ಯಗತ್ಯ. ಪುಸ್ತಕಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡುವುದರಿಂದ ಅವುಗಳ ಮೌಲ್ಯ ಹಾಗೂ ಇತಿಹಾಸದ ಮಾಹಿತಿ ಓದುಗರಿಗೆ ದೊರೆಯಲಿದೆ.

ಶ್ರೀಧರ ಎಸ್. ವಾಣಿ, ಕಲ್ಲತಾವರಗೇರಿ

ನಮಗಷ್ಟೇ ಅಲ್ಲ, ಮರಕ್ಕೂ ಬದುಕುವ ಹಕ್ಕು

ಕೆನಡಾದ ಕ್ವಿಬೆಕ್ ಪ್ರಾಂತ್ಯದ ಮಾಂಟ್ರಿಯಲ್ ಪಶ್ಚಿಮದಲ್ಲಿರುವ ಟೆರಾಸ್ಸೆ–ವಾಡ್ರೂಯಿಲ್ ಎಂಬ ಪಟ್ಟಣ ಕೈಗೊಂಡಿರುವ ತೀರ್ಮಾನ ಸಮಯೋಚಿತವಾಗಿದೆ. ಮರಗಳನ್ನು ತನ್ನದೇ ಆದ ಹಕ್ಕುಗಳನ್ನು ಹೊಂದಿರುವ ಜೀವಂತ ಜೀವಿಗಳೆಂದು ಈ ಪಟ್ಟಣವು ಅಧಿಕೃತವಾಗಿ ಗುರ್ತಿಸಿದೆ. ಆ ಮೂಲಕ ಕೆನಡಾದಲ್ಲಿ ಇಂತಹ ನಿರ್ಧಾರ ಕೈಗೊಂಡ ಮೊದಲ ಪುರಸಭೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಇಂಟರ್‌ನ್ಯಾಷನಲ್ ಅಬ್ಸರ್ವೇಟರಿ ಆಫ್ ನೇಚರ್ ರೈಟ್ಸ್ ಪ್ರಕಾರ, ಸುಮಾರು 2,000 ಜನಸಂಖ್ಯೆ ಇರುವ ಈ ಪಟ್ಟಣವು, ಪರಿಸರ ಸಂಸ್ಥೆಗಳ ನೇತೃತ್ವದ 'ಮರಗಳ ಹಕ್ಕುಗಳ ಜಾಗತಿಕ ಪ್ರಕಟಣೆ'ಗೆ ಸಹಿ ಹಾಕಿದ ಕೆನಡಾದ ಮೊದಲ ಪಟ್ಟಣವಾಗಿದೆ. ನಮ್ಮ ಸುತ್ತಲಿನ ಪರಿಸರವನ್ನು ಕೇವಲ ಸಂಪನ್ಮೂಲವಾಗಿ ನೋಡದೆ, ಅವುಗಳಿಗೂ ಬದುಕುವ ಹಕ್ಕಿದೆ ಎಂದು ಪರಿಗಣಿಸಿರುವ ಈ ನಡೆ ಶ್ಲಾಘನೀಯ.

ಜಗನ್ನಾಥ ರೈ ಬಿ., ಮೂಡುಬಿದಿರೆ

ಚುರುಮುರಿ



ಆಪರೇಷನ್ ಆತ್ಮಸಾಕ್ಷಿ!

● ಗುರು ಪಿ.ಎಸ್.

'ರೀ... ನಿಮಗೆ ನನ್ನ ಮೇಲೆ ನಿಜವಾಗಿಯೂ ಪ್ರೀತಿ ಇದೆಯಾ?' ಹೊಸ ವರಸೆ ಶುರು ಹಚ್ಚಿಕೊಂಡಳು ಹೆಂಡತಿ.

'ಪ್ರೀತಿ ಇದ್ದಿದ್ದಕ್ಕೇ ಅಲ್ವೇನಮ್ಮ ಇಷ್ಟು ವರ್ಷ ಸಂಸಾರ ಮಾಡಿರೋದು?'

'ಮೊದಲಿತ್ತು, ಆದರೆ, ಈಗ ಪ್ರೀತಿ ಕಡಿಮೆಯಾಗಿದೆ ಅನಿಸ್ತಿದೆ...'

'ನನ್ನ ಆತ್ಮಸಾಕ್ಷಿಯಾಗಿ ಹೇಳ್ತಿದೀನಮ್ಮ...' ಎನ್ನುತ್ತಿದ್ದಂತೆ, 'ನೋಡಿ, ನಿನ್ನ ಮೇಲೆ ಪ್ರೀತಿ ಇಲ್ಲ ಅಂತ ನೇರವಾಗಿ ಹೇಳಿಬಿಡಿ. ಆದರೆ, ಈ ಆತ್ಮಸಾಕ್ಷಿ ರೀತಿಯ ದೊಡ್ಡ ಪದಗಳನ್ನೆಲ್ಲ ಬಳಸಬೇಡಿ' ಎಂದು ಮುಖ ತಿರುಗಿಸಿದಳು.

'ಯಾಕಮ್ಮ, ಏನಾಯ್ತು?'

'ನಂಬಿದವರಿಗೆ ಮೋಸ ಮಾಡೋದು, ಆಮೇಲೆ ಆತ್ಮಸಾಕ್ಷಿ ಹೇಳಿದಂತೆ ಕೇಳ್ದೆ ಅನ್ನೋದು ಈಗ ಕಾಮನ್ ಆಗಿಬಿಟ್ಟಿದೆ'.

'ಓಯ್, ನನ್ನದು ಆ ಆತ್ಮಸಾಕ್ಷಿ ಅಲ್ಲ, ನನ್ನದು ಪ್ಯಾರ್ ಆತ್ಮಸಾಕ್ಷಿ'.

'ಗೊತ್ತು, ರಾಜಕಾರಣಿಗಳಂತೆ ನಿಮ್ಮದೂ ಚೋರ್ ಆತ್ಮಸಾಕ್ಷಿ' ಮುಖಕ್ಕೆ ತಿವಿದಳು.

'ಪಾಲಿಟಿಕ್ಸ್ ಬಿಟ್ಟು ನೋಡಿದ್ರೆ ಎಲ್ಲರಿಗೂ ಅವರವರದೇ ಆದ ಶುದ್ಧ ಆತ್ಮಸಾಕ್ಷಿ ಇರುತ್ತಮ್ಮ' ಎಂದು ಬೋಧನೆ ಮಾಡುವವನಂತೆ ಹೇಳಿದೆ.

'ಅದ್ಯಾವುದಪ್ಪ ಶುದ್ಧ ಆತ್ಮಸಾಕ್ಷಿ?'

'ಕಣ್ಮುಂದೆಯೇ ಇಲ್ಲವಾ... ಬಿಡದಿ ಭೂಮಿನ ಬಿಟ್ಟು ಕೊಡ್ತೀನಿ ಅಂತ ಮಗ ಹೇಳಿದ್ರು, ಅದು ಅವರ ಆತ್ಮಸಾಕ್ಷಿ. ಮಗ ಬೇಕಾದರೆ ಅವನ ಭೂಮಿ ಕೊಡ್ತಾನೆ, ನಮ್ಮ ಭೂಮಿ ಕೊಡೋಕಾಗಲ್ಲ ಅನ್ನೋ ಅರ್ಥದಲ್ಲಿ ಅಪ್ಪ ಹೇಳಿದ್ರು, ಅದು ಅವರ ಆತ್ಮಸಾಕ್ಷಿ'.

'ಹೂಂ, ಬಿಟ್ಟೆನೆಂದರೂ 'ಬಿಡದೀ' ಮಾಯೆ ಅನ್ನೋ ಹಾಗಾಗಿದೆ' ಎಂದು ನಕ್ಕಳು.

'ಈಗ, ನೋಡು, ಸಂಘ ರಿಜಿಸ್ಟರ್ ಮಾಡಿಸಬೇಕೋ, ಬೇಡವೋ ಅನ್ನೋದು ಇವರ ಆತ್ಮಸಾಕ್ಷಿಗೆ ಕೇಳ್ಕೋಬೇಕು; ಇದು ರಾಜಕೀಯ ಉದ್ದೇಶಕ್ಕೆ ತೆಗೆದ ತಗಾದೆ ಹೌದೋ ಅಲ್ಲವೋ ಅನ್ನೋದನ್ನ ಅವರು ಅವರ ಆತ್ಮಸಾಕ್ಷಿಗೆ ಕೇಳ್ಕೋಬೇಕು'.

'ಏನೇನೋ ಹೇಳಿ ರೂಟ್ ಚೇಂಜ್ ಮಾಡಬೇಡಿ, ಇನ್ನೂ ಪ್ರೀತಿ ಇದೆಯೋ, ಇಲ್ಲವೋ ಅದನ್ನ ಹೇಳಿ'.

'ನನ್ನ ಆತ್ಮಸಾಕ್ಷಿಗೆ ಕೇಳಿ ಹೇಳ್ತಿನಿರಮ್ಮ' ಎನ್ನುತ್ತಾ ಹೊರಗಡಿಯಿಟ್ಟೆ.

ಸಂಗತ

ಕೆಮ್ಮು ಮತ್ತು ಸಿರಪ್: ನಮಗೆಷ್ಟು ಗೊತ್ತು?

ಗುಣಮಟ್ಟದ ಔಷಧಗಳನ್ನು ಖಾತರಿಪಡಿಸುವ ಕಾನೂನು ಕ್ರಮಗಳೊಂದಿಗೆ, ರೋಗ ಮತ್ತು ಔಷಧ ಬಳಕೆಯ ಬಗ್ಗೆ ಸಾರ್ವಜನಿಕ ತಿಳಿವಳಿಕೆ ಮೂಡಿಸುವುದೂ ಮುಖ್ಯ.

● ಡಾ. ಗೋಪಾಲ ದಾಬಡೆ

ಕೇಂದ್ರ ಆರೋಗ್ಯ ಸಚಿವಾಲಯವು ಕೆಮ್ಮಿನ ಸಿರಪ್‌ಗಳ ಮಾರಾಟದ ಮೇಲೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಿದೆ. ಈಗ ಈ ಸಿರಪ್‌ಗಳನ್ನು ಖರೀದಿಸಲು ವೈದ್ಯರು ನೀಡಿದ ಶಿಫಾರಸಿನ ಚೀಟಿ (ಪ್ರಿಸ್ಕ್ರಿಪ್ಷನ್) ಅಗತ್ಯವಾಗಿದೆ. ಈ ನಿರ್ಬಂಧಗಳು ಕಡ್ಡಾಯವಾಗಿ ಜಾರಿಗೊಂಡರೆ, ವೈದ್ಯರ ಸಲಹೆಯಿಲ್ಲದೆ ಕೆಮ್ಮಿನ ಸಿರಪ್‌ಗಳನ್ನು ಸೇವಿಸುವುದರಿಂದ ಆಗಬಹುದಾದ ಹಾನಿಯನ್ನು ಸ್ವಲ್ಪಮಟ್ಟಿಗಾದರೂ ತಪ್ಪಿಸಬಹುದಾಗಿದೆ.

ಇಲ್ಲಿಯವರೆಗೆ ಗ್ರಾಹಕರು ಯಾವುದೇ ಔಷಧ ಅಂಗಡಿಗೆ ಹೋಗಿ ಕೆಮ್ಮಿನ ಸಿರಪ್ ಅನ್ನು ಸುಲಭವಾಗಿ ಖರೀದಿಸಬಹುದಾಗಿತ್ತು. ಇನ್ನು ಮುಂದೆ ಅದು ಸಾಧ್ಯವಿಲ್ಲ. ಔಷಧ ನಿಯಂತ್ರಣ ಪ್ರಾಧಿಕಾರವು ಕೆಮ್ಮಿನ ಸಿರಪ್‌ಗಳ ಅತಿಯಾದ ಬಳಕೆಯಿಂದ ಆರೋಗ್ಯಕ್ಕೆ ಹಾನಿ ಉಂಟಾಗುತ್ತದೆ ಎಂದು ಸಾಕಷ್ಟು ಬಾರಿ ಎಚ್ಚರಿಕೆ ನೀಡಿದೆ. ಹಾಗಾಗಿ, ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಕೆಮ್ಮಿನ ಸಿರಪ್‌ಗಳ ಮುಕ್ತ ಮಾರಾಟಕ್ಕೆ ಸಂಬಂಧಿಸಿದಂತೆ ಕಾನೂನು ನಿರ್ಬಂಧಗಳನ್ನು ವಿಧಿಸಲಾಗಿದೆ.

ಆರೋಗ್ಯದ ಸಾಮಾನ್ಯ ಜ್ಞಾನದ ರೂಪದಲ್ಲಿ ಕೆಮ್ಮಿನ ವಿಜ್ಞಾನವನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ. ಕೆಮ್ಮು ಸ್ವತಃ ಒಂದು ರೋಗವಲ್ಲ. ಅದು ಅನೇಕ ರೋಗಗಳ ಲಕ್ಷಣ. ಸಾಮಾನ್ಯವಾಗಿ ಇದು ನೆಗಡಿ–ಜ್ವರದಿಂದ ಉಂಟಾಗುತ್ತದೆ. ಕೆಮ್ಮು ದೇಹದ ರಕ್ಷಣಾ ಕ್ರಮವಾಗಿದ್ದು, ಶ್ವಾಸಕೋಶದಿಂದ ಕಫವನ್ನು ಹೊರಹಾಕುತ್ತದೆ. ಸೋಂಕು, ಅಲರ್ಜಿ, ಧೂಮಪಾನ ಅಥವಾ ಇತರ ಹಾನಿಕಾರಕ ವಸ್ತುಗಳಿಂದ ಉಂಟಾಗುವ ಉರಿಯೂತಕ್ಕೆ ಪ್ರತಿಕ್ರಿಯೆಯಾಗಿ ಕೆಮ್ಮು ಉಂಟಾಗುತ್ತದೆ. ಸಾಮಾನ್ಯ ಕೆಮ್ಮಿಗೆ ಚಿಕಿತ್ಸೆ ಅಗತ್ಯವೇನಲ್ಲ. ಆದರೆ, ಕೆಮ್ಮು ನಿರಂತರ, ತೀವ್ರ ಅಥವಾ ತೊಂದರೆಗೊಳಿಸುವಂತೆ ಇದ್ದಾಗ ಸೂಕ್ತ ತಪಾಸಣೆ ಮತ್ತು ಚಿಕಿತ್ಸೆ ಅಗತ್ಯವಾಗುತ್ತದೆ.



ಕೆಮ್ಮಿನ ಸರಿಯಾದ ಚಿಕಿತ್ಸೆಗಾಗಿ ನಿಖರವಾದ ನಿರ್ಣಯ ಅಗತ್ಯ. ಏಕೆಂದರೆ, ಕೆಮ್ಮು ಕೆಲವೊಮ್ಮೆ ಕ್ಷಯರೋಗ, ನ್ಯುಮೋನಿಯಾ, ಅಸ್ತಮಾ ಹಾಗೂ ಹೃದಯ ರೋಗಗಳಂತಹ ಗಂಭೀರ ಕಾಯಿಲೆಗಳ ಲಕ್ಷಣವಾಗಿರಬಹುದು. ಕೆಮ್ಮಿನಲ್ಲಿ ರಕ್ತದ ಅಂಶ ಕಂಡುಬಂದರೆ ತಕ್ಷಣ ವೈದ್ಯರ ಗಮನಕ್ಕೆ ತರುವುದು ಅಗತ್ಯ.

ಬಹುತೇಕ ಕೆಮ್ಮಿನ ಸಿರಪ್‌ಗಳು 'ಡೆಕ್ಸ್ಟ್ರೊಮೆಥಾರ್ಫನ್' ಎಂಬ ಕೆಮ್ಮು ತಡೆಯುವ ಔಷಧವನ್ನು ಹೊಂದಿರುತ್ತವೆ. ಈ ಔಷಧ ಮೆದುಳಿನ ಮೇಲೆ ಕಾರ್ಯ ನಿರ್ವಹಿಸಿ, ಕೆಮ್ಮನ್ನು ತಡೆಯುತ್ತದೆ. ಆದರೆ, ಈ ಔಷಧ ಕೆಮ್ಮಿನ ಮೂಲ ಕಾರಣಕ್ಕೆ ಚಿಕಿತ್ಸೆ ನೀಡುವುದಿಲ್ಲ. ಕೆಮ್ಮಿನ ಸಿರಪ್‌ಗಳಲ್ಲಿನ ಮತ್ತೊಂದು ಸಾಮಾನ್ಯ ಅಂಶ 'ಗ್ವಾಇಫೆನೆಸಿನ್'. ಇದು ಕಫವನ್ನು ತೆಳುವಾಗಿಸುತ್ತದೆ ಮತ್ತು ಅದನ್ನು ಹೊರಹಾಕಲು ಸಹಾಯ ಮಾಡುತ್ತದೆ. ಅನೇಕ ಸಿರಪ್‌ಗಳಲ್ಲಿ ಇವೆರಡೂ ಅಂಶಗಳು ಸೇರಿರುತ್ತವೆ. ಜೊತೆಗೆ, ಕೆಲವು ಸಿರಪ್‌ಗಳಲ್ಲಿ ಆಂಟಿಹಿಸ್ಟಮಿನ್‌ಗಳು ಇರುತ್ತವೆ; ಅವು ಶ್ವಾಸಕೋಶವನ್ನು ಒಣಗಿಸಿ ರೋಗಲಕ್ಷಣಗಳನ್ನು ಹದಗೆಡಿಸಬಹುದು. ಕೆಲವೊಂದು ಕೆಮ್ಮಿನ ಔಷಧಗಳಲ್ಲಿ ಆಸ್ತಮಾ ಚಿಕಿತ್ಸೆಗೆ ಬಳಸುವ ಬ್ರಾಂಕೋಡೈಲೇಟರ್‌ಗಳೂ ಸೇರಿರುತ್ತವೆ.

ಭಾರತದಲ್ಲಿ ಕೆಮ್ಮಿನ ಸಿರಪ್ ಮಾರುಕಟ್ಟೆಯ ಮೌಲ್ಯ ಸುಮಾರು ₹57 ಶತಕೋಟಿಯಷ್ಟು ದೊಡ್ಡದಾಗಿದೆ. ಅತ್ಯಂತ ಹೆಚ್ಚು ಮಾರಾಟವಾಗುವ ಔಷಧಗಳಲ್ಲಿ ಕೆಮ್ಮಿನ ಸಿರಪ್‌ಗಳೂ ಸೇರಿವೆ. ತಯಾರಿಕಾ ದೋಷಗಳಿಂದಾಗಿ ಈ ಸಿರಪ್‌ಗಳು ಮಾರಕ ವಿಷಗಳಾಗಿ ಪರಿಣಮಿಸಬಹುದು. ಉದಾಹರಣೆಗೆ, ಗ್ಲಿಸರಿನ್ ಬದಲಿಗೆ ಕೈಗಾರಿಕಾ ದ್ರವ್ಯವಾದ ಡೈಎಥಿಲೀನ್ ಗ್ಲೈಕಾಲ್ ಬಳಕೆಯಾದ ಪ್ರಕರಣಗಳಲ್ಲಿ ಅನೇಕ ಮಕ್ಕಳು ಸಾವಿಗೀಡಾದರು. 2022ರಲ್ಲಿ ಗಾಂಬಿಯಾದಲ್ಲಿ ಸಂಭವಿಸಿದ 66 ಮಕ್ಕಳ ಸಾವಿಗೆ ಭಾರತೀಯ ಕಂಪನಿಗಳ ಸಿರಪ್‌ಗಳೇ ಕಾರಣವೆಂದು ವಿಶ್ವ ಆರೋಗ್ಯ ಸಂಸ್ಥೆ ಗುರ್ತಿಸಿದೆ. ಇವೇ ಸಿರಪ್‌ಗಳು, ಅದೇ ವರ್ಷ ಉಜ್ಬೇಕಿಸ್ತಾನದಲ್ಲೂ 18 ಮಕ್ಕಳ ಸಾವಿಗೆ ಕಾರಣವಾದವು. ಭಾರತದ ಕೆಲವೆಡೆಗಳಲ್ಲೂ ಕೆಮ್ಮಿನ ಸಿರಪ್‌ಗಳು ಮಕ್ಕಳ ಸಾವಿಗೆ ಕಾರಣವಾದವು.

ಕೆಮ್ಮಿನ ಸಿರಪ್‌ಗಳ ದುರುಪಯೋಗದ ಅತ್ಯಂತ ಕೆಟ್ಟ ರೂಪವು ಅವುಗಳನ್ನು ಮದ್ಯಕ್ಕೆ ಪರ್ಯಾಯವಾಗಿ ಅಮಲುಕಾರಕಗಳಾಗಿ ಬಳಸುವುದಾಗಿದೆ. ಬಾಂಗ್ಲಾದೇಶದಲ್ಲಿ ಮದ್ಯ ನಿಷೇಧ ಇರುವುದರಿಂದ, ಕೋಡೀನ್ ಹೊಂದಿರುವ ಸಿರಪ್‌ಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತದೆ, ಯುವಕರು ಅವುಗಳನ್ನು ನಶೆಗಾಗಿ ಬಳಸುವುದಿದೆ.

ಮಕ್ಕಳಿಗೆ ಕೆಮ್ಮು ಬಂದಾಗ ಉಪಶಮನಕ್ಕಾಗಿ ಏನು ಮಾಡಬೇಕು ಎನ್ನುವುದು ಪೋಷಕರನ್ನು ಸಾಮಾನ್ಯವಾಗಿ ಕಾಡುವ ಪ್ರಶ್ನೆ. ಆಧುನಿಕ ವೈದ್ಯಕೀಯದಲ್ಲಿ ಕೆಮ್ಮನ್ನು ನೇರ ಗುಣಪಡಿಸಲು ಚಿಕಿತ್ಸೆ ಇಲ್ಲ. ಉಪಚಾರದ ರೂಪದಲ್ಲಿ ಉತ್ತಮ ಪೋಷಣೆಯೊಂದಿಗೆ, ತೇವಾಂಶ, ಉಪ್ಪಿನ ನೀರಿನ ಮೂಗಿನ ಹನಿ ಸಹಾಯಕ. ಸಾಮಾನ್ಯವಾಗಿ ಕೆಮ್ಮಿನ ಸಮಸ್ಯೆ ಸ್ವಯಂ ನಿಯಂತ್ರಿತವಾಗಿದ್ದು, ಸ್ವತಃ ಗುಣವಾಗುತ್ತದೆ. ನೆಗಡಿಗೆ ಔಷಧ ತೆಗೆದುಕೊಂಡರೆ ಅದು ಒಂದು ವಾರದಲ್ಲಿ ಹೋಗುತ್ತದೆ, ಇಲ್ಲದಿದ್ದರೆ ಏಳು ದಿನ ತೆಗೆದುಕೊಳ್ಳುತ್ತದೆ ಎನ್ನುವ ಮಾತು ಕೆಮ್ಮಿಗೆ ಸಂಬಂಧಿಸಿದಂತೆಯೂ ನಿಜ. ಆದರೆ, ಕೆಮ್ಮು ಗಂಭೀರ ಸ್ವರೂಪದಲ್ಲಿದ್ದಾಗ ಅದಕ್ಕೆ ಕಾರಣಗಳನ್ನು ತಿಳಿಯಲು ಹಾಗೂ ಚಿಕಿತ್ಸೆಗಾಗಿ ವೈದ್ಯರನ್ನು ಸಂಪರ್ಕಿಸುವುದು ಅಗತ್ಯ.

ಭಾರತದಲ್ಲಿ ಪರಿಣಾಮಕಾರಿ ಔಷಧ ಗುಣಮಟ್ಟದ ಸಂರಕ್ಷಣೆ ಹಾಗೂ ಮಾರಾಟಕ್ಕೆ ಸಂಬಂಧಿಸಿದ ನಿಯಂತ್ರಣ ನೀತಿಯ ಅಗತ್ಯವಿದೆ. ಆ ನೀತಿಯ ಭಾಗವಾಗಿ ಕೆಮ್ಮಿನ ಸಿರಪ್‌ಗಳ ಮಾರಾಟಕ್ಕೆ ಸಂಬಂಧಿಸಿದ ನಿರ್ಬಂಧವನ್ನು ನೋಡಬಹುದು. ಔಷಧಗಳ ಗುಣಮಟ್ಟ, ಸುರಕ್ಷತೆ ಮತ್ತು ಸಮಂಜಸ ಬಳಕೆಯನ್ನು ಖಚಿತಪಡಿಸುವುದು ಸಾರ್ವಜನಿಕ ಆರೋಗ್ಯದ ಹಿತಾಸಕ್ತಿಗೆ ಅತ್ಯಂತ ಮುಖ್ಯ. ಹಾಗೆಯೇ ಸ್ವಯಂವೈದ್ಯದ ದುಸ್ಸಾಹದಿಂದ ದೂರವಿರುವಂತೆ ಸಾರ್ವಜನಿಕ ಜಾಗೃತಿ ಮೂಡಿಸುವ ಕೆಲಸವೂ ಆಗಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಧಿಕಾರದ ಆಟ ಅಸ್ತಿತ್ವದ ಹೋರಾಟ

ಪಶ್ಚಿಮ ಬಂಗಾಳದ ಟಿಎಂಸಿ ಮತ್ತು ಮಹಾರಾಷ್ಟ್ರದ ಎನ್‌ಸಿಪಿ ಹಾಗೂ ಶಿವಸೇನಾ ಪಕ್ಷಗಳು ಹೋಳಾಗಿವೆ. ಒಂದು ಚುನಾವಣಾ ಸೋಲು, ಅಧಿಕಾರ ನಷ್ಟವು ಪಕ್ಷಗಳ ಪಾಲಿಗೆ ವಿನಾಶಕಾರಿ ಆಗಬಲ್ಲುದೇ ಎಂಬ ಪ್ರಶ್ನೆ ಮೂಡಿದೆ. ಪಕ್ಷಗಳಿಗೆ ಸೈದ್ಧಾಂತಿಕ ನೆಲೆಗಟ್ಟು ಇಲ್ಲದಿರುವುದು, ಕುಟುಂಬ ರಾಜಕಾರಣವೂ ಈ ವಿದ್ಯಮಾನಕ್ಕೆ ಕಾರಣ ಎನ್ನಲಾಗುತ್ತಿದೆ. 2014ರ ನಂತರ ಪ್ರಾದೇಶಿಕ ಪಕ್ಷಗಳು ಹೋಳಾಗಿ ಅಸ್ತಿತ್ವ ಕಳೆದುಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದ್ದು, ಇದರ ಹಿಂದೆ ಬಿಜೆಪಿಯ ತಂತ್ರಗಾರಿಕೆ ಇದೆ ಎನ್ನುವ ವಿಶ್ಲೇಷಣೆಯಿದೆ

ಪ್ರಾದೇಶಿಕ ಪಕ್ಷಗಳಲ್ಲಿ ದಿಢೀರ್ ಪಲ್ಲಟ ; 2014ರ ನಂತರ ಹೆಚ್ಚಳ

• ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

ಮಮತಾ ಬ್ಯಾನರ್ಜಿ ಅವರು 15 ವರ್ಷ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಆಗಿದ್ದರು. ರಾಷ್ಟ್ರ ರಾಜಕಾರಣದಲ್ಲಿ ಪ್ರಭಾವಿಯಾಗಿದ್ದ ಅವರು, ಎನ್‌ಡಿಎ ವಿರೋಧಿ ಕೂಟದಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ರಾಜ್ಯದ ಜನರ ನೆಚ್ಚಿನ ನಾಯಕಿಯಾಗಿದ್ದರು. ಟಿಎಂಸಿಯ ಪರಮೋಚ್ಚ ನಾಯಕಿಯಾಗಿದ್ದ ಅವರು ದೇಶದ ಪ್ರಾದೇಶಿಕ ಪಕ್ಷಗಳ ನಕ್ಷೆಯಲ್ಲಿ ಮಹತ್ವದ ಸ್ಥಾನವನ್ನೂ ಪಡೆದಿದ್ದರು; ಜಗತ್ತಿನ 100 ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಒಬ್ಬರು ಎಂದು 'ಟೈಮ್' ಪತ್ರಿಕೆ ಹೇಳಿತ್ತು. ಆದರೆ, ಒಂದು ಚುನಾವಣಾ ಸೋಲು ಅವರ ರಾಜಕೀಯ ಅಸ್ತಿತ್ವವನ್ನೇ ಅಲುಗಾಡಿಸುತ್ತಿದೆ. ಅವರ ಪಕ್ಷವನ್ನು ಹೋಳಾಗಿಸಿದೆ. ಅವರೇ ಕಟ್ಟಿ ಬೆಳೆಸಿದ್ದ ಪಕ್ಷದ ಕಚೇರಿ, ಚಿಹ್ನೆ ಮತ್ತು ಆಸ್ತಿಯನ್ನು ಬೇರೊಬ್ಬರಿಗೆ ಬಿಟ್ಟುಕೊಡಬೇಕಾದ ಸಾಧ್ಯತೆಯನ್ನು ಹುಟ್ಟುಹಾಕಿದೆ.

ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು ಮೇ 4ರಂದು. ಸತತ ಮೂರು ಬಾರಿ ಅಧಿಕಾರ ನಡೆಸಿದ್ದ ಟಿಎಂಸಿ, ಬಿಜೆಪಿಯ ತಂತ್ರಗಾರಿಕೆಯ ಮುಂದೆ ಸೋಲೊಪ್ಪಿಕೊಂಡು, 80 ಸ್ಥಾನಗಳಿಗೆ ಕುಸಿದಿತ್ತು, ನಂತರ ಪಕ್ಷದಲ್ಲಿ ಅನಪೇಕ್ಷಿತ ಘಟನಾವಳಿಗಳು ನಡೆಯತೊಡಗಿದವು. ಫಲಿತಾಂಶ ಬಂದು ಒಂದು ತಿಂಗಳ ನಂತರವೂ ಬಿಜೆಪಿ ಸಂಭ್ರಮಾಚರಣೆ ನಿಂತಿರಲಿಲ್ಲ. ಫಾಲ್ಟಾ ಕ್ಷೇತ್ರದ ಉಪಚುನಾವಣೆಯಿಂದ ಟಿಎಂಸಿಯ ಜಹಾಂಗೀರ್ ಖಾನ್ ಹಿಂದೆ ಸರಿದರು. ಮಮತಾ ಬ್ಯಾನರ್ಜಿ ಅವರ ಸೋದರಳಿಯ ಮತ್ತು ಅವರ ಉತ್ತರಾಧಿಕಾರಿ ಅಭಿಷೇಕ್ ಬ್ಯಾನರ್ಜಿ ಅವರ ಮೇಲೆ ಕಾರ್ಯಕ್ರಮವೊಂದರಲ್ಲಿ ಮೊಟ್ಟೆಗಳನ್ನು ಎಸೆಯಲಾಯಿತು. ಇಂಥ ಪ್ರತಿಕೂಲ ಸ್ಥಿತಿಯಲ್ಲಿ ಟಿಎಂಸಿಗೆ ಹೊಡೆತ ನೀಡಿದ್ದು ಮಮತಾ ಅವರ ಒಂದು ನಿರ್ಧಾರ.

ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಸೋತಿದ್ದ ಮಮತಾ ಅವರು, ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಶೋಭನ್‌ದೇವ್ ಚಟ್ಟೋಪಾಧ್ಯಾಯ ಅವರನ್ನು ಆಯ್ಕೆ ಮಾಡಿದ್ದರು. ಆದರೆ, ಈ ಸಂಬಂಧ ಪಕ್ಷವು ಸಲ್ಲಿಸಿರುವ ದಾಖಲೆಯಲ್ಲಿ ತಮ್ಮ ಸಹಿಯನ್ನು ನಕಲಿ ಮಾಡಲಾಗಿದೆ ಎಂದು ಟಿಎಂಸಿಯ ಶಾಸಕರಾದ ರಿತಬ್ರತಾ ಬ್ಯಾನರ್ಜಿ ಮತ್ತು ಸಂದೀಪನ್ ಸಹಾ ಅವರು ಸ್ಪೀಕರ್‌ಗೆ ದೂರು ನೀಡಿದರು. ತಕ್ಷಣವೇ ಪ್ರಕರಣವನ್ನು ಸಿಐಡಿಗೆ ವಹಿಸಲಾಯಿತು. ಇದರಿಂದ ಕೊಂಚ ವಿಚಲಿತರಾದ ಮಮತಾ ಬ್ಯಾನರ್ಜಿ ಅವರು ದುಡುಕಿನ ನಿರ್ಧಾರ ಕೈಗೊಂಡು, ಇಬ್ಬರು ಶಾಸಕರನ್ನು ಟಿಎಂಸಿಯಿಂದ ಉಚ್ಚಾಟಿಸಿದರು. ಪಕ್ಷದಲ್ಲಿ ಗುಪ್ತವಾಗಿದ್ದ ಭಿನ್ನಮತ ಹೊರಬರಲು ಇದೇ ಸೂಕ್ತ ಸಂದರ್ಭವಾಯಿತು. ರಿತಬ್ರತಾ ಅವರು ಪಕ್ಷದಲ್ಲಿ ಹೊಸ ನಾಯಕನಾಗಿ ಹೊರಹೊಮ್ಮಿದರು. 58 ಶಾಸಕರ ಸಮ್ಮತಿಯ ಪತ್ರವನ್ನು ಸ್ಪೀಕರ್‌ಗೆ ನೀಡಿದ ರಿತಬ್ರತಾ, ತಮ್ಮನ್ನು ವಿರೋಧ ಪಕ್ಷದ ನಾಯಕ ಎಂದು ಗುರುತಿಸಬೇಕು ಎಂಬ ಬೇಡಿಕೆಯಿಟ್ಟರು. ಸ್ಪೀಕರ್ ಅವರು ಅದನ್ನು ಅನುಮೋದಿಸಿ, ರಿತಬ್ರತಾ ಅವರನ್ನು ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕನನ್ನಾಗಿ ಅಂಗೀಕರಿಸಿದರು. ಪ್ರಸ್ತುತ ತಮ್ಮ ಬಲವು 64ಕ್ಕೆ ಏರಿದೆ ಎಂದಿರುವ ರಿತಬ್ರತಾ ಅವರು, ತಮ್ಮದೇ ಮೂಲ ಟಿಎಂಸಿ ಪಕ್ಷ ಎಂದು ಪ್ರತಿಪಾದಿಸುತ್ತಿದ್ದಾರೆ. ತಮ್ಮದೇ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ರಚಿಸಿಕೊಂಡು, ಮಮತಾ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಿರುವ ರಿತಬ್ರತಾ ಅವರ ಗುಂಪು, ಪಕ್ಷದ ಹೆಸರು ಮತ್ತು ಚಿಹ್ನೆಗಾಗಿ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದೆ. ಇನ್ನೊಂದೆಡೆ, ಮಮತಾ ಬ್ಯಾನರ್ಜಿ ಅವರೂ ಪಕ್ಷದ ಪದಾಧಿಕಾರಿಗಳ ಹೊಸ ಪಟ್ಟಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದಾರೆ.

ಲೋಕಸಭೆಯಲ್ಲೂ ಟಿಎಂಸಿಗೆ ಮತ್ತೊಂದು ರೀತಿಯ ಆಘಾತ ಉಂಟಾಗಿದೆ. ಪಕ್ಷದ 28 ಸಂಸದರ ಪೈಕಿ 20 ಮಂದಿ ತಮ್ಮ ಪಕ್ಷವನ್ನು ತ್ರಿಪುರಾದ 'ನ್ಯಾಷನಲಿಸ್ಟ್ ಸಿಟಿಜನ್ಸ್ ಪಾರ್ಟಿ ಆಫ್ ಇಂಡಿಯಾ' (ಎನ್‌ಸಿಪಿಐ) ಎಂಬ ಪಕ್ಷದೊಂದಿಗೆ ವಿಲೀನಗೊಳಿಸಿದ್ದು, ಆಡಳಿತಾರೂಢ ಎನ್‌ಡಿಎ ಕೂಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಲೋಕಸಭೆಯಲ್ಲಿ ಟಿಎಂಸಿಯ ಬಲವು ಕೇವಲ 8ಕ್ಕೆ ಕುಸಿದಿದೆ. ಇತ್ತೀಚಿನವರೆಗೂ ಬಿಜೆಪಿಯೊಂದಿಗೆ ತೀವ್ರ ವಿರೋಧ, ಕಾಂಗ್ರೆಸ್‌ನೊಂದಿಗೆ ಭಿನ್ನಮತ ಹೊಂದುವ ಮೂಲಕ ರಾಷ್ಟ್ರ ರಾಜಕಾರಣದಲ್ಲಿ ಪ್ರಾದೇಶಿಕ ಪಕ್ಷಗಳ ಗಟ್ಟಿ ಧ್ವನಿಯಾಗಿದ್ದ ಮಮತಾ ಅವರು ಈ ಬೆಳವಣಿಗೆಯಿಂದ ತಮ್ಮ ಧ್ವನಿ ಕಳೆದುಕೊಂಡಿದ್ದಾರೆ.

ಅಧಿಕಾರ ಕಳೆದುಕೊಂಡ ಪಕ್ಷ ನೆಲೆ ಕಳೆದುಕೊಳ್ಳುವುದು ಹೊಸದೇನಲ್ಲ. ಪಶ್ಚಿಮ ಬಂಗಾಳದಲ್ಲಿ 34 ವರ್ಷ ಅಧಿಕಾರ ನಡೆಸಿದ್ದ ಎಡಪಕ್ಷಗಳನ್ನು ದೂಳೀಪಟ ಮಾಡಿ, ಸತತ ಮೂರು ಅವಧಿಗೆ ಮುಖ್ಯಮಂತ್ರಿ ಆಗಿದ್ದವರು ಮಮತಾ ಬ್ಯಾನರ್ಜಿ. ಅಧಿಕಾರ ಕಳೆದುಕೊಂಡ ನಂತರ ಎಡಪಕ್ಷಗಳು ತಮ್ಮ ಬಲ, ನೆಲೆ ಕಳೆದುಕೊಂಡವು. 2006ರಲ್ಲಿ 176 ಸ್ಥಾನ ಗೆದ್ದಿದ್ದ ಎಡಪಕ್ಷಗಳು, 2011ರಲ್ಲಿ 40 ಸ್ಥಾನಕ್ಕಿಳಿದವು. 2026ರಲ್ಲಿ ಅವು ಕೇವಲ ಒಂದು ಸ್ಥಾನ ಮಾತ್ರ ಗೆದ್ದಿವೆ. ಪ್ರಸ್ತುತ ಅಂಥ ಅಸ್ತಿತ್ವದ ಸವಾಲು ಮಮತಾ ಬ್ಯಾನರ್ಜಿ ಅವರಿಗೆ ಎದುರಾಗಿದೆ.

ಆಧಾರ: ಪಿಟಿಐ, ಇನ್‌ಸ್ಟಿಟ್ಯೂಟ್ ಆಫ್ ಸೌಥ್ ಏಷ್ಯನ್ ಸ್ಟಡೀಸ್, ಮಾಧ್ಯಮ ವರದಿಗಳು



ಕಲೆ: ಸಂತೋಷ್ ಸಸಿಹಿತ್ಲು

'ಆಪರೇಷನ್ ಟೈಗರ್–2' ಠಾಕ್ರೆ ಇನ್ನಷ್ಟು ದುರ್ಬಲ

2022ರಲ್ಲಿ ಶಿವಸೇನಾ ಮುಖಂಡ, ಪಕ್ಷದ ಸಂಸ್ಥಾಪಕ ಬಾಳಾ ಠಾಕ್ರೆ ಅವರ ಆಪ್ತರಾಗಿದ್ದ ಏಕನಾಥ ಶಿಂದೆ ಅವರು 40 ಶಾಸಕರೊಂದಿಗೆ ಉದ್ಧವ್ ಠಾಕ್ರೆ ವಿರುದ್ಧ ಬಂಡಾಯ ಎದ್ದು ಶಿವಸೇನಾದ ಪ್ರತ್ಯೇಕ ಬಣ ಸ್ಥಾಪಿಸಿ ಬಿಜೆಪಿಯ ಸಹಕಾರದೊಂದಿಗೆ ಮುಖ್ಯಮಂತ್ರಿಯಾಗಿದ್ದು ಈಗ ಇತಿಹಾಸ. ನಂತರ, 2024ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ, ಶಿವಸೇನಾ ಶಿಂದೆ ಬಣ, ಎನ್‌ಸಿಪಿ ಅಜಿತ್ ಪವಾರ್ ಬಣದ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದು ಅದರಲ್ಲಿ ಶಿಂದೆ ಉಪಮುಖ್ಯಮಂತ್ರಿಯಾಗಿದ್ದಾರೆ. ನಾಲ್ಕು ವರ್ಷಗಳ ಬಳಿಕ ಶಿಂದೆ ಅವರು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣವನ್ನು ಮತ್ತೆ ಒಡೆದಿದ್ದು, ಆರು ಸಂಸದರನ್ನು ತಮ್ಮ ತೆಕ್ಕೆಗೆ ಸೆಳೆದುಕೊಳ್ಳಲು ಯಶಸ್ವಿಯಾಗಿದ್ದಾರೆ. ಇದನ್ನು ಅವರು 'ಆಪರೇಷನ್ ಟೈಗರ್'ನ ಎರಡನೇ ಹಂತ ಎಂದು ಕರೆದಿದ್ದಾರೆ.

1966ರಲ್ಲಿ ಬಾಳಾ ಠಾಕ್ರೆ ಅವರು ಶಿವಸೇನಾ ಸ್ಥಾಪನೆ ಮಾಡಿದ ನಂತರ ಪಕ್ಷವು ಹಲವು ಬಾರಿ (1974ರಲ್ಲಿ ಬಂಧು ಶಿಂಗ್ರೆ, 1991ರಲ್ಲಿ ಛಗನ್ ಭುಜಬಲ್, 2005ರಲ್ಲಿ ನಾರಾಯಣ ರಾಣೆ, 2005–06ರಲ್ಲಿ ರಾಜ್ ಠಾಕ್ರೆ) ಬಂಡಾಯವನ್ನು ಎದುರಿಸಿತ್ತು. ಆದರೆ, ಬಾಳಾ ಠಾಕ್ರೆ ಅವರು ಇರುವವರೆಗೂ, ಅಂದರೆ 2012ರವರೆಗೂ ಶಿವಸೇನಾವು ಎಲ್ಲ ಬಂಡಾಯವನ್ನು ಯಶಸ್ವಿಯಾಗಿ ನಿಭಾಯಿಸಿತ್ತು. ಪಕ್ಷಕ್ಕೆ ಹಾನಿಯೂ ಆಗಿರಲಿಲ್ಲ. 2019ರ ವಿಧಾನಸಭಾ ಚುನಾವಣೆಯ ಬಳಿಕ ಉದ್ಧವ್ ಠಾಕ್ರೆ ಅವರು ಬಿಜೆಪಿಯೊಂದಿಗಿನ ಪಕ್ಷದ ಸುದೀರ್ಘ ಮೈತ್ರಿಯನ್ನು ಕಡಿದುಕೊಂಡು, ಕಾಂಗ್ರೆಸ್, ಎನ್‌ಸಿಪಿ ಜೊತೆ ಸೇರಿ ಸರ್ಕಾರ ರಚನೆ ಮಾಡಿದ ನಂತರ 2022ರಲ್ಲಿ ಕಂಡು ಬಂದ ಬಂಡಾಯವು ಪಕ್ಷವನ್ನೇ ಎರಡು ಹೋಳು ಮಾಡಿತ್ತು. ಅಲ್ಲದೇ, ಪಕ್ಷದ ಚಿಹ್ನೆ ಮತ್ತು ಹೆಸರು ಕೂಡ ಬಂಡಾಯದ ನೇತೃತ್ವ ವಹಿಸಿದ್ದ ಏಕನಾಥ ಶಿಂದೆ ಬಣದ ಪಾಲಾಗಿತ್ತು.

2022ರ ನಂತರದ ಬಹುದೊಡ್ಡ ಬಂಡಾಯಕ್ಕೆ ಸಾಕ್ಷಿಯಾಗಿರುವ ಶಿವಸೇನಾದ ಉದ್ಧವ್ ಠಾಕ್ರೆ ಬಣ ಈಗ ಇನ್ನಷ್ಟು ದುರ್ಬಲಗೊಂಡಂತೆ ಕಾಣುತ್ತಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಠಾಕ್ರೆ ಬಣದ ಒಂಬತ್ತು ಸಂಸದರು ಆಯ್ಕೆಯಾಗಿದ್ದರು. ಶಿಂದೆ ಬಣದ ಏಳು ಮಂದಿ ಚುನಾವಣೆಯಲ್ಲಿ ಗೆದ್ದಿದ್ದರು. ಠಾಕ್ರೆ ಬಣದೊಂದಿಗೆ ಗುರುತಿಸಿಕೊಂಡಿದ್ದ ಸಂಸದರಾದ ನಾಗೇಶ್ ಬಾಪುರಾವ್ ಪಾಟೀಲ್ ಅಷ್ಟೀಕರ್, ಸಂಜಯ್ ದೇಶ್‌ಮುಖ್, ಸಂಜಯ್ ಜಾಧವ್, ಸಂಜಯ್ ಡಿ. ಪಾಟೀಲ್, ಓಂಪ್ರಕಾಶ್ ರಾಜೆ ನಿಂಬಾಳ್ಕರ್, ಬಾಬಾಸಾಹೇಬ್ ವಾಗ್ಚುರೆ ಅವರು ಶಿಂದೆ ಬಣಕ್ಕೆ ಈಗ ಸೇರ್ಪಡೆಗೊಂಡಿರುವುದರಿಂದ ಠಾಕ್ರೆ ಬಣದ ಸಂಸದರ ಸಂಖ್ಯೆ ಮೂರಕ್ಕೆ ಇಳಿದಿದೆ. ಸದ್ಯ ಈ ಬಣವು ಒಬ್ಬ ರಾಜ್ಯಸಭಾ ಸೇರಿದಂತೆ ನಾಲ್ವರು ಸಂಸದರನ್ನಷ್ಟೇ ಹೊಂದಿದೆ. ಹೊಸಬರ ಸೇರ್ಪಡೆಯೊಂದಿಗೆ ಶಿಂದೆ ಬಣದ ಸಂಸದರ ಸಂಖ್ಯೆ 13ಕ್ಕೆ ಏರಿದ್ದು, ಸಂಸತ್‌ನಲ್ಲಿ ಎನ್‌ಡಿಎ ಸದಸ್ಯರ ಸಂಖ್ಯೆ ಮತ್ತಷ್ಟು (319) ಹೆಚ್ಚಾಗಿದೆ.

'ಆರು ಹುಲಿಗಳು ನಿಜವಾದ ಶಿವಸೇನಾಕ್ಕೆ ಸೇರ್ಪಡೆಗೊಂಡಿದ್ದಾರೆ. 2022ರಲ್ಲಿ ನಮ್ಮ ಹೋರಾಟ ಆರಂಭವಾಗಿತ್ತು. ಅದರ ಮುಂದುವರಿದ ಭಾಗವಾಗಿ ಈಗ ಎರಡನೇ ಹಂತದ 'ಆಪರೇಷನ್ ಟೈಗರ್' ನಡೆದಿದೆ. ಅದು ಯಶಸ್ವಿಯಾಗಿದೆ. ಈ ಬಾರಿ ನಾವು ಸಿಕ್ಸರ್ ಹೊಡೆದಿದ್ದೇವೆ' ಎಂದು ಶಿಂದೆ ಘೋಷಿಸಿದ್ದಾರೆ.

ಶಿಂದೆ ಬಣದ ಶಾಸಕ, ಹಿರಿಯ ಮುಖಂಡ ಮುರ್ಜಿ ಪಟೇಲ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ಆಪರೇಷನ್ ಟೈಗರ್‌ನ ಮೂರನೇ ಭಾಗ ಮತ್ತು ನಾಲ್ಕನೇ ಭಾಗ ಮುಂದಿನ ದಿನಗಳಲ್ಲಿ ನಡೆಯಲಿವೆ' ಎಂದು ಹೇಳಿದ್ದಾರೆ.

ಸೈದ್ಧಾಂತಿಕತೆಯ ಕೊರತೆ, ಕುಟುಂಬ ರಾಜಕಾರಣ

ಪ್ರಾದೇಶಿಕ ಪಕ್ಷಗಳೇ ಹೆಚ್ಚಾಗಿ ಇಂಥ ಅಸ್ತಿತ್ವದ ಸಂಘರ್ಷಕ್ಕೆ ಗುರಿಯಾಗಲು ಅವುಗಳ ಸೈದ್ಧಾಂತಿಕ ನೆಲೆಗಟ್ಟಿನ ಕೊರತೆ, ಕುಟುಂಬ ರಾಜಕಾರಣವೇ ಕಾರಣ ಎನ್ನುವ ವಿಶ್ಲೇಷಣೆ ಇದೆ. ಅಧಿಕಾರಕ್ಕಾಗಿ ಮೈತ್ರಿ ಬದಲಾಯಿಸುವುದು, ತಮ್ಮ ಸಂಬಂಧಿಗಳನ್ನೇ ಪಕ್ಷದ ಉತ್ತರಾಧಿಕಾರಿಗಳನ್ನಾಗಿ ನೇಮಿಸುವುದು... ಇಂಥ ಪ್ರವೃತ್ತಿಗಳೇ ಅವುಗಳ ಪತನಕ್ಕೆ ಕಾರಣ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಡುತ್ತಾರೆ. ಆದರೆ, ಕೆಲವರು ಹತ್ತಾರು ವರ್ಷಗಳ ಶ್ರಮ, ಸಂಪನ್ಮೂಲದಿಂದ ಕಟ್ಟಿದ ಪಕ್ಷವನ್ನು ಅವರ ಜತೆಯಲ್ಲಿರುವವರೇ ಅದೂ ಕೆಲವೇ ದಿನಗಳಲ್ಲಿ 'ಹೈಜಾಕ್' ಮಾಡುತ್ತಿರುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ.

ಪ್ರಸ್ತುತ ಮಮತಾ ಬ್ಯಾನರ್ಜಿ, ಶರದ್ ಪವಾರ್, ಉದ್ಧವ್ ಠಾಕ್ರೆ ಒಂದೇ ರೀತಿಯ ಸವಾಲು ಎದುರಿಸುತ್ತಿದ್ದಾರೆ. ಮಮತಾ ಬ್ಯಾನರ್ಜಿ ಅವರು 28 ವರ್ಷಗಳಲ್ಲಿ ಕಟ್ಟಿದ ಪಕ್ಷ ಕೆಲವೇ ವಾರಗಳಲ್ಲಿ ಅವರ ಕಣ್ಣಮುಂದೆಯೇ ಹೋಳಾಗಿ, ತಾವೇ ಕಟ್ಟಿದ ಪಕ್ಷವನ್ನು ಉಳಿಸಿಕೊಳ್ಳಲೂ ಅವರು ಸೆಣಸಾಡಬೇಕಾಗಿದೆ. ಶರದ್ ಪವಾರ್ ಅವರು 25 ವರ್ಷ ಕಟ್ಟಿದ ಪಕ್ಷವನ್ನು ಅಜಿತ್ ಪವಾರ್ ಕೆಲವೇ ದಿನಗಳಲ್ಲಿ ಹೋಳು ಮಾಡುತ್ತಾರೆ. ಬಾಳಾ ಠಾಕ್ರೆ ಅವರು ಮರಾಠಿ ಅಸ್ಮಿತೆಯ ಹೆಸರಿನಲ್ಲಿ ಐದು ದಶಕಗಳಲ್ಲಿ ಕಟ್ಟಿದ ಕೂಟವನ್ನು ಅವರ ಮಗನ ಕೈಯಿಂದ ಏಕನಾಥ ಶಿಂದೆ ಒಂದೇ ವಾರದಲ್ಲಿ ಕಸಿದುಕೊಳ್ಳುತ್ತಾರೆ. ಪ್ರಾದೇಶಿಕ ಪಕ್ಷಗಳಲ್ಲಿ ಈ ರೀತಿಯ ದಿಢೀರ್ ಬೆಳವಣಿಗೆಗಳು ಹೆಚ್ಚೆಚ್ಚು ನಡೆಯುತ್ತಿವೆ.

ಒಡಕಿನ ಹಿಂದೆ ಇದೆಯೇ ಬಿಜೆಪಿ?

ಟಿಎಂಸಿಯಲ್ಲಿನ ಬಿರುಕು, ಶಿವಸೇನಾ ಉದ್ಧವ್ ಠಾಕ್ರೆ ಬಣ ಮತ್ತೆ ವಿಭಜನೆಯಾಗಿದ್ದರ ಹಿಂದೆ ಬಿಜೆಪಿ ಇದೆ ಎಂಬ ಆರೋಪವನ್ನು ವಿರೋಧ ಪಕ್ಷಗಳು ಮಾಡುತ್ತಿವೆ.

ಟಿಎಂಸಿಯ ಶಾಸಕರು, ಸಂಸದರು ಮಮತಾ ಬ್ಯಾನರ್ಜಿ ವಿರುದ್ಧ ಬಂಡಾಯ ಎದ್ದಿರುವುದರಲ್ಲಿ ಪಕ್ಷದ ಪಾತ್ರ ಏನೂ ಇಲ್ಲ ಎಂದು ಬಿಜೆಪಿಯ ಹಲವು ಮುಖಂಡರು ಹೇಳಿದ್ದಾರೆ. ಆದರೆ, ಮಹುವಾ ಮೊಯಿತ್ರಾ ಸೇರಿದಂತೆ ಟಿಎಂಸಿಯ ಹಲವು ಮುಖಂಡರು ಇದರ ಹಿಂದೆ ಬಿಜೆಪಿ ಕೈವಾಡ ಇದೆ ಎಂದು ಆರೋಪಿಸಿದ್ದಾರೆ. ಬಂಡಾಯಗಾರರನ್ನು ಬಿಜೆಪಿ ಬೆಂಬಲಿಸುತ್ತಿದೆ, ಅವರಿಗೆ ರಕ್ಷಣೆ ನೀಡುತ್ತಿದೆ ಎಂದು ಕಾಂಗ್ರೆಸ್, ಎಡಪಕ್ಷಗಳು ಕೂಡ ಆರೋಪಿಸಿವೆ.

ಶಿವಸೇನಾದಲ್ಲಿ ನಡೆದ ಇತ್ತೀಚಿನ ಬೆಳವಣಿಗೆಗಳಲ್ಲೂ ತನ್ನ ಪಾತ್ರ ಇಲ್ಲ ಎಂದು ಬಿಜೆಪಿ ಹೇಳಿದೆ. ಆದರೆ, ಆರು ಸಂಸದರು ಅಧಿಕೃತವಾಗಿ ಶಿಂದೆ ಬಣಕ್ಕೆ ಸೇರುವುದಕ್ಕೂ ಮೊದಲು ಕೊಲ್ಹಾಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಮಹಾರಾಷ್ಟ್ರದಲ್ಲಿ ಈಗ ಇರುವುದು ಒಂದೇ ಶಿವಸೇನಾ. ಏಕನಾಥ ಶಿಂದೆ ಅದರ ನೇತೃತ್ವ ವಹಿಸಿದ್ದಾರೆ' ಎಂದು ಹೇಳಿದ್ದರು. ಶಾ ಅವರ ಹೇಳಿಕೆಯನ್ನು ಆರು ಸಂಸದರ ಬಂಡಾಯದೊಂದಿಗೆ ತಳಕು ಹಾಕಲಾಗಿತ್ತು.

ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದ ಉದ್ಧವ್ ಠಾಕ್ರೆ, 'ಬಿಜೆಪಿಯು ದೇಶದಲ್ಲಿ ಒಂದು ಪಕ್ಷದ ರಾಜಕೀಯ ವ್ಯವಸ್ಥೆಯನ್ನು ಹುಟ್ಟುಹಾಕಲು ಪ್ರಯತ್ನಿಸುತ್ತಿದೆ' ಎಂದು ದೂರಿದ್ದರು.

ಸಂಸತ್‌ನಲ್ಲಿ ಬಲ ಹೆಚ್ಚಿಸಲು ಎನ್‌ಡಿಎ ಕಸರತ್ತು: ಸಂವಿಧಾನ ತಿದ್ದುಪಡಿ ಮಸೂದೆಗಳನ್ನು ಅಂಗೀಕರಿಸಲು ಎನ್‌ಡಿಎಗೆ ಸಂಸತ್ತಿನ ಎರಡೂ ಸದನಗಳಲ್ಲಿ ಮೂರನೇ ಎರಡರಷ್ಟು ಬಹುಮತ ಬೇಕು. ಹೀಗಾಗಿ, ಅದು ತನ್ನ ಬಲವನ್ನು ಹೆಚ್ಚಿಸಲು ಕಸರತ್ತು ನಡೆಸುತ್ತಲೇ ಇದೆ. ಟಿಎಂಸಿ ವಿರುದ್ಧ ಬಂಡಾಯ ಎದ್ದಿರುವ ಸಂಸದರು ಎನ್‌ಡಿಎಗೆ ಬೆಂಬಲ ಘೋಷಿಸಿದ್ದಾರೆ.

ಟಿಎಂಸಿಯ 20 ಸಂಸದರು ಎನ್‌ಸಿಪಿಐನಂಥ 'ಅನಾಮಧೇಯ' ಪಕ್ಷದೊಂದಿಗೆ ಸೇರಿರುವುದು ಕೂಡ ಒಂದು ತಂತ್ರಗಾರಿಕೆಯಾಗಿದ್ದು, ಮುಂದಿನ ದಿನಗಳಲ್ಲಿ ಇವರೆಲ್ಲ ಬಿಜೆಪಿ ಸೇರಲಿದ್ದಾರೆ ಎನ್ನುವ ಮಾತುಗಳಿವೆ. ಈಗ ಠಾಕ್ರೆ ಬಣ ತ್ಯಜಿಸಿ ಶಿಂದೆ ಬಣ ಸೇರಿರುವ ಸಂಸದರು ಕೂಡ ಎನ್‌ಡಿಎ ತೆಕ್ಕೆಗೆ ಬಂದಿದ್ದಾರೆ. ಇದರಿಂದಾಗಿ ಲೋಕಸಭೆಯಲ್ಲಿ ಎನ್‌ಡಿಎ ಬಲ ಜಾಸ್ತಿಯಾಗಿದೆ.

ಪ್ರಾದೇಶಿಕ ಪಕ್ಷಗಳಲ್ಲಿ ಬಂಡಾಯ ಸೃಷ್ಟಿಸಿ ಅದರ ಪ್ರಯೋಜನವನ್ನು ಪಡೆಯಲು ಬಿಜೆಪಿ ಯತ್ನಿಸುತ್ತಿದೆ ಎಂಬುದು ವಿರೋಧ ಪಕ್ಷಗಳ ಆರೋಪ.

ಪ್ರಜಾವಾಣಿ DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	ನಾರ್ಬರ್ಟ್ ಡಿಸೋಜ, ಜಮಖಂಡಿ, ಬಾಗಲಕೋಟೆ	5,00,000
2	ರವಿಶಂಕರ ಬಾಳೆ, ಯಾದವಗಿರಿ, ಮೈಸೂರು	1,00,000
3	ರವಿ ಕೃಷ್ಣಮೂರ್ತಿ, ಗಿರಿನಗರ, ಬೆಂಗಳೂರು	75,000
4	ಬೆಟ್ಟದೂರು ಹಾಸ್ಪಿಟಲ್ಸ್, ರಾಯಚೂರು	50,000
5	ಮಂಜುಳಾ, ಬನಶಂಕರಿ, ಬೆಂಗಳೂರು	30,000
6	ಲಲಿತಾ ಎನ್.ಕೆ. ಮೂರ್ತಿ, ಬನಶಂಕರಿ 2ನೇ ಹಂತ, ಬೆಂಗಳೂರು	15,000
7	ಶಶಿಧರ್ ಸತ್ಯ ಮೃತ್ಯುಂಜಯ, ಬನಶಂಕರಿ 3ನೇ ಹಂತ, ಬೆಂಗಳೂರು	12,000
8	ಚನ್ನಬಸವರಾಜ್ ಶಿವಮೂರ್ತಯ್ಯ ಹಿರೇಮಠ, ಪಂಚಾಕ್ಷರಿ ನಗರ, ಗದಗ	11,000
9	ಆನಂದ ದೊಡ್ಡಮನಿ, ವಿಲ್ಸನ್ ಗಾರ್ಡನ್, ಬೆಂಗಳೂರು	10,001
10	ಸಂಪತ್ ಕುಮಾರ್ ಕಿಗ್ಗ ಆಚ್ಯುತ ರಾವ್, ಜೆ.ಪಿ. ನಗರ, ಬೆಂಗಳೂರು	10,000
11	ಡಾ. ರತ್ನಮ್ಮ ಜೆ., ಶರಾವತಿ ನಗರ, ಶಿವಮೊಗ್ಗ	10,000
12	ಕೆ.ಎಲ್.ಗುಂಡೂರಾವ್, ಜೆ.ಪಿ. ನಗರ, ಬೆಂಗಳೂರು	10,000
13	ಸುಧಾ ಕೆ.ವಿ., ಬನಶಂಕರಿ 3ನೇ ಹಂತ, ಬೆಂಗಳೂರು	10,000
14	ಮಧುಸೂದನ್ ಕೆ.ಪಿ., ಸ್ವಾಮಿ ವಿವೇಕಾನಂದ ಲೇಔಟ್, ಬೆಂಗಳೂರು	10,000
15	ಡಾ. ಎಸ್.ಟಿ.ಕಾಂತರಾಜ್, ಕನಕ ಕ್ಲಿನಿಕ್, ಬೆಂಗಳೂರು	10,000
16	ಸತೀಶ್, ಆರ್.ಕೆ. ಗಾರ್ಡನ್ಸ್, ಬೆಂಗಳೂರು	10,000
17	ಕೆ.ನಾಗರತ್ನ, ಹಲಸೂರು, ಬೆಂಗಳೂರು	10,000
18	ಎಸ್.ಗುರುರಾಜ ರಾವ್, ವಿಶ್ವೇಶ್ವರ ನಗರ, ಬೆಂಗಳೂರು	10,000
19	ಅನಿಲ್ ಕುಮಾರ್ ಚನ್ನೇಗೌಡ, ವಿಜಯನಗರ, ಬೆಂಗಳೂರು	10,000
20	ಸುರೇಶ್ ಅಂಗಡಿ, ವಿಜಯನಗರ, ಬೆಂಗಳೂರು	10,000
21	ಇಂದುಮತಿ, ಬಿ.ಇ.ಎಲ್ ರಸ್ತೆ, ಬೆಂಗಳೂರು	10,000
22	ಲೋಕೇಶ್ ಕೆ., ಆವಲಹಳ್ಳಿ, ಬೆಂಗಳೂರು	10,000
23	ಗುರುಪಾದು ಕೆ.ಎಂ., ಜೆ.ಪಿ. ನಗರ, ಬೆಂಗಳೂರು	10,000
24	ನರಸಿಂಹಸ್ವಾಮಿ ಎ.ಆರ್., ಬಿಳೇಕಹಳ್ಳಿ, ಬೆಂಗಳೂರು	10,000
25	ಬಸವರಾಜು ಎಚ್.ಆರ್., ಕೋಡಿಚಿಕ್ಕನಹಳ್ಳಿ, ಬೆಂಗಳೂರು	6,473
26	ಶಿವಾನಂದ, ಸುಂಕದಕಟ್ಟೆ, ಬೆಂಗಳೂರು	6,000
27	ರಘುನಾಥ್ ಮಠಕೂರ್ ಸುಬ್ಬರಾವ್, ಕೆ.ಎಚ್.ಬಿ. ಕಾಲೊನಿ, ಬೆಂಗಳೂರು	6,000

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಮತ್ತು ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಒಳಿತನ್ನು ಮಾತ್ರ ಹೇಳೋಣ



ನುಡಿ ಬೆಳಗು

ಪಿ.ಚಂದ್ರಿಕಾ

ಬೆಳಗೆರೆ ಕೃಷ್ಣಶಾಸ್ತ್ರಿಯವರನ್ನು ಸುಮಾರು ಹತ್ತು ವರ್ಷ ಬೆನ್ನುಹತ್ತಿ ಅವರ ಅನುಭವ ಕಥನವನ್ನು 'ಮರೆಯಲಾದೀತೇ?' ಎನ್ನುವ ಪುಸ್ತಕ ರೂಪಕ್ಕೆ 2004ರಲ್ಲಿ ತಂದಿದ್ದೆವು. ಕೃಷ್ಣಶಾಸ್ತ್ರಿಗಳ ಉತ್ಸಾಹ ಹೇಳತೀರದ್ದು. ಮಾತಿಗೆ ನಿಂತರೆ ಸಮಯದ ಪರಿವೆಯೇ ಇರುತ್ತಿರಲಿಲ್ಲ. ಒಮ್ಮೆ ಹೇಳಿದರೆ ಮುಗಿಯಿತು; ಹತ್ತು ಬಾರಿಯಾದರೂ ಸರಿ ಅದೇ ವಾಕ್ಯ, ಅದೇ ಭಾವ, ಅದೇ ಕಥನ. ಯಾವುದೇ ಕಾರಣಕ್ಕೂ ಬದಲಾಗುತ್ತಿರಲಿಲ್ಲ. ತಮ್ಮ ಹಳೆಯ ನೆನಪುಗಳನ್ನು ಹೇಳುವಾಗ ಅವರ ಕಣ್ಣುಗಳಲ್ಲಿ ಒಂದು ಬಗೆಯ ಮಿಂಚು ಕಾಣುತ್ತಿತ್ತು. ಜಗತ್ತಿನ ಒಳಿತೆಲ್ಲವೂ ಅವರ ಬಳಿಯೇ ಇದೆಯೇನೋ ಎನ್ನುವಂತೆ ಭಾಸವಾಗುತ್ತಿತ್ತು.

ಶಾಸ್ತ್ರಿಯವರು ಹೇಳುತ್ತಿದ್ದ ಘಟನೆ-ಕಥೆಗಳಲ್ಲಿನ ಎಲ್ಲ ವ್ಯಕ್ತಿಗಳೂ ತುಂಬಾ ಒಳ್ಳೆಯವರು. ಅವರು ಹಳ್ಳಿಗರು, ಒರಟರು, ಹುಂಬರು, ಜಗಳಗಂಟರು... ಹೀಗೆ ಯಾರೇ ಆದರೂ ಸರಿಯೇ. ವೇದಾವತಿ ನದಿ ಅವರ ಮನೆಯಿಂದ ಸುಮಾರು ಮೂರೂವರೆ ಕಿಲೋಮೀಟರ್ ದೂರ ಇತ್ತು. ಆಗ ಸಂಜೆ ಆರರ ಸಮಯ. ಬೆಂಗಳೂರಿನಿಂದ ಹಿರಿಯೂರು, ಅಲ್ಲಿಂದ ಬೆಳಗೆರೆ ಪಯಣ ಈಗಿನಷ್ಟು ಸುಲಭ ಇರಲಿಲ್ಲವಾದ್ದರಿಂದ ದಣಿದಿದ್ದೆ. ಶಾಸ್ತ್ರಿಗಳಲ್ಲಿ ವಯೋಸಹಜವಾದ ದಣಿವೂ ಇರಲಿಲ್ಲ. ಅವರು ಶಾಲೆಗೆ ಭೂಮಿಯನ್ನು ದಾನ ಮಾಡಿದ ಗಗ್ಗರಂಗಪ್ಪ ಎನ್ನುವ ವ್ಯಕ್ತಿಯ ಬಗ್ಗೆ ಮಾತಾಡತೊಡಗಿದರು. ರೆಕಾರ್ಡ್ ಮಾಡಿಕೊಳ್ಳುವುದರ ಜೊತೆಗೆ ಇರಲಿ ಎಂದು ಪುಸ್ತಕದಲ್ಲೂ ಬರೆದುಕೊಳ್ಳುತ್ತಿದ್ದವಳು ಕ್ಷಣ ತಡೆದು ಕೇಳಿದೆ: 'ನೀವು ಹೇಳುವ ಎಲ್ಲ ವ್ಯಕ್ತಿಗಳು ಒಳ್ಳೆಯವರು. ಸಮಾಜಕ್ಕೆ ಏನನ್ನಾದರೂ ಕೊಡಲು ಬಯಸುವವರು, ಇನ್ನು ಕೆಲವರು ಕೊಟ್ಟವರು. ನೀವು ಜೀವನದಲ್ಲಿ ಕೆಟ್ಟವರನ್ನು ಭೇಟಿಯಾಗಲೇ ಇಲ್ಲವೇ? ಅಹಿತಕರ ಘಟನೆ ನಡೆಯಲೇ ಇಲ್ಲವೇ?'. ಜೋರಾಗಿ ನಗುತ್ತಾ ಕೃಷ್ಣಶಾಸ್ತ್ರಿಗಳು, 'ಯಾಕೆ ಆಗಿಲ್ಲ? ಖಂಡಿತಾ ಆಗಿದೆ. ನನ್ನ ಜೀವನದಲ್ಲಿ ಕೆಟ್ಟದ್ದನ್ನು ಮಾಡಿದವರೂ ತುಂಬಾ ಇದ್ದಾರೆ' ಎಂದರು. ಪ್ರತಿಯಾಗಿ, 'ಮತ್ತೆ ಅದರ ಬಗ್ಗೆ ಯಾಕೆ ಮಾತಾಡಲ್ಲ. ಬರೀ ಒಳಿತಿನ ಬಗ್ಗೆ ಮಾತಾಡುವುದೂ ವ್ಯಸನವೇ ಅಲ್ಲವೆ' ಎಂದೆ. ಅದಕ್ಕವರು ಸ್ವಲ್ಪ ಗಂಭೀರವಾಗಿ, 'ಜಗತ್ತಿನಲ್ಲಿ ಕೆಟ್ಟದ್ದರ ಬಗ್ಗೆ ಮಾತಾಡುವವರು ತುಂಬಾ ಜನ ಇದ್ದಾರೆ. ಒಳಿತಿನ ಬಗ್ಗೆ ಮಾತಾಡುವವರು ತುಂಬಾ ಕಡಿಮೆ. ಕೆಟ್ಟದ್ದರಷ್ಟೇ ಒಳ್ಳೆಯದೂ ಆಸಕ್ತಿದಾಯಕ ಎಂದು ಅವರಿಗೆ ಯಾಕೆ ಅನ್ನಿಸುವುದಿಲ್ಲವೋ. ನಮಗೆ ಅವಕಾಶ ಸಿಕ್ಕಿದೆ. ಒಳ್ಳೆಯದನ್ನು ಮಾತಾಡುವ ಉತ್ಸಾಹ ಇದೆ. ಒಳ್ಳೆಯದನ್ನೇ ಮಾತಾಡೋಣ. ಒಳಿತನ್ನು ಹೇಳಲು ನಾವೊಬ್ಬರಾದರೂ ಇದ್ದೇವಲ್ಲ ಎನ್ನುವ ಭಾವ ನಮ್ಮೊಳಗೆ ಬಲವನ್ನು ತುಂಬುತ್ತದೆ' ಎಂದರು.

ಎಂಥಾ ಅಪರೂಪದ ವಿಚಾರ ಅಲ್ಲವೇ? ನಾವು ಏನನ್ನು ಯೋಚಿಸುತ್ತೇವೆ, ಅದು ನಮ್ಮ ಮನಸ್ಸು, ದೇಹದ ಮೇಲೂ ಪರಿಣಾಮ ಬೀರುತ್ತದೆ; ಸಮಾಜದ ಮೇಲೆ ಕೂಡಾ. ಸದಾ ಒಳಿತನ್ನೇ ಧ್ಯಾನಿಸಿದ ಬೆಳಗೆರೆ ಕೃಷ್ಣಶಾಸ್ತ್ರಿಯವರು ಸಮಾಜಕ್ಕೆ ಬೇಕಾದ ಶಾಲೆ ಕಟ್ಟಿದರು. ಮಕ್ಕಳಿಲ್ಲದ ಅವರು ತಮ್ಮ ಶಾಲೆಯ– ಆದರೆ ತಮ್ಮ ಜಾತಿಗೆ ಸೇರದ– ವಿದ್ಯಾರ್ಥಿನಿಯನ್ನು ಎಲ್ಲರ ವಿರೋಧದ ಮಧ್ಯೆಯೇ ದತ್ತು ತೆಗೆದುಕೊಂಡರು. ಒಳಿತನ್ನು ಬರೀ ಧ್ಯಾನಿಸಿದ್ದೇ ಅಲ್ಲದೇ ಅದನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಂಡರು ಕೂಡಾ. ಅದೇ ಅವರ ಬಲವಾಗಿತ್ತು. ತಮ್ಮ ದಣಿವರಿಯದ ವ್ಯಕ್ತಿತ್ವವನ್ನು ಒಳಿತಿನ ಮೂಲಕವೇ ರೂಪಿಸಿಕೊಂಡಿದ್ದರು. ಇಂಥವರನ್ನು ನಾವು ಕಂಡಿದ್ದೀವಿ ಎನ್ನುವುದೇ ನಮ್ಮ ಪಾಲಿನ ಸೌಭಾಗ್ಯ ಅಲ್ಲವೇ. ❖

ಪದಬಂಧ 6444


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಚಿತವಾಗಿ ಬಂದಿದ್ದರೂ ಯೋಗ್ಯವಾದುದು! (4)
3.ದಾರವನ್ನು ಹಿಡಿದುಕೊಂಡಿರುವ ಸುದ್ದಿಸಂಗ್ರಹಕಾರ (4)
5.ಮಸೂರವಿಟ್ಟು ನೋಡಿದರೂ ಇದು ಅಸ್ಪಷ್ಟ (3)
7.ವಿತರಕನು ನೋಡುತ್ತಿರುವ ಸೂರ್ಯ (2)
9.ಮಜ್ಜನ ನೋಡಲು ನೆರೆದಿರುವ ಮಂದಿ (2)
10.ಬಣ್ಣ ಹಚ್ಚಿ ಮಾಡಿದ ಕೊಂಡಾಟ (3)
11.ತರಿಸಿಕೊಂಡಿರುವ ವಸ್ತು (3)
13.ಸಂತಸವನ್ನು ಹಂಚುತ್ತಿರುವ ಸಾಧು (2)
14.ಪುರಿಯಲ್ಲಿ ಅಡಗಿರುವ ಶತ್ರು (2)
16.ಕುಳಿತುಕೊಳ್ಳುವ ಸಾಧನ (3)
18.ಉಗ್ರವಾದ ಆಜ್ಞೆ (4)
19.ಆಪ್ತರು ತೋರಿಸಿರುವ ರಹಸ್ಯ ಬಾಗಿಲು (4)

ಮೇಲಿಂದ ಕೆಳಕ್ಕೆ

1.ವಾರದ ಕೊನೆಗೆ ಬಂದಿರುವ ಆರೋಹಿ (3)
2.ತರತಮ ತೋರುವಾಗಲೇ ಕತ್ತಲು ಕವಿದಿದೆ (2)
3.ತಂಬಾಕು ಕತ್ತರಿಸಲು ಬಳಸಿರುವ ಕಿರುಗತ್ತಿ (2)
4.ರಸ ಒಸರುವ ಜಿಹ್ವೆ (3)
6.ವರಿಸುವವನು ನೀಡಿದ ಬಂಗಾರ (3)
8.ಶ್ವಾಸವಿದ್ದಾಗಲೇ ಮಾಡಿರುವ ನಂಬಿಕೆ ದ್ರೋಹ (5)
9.ದಾರಿಯಲ್ಲಿ ವಹಿಸಿಕೊಟ್ಟ ಹೊಣೆಗಾರಿಕೆ (5)
12.ಏರು ತಗ್ಗಿಲ್ಲದಿರುವುದು (3)
13.ಸಂಧಿಯಲ್ಲಿರಿಸಿರುವುದು ಕಬ್ಬಿಣದ ಭಾರೀ ಪೆಟ್ಟಿಗೆ (3)
15.ಪುರದಲ್ಲಿ ಕಾಣಿಸಿದ್ದು ಆನೆಯ ಸೊಂಡಲಿನ ತುದಿ (3)
16.ಆರಾಣೆ ನೀಡುವಾಗ ಮಾಡಿದ ಆಜ್ಞೆ (2)
17.ನಡುಗುವುದನ್ನು ನೋಡಿದಾಗ ಮೂಡಿದ ಮಂದಹಾಸ (2)



6443ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಕ್ಷರ 3.ಅಭಾವ 5.ಮೆದುಳು 6.ಸರ 7.ರಸ 9.ಕಾಲ್ದಳ 10.ದರಿದ್ರ 11.ನವ 13.ಜನ 14.ಬಾಧಕ 16.ತರುಣ 17.ಸದನ

ಮೇಲಿಂದ ಕೆಳಕ್ಕೆ: 1.ಅಧರ 2.ರಮೆ 3.ಅಳು 4.ವಜೀರ 6.ಸಮಕಾಲೀನ 8.ಸಮುದ್ರಯಾನ 12.ವರಾತ 13.ಜವಾನ 14.ಬಾಣ 15.ಕಸ

ಸುಡೊಕು 6827

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		7		2		5		
5		4			7			3
	2		5			6		7
8		1		3		7		9
			9				1	
9				5		3		6
7		3		9				
	8		7		5	9	3	
		9		8				5

6826 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಜೂನ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು, ತಿಥಿ: ನಿಜ ಜ್ಯೇಷ್ಠ ಶುಕ್ಲ ಏಕಾದಶಿ ಗಂ. 20-10, **ನಕ್ಷತ್ರ:** ಸ್ವಾತಿ ಗಂ. 16-29, **ಯೋಗ:** ಶಿವ ಗಂ. 10-54, **ಕರಣ:** ವಣಿಜ ಗಂ. 7-09, ಮಿಥುನ ಮಾಸದ 10 ನೇ ದಿನ. **ಮಳೆ ನಕ್ಷತ್ರ:** ಆರ್ದ್ರಾ 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 - 03-00, **ಸೂರ್ಯೋದಯ:** 06-10, **ಸೂರ್ಯಾಸ್ತ:** 06-57, **ಮುಸ್ಲಿಂ ದಿನಾಂಕ:** 09 ಮೊಹರಂ, **ಅದೃಷ್ಟ ಸಂಖ್ಯೆ:** 9, 3

ಮೇಷ: ನಿಮ್ಮ ಪ್ರಗತಿಯನ್ನು ಬಹಳಷ್ಟು ಜಾಗದಲ್ಲಿ ಪ್ರಶಂಸಿಸುತ್ತಿರುವುದರಿಂದ ಕಾರ್ಯಕ್ಷೇತ್ರದಲ್ಲಿ ಹೊಸದೊಂದು ಹುಮ್ಮಸ್ಸು ಬರುವುದರ ಜೊತೆಗೆ ವೃತ್ತಿಪರವಾದ ಶತ್ರುಗಳ ಸಂಖ್ಯೆಯು ಗಗನವನ್ನು ಮುಟ್ಟಲಿದೆ.

ವೃಷಭ: ಈ ದಿನ ನಿಮ್ಮ ಯೋಜನೆಗಳನ್ನು ಇತರರು ಅಪೇಕ್ಷಿಸುವಂತೆ ಅಥವಾ ಸ್ವೀಕರಿಸುವಂತೆ ಮಾಡುವ ನಿಮ್ಮ ಸಾಮರ್ಥ್ಯ ಅದ್ಭುತವಾದದ್ದು. ಕಿವಿ ಅಥವಾ ಕಣ್ಣಿನ ಸಮಸ್ಯೆಗಳಿಗೆ ಆಸ್ಪತ್ರೆಗೆ ಭೇಟಿ ನೀಡಬೇಕಾಗಬಹುದು.

ಮಿಥುನ: ಸಮಾಜದಲ್ಲಿ ಅದರಲ್ಲೂ ವಿಶೇಷವಾಗಿ ಹೆಂಡತಿಯ ಬಳಗದವರೊಂದಿಗೆ ಮೌನವಾಗಿರಿ. ನಿರುದ್ಯೋಗಿಗಳಿಗೆ ತಾತ್ಕಾಲಿಕ ಉದ್ಯೋಗ ಲಭಿಸಿ, ಸಮಾಧಾನವಾಗುವುದು. ಕ್ರೀಡೆಗಳಲ್ಲಿ ಹೆಚ್ಚಿನ ಸಮಯ ಕಳೆಯುವಿರಿ.

ಕರ್ಕಾಟಕ: ವೈದ್ಯರು ಅದರಲ್ಲೂ ನರ ರೋಗ ತಜ್ಞರು ತೋರಿದ ಬೇಜವಾಬ್ದಾರಿತನದಿಂದ ಪಾಪ ಸಂಗ್ರಹಣೆಯಾಗುವುದು. ಕಾಗದದ ಆಮದು ಹಾಗೂ ರಫ್ತು ಉದ್ಯಮದವರಿಗೆ ಉತ್ತಮ ಆದಾಯವಿರುವುದು.

ಸಿಂಹ: ಉತ್ತಮ ಸಂತಾನ ಪ್ರಾಪ್ತಿಯಾಗಲಿದ್ದು, ಸಂತೃಪ್ತ ಜೀವನ ನಡೆಸುವಿರಿ. ಈಗ ಚಿನ್ನದ ಖರೀದಿಗೆ ಅಷ್ಟು ಒಳ್ಳೆಯ ಸಮಯವಲ್ಲದಿದ್ದರೂ ಸಹ ಖರೀದಿಯ ಅನಿವಾರ್ಯ ಉಂಟಾಗಬಹುದು. ಪ್ರಯಾಣದಲ್ಲಿ ಎಚ್ಚರವಹಿಸಿ.

ಕನ್ಯಾ: ದಾಂಪತ್ಯದಲ್ಲಿ ಕಲಹ, ಕುಟುಂಬ ವರ್ಗದವರಲ್ಲಿ ಭಿನ್ನಾಭಿಪ್ರಾಯದಂತಹ ಸನ್ನಿವೇಶಗಳು ಕಂಡುಬಂದು ಮನಸ್ಸಿಗೆ ನೋವಾಗಲಿದೆ. ನಿಮಗೆ ಸಹಾಯ ಮಾಡಿದವರಲ್ಲಿ ಕೃತಜ್ಞತಾ ಭಾವವನ್ನು ಇಟ್ಟುಕೊಳ್ಳುವುದು ಅತ್ಯಗತ್ಯ.

ತುಲಾ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಈ ದಿನ ಅದರಿಂದ ಬಹಳಷ್ಟು ಸಮಸ್ಯೆಯನ್ನು ಎದುರಿಸಬೇಕಾಗಬಹುದು. ಸಹೋದರಿಯ ಸಹಾಯದಿಂದ ನಿಮಗೆ ಅಧ್ಯಯನದಲ್ಲಿ ಸಹಾಯವಾಗಲಿದೆ.

ವೃಶ್ಚಿಕ: ಕಾಲು ನೋವು ನಿವಾರಿಸಿಕೊಳ್ಳಲು ತೈಲ ಲೇಪನ, ಬಿಸಿನೀರಿನ ಶಾಖದಂತಹ ಮಾರ್ಗವನ್ನು ಅನುಸರಿಸುವುದು ಉಪಯೋಗಕಾರಿಯಾಗಲಿದೆ. ಏಕಾಗ್ರತೆಯಿಂದ ಗುರುವಿನ ಧ್ಯಾನ ಮಾಡುವುದು ಒಳ್ಳೆಯದು.


ಧನು: ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪಿದ ಕಾರಣದಿಂದಾಗಿ ಮನಸ್ಸಿಗೆ ಸಮಾಧಾನವಾಗುವುದು. ಕೆಂಪು ಬಣ್ಣದ ಉಡುಪು ಧರಿಸುವುದರಿಂದ ಕಾರ್ಯಾನುಕೂಲವಾಗುತ್ತದೆ. ಮಾತು ಮತ್ತು ಕೃತಿಯಲ್ಲಿ ಸಾಮ್ಯತೆ ಇರಲಿ.

ಮಕರ: ವಾಹನದ ದುರಸ್ತಿಯಿಂದ ಸಂಕಷ್ಟಕ್ಕೆ ಸಿಲುಕಿರುವ ನಿಮಗೆ ಅಪರಿಚಿತರಿಂದ ಸಹಾಯಹಸ್ತ ಪ್ರಾಪ್ತಿಯಾಗುವುದು. ಮಕ್ಕಳ ವಿಚಾರವಾಗಿ ಎಷ್ಟು ಗಮನ ಹರಿಸಿದರೂ ಸಾಲದು ಎಂಬಂತಾಗುವುದು.

ಕುಂಭ: ನಿಮ್ಮ ಎದುರಾಳಿಗಳ ಬಲವನ್ನು ಮಾತ್ರ ತಿಳಿದ ನಿಮಗೆ ಅವರಲ್ಲಿರುವ ಕುಂದು–ಕೊರತೆಗಳನ್ನು ತಿಳಿಸುವವರೊಬ್ಬರು ಈ ದಿನ ಸಿಗಲಿದ್ದಾರೆ. ಓದು ಹಾಗೂ ವೃತ್ತಿಯ ಮಧ್ಯದಲ್ಲಿ ಆಯ್ಕೆ ನಿಮಗೆ ಕಷ್ಟಕರವಾಗುವುದು.

ಮೀನ: ತಂದೆಯ ಕನಸಾದ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಲು ಆಲೋಚಿಸುವಿರಿ. ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು. ಯಾರಿಂದಲೂ ನಿಮ್ಮ ಕೆಲಸಕ್ಕೆ ಅಡ್ಡಿ ಆತಂಕವಿರುವುದಿಲ್ಲ.

ಗುಂಡಣ್ಣ



ಮುಂಬೈ ನಡುಗಿಸಿದ ಮಹಾಮಳೆ

ರೈಲು, ರಸ್ತೆ ಸಂಚಾರದಲ್ಲಿ ವ್ಯತ್ಯಯ 20 ಸೆಂ.ಮೀ. ಮಳೆ ದಾಖಲು

ಮುಖ್ಯಾಂಶಗಳು

- 13 ದಿನ ತಡವಾಗಿ ನೈರುತ್ಯ ಮುಂಗಾರು ಪ್ರವೇಶ
- ತೀವ್ರ ಬಿಸಿಲಿಗೆ ಬಳಲಿದ್ದ ಮಹಾನಗರದ ಜನತೆ

ಮುಂಬೈ (ಪಿಟಿಐ): ನಗರಕ್ಕೆ ನೈರುತ್ಯ ಮುಂಗಾರು ಮಂಗಳವಾರ ಪ್ರವೇಶಿಸಿದ್ದು, ರಾತ್ರಿಯಿಡೀ ಭಾರಿ ಮಳೆ ಆಗಿದೆ. ಬುಧವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಸರಾಸರಿ 19.5 ಸೆಂ.ಮೀ. ಮಳೆ ದಾಖಲಾಗಿದೆ.

ಪಶ್ಚಿಮ ಉಪನಗರದಲ್ಲಿ 20.8 ಸೆಂ.ಮೀ. ಹಾಗೂ ಪೂರ್ವ ಉಪನಗರದಲ್ಲಿ 16.7 ಸೆಂ.ಮೀ. ಮಳೆ ಸುರಿದಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡು, ಸಂಚಾರಕ್ಕೆ ತೊಡಕಾಯಿತು. ಉಪನಗರ ರೈಲುಗಳ ಸಂಚಾರ ವ್ಯತ್ಯಯಗೊಂಡು, ಜನರು ಪರದಾಡುವಂತಾಯಿತು.

‘ಅಂಧೇರಿ ಸುರಂಗಮಾರ್ಗ, ಹಿಂದ್‌ಮಾತಾ ಮತ್ತು ಕಿಂಗ್ಸ್ ವೃತ್ತಗಳು ಬೆಳ್ಳಂಬೆಳಿಗ್ಗೆ ನದಿಯಂತಾಗಿದ್ದವು. ಕೆಲವು ಸ್ಥಳಗಳಲ್ಲಿ ಉಪನಗರ ರೈಲು ಹಳಿಗಳು ನೀರಿನಲ್ಲಿ ಮುಳುಗಿದ್ದವು’ ಎಂದು ಪಾಲಿಕೆ ಅಧಿಕಾರಿ ಮಾಹಿತಿ ನೀಡಿದ್ದಾರೆ.

‘ಠಾಣೆ– ವಾಶಿ/ಪನ್ವೇಲ್ ಸಂಪರ್ಕಿಸುವ ಟ್ರಾನ್ಸ್–ಹಾರ್ಬರ್ ಮಾರ್ಗವು ಜಲಾವೃತವಾದ ಪರಿಣಾಮ ಬೆಳಗಿನ ದಟ್ಟಣೆ ಅವಧಿಯಲ್ಲೇ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು. ಬಳಿಕ ಸಂಚಾರ ಆರಂಭವಾದರೂ, ವಿಳಂಬ ಹಾಗೂ ತೀವ್ರ ದಟ್ಟಣೆ ಕಂಡುಬಂದಿತು. ಪಶ್ಚಿಮ ರೈಲ್ವೆಯಲ್ಲಿ ಯಾವುದೇ ವ್ಯತ್ಯಯ ಇರಲಿಲ್ಲ’ ಎಂದು ತಿಳಿಸಿದ್ದಾರೆ.

‘ಅರಬ್ಬೀ ಸಮುದ್ರದಲ್ಲಿ ಸುಮಾರು 3.5 ಮೀಟರ್ ಎತ್ತರದ ವರೆಗೂ ಅಲೆಗಳು ಕಾಣಿಸಿಕೊಂಡವು. ಬುಧವಾರವೂ ಮಳೆ ಮುಂದುವರಿದಿದ್ದು, ನಾಗರಿಕ ಮತ್ತು ವಿಪತ್ತು ನಿರ್ವಹಣಾ ತಂಡದ ಸಿಬ್ಬಂದಿ ಪರಿಸ್ಥಿತಿಯ ಮೇಲೆ ನಿಗಾ ಇರಿಸಿದ್ದಾರೆ’ ಎಂದು ಬೃಹನ್ ಮುಂಬೈ ನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.



ಭಾರಿ ಮಳೆಯಿಂದಾಗಿ ಮುಂಬೈನ ರಸ್ತೆಗಳು ಬುಧವಾರ ಜಲಾವೃತಗೊಂಡಿದ್ದವು —ಪಿಟಿಐ ಚಿತ್ರ

ಬಾಗಿಲು ತೆರೆಯಲು ಗಲಾಟೆ: ಇರಿದು ಕೊಲೆ

ಮುಂಬೈ: ಮಳೆ ಸಂದರ್ಭದಲ್ಲಿ ಲೋಕಲ್ ರೈಲಿನ ಬಾಗಿಲು ತೆರೆದೇ ಇಡುವ ವಿಚಾರಕ್ಕೆ ಸಂಬಂಧಿಸಿ ನಡೆದ ವಾಗ್ವಾದ ವಿಕೋಪಕ್ಕೆ ತೆರಳಿದ ಪರಿಣಾಮ, ಚಾಕುವಿನಿಂದ ಇರಿದು ವ್ಯಕ್ತಿಯೊಬ್ಬರನ್ನು ಮಂಗಳವಾರ ಕೊಲೆ ಮಾಡಲಾಗಿದೆ. ಮಯಂಕ್ ಲೋಹಾರ್ (22) ಮೃತರು. ಅಂಧೇರಿ– ಬೊರಿವಿಲಿ ನಡುವೆ ಸಂಚರಿಸುತ್ತಿದ್ದ ರೈಲಿನಲ್ಲಿ ಈ ಘಟನೆ ನಡೆದಿದೆ.

‘ವಾಗ್ವಾದ ತೀವ್ರವಾದಂತೆ ಆರೋಪಿಯು ಚೂಪಾದ ಆಯುಧವನ್ನು ತೆಗೆದು ಲೋಹಾರ್ ಅವರ ಹೊಟ್ಟೆಗೆ ಚುಚ್ಚಿ, ರೈಲಿನಿಂದ ಜಿಗಿದು ಪರಾರಿಯಾಗಿದ್ದಾನೆ. ಗಾಯಗೊಂಡಿದ್ದ ಲೋಹಾರ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆ ವೇಳೆಗಾಗಲೇ ಅವರು ಮೃತಪಟ್ಟಿದ್ದಾಗಿ ವೈದ್ಯರು ತಿಳಿಸಿದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಹ ಪರಿಸ್ಥಿತಿ: ಐವರು ನಾಪತ್ತೆ

ಇಟಾನಗರ (ಪಿಟಿಐ): ಕೆಲವು ದಿನಗಳಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಅರುಣಾಚಲ ಪ್ರದೇಶದ ಕೇಯೀ ಪಾನ್ಯೋರ್ ಜಿಲ್ಲೆಯಲ್ಲಿ ಬುಧವಾರ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಐವರು ನಾಪತ್ತೆಯಾಗಿ, 17 ಮಂದಿ ಗಾಯಗೊಂಡಿದ್ದಾರೆ.

‘ನಿರ್ಮಾಣ ಹಂತದಲ್ಲಿದ್ದ ತಡೆಗೋಡೆ ಬಿದ್ದಿದ್ದರಿಂದ ತಗ್ಗು ಪ್ರದೇಶಕ್ಕೆ ನೀರು ನುಗ್ಗಿ ಕನಿಷ್ಠ 18 ಮನೆಗಳಿಗೆ ಹಾನಿಯಾಗಿದೆ’ ಎಂದು ರಾಜ್ಯ ವಿಪತ್ತು ನಿರ್ವಹಣಾ ಕಾರ್ಯದರ್ಶಿ ದಾನಿ ಸುಲು ತಿಳಿಸಿದ್ದಾರೆ.

‘ರಾಜ್ಯ ವಿಪತ್ತು ನಿರ್ವಹಣಾ ಪಡೆಯನ್ನು ರಕ್ಷಣಾ ಕಾರ್ಯಕ್ಕೆ ನಿಯೋಜಿಸಲಾಗಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿಯೂ ಸ್ಥಳದತ್ತ ತೆರಳಿದ್ದಾರೆ. ಲಭ್ಯವಿರುವ ಎಲ್ಲ ಮೀಸಲು ಸಿಬ್ಬಂದಿ ಮತ್ತು ವಾಹನಗಳನ್ನು ಕರೆಯಿಸಿಕೊಳ್ಳಲಾಗಿದೆ. ಮಾಜಿ ಸೈನಿಕರನ್ನೂ ನೆರವಿಗಾಗಿ ಆಹ್ವಾನಿಸಲಾಗಿದೆ. ನಾಪತ್ತೆಯಾದವರಿಗಾಗಿ ಹುಡುಕಾಟ ನಡೆದಿದೆ’ ಎಂದು ತಿಳಿಸಿದ್ದಾರೆ.

‘ಕ್ರಾ ದಾದೀ, ಕುರುಂಗ್ ಕುಮೆಯ್, ಕೆಳಗಿನ ಸುಬನ್‌ಸಿರೀ, ಮೇಲಿನ ಸುಬನ್‌ಸಿರೀ, ಕಾಮ್ಲೆ, ಕೇಯೀ ಪಾನ್ಯೋರ್ ಜಿಲ್ಲೆಗಳಲ್ಲಿ ಭೂ ಕುಸಿತದಿಂದಾಗಿ ರಸ್ತೆ ಸಂಪರ್ಕ ಕಡಿತಗೊಂಡಿದೆ. ಕಿಮಿನ್– ಜಿರೋ, ಮೆಪ್ಸೋರೊ–ಹೋಜ್ ಮಾರ್ಗದಲ್ಲಿ ಭಾರಿ ಪ್ರಮಾಣದಲ್ಲಿ ಭೂಕುಸಿತ ಉಂಟಾಗಿ, ವಾಹನ ಸಂಚಾರಕ್ಕೆ ತೊಡಕಾಗಿದೆ’ ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಚಿಟಿಕೆ ಸುದ್ದಿ

ಸಮಿತಿ ಮುಂದೆ ಹಾಜರಾದ ದೀಪ್ಕೆ


ನವದೆಹಲಿ (ಪಿಟಿಐ): ನೀಟ್–ಯುಜಿ ಪರೀಕ್ಷಾ ಅಕ್ರಮವನ್ನು ಖಂಡಿಸಿ ಕಾಕ್ರೋಚ್ ಜನತಾ ಪಕ್ಷವು (ಸಿಜೆಪಿ) ಇಲ್ಲಿನ ಜಂತರ್ ಮಂತರ್‌ನಲ್ಲಿ ನಡೆಸುತ್ತಿರುವ ಪ್ರತಿಭಟನೆಯು ಬುಧವಾರ ಐದನೇ ದಿನಕ್ಕೆ ಕಾಲಿಟ್ಟಿದೆ.



ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಸಮಿತಿಯ ಮುಂದೆ ಬುಧವಾರ ಹಾಜರಾದ ಸಿಜೆಪಿಯ ಸಂಸ್ಥಾಪಕ ಅಭಿಜೀತ್ ದೀಪ್ಕೆ, ‘ನನ್ನ ಸಾಮಾಜಿಕ ಮಾಧ್ಯಮದ ಖಾತೆಗಳನ್ನು ಯಾವ ಕಾರಣಕ್ಕೆ ನಿರ್ಬಂಧಿಸಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡಲು ಅಧಿಕಾರಿಗಳು ನಿರಾಕರಿಸಿದ್ದಾರೆ. ‘ನೀಟ್–ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಇದೇ ರೀತಿಯ ಗೋಪ್ಯತೆಯನ್ನು ಏಕೆ ಕಾಯ್ದುಕೊಳ್ಳಲಿಲ್ಲ’ ಅದು ಏಕೆ ಸೋರಿಕೆಯಾಯಿತು? ಪ್ರಶ್ನೆಪತ್ರಿಕೆ ಸೋರಿಕೆ ಆಗದಿದ್ದರೆ ಅನೇಕ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳು-ತ್ತಿರಲಿಲ್ಲ’ ಎಂದು ಅವರು ಹೇಳಿದ್ದಾರೆ.

‘ಪಾಕ್ ಜಿಂದಾಬಾದ್’ ಹೇಳಿಸಿದ ಹಿಂದೂ ಯುವಕರ ಬಂಧನ

ಲಖನೌ: ಉತ್ತರ ಪ್ರದೇಶದ ಬರೇಲಿ ಜಿಲ್ಲೆಯಲ್ಲಿ ಇಬ್ಬರು ಹಿಂದೂ ಯುವಕರು, ಮುಸ್ಲಿಂ ಸಮುದಾಯಕ್ಕೆ ಸೇರಿದ ಮಗುವೊಂದರ ಬಳಿ ‘ಪಾಕಿಸ್ತಾನ್ ಜಿಂದಾಬಾದ್’ ಎಂದು ಕೂಗಿಸಿ ಅದನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ ಎಂದು ಆರೋಪಿಸಲಾಗಿದೆ.



ವಿಡಿಯೊ ಹರಿದಾಡಿದ ಬಳಿಕ ಆ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಿದರು.

ಜಿಲ್ಲೆಯ ಸಾಯಿ ಖೇಡಾ ಗ್ರಾಮದ ನಿವಾಸಿಗಳಾಗಿರುವ, ಆರೋಪಿಗಳಾದ ಯೋಗೇಂದ್ರ ಮತ್ತು ಭುವನೇಶ್ ಎಂಬವರನ್ನು ಬಂಧಿಸಿ, ಇವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

‘ಮೊಹರಂ’ ಆಚರಣೆ ವೇಳೆ ಕೋಮು ಸಾಮರಸ್ಯವನ್ನು ಹಾಳು ಮಾಡಲು ಯುವಕರು ಈ ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ.

ಪರಿಶಿಷ್ಟ ಜಾತಿ ಆಯೋಗದ ಮುಂದೆ ಕ್ಷಮೆ ಕೇಳಿದ ಬಿಟ್ಟೂ

ಚಂಡೀಗಢ (ಪಿಟಿಐ): ಜಾತಿ ನಿಂದನೆ ಹೇಳಿಕೆಗಳನ್ನು ನೀಡಿರುವ ಆರೋಪಕ್ಕೆ ಸಂಬಂಧಿಸಿದಂತೆ ರೈಲ್ವೆ ಖಾತೆಯ ರಾಜ್ಯ ಸಚಿವ ರವನೀತ್ ಸಿಂಗ್ ಬಿಟ್ಟೂ ಅವರು ಪಂಜಾಬ್ ಪರಿಶಿಷ್ಟ ಜಾತಿ ಆಯೋಗದ ಮುಂದೆ ಹಾಜರಾಗಿ ಲಿಖಿತ ರೂಪದಲ್ಲಿ ಕ್ಷಮೆಯಾಚಿಸಿದರು.

ಆರೋಪಕ್ಕೆ ಸಂಬಂಧಿಸಿದಂತೆ ತಮ್ಮ ಪರವಾಗಿ ವಾದ ಮಾಡಲು ಹಾಜರಾಗುವಂತೆ ಬಿಟ್ಟೂ ಅವರಿಗೆ ಆಯೋಗವು ಕೇಳಿತ್ತು. ಹಿಂದಿನ ಎರಡು ಬಾರಿ ಅವರು ಆಯೋಗದ ಮುಂದೆ ಹಾಜರಾಗಿರಲಿಲ್ಲ. ಮೇ26ರಂದು ಧುರಿಗೆ ಭೇಟಿ ನೀಡಿದ್ದ ವೇಳೆ, ಬಿಟ್ಟೂ ಅವರು ಅಲ್ಲಿನ ಪೊಲೀಸ್ ಸಿಬ್ಬಂದಿಯೊಂದಿಗೆ ತೀವ್ರ ವಾಗ್ವಾದ ನಡೆಸಿದ್ದರು. ಈ ವೇಳೆ ಪೊಲೀಸರ ವಿರುದ್ಧ ಆಕ್ಷೇಪಾರ್ಹ ಪದಗಳನ್ನು ಬಳಸಿದ್ದಾರೆ ಎಂದು ಆರೋಪಿಸಲಾಗಿತ್ತು.

‘ವಿವರವನ್ನು ನೀಡಿದ ಬಿಟ್ಟೂ ಸಚಿವನಾಗಿ ನಾನು ಅಂತಹ ಹೇಳಿಕೆಗಳನ್ನು ನೀಡಬಾರದಿತ್ತು’ ಎಂದು ಹೇಳಿದರು.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ವೇಳೆ ಅವಧಿ ಮುಗಿದ ಬಳಿಕವೂ ಪ್ರಚಾರದಲ್ಲಿ ತೊಡಗಿದ್ದ ಕಾರಣಕ್ಕೆ ಪೊಲೀಸರು ಬಿಜೆಪಿ ನಾಯಕ ಓಂಕಾರ್ ಸಿಂಗ್ ಅವರನ್ನು ಬಂಧಿಸಿದ್ದರು. ಇವರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಬಿಟ್ಟೂ ವಾಗ್ವಾದಕ್ಕಿಳಿದಿದ್ದರು. ಇವರ ಮಾತಿನ ಚಕಮಕಿಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಗೋದಾಮು ಕುಸಿತ, ಮೂವರು ಸಾವು

ಕೋಲ್ಕತ್ತ (ಪಿಟಿಐ): ಪಶ್ಚಿಮ ಕೋಲ್ಕತ್ತದ ತರಾತಲ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿದ್ದ ಮೂರು ಅಂತಸ್ತಿನ ಗೋದಾಮು ಬುಧವಾರ ಮಧ್ಯಾಹ್ನ ಕುಸಿದಿದ್ದು, ಮೂವರು ಮೃತಪಟ್ಟು ಕೆಲವರು ಗಾಯಗೊಂಡಿದ್ದಾರೆ.

ಪೊಲೀಸ್, ವಿಪತ್ತು ನಿರ್ವಹಣಾ ಗುಂಪು, ಅಗ್ನಿಶಾಮಕ ಮತ್ತು ತುರ್ತು ಸೇವಾ ತಂಡಗಳ ಸಿಬ್ಬಂದಿ ಸ್ಥಳದಿಂದ 18 ಜನರನ್ನು ರಕ್ಷಿಸಿದ್ದಾರೆ. ಅಲ್ಲದೆ ಇನ್ನೂ 12ರಿಂದ 15 ಜನರು ಗೋದಾಮಿನ ಅವಶೇಷಗಳಡಿ ಸಿಲುಕಿರುವ ಸಾಧ್ಯತೆಯಿದೆ. ಅವರ ರಕ್ಷಣಾ ಕಾರ್ಯಾಚರಣೆಯೂ ಮುಂದುವರಿದಿದೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಗೋದಾಮಿನ ಕಟ್ಟಡದ ಯೋಜನೆಯು ದೋಷಯುಕ್ತವಾಗಿದೆ ಎಂದು ಕೋಲ್ಕತ್ತ ಮಹಾನಗರ ಪಾಲಿಕೆಯ ಎಂಜಿನಿಯರ್‌ಗಳು ಮಾಹಿತಿ ನಿಡಿದ್ದಾರೆ ಎಂದು ಅವರು ಹೇಳಿದರು.

ಆರು ಜನರಿಂದ ಜೀವ ಬೆದರಿಕೆ : ಕಲ್ಲಯ್ಯಜ್ಜ

ಪ್ರಜಾವಾಣಿ ವಾರ್ತೆ

ಗದಗ: ‘ವೀರೇಶ್ವರ ಪುಣ್ಯಾಶ್ರಮ ಟ್ರಸ್ಟ್‌ನ ಆರು ಮಂದಿ ಸದಸ್ಯರಿಂದ ನನಗೆ ಜೀವ ಬೆದರಿಕೆ ಇದೆ. ಅವರಿಂದ ಯಾವುದೇ ಸಂದರ್ಭದಲ್ಲಿ ಏನು ಬೇಕಾದರೂ ಆಗಬಹುದು’ ಎಂದು ಆಶ್ರಮದ ಪೀಠಾಧಿಪತಿ ಕಲ್ಲಯ್ಯಜ್ಜ ಹೇಳಿದರು.



ಕಲ್ಲಯ್ಯಜ್ಜ

‘ಟ್ರಸ್ಟ್‌ನ ವಸಂತಗೌಡ್ರು, ಶಿವರುದ್ರಪ್ಪ, ಪ್ರಕಾಶ ಬಸರಿಗಿಡದ, ಶಿಕ್ಷಣ ಸಮಿತಿಯ ಎಸ್.ಎಂ. ಗೌಡ್ರು, ಚಕ್ರಣ್ಣನವರ ಮತ್ತು ಮಲ್ಲಯ್ಯ ಶಿರೊಳಮಠ ಅವರು ನನಗೆ ಏನು ಮಾಡುವರೋ ಎಂಬ ಭಯವಿದೆ. ಅವರನ್ನು ಟ್ರಸ್ಟ್‌ನಿಂದ ಹೊರ ಹಾಕುವುದರ ಜೊತೆಗೆ, ಪೊಲೀಸರಿಗೆ ದೂರು ನೀಡುವೆ’ ಎಂದು ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಆರು ಜನ ನನಗೆ ಮಾನಸಿಕ ಹಿಂಸೆ ನೀಡಿದ್ದಾರೆ. ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಆದರೂ, ನಾನು ಈವರೆಗೆ ಎಲ್ಲೂ ಹೇಳಿಕೊಂಡಿರಲಿಲ್ಲ. ಆಶ್ರಮದ ಹಣಕಾಸಿನ ವ್ಯವಹಾರ ಪಾರದರ್ಶಕವಾಗಿದೆ’ ಎಂದರು.

ನಾಟಿ...

ಪಿಟಿಐ ಚಿತ್ರ



ಛತ್ತೀಸಗಢದ ಬಸ್ತಾರ್ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಚುರುಕುಗೊಂಡಿದ್ದು, ಬುಧವಾರ ಗದ್ದೆಯಲ್ಲಿ ರೈತ ಮಹಿಳೆಯರು ಭತ್ತದ ಸಸಿ ನಾಟಿ ಕಾರ್ಯದಲ್ಲಿ ತೊಡಗಿದ್ದರು

ಸುದ್ದಿ 2 ನಿಮಿಷ

ಪುಸ್ತಕ– ಮುದ್ರಣ ಸೊಗಸು ಬಹುಮಾನ ಪ್ರಕಟ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು 2025ನೇ ಸಾಲಿನ ‘ಪುಸ್ತಕ ಸೊಗಸು’ ಹಾಗೂ ‘ಮುದ್ರಣ ಸೊಗಸು’ ಬಹುಮಾನಗಳನ್ನು ಬುಧವಾರ ಪ್ರಕಟಿಸಿದೆ.

ಪ್ರಾಧಿಕಾರದ ಅಧ್ಯಕ್ಷ ಮಾನಸ ಅವರ ನೇತೃತ್ವದಲ್ಲಿ ಈ ಬಹುಮಾನಗಳ ಆಯ್ಕೆ ನಡೆದಿದೆ. ‘ಪುಸ್ತಕ ಸೊಗಸು’ ಮೊದಲನೇ ಬಹುಮಾನಕ್ಕೆ ದೇವೂ ಮಾಕೊಂಡ ಅವರು ಅನುವಾದಿಸಿದ ‘ಯುದ್ಧ ಮೃದಂಗ’ ಕೃತಿ ಆಯ್ಕೆಯಾಗಿದ್ದು, ಇದನ್ನು ವಿಜಯಪುರದ ಬೆರಗು ಪ್ರಕಾಶನ ಹೊರತಂದಿದೆ. ದ್ವಿತೀಯ ಬಹುಮಾನಕ್ಕೆ ಪುಂಡಲೀಕ ಕಲ್ಲಿಗನೂರು ಅವರ ‘ಶಿಲ್ಪಕಲೆಯಲ್ಲಿ ರಾಮಾಯಣ’ ಕೃತಿ ಪ್ರಕಟಿಸಿರುವ ವೀರಲೋಕ ಪ್ರಕಾಶನ ಹಾಗೂ ಮೂರನೇ ಬಹುಮಾನಕ್ಕೆ ಚಂಪಾವತಿ ಎಚ್.ಎಸ್. ಅವರ ‘ನೋರಾಳಿಂದ ಗುಲಾಬಿ ಗ್ಯಾಂಗ್‌ವರೆಗೆ’ ಕೃತಿ ಪ್ರಕಟಿಸಿರುವ ಬೆಂಗಳೂರಿನ ಮಾನಸ ಪ್ರಕಾಶನ ಆಯ್ಕೆಯಾಗಿದೆ. ಈ ಪ್ರಶಸ್ತಿಗಳು ಕ್ರಮವಾಗಿ ₹25 ಸಾವಿರ, ₹20 ಸಾವಿರ ಹಾಗೂ ₹10 ಸಾವಿರ ನಗದು ಬಹುಮಾನ ಒಳಗೊಂಡಿವೆ.

ಮಕ್ಕಳ ಪುಸ್ತಕ ಸೊಗಸು ಬಹುಮಾನಕ್ಕೆ (₹8 ಸಾವಿರ ನಗದು) ಬಿ.ಎ. ಮಮತಾ ಅರಸೀಕೆರೆ ಅವರ ‘ಗೂಡು ಸೇರಿದ ಹಕ್ಕಿಗಳು’ ಕೃತಿಯನ್ನು ಪ್ರಕಟಿಸಿದ ಸಮನ್ವಯ ಪ್ರಕಾಶನ, ಶೇಖರಯ್ಯ ಟಿ.ಎಚ್.ಎಂ., ಅವರ ‘ಮಾತನಾಡದ ಚುಕ್ಕಿ’ ಕೃತಿ ಭಾಜನವಾಗಿವೆ.

ಮುಖಪುಟ ವಿನ್ಯಾಸ ಬಹುಮಾನಕ್ಕೆ (₹10 ಸಾವಿರ ನಗದು) ಎ.ಎಸ್. ಮಕಾನದಾರ ಅವರ ‘ದರ್ವೇಶಿ ಪದ್ಯ’ ಆಯ್ಕೆಯಾಗಿದ್ದು, ಧಾರವಾಡದ ಈಶ್ವರ ಬಡಿಗೇರ ಅವರು ವಿನ್ಯಾಸ ಮಾಡಿದ್ದಾರೆ. ಮುಖಪುಟ ಚಿತ್ರಕಲೆಯ ಬಹುಮಾನಕ್ಕೆ (₹8 ಸಾವಿರ ನಗದು) ಅಪ್ಪಗೆರೆ ತಿಮ್ಮರಾಜು ಅವರ ‘ಗ್ರಾಮ ಗೀತೆಗಳು’ ಕೃತಿ ಆಯ್ಕೆಯಾಗಿದ್ದು, ಇದಕ್ಕೆ ದಕ್ಷಿಣ ಕನ್ನಡದ ಶ್ರೀಪಾದ ಅವರ ಚಿತ್ರಕಲೆಯಿದೆ. ‘ಪುಸ್ತಕ ಮುದ್ರಣ ಸೊಗಸು ಬಹುಮಾನ’ಕ್ಕೆ (₹5 ಸಾವಿರ ನಗದು) ಸುಂದರೇಶ ಡಿ. ಅವರ ‘ಅರಕಲಗೂಡು ಗತ ವೈಭವ’ ಕೃತಿ ರಚಿಸಿದ್ದು, ಇದನ್ನು ಮೈಸೂರಿನ ಗುಪ್ತ ಪ್ರಿಂಟರ್ಸ್ ಹೊರತಂದಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.



‘ಪ್ರಮುಖ ವಿಚಾರಗಳ ಕುರಿತು ನಿರಂತರ ಮಾತುಕತೆ ಅಗತ್ಯ’

ನವದೆಹಲಿ(ಪಿಟಿಐ): ‘ಉಭಯ ದೇಶಗಳಿಗೆ ಸಂಬಂಧಿಸಿದ ಪ್ರಮುಖ ವಿಚಾರಗಳ ಕುರಿತು ರಾಜತಾಂತ್ರಿಕ ಮಟ್ಟದಲ್ಲಿ ನಿರಂತರ ಮಾತುಕತೆ ಹಾಗೂ ಸೂಕ್ಷ್ಮವಾದ ಪ್ರತಿಕ್ರಿಯೆ ಅಗತ್ಯ’ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್ ಅವರು ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರಿಗೆ ಹೇಳಿದ್ದಾರೆ.

‘ರಚನಾತ್ಮಕ ದ್ವಿಪಕ್ಷೀಯ ಸಂಬಂಧವು ಉಭಯ ದೇಶಗಳ ನಡುವಿನ ನಂಬಿಕೆ ಯನ್ನು ಹೆಚ್ಚಿಸಲಿದೆ ಎಂಬುದಾಗಿಯೂ ಡೋಭಾಲ್ ಪ್ರತಿಪಾದಿಸಿದ್ದಾರೆ’ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ರಾಷ್ಟ್ರಗಳ ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಮಾವೇಶದ ಸಂದರ್ಭದಲ್ಲಿ ಡೋಭಾಲ್ ಅವರು ವಾಂಗ್ ಯಿ ಅವರೊಂದಿಗೆ ನಡೆಸಿದ ಪ್ರತ್ಯೇಕ ಮಾತುಕತೆ ವೇಳೆ, ಭಾರತದ ನಿಲುವನ್ನು ಸ್ಪಷ್ಟಪಡಿಸಿದರು ಎಂದು ಜೈಸ್ವಾಲ್ ತಿಳಿಸಿದ್ದಾರೆ.

ಉಭಯ ದೇಶಗಳ ನಡುವಿನ ಮಹತ್ವದ ವಿಚಾರಗಳು ಯಾವುವು ಎಂಬ ಬಗ್ಗೆ ಜೈಸ್ವಾಲ್ ಹೆಚ್ಚಿನ ವಿವರಗಳನ್ನು ನೀಡಲಿಲ್ಲ.

ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಇರುವ ಪರಿಸ್ಥಿತಿ ಕುರಿತು ಉಭಯ ನಾಯಕರು ಪರಾಮರ್ಶೆ ನಡೆಸಿದರು ಎಂದೂ ಅವರು ತಿಳಿಸಿದ್ದಾರೆ.

ಪೂರ್ವ ಲಡಾಖ್‌ನಲ್ಲಿನ ಸೇನಾ ಸಂಘರ್ಷದ ಬಳಿಕ ಭಾರತ ಮತ್ತು ಚೀನಾ ನಡುವಿನ ಸಂಬಂಧ ಹದಗೆಟ್ಟಿದೆ. ದ್ವಿಪಕ್ಷೀಯ ಬಾಂಧವ್ಯ ಸುಧಾರಿಸುವುದಕ್ಕೆ ಎರಡೂ ದೇಶಗಳು ನಡೆಸುತ್ತಿರುವ ಪ್ರಯತ್ನಗಳ ಭಾಗವಾಗಿ ಡೋಭಾಲ್ ಹಾಗೂ ವಾಂಗ್ ಯಿ ಅವರು ಸಭೆ ನಡೆಸಿದ್ದಾರೆ.

ಸೆಲ್ಫಿ ತೆಗೆದುಕೊಳ್ಳಲು ಹೋದ ಐವರು ಕಾವೇರಿ ಪಾಲು

ಪ್ರಜಾವಾಣಿ ವಾರ್ತೆ

ಹಲಗೂರು(ಮಂಡ್ಯ): ಮಳವಳ್ಳಿ ತಾಲ್ಲೂಕಿನ ಮುತ್ತತ್ತಿಗೆ ಬುಧವಾರ ಪ್ರವಾಸಕ್ಕೆ ಬಂದಿದ್ದ ಕುಟುಂಬವೊಂದರ ನಾಲ್ವರು ಮಹಿಳೆಯರು ಹಾಗೂ ಕಾರು ಚಾಲಕ ಕಾವೇರಿ ನದಿಯಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಿದ್ದಾಗ ಮುಳುಗಿ ಮೃತಪಟ್ಟಿದ್ದಾರೆ.



ಶ್ವೇತಾ



ಪ್ರಿಯಾಂಕಾ



ಮಹೇಶ್



ಚೈತ್ರಾ



ವಿಜಯಲಕ್ಷ್ಮಿ

ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಜೆ.ಬ್ಯಾಡರಹಳ್ಳಿ ಗ್ರಾಮದ ಶ್ವೇತಾ(38), ಪುತ್ರಿ ಚೈತ್ರಾ(19), ಅತ್ತಿಗೆ ವಿಜಯಲಕ್ಷ್ಮಿ(52), ಅತ್ತಿಗೆ ಮಗಳು ಪ್ರಿಯಾಂಕಾ (28) ಹಾಗೂ ಬೆಂಗಳೂರಿನ ಕಾರು ಚಾಲಕ ಮಹೇಶ್(38) ಮೃತ-ಪಟ್ಟಿದ್ದಾರೆ.

ಪ್ರವಾಸಕ್ಕೆ ಬಂದಿದ್ದ ಏಳು ಮಂದಿಯಲ್ಲಿ ಶ್ವೇತಾ ಅವರ ಪತಿ ರವಿ ಮತ್ತು ಪ್ರಿಯಾಂಕಾ ಅವರ ಎರಡು ವರ್ಷದ ಮಗು ಬದುಕಿ ಉಳಿದಿದ್ದಾರೆ.

ಬೆಂಗಳೂರಿನಲ್ಲಿ ತರಕಾರಿ ವ್ಯಾಪಾರ ಮಾಡಿಕೊಂಡಿದ್ದ ಶ್ವೇತಾ ಅವರ ಕುಟುಂಬಸ್ಥರು ಬುಧವಾರ ಬೆಳಿಗ್ಗೆ ಬಾಡಿಗೆ ಕಾರಿನಲ್ಲಿ ಬೆಂಗಳೂರಿನಿಂದ ಹೊರಟು ಕನಕಪುರ ತಾಲ್ಲೂಕಿನ ಕಬ್ಬಾಳು ಗ್ರಾಮಕ್ಕೆ ಬೀಗರ ಊಟಕ್ಕೆ ಹೋಗಿದ್ದರು. ಅಲ್ಲಿಂದ ಸಂಜೆ 4ಕ್ಕೆ ಮುತ್ತತ್ತಿಗೆ ಬಂದಿದ್ದರು.

ಆಂಜನೇಯನಿಗೆ ಪೂಜೆ ಸಲ್ಲಿಸಿದ ನಂತರ ಕಾವೇರಿ ನದಿಯ ನೀರಿನಲ್ಲಿ ಸೆಲ್ಫಿ ತೆಗೆದುಕೊಳ್ಳುವಾಗ ವಿಜಯಲಕ್ಷ್ಮಿ ನೀರಿನ ಮಡುವಿನಲ್ಲಿ ಸಿಲುಕಿದ್ದಾರೆ. ಅವರನ್ನು ರಕ್ಷಿಸಲು ಹೋದ ಇತರ ನಾಲ್ವರು ನೀರು ಪಾಲಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನುರಿತ ಈಜುಗಾರರ ನೆರವಿನಿಂದ ಐವರ ಶವಗಳನ್ನು ಸಂಜೆ ವೇಳೆಗೆ ಹೊರತೆಗೆ-ಯಲಾಯಿತು. ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ಜೆ. ಶೋಭಾರಾಣಿ, ಮಳವಳ್ಳಿ ಉಪ ವಿಭಾಗದ ಡಿವೈಎಸ್‌ಪಿ ಯಶವಂತ್ ಕುಮಾರ್ ಸ್ಥಳಕ್ಕೆ ಭೇಟಿದ್ದರು. ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮದುವೆ ಆಮಂತ್ರಣದಲ್ಲಿ ಜನ್ಮ ದಿನಾಂಕ ಕಡ್ಡಾಯಕ್ಕೆ ಚಿಂತನೆ’

ಬಾಲ್ಯ ವಿವಾಹ ತಡೆ

ಮುಂಬೈ (ಪಿಟಿಐ): ‘ಬಾಲ್ಯ ವಿವಾಹವನ್ನು ತಡೆಗಟ್ಟುವ ಸಲುವಾಗಿ ಮದುವೆ ಆಮಂತ್ರಣ ಪತ್ರಿಕೆಯಲ್ಲಿ ವಧು–ವರರ ಜನ್ಮ ದಿನಾಂಕವನ್ನು ನಮೂದಿಸುವುದನ್ನು ಕಡ್ಡಾಯ ಮಾಡುವ ನಿಯಮವೊಂದರ ಜಾರಿ ಬಗ್ಗೆ ಚಿಂತಿಸಲಾಗುತ್ತಿದೆ’ ಎಂದು ಮಹಾರಾಷ್ಟ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅದಿತಿ ತಟ್ಕರೆ ವಿಧಾನಸಭೆಗೆ ತಿಳಿಸಿದರು.

ಬಿಜೆಪಿ ಸದಸ್ಯ ಅತುಲ್ ಭಟಖಾಲ್ಕರ್ ಅವರ ಪ್ರಶ್ನೆಗೆ ಸಚಿವೆ ಬುಧವಾರ ಉತ್ತರಿಸಿದರು. ‘ಮುಂದಿನ ಐದು ವರ್ಷದಲ್ಲಿ ಬಾಲ್ಯ ವಿವಾಹವನ್ನು ಶೇ 10ಕ್ಕಿಂತ ಕಡಿಮೆ ಪ್ರಮಾಣಕ್ಕೆ ಇಳಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ’ ಎಂದರು. ‘ಆಮಂತ್ರಣ ಪತ್ರಿಕೆಯಲ್ಲಿ ವಧು–ವರರ ಜನ್ಮ ದಿನಾಂಕವನ್ನು ನಮೂದಿಸುವ ನಿಯಮವು ರಾಜಸ್ಥಾನದಲ್ಲಿ ಜಾರಿಯಲ್ಲಿದೆ. ಈ ನಿಯಮ ಜಾರಿ ಬಳಿಕ ರಾಜ್ಯದಲ್ಲಾದ ಬದಲಾವಣೆ ಕುರಿತು ಅಧ್ಯಯನ ನಡೆಸುವಂತೆ ರಾಜಸ್ಥಾನ ಸರ್ಕಾರಕ್ಕೆ ನಾವು ಪತ್ರ ಬರೆದಿದ್ದೇವೆ’ ಎಂದು ತಿಳಿಸಿದರು.

2025–26ನೇ ಸಾಲಿನಲ್ಲಿ ರಾಜ್ಯದಲ್ಲಿ ಇಲ್ಲಿಯವರೆಗೆ 1,434 ಬಾಲ್ಯ ವಿವಾಹವನ್ನು ಅಧಿಕಾರಿಗಳು ತಡೆದಿದ್ದು, 136 ಎಫ್‌ಐಆರ್ ದಾಖಲಿಸಲಾಗಿದೆ.

ಹೈಕೋರ್ಟ್‌ನ ಕಲಬುರಗಿ ಪೀಠ ಆದೇಶ

ಸಮಾವೇಶ: ಷರತ್ತುಬದ್ಧ ಅನುಮತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜೂನ್ 28ರಂದು ‘ಬಸವಾದಿ ಶಿವಶರಣರ ಹಿಂದೂ ಸಮಾವೇಶ’
- ತಹಶೀಲ್ದಾರ್ ಕೊಟ್ಟ ಆದೇಶಕ್ಕೆ ತಡೆಯಾಜ್ಞೆ
- ಶಾಂತಿಗೆ ಭಂಗವಾದರೆ ಆಯೋಜಕರು ನೇರ ಹೊಣೆ

ಕಲಬುರಗಿ: ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಜೂನ್ 28ರಂದು ನಡೆಸಲು ಉದ್ದೇಶಿಸಿರುವ ‘ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ’ಕ್ಕೆ ಕರ್ನಾಟಕ ಹೈಕೋರ್ಟ್‌ನ ಕಲಬುರಗಿ ಪೀಠವು ಬುಧವಾರ ಷರತ್ತು ಬದ್ಧ ಅನುಮತಿ ನೀಡಿದೆ.

ಸಮಾವೇಶ ಹಾಗೂ ಶೋಭಾಯಾತ್ರೆ ನಡೆಸಲು ಅನುಮತಿ ಕೋರಿ ಸಮಾವೇಶದ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಗುಂಡಪ್ಪ ರೆಡ್ಡಿ ಬಸವಕಲ್ಯಾಣ ತಹಶೀಲ್ದಾರ್‌ಗೆ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಕರ್ನಾಟಕ ರಾಜ್ಯ ಲಿಂಗಾಯತ ಪೀಠಾಧಿಪತಿಗಳ ಒಕ್ಕೂಟ ಹಾಗೂ ಬಸವ ಪರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು. ಕಾನೂನು ಸುವ್ಯವಸ್ಥೆಯ ಕಾರಣ ನೀಡಿ ತಹಶೀಲ್ದಾರರು ಅನುಮತಿ ನಿರಾಕರಿಸಿದ್ದರು.

ಇದನ್ನು ಪ್ರಶ್ನಿಸಿ ಗುಂಡಪ್ಪ ರೆಡ್ಡಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ ಅವರು, ಈ ಕುರಿತು ಷರತ್ತುಗಳನ್ನು ಒಳಗೊಂಡ ಅಫಿಡೆವಿಟ್ ಸಲ್ಲಿಸುವಂತೆ ಅರ್ಜಿದಾರರು ಹಾಗೂ ಸರ್ಕಾರದ ಪರ ವಕೀಲರಿಗೆ ಸೂಚಿಸಿದ್ದರು. ಅದರಂತೆ ಜೂನ್ 24ರಂದು ಬೆಳಿಗ್ಗೆ 10.30ಕ್ಕೆ ಅರ್ಜಿದಾರರು, ಸ್ವಾಮೀಜಿ ಹಾಗೂ ಸರ್ಕಾರದ ಪರ ವಕೀಲರು ಅಫಿಡೆವಿಟ್ ಸಲ್ಲಿಸಿದ್ದರು.

ಮಧ್ಯಾಹ್ನ 2.30ಕ್ಕೆ ವಿಚಾರಣೆ ಮುಂದುವರಿಸಿದ ನ್ಯಾಯಮೂರ್ತಿ ಜೂನ್ 11ರಂದು ತಹಶೀಲ್ದಾರ್ ಕೊಟ್ಟ ಆದೇಶಕ್ಕೆ ತಡೆಯಾಜ್ಞೆ ನೀಡಿದರು. ಸಮಾವೇಶಕ್ಕೆ ಅನುಮತಿ ನೀಡಿ ಆದೇಶಿಸಿದರು.

‘ಸಮಾವೇಶದ ದಿನ ಶೋಭಾಯಾತ್ರೆ ನಡೆಸುವಂತಿಲ್ಲ. ಗರಿಷ್ಠ 2,500 ಮಂದಿ ಪಾಲ್ಗೊಳ್ಳಬೇಕು. ಸಮಾವೇಶದಲ್ಲಿ ಕನೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಪಾಲ್ಗೊಳ್ಳಬಹುದು. ಆದರೆ, ಭಾಷಣ ಮಾಡುವಂತಿಲ್ಲ, ಇತರರನ್ನು ಬಳಸಿಯೂ ಸಂದೇಶ ನೀಡುವಂತಿಲ್ಲ. ಕಾರ್ಯಕ್ರಮದ ಅವಧಿಯಲ್ಲಿ ಯಾವುದೇ ಕಾರಣಕ್ಕೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬರಬಾರದು. ಶಾಂತಿ ಸುವ್ಯವಸ್ಥೆ ಭಂಗವಾದರೆ ಅದಕ್ಕೆ ಕಾರ್ಯಕ್ರಮದ ಆಯೋಜಕರು ನೇರ ಹೊಣೆಗಾರರಾಗುತ್ತಾರೆ’ ಎಂಬುದು ಸೇರಿದಂತೆ ಹಲವು ಷರತ್ತುಗಳನ್ನು ನ್ಯಾಯಾಲಯ ವಿಧಿಸಿದೆ.

ಅರ್ಜಿದಾರರ ಪರ ವಕೀಲ ವೆಂಕಟೇಶ ದಳವಾಯಿ ವಾದ ಮಂಡಿಸಿದರು. ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಹಾಜರಿದ್ದರು.

ಗೇಟ್ ಅಳವಡಿಕೆಯ ಜಲಸಾಹಸ ಯಾನ

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳ ಜನರ ಜೀವನಾಡಿ ತುಂಗಭದ್ರಾ ಜಲಾಶಯ ಕೃಷಿ, ಪ್ರವಾಸೋದ್ಯಮ, ಮೀನುಗಾರಿಕೆ, ವಿದ್ಯುತ್ ಉತ್ಪಾದನೆ ಬೆಳವಣಿಗೆಗೆ ಪೂರಕವಾಗಿದೆ. 2024ರ ಆಗಸ್ಟ್ 10ರಂದು ಜಲಾಶಯದ 19ನೇ ಗೇಟ್ ಕೊಚ್ಚಿಕೊಂಡು ಹೋಗಿತ್ತು. ಜಲಾಶಯ ನಿರ್ಮಾಣವಾದ 73 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಎಲ್ಲ 33 ಕ್ರೆಸ್ಟ್‌ಗೇಟ್‌ಗಳನ್ನು ಬದಲಾವಣೆ ಮಾಡಲಾಗಿದೆ. ಈ ಜಲಸಾಹಸದ ವೈಶಿಷ್ಟ್ಯ ಕುರಿತು ಕೊಪ್ಪಳ ವರದಿಗಾರ ಪ್ರಮೋದ ಕುಲಕರ್ಣಿ ಮಾಹಿತಿ ನೀಡಿದ್ದಾರೆ.

ತುಂಗಭದ್ರಾ ಜಲಾಶಯ


- ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ಸ್ ಮತ್ತು ಮಷೀನ್ ಪ್ರಾಜೆಕ್ಟ್ ಲಿಮಿಡೆಟ್ ಕಂಪನಿಯಿಂದ 2025ರ ಜೂನ್ 10ರಂದು ಗೇಟ್‌ಗಳ ಅಳವಡಿಕೆಗೆ ಒಪ್ಪಂದ; ಡಿಸೆಂಬರ್‌ನಿಂದ ಕೆಲಸ ಆರಂಭ
- ಗದಗ ಸಮೀಪದ ಅಡವಿಸೋಮಾಪುರ, ತುಂಗಭದ್ರಾ ಮಂಡಳಿ ಯಾರ್ಡ್‌ನಲ್ಲಿ ಹೊಸ ಗೇಟ್‌ಗಳ ತಯಾರಿಕೆ
- ಜಲಾಶಯದ ಎಡ, ಬಲ ಮತ್ತು ಮಧ್ಯ ಭಾಗದಲ್ಲಿ ಒಟ್ಟು ಮೂರು ತಂಡಗಳಲ್ಲಿ ಗೇಟ್ ಅಳವಡಿಕೆ
- ಒಂದು ಗೇಟ್ ತೆರೆಯಲು, ಅಳವಡಿಸಲು ತಲಾ ಏಳು ದಿನಗಳ ಸಮಯ ತೆಗೆದುಕೊಂಡ ಕಾರ್ಮಿಕರು; 150 ಕಾರ್ಮಿಕರು, ಎಂಜಿನಿಯರ್‌ಗಳಿಂದ ಕೆಲಸ
- ಎಲ್ಲಾ ಗೇಟ್‌ಗಳ ನಿರ್ಮಾಣಕ್ಕೆ ಖರ್ಚಾದ ಮೊತ್ತ ₹51 ಕೋಟಿ
- ಪ್ರತಿ ಗೇಟ್ 50 ಟನ್ ತೂಕ ಹೊಂದಿದೆ; ಒಂದು ಗೇಟ್‌ಗೆ ಎರಡು ಟನ್ ತೂಕದ ಎರಡು ಚೈನ್‌ಲಿಂಕ್‌ಗಳ ಅಳವಡಿಕೆ
- ಪ್ರತಿ ಗೇಟ್ 60 ಅಡಿ ಅಗಲ, 21 ಅಡಿ ಎತ್ತರ ಇದೆ. ಕನಿಷ್ಠ 50 ವರ್ಷ ಬಾಳಿಕೆ ಬರಲಿದೆ
- 132 ಟಿಎಂಸಿ ಅಡಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರುವ ಜಲಾಶಯದಲ್ಲಿ 31 ಟಿಎಂಸಿ ಅಡಿಯಷ್ಟು ಹೂಳು ತುಂಬಿಕೊಂಡಿದೆ
- 19ನೇ ಕ್ರೆಸ್ಟ್‌ಗೇಟ್ ದುರಂತದ ಬಳಿಕ ನೀರು ಸಂಗ್ರಹ ಸಾಮರ್ಥ್ಯ 80 ಟಿಎಂಸಿ ಅಡಿಗೆ ಕುಸಿದಿತ್ತು. ಈಗ ಮತ್ತೆ ಸಂಗ್ರಹ ಸಾಮರ್ಥ್ಯ ಹೆಚ್ಚಲಿದೆ

ಯಾರಿಗೆ ಉಪಯೋಗ?

ರಾಜ್ಯದ ಕೊಪ್ಪಳ, ರಾಯಚೂರು, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳ ಕಾಲುವೆಯ ಅಂಚಿನ ಊರುಗಳು ಇದೇ ನೀರನ್ನು ನಂಬಿಕೊಂಡು ಕೃಷಿ ಚಟುವಟಿಕೆ ಮಾಡುತ್ತವೆ. ಇದರಲ್ಲಿ ಭತ್ತ ಬೆಳೆಯುವ ಪ್ರದೇಶವೇ ಹೆಚ್ಚು. ಮೂರೂ ರಾಜ್ಯಗಳ ಸುಮಾರು 13 ಲಕ್ಷ ಎಕರೆ ಕೃಷಿ ಭೂಮಿಗೆ ಈ ಜಲಾಶಯದ ನೀರು ಆಧಾರ

ಜಲಾಶಯದ ಬಗ್ಗೆ

ತುಂಗಭದ್ರಾ ಜಲಾಶಯ ನಿರ್ಮಾಣ 1953ರಲ್ಲಿ ಪೂರ್ಣಗೊಂಡು ಅದೇ ವರ್ಷ ಕ್ರೆಸ್ಟ್‌ಗೇಟ್‌ಗಳ (ಸ್ಟೀಲ್ ವೇ ಗೇಟ್) ಅಳವಡಿಕೆ ಕಾರ್ಯ ಆರಂಭಿಸಲಾಗಿತ್ತು. 19ನೇ ಗೇಟ್ ಕೊಚ್ಚಿಕೊಂಡು ಹೋಗಿದ್ದರಿಂದ ತಜ್ಞರ ಸಲಹೆಯಂತೆ ಎಲ್ಲಾ 33 ಗೇಟ್‌ಗಳನ್ನು ಈಗ ಬದಲಿಸಲಾಗಿದೆ



ಕ್ರೆಸ್ಟ್‌ಗೇಟ್ ಅಳವಡಿಕೆಗೆ ಅಂತಿಮ ಸ್ಪರ್ಶ



ತುಂಗಭದ್ರಾ ಜಲಾಶಯದ ನೂತನ ಕ್ರೆಸ್ಟ್‌ಗೇಟ್‌ಗಳ ನೋಟ

ಪ್ರಜಾವಾಣಿ ಚಿತ್ರಗಳು: ಭರತ್ ಕಂದಕೂರ

ಹೊಸ ಕ್ರೆಸ್ಟ್‌ಗೇಟ್‌ಗಳ ಲೋಕಾರ್ಪಣೆ ಇಂದು

ಪ್ರಜಾವಾಣಿ ವಾರ್ತೆ

ಕೊಪ್ಪಳ: ತುಂಗಭದ್ರಾ ಜಲಾಶಯದ ನೂತನ 33 ಕ್ರೆಸ್ಟ್‌ಗೇಟ್‌ಗಳ ಲೋಕಾರ್ಪಣೆ ಕಾರ್ಯಕ್ರಮ ಗುರುವಾರ ನಡೆಯಲಿದ್ದು, ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಜಲಾಶಯದ 18ನೇ ಕ್ರೆಸ್ಟ್‌ಗೇಟ್ ಬಳಿ ಲೋಕಾರ್ಪಣೆ ಮಾಡಿದ ಬಳಿಕ ತಾಲ್ಲೂಕಿನ ಮುನಿರಾಬಾದ್‌ನಲ್ಲಿರುವ ಪ್ರೌಢಶಾಲಾ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ನಂತರ ಭಾರತೀಯ ಮೀಸಲು ಪೊಲೀಸ್ ಪಡೆ (ಐಆರ್‌ಬಿ) ಆವರಣದಲ್ಲಿ ಪ್ರಮುಖ ಸಮಾನಾಂತರ ಜಲಾಶಯಗಳು ಹಾಗೂ ಅಂತರರಾಜ್ಯ ನೀರಾವರಿ ಯೋಜನೆಗಳ ಬಗ್ಗೆ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಚರ್ಚಿಸಲಿದ್ದಾರೆ.

ತುಂಗಭದ್ರಾದಲ್ಲಿ ತುಂಬಿರುವ 31 ಟಿಎಂಸಿ ಅಡಿ ಹೂಳಿಗೆ ಪರ್ಯಾಯವಾಗಿ ಜಿಲ್ಲೆಯ ಕನಕಗಿರಿ ಸಮೀಪದ ನವಲಿಯಲ್ಲಿ ಸಮಾನಾಂತರ ಜಲಾಶಯ ನಿರ್ಮಿಸಬೇಕು ಎಂದು ದಶಕದಿಂದಲೂ ಬೇಡಿಕೆಯಿದೆ. ಇದಕ್ಕಾಗಿ ₹13,040 ಕೋಟಿ ಮೊತ್ತದ ಡಿಪಿಆರ್ ಸಿದ್ಧ-ಪಡಿಸಲಾಗಿದೆ. ಆದರೆ, ಯೋಜನೆ ಕಾರ್ಯರೂಪಕ್ಕೆ ಬಂದಿಲ್ಲ.

ಯೋಜನೆಯ ಅನುಷ್ಠಾನದ ನಿಖರತೆ ಬಗ್ಗೆಯೂ ಚರ್ಚೆಯಾಗಿಲ್ಲ. ಇದೂ ಸೇರಿದಂತೆ ಹಲವು ವಿಷಯಗಳು ಸಮಾಲೋಚನೆಗೆ ಬರಲಿವೆ ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಪರ್ಯಾಯ ಯೋಜನೆಗಳಿಂದ ನೀರಿನ ಪಾಲುದಾರ ರಾಜ್ಯಗಳಿಗೆ ಅನ್ಯಾಯವಾಗುವುದಿಲ್ಲ ಎನ್ನುವುದನ್ನು ರಾಜ್ಯ ಸರ್ಕಾರ ಮನವರಿಕೆ ಮಾಡಿಕೊಡಬೇಕಾಗಿದೆ. ಆದ್ದರಿಂದ ಈ ಮಾತುಕತೆ ಮಹತ್ವ ಪಡೆದುಕೊಂಡಿದೆ.

2024ರ ಆಗಸ್ಟ್‌ನಲ್ಲಿ ಜಲಾಶಯದ 19ನೇ ಕ್ರೆಸ್ಟ್‌ಗೇಟ್ ಕಳಚಿ ಹೋಗಿದ್ದಾಗ ಪರಿಶೀಲನೆ ನಡೆಸಿದ್ದ ತಜ್ಞರು ಎಲ್ಲಾ ಗೇಟ್‌ಗಳನ್ನು ಬದಲಾವಣೆ ಮಾಡುವ ತುರ್ತು ಅಗತ್ಯವಿದೆ ಎಂದು ವರದಿ ನೀಡಿದ್ದರು. ಹೀಗಾಗಿ ಎಲ್ಲಾ ಗೇಟ್‌ಗಳನ್ನು ಬದಲಿಸಲಾಗಿದೆ.

ಗುರುವಾರ • ಜೂನ್ 25, 2026

ಪ್ರಜಾವಾಣಿ

ಪ್ರಜಾಪ್ಲಸ್

ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

‘ಧರ್ಮನ್’ ಆಗಿ ಬರಲಿರುವ ರಜನಿಕಾಂತ್

ಸೂಪರ್‌ಸ್ಟಾರ್ ರಜನಿಕಾಂತ್ ಅಭಿನಯದ 173ನೇ ಚಿತ್ರದ ಶೀರ್ಷಿಕೆ ಕೊನೆಗೂ ಅನಾವರಣಗೊಂಡಿದೆ. 2025ರಲ್ಲೇ ಘೋಷಣೆಯಾಗಿದ್ದ ಈ ಚಿತ್ರಕ್ಕೆ ‘ಧರ್ಮನ್ - ದ ಡೆಡ್ಲಿ ಡಾಕ್ಟರ್’ ಎಂದು ಹೆಸರಿಡಲಾಗಿದೆ. ವಿಶೇಷವೆಂದರೆ, ಚಿತ್ರವನ್ನು ನಟ ಕಮಲ್ ಹಾಸನ್ ಅವರ ‘ಕಮಲ್ ಫಿಲ್ಮ್ಸ್ ಇಂಟರ್‌ನ್ಯಾಷನಲ್’ ಬ್ಯಾನರ್ ಅಡಿಯಲ್ಲಿ ನಿರ್ಮಿಸಲಾಗುತ್ತಿದೆ.

‘ಓ ಮೈ ಕಡವುಲೆ’ ಹಾಗೂ ‘ಡ್ರ್ಯಾಗನ್’ ಚಿತ್ರಗಳ ಮೂಲಕ ಗಮನ ಸೆಳೆದಿರುವ ಅಶ್ವಥ್ ಮಾರಿಮುತ್ತು ಚಿತ್ರ ನಿರ್ದೇಶನದ ಹೊಣೆ ಹೊತ್ತಿದ್ದಾರೆ. ಚಿತ್ರದ ಶೀರ್ಷಿಕೆ ಅನಾವರಣದೊಂದಿಗೆ ಬಿಡುಗಡೆಗೊಂಡ ಪೋಸ್ಟರ್ ಸಾಕಷ್ಟು ಕುತೂಹಲ ಮೂಡಿಸಿದೆ. ರಕ್ತಸಿಕ್ತ ಕೈಗವಸು ಧರಿಸಿ, ಶಸ್ತ್ರಚಿಕಿತ್ಸೆಗೆ ಬಳಸುವ ಚಾಕು ಹಿಡಿದ ವೈದ್ಯರ ಉಡುಪಿನಲ್ಲಿ ರಜನಿಕಾಂತ್ ಕಾಣಿಸಿಕೊಂಡಿದ್ದು, ಮೃತದೇಹದ ಮೇಲೆ ಕಾಲಿಟ್ಟು ನಿಂತಿರುವ ಚಿತ್ರಣ ಗಮನ ಸೆಳೆಯುತ್ತದೆ.

‘ಧರ್ಮಮೇ ವೆಲ್ಲುಂ’ (ನ್ಯಾಯವೇ ಗೆಲ್ಲುತ್ತದೆ) ಎಂಬ ಅಡಿಬರಹ ಚಿತ್ರಕ್ಕಿದೆ. ‘ಇದು ಸಂಪೂರ್ಣ ಮನರಂಜನಾತ್ಮಕ ಚಿತ್ರವಾಗಿದ್ದು, ಪ್ರೇಕ್ಷಕರನ್ನು ಹಿಡಿದಿಡುವ ರೋಚಕ ದೃಶ್ಯಗಳಿಂದ ಕೂಡಿರಲಿದೆ.



ಧರ್ಮನ್ ಚಿತ್ರದ ಪೋಸ್ಟರ್

ರಜನಿಕಾಂತ್ ವೈದ್ಯರ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ’ ಎಂದು ನಿರ್ದೇಶಕ ಅಶ್ವಥ್ ಮಾರಿಮುತ್ತು ತಿಳಿಸಿದ್ದಾರೆ.

ಚಿತ್ರದ ಮೊದಲ ದೃಶ್ಯದ ಚಿತ್ರೀಕರಣ ಚೆನ್ನೈನಲ್ಲಿ ನೆರವೇರಿದೆ. ನಟಿಯರಾದ ಸಿಮ್ರನ್ ಹಾಗೂ ರಾಶಿ ಖನ್ನಾ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದು, ಇತರೆ ಕಲಾವಿದರ ವಿವರಗಳನ್ನು ಚಿತ್ರತಂಡ ಶೀಘ್ರದಲ್ಲೇ ಪ್ರಕಟಿಸುವ ನಿರೀಕ್ಷೆಯಿದೆ.

ಅನಿರುದ್ಧ್ ರವಿಚಂದರ್ ಸಂಗೀತ ನಿರ್ದೇಶನ ಮಾಡಲಿದ್ದು, ನಿಕೇತ್ ಬೊಮ್ಮಿ ಚಿತ್ರಕಥೆ, ಪ್ರದೀಪ್ ಇ. ರಾಘವ್ ಸಂಕಲನ ಹಾಗೂ ಅನ್ಬರಿವ್ ಅವರು ಸಾಹಸ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ.

ಈ ಚಿತ್ರದ ನಿರ್ದೇಶಕರ ಆಯ್ಕೆ ವಿಚಾರವೂ ಸಾಕಷ್ಟು ತಿರುವುಗಳನ್ನು ಕಂಡಿದೆ. 2025ರಲ್ಲಿ ಚಿತ್ರ ಘೋಷಣೆಯಾದಾಗ ಮೊದಲಿಗೆ ಸುಂದರ್ ಸಿ. ನಿರ್ದೇಶಿಸಲಿದ್ದಾರೆ ಎಂದು ಪ್ರಕಟಿಸಲಾಗಿತ್ತು. ನಂತರ ಅವರ ಸ್ಥಾನದಲ್ಲಿ ಸಿಬಿ ಚಕ್ರವರ್ತಿ ನಿರ್ದೇಶಕ ರಾಗಲಿದ್ದಾರೆ ಎಂಬ ಸುದ್ದಿ ಹೊರಬಿದ್ದಿತ್ತು. ಇದೀಗ ಅಶ್ವಥ್ ಮಾರಿಮುತ್ತು ನಿರ್ದೇಶಕರಾಗಿ ಅಧಿಕೃತವಾಗಿ ಘೋಷಣೆಯಾಗಿದ್ದಾರೆ. ಆದರೆ ಈ ಬದಲಾವಣೆಗಳಿಗೆ ಕಾರಣವೇನು ಎಂಬುದರ ಬಗ್ಗೆ ಚಿತ್ರತಂಡ ಸ್ಪಷ್ಟನೆ ನೀಡಿಲ್ಲ. ❖

ಸುನಿ ಸಿನಿಮಾಗೆ ವಿನಯ್, ನವೀನ್ ಸಾಥ್

ಸಿಂಪಲ್ ಸುನಿ ನಿರ್ದೇಶನದ ‘ಮೋಡ ಕವಿದ ವಾತಾವರಣ’ ಸಿನಿಮಾ ಜೂನ್ 26 ರಂದು ತೆರೆಕಾಣುತ್ತಿದ್ದು, ಸಿನಿಮಾದ ಟ್ರೇಲರ್ ಬಿಡುಗಡೆಗೆ ನಟರಾದ ವಿನಯ್ ರಾಜ್‌ಕುಮಾರ್ ಹಾಗೂ ನವೀನ್ ಶಂಕರ್ ಸಾಥ್ ನೀಡಿದರು.

ಹಲವು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ಸುನಿ ತಂಡದಲ್ಲಿ ಗುರುತಿಸಿಕೊಂಡಿದ್ದ ಶೀಲಂ ಎಂ.ಸ್ವಾಮಿ ಈ ಸಿನಿಮಾದ ಮೂಲಕ ನಾಯಕ ನಟರಾಗಿದ್ದಾರೆ. ಸೈನ್ಸ್ ಫಿಕ್ಷನ್ ಕಥಾಹಂದರ ಹೊಂದಿರುವ ಈ ವಿಭಿನ್ನ ಪ್ರೇಮಕಥೆಯು ಕನ್ನಡ ಹಾಗೂ ಮಲಯಾಳ ಭಾಷೆಗಳಲ್ಲಿ ಏಕಕಾಲಕ್ಕೆ ತೆರೆಕಾಣಲಿದೆ.

ಶೀಲಂಗೆ ಜೋಡಿಯಾಗಿ ಮೋಕ್ಷ ಕುಶಾಲ್ ಹಾಗೂ ಸಾತ್ವಿಕ ನಟಿಸಿದ್ದಾರೆ. ‘ಶೀಲಂ ಈ ಸಿನಿಮಾದ ಮೂಲಕ ಚಿತ್ರರಂಗದಲ್ಲಿ ನಾಯಕನಾಗಿ ಗಟ್ಟಿಯಾಗಿ ನಿಲ್ಲುತ್ತಾರೆ. ಸಿಂಗಪುರದಲ್ಲಿ ನಡೆದ ಪ್ರೀಮಿಯರ್‌ಗೆ ಒಳ್ಳೆಯ ಪ್ರತಿಕ್ರಿಯೆ ದೊರಕಿದೆ. ಸಿನಿಮಾ ಪ್ರೇಕ್ಷಕರಿಗೆ ಇಷ್ಟವಾಗಲಿದೆ’ ಎನ್ನುತ್ತಾರೆ ಸುನಿ.

‘ಒಂದು ಸರಳ ಪ್ರೇಮಕಥೆ’ ಸಿನಿಮಾ ನಿರ್ಮಾಣ ಮಾಡಿದ್ದ ‘ರಾಮ್ ಮೂವೀಸ್’ ಬ್ಯಾನರ್ ಅಡಿಯಲ್ಲಿ ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೆಳವಾಡಿ ಹಾಗೂ ಗೋವಾ ರಮೇಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣ, ಜೂಡಾ ಸ್ಯಾಂಡಿ ಸಂಗೀತವಿದೆ. ❖



ಸಾತ್ವಿಕ, ಶೀಲಂ, ಮೋಕ್ಷ

‘8’ ಸಿನಿಮಾದ ಝಲಕ್ ಬಿಡುಗಡೆ



ಅನುರಾಗ್ ಕಶ್ಯಪ್

ನಿರ್ಮಾಪಕ ಅರವಿಂದ್ ವೆಂಕಟೇಶ್ ರೆಡ್ಡಿ ಅವರ ಜನ್ಮದಿನದ ಅಂಗವಾಗಿ ಎವಿಆರ್ ಎಂಟರ್‌ಟೈನ್‌ಮೆಂಟ್ ತನ್ನ ಬಹುನಿರೀಕ್ಷಿತ ‘8’ ಚಿತ್ರದ ವಿಶೇಷ ಝಲಕ್ ಅನ್ನು ಬಿಡುಗಡೆ ಮಾಡಿದೆ. ಸುಜಯ್ ಶಾಸ್ತ್ರಿ ನಿರ್ದೇಶನದ ಈ ಚಿತ್ರದಲ್ಲಿ ಖ್ಯಾತ ನಟ ಅನುರಾಗ್ ಕಶ್ಯಪ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

‘ಜೀವನದಲ್ಲಿ ಸಿಗುವ ಎರಡನೇ ಅವಕಾಶ’ ಎಂಬ ಆಶಯವನ್ನು ಕೇಂದ್ರವಾಗಿಟ್ಟುಕೊಂಡಿರುವ ಚಿತ್ರದ ಕಥೆ, ವ್ಯಕ್ತಿಯೊಬ್ಬ ತನ್ನ ಬದುಕನ್ನು ಮರು ರೂಪಿಸಿಕೊಳ್ಳಲು ದೊರೆಯುವ ಅಪರೂಪದ ಅವಕಾಶವನ್ನು ಹೇಗೆ ಬಳಸಿಕೊಳ್ಳುತ್ತಾನೆ ಎಂಬುದನ್ನು ತೆರೆದಿಡಲಿದೆ.

ಚಿತ್ರದ ಚಿತ್ರೀಕರಣ ಈಗಾಗಲೇ ಪೂರ್ಣಗೊಂಡಿದ್ದು, ಚಿತ್ರತಂಡ ಪ್ರಸ್ತುತ ನಿರ್ಮಾಣ ನಂತರದ ಕಾರ್ಯಗಳಲ್ಲಿ ತೊಡಗಿದೆ. ಗುರುಪ್ರಸಾದ್ ನಾರ್ನಾಡ್ ಅವರ ಛಾಯಾಚಿತ್ರಗ್ರಹಣ ಹಾಗೂ ಪ್ರತೀಕ್ ಶೆಟ್ಟಿ ಅವರ ಸಂಕಲನ ಚಿತ್ರಕ್ಕಿದೆ. ಚಿತ್ರದ ವಿಶೇಷ ಝಲಕ್ ಅನ್ನು ಎಲ್ಲ ಸಾಮಾಜಿಕ ಜಾಲತಾಣಗಳಲ್ಲಿರುವ ಚಿತ್ರದ ಅಧಿಕೃತ ಖಾತೆಗಳಲ್ಲಿ ವೀಕ್ಷಿಸಬಹುದು. ❖

ಪ್ರದೀಪ್ ಕೆಂಚನೂರು ಚಿತ್ರಕ್ಕೆ ಪ್ರಶಸ್ತಿ



ಪ್ರದೀಪ್ ಕೆಂಚನೂರು

ಮುಂಬೈನಲ್ಲಿ ನಡೆದ 19ನೇ ಮುಂಬೈ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡದ ಕಿರುಚಿತ್ರ ‘ದಿ ಹಗ್ ಆಫ್ ಎಂಪ್ಟಿನೆಸ್’ (ಖಾಲಿತನದ ಅಪ್ಪುಗೆ) ರಾಷ್ಟ್ರೀಯ ಸ್ಪರ್ಧಾ ವಿಭಾಗದಲ್ಲಿ ಪ್ರಶಸ್ತಿ ಗೆದ್ದಿದೆ. ಚಿತ್ರದ ನಿರ್ದೇಶಕ ಪ್ರದೀಪ್ ಕೆಂಚನೂರು ಅವರಿಗೆ ಫ್ರೀ ಫ್ರೆಸ್ಕಿ ಅಂತರರಾಷ್ಟ್ರೀಯ ಕ್ರಿಟಿಕ್ ಅಸೋಸಿಯೇಷನ್ ನೀಡುವ ‘ಅತ್ಯುತ್ತಮ ನಿರ್ದೇಶಕ’ ಪ್ರಶಸ್ತಿಯನ್ನೂ ನೀಡಿ ಗೌರವಿಸಲಾಯಿತು. ಭಾರತೀಯ ಫಿಲಂ ಸೊಸೈಟಿಗಳ ಒಕ್ಕೂಟದ ಉಪಾಧ್ಯಕ್ಷ ಪ್ರೇಮೇಂದ್ರ ಮಜುಂದಾರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಉಡುಪಿಯಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿರುವ ಪ್ರದೀಪ್ ಕೆಂಚನೂರು ಅವರಿಗೆ ಇದು ಚೊಚ್ಚಲ ಚಿತ್ರವಾಗಿದ್ದು, ಮೊದಲ ಪ್ರಯತ್ನದಲ್ಲೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದ್ದಾರೆ. ರಾಷ್ಟ್ರೀಯ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹಾಗೂ ಎನ್‌ಎಫ್‌ಡಿಸಿ ಸಂಯುಕ್ತವಾಗಿ ಆಯೋಜಿಸಿದ್ದ ಈ ಚಿತ್ರೋತ್ಸವದಲ್ಲಿ 48 ರಾಷ್ಟ್ರಗಳಿಂದ 903 ಚಿತ್ರಗಳು ಸ್ಪರ್ಧಿಸಿದ್ದವು. ❖

‘ಕೆಎ 18’ಕ್ಕೆ ಸಸ್ಪೆನ್ಸ್, ಥ್ರಿಲ್ಲರ್ ಸರಕು

ವಿಭಿನ್ನ ಶೀರ್ಷಿಕೆ ‘ಕೆಎ-18’ ಚಿತ್ರದ ಮುಹೂರ್ತ ಬೆಂಗಳೂರಿನ ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ನಡೆಯಿತು. ಚಿತ್ರ ಸಾಹಿತಿ ವಿ. ನಾಗೇಂದ್ರ ಪ್ರಸಾದ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿದರು. ನಟ ದರ್ಶನ್ ಅಳಿಯ ಮನೋಜ್ ಕ್ಯಾಮೆರಾ ಆನ್ ಮಾಡಿದರು.

ಅಪ್ಪಾಜಿ ಪ್ರೊಡಕ್ಷನ್ಸ್ ಅಡಿ ಹಿರೇಮಗಳೂರು ಎ.ಟಿ.ಎಂ.ಮಂಜು ನಿರ್ಮಾಣ ಮಾಡುತ್ತಿದ್ದು, ನಾಯಕನಾಗಿ ಬಣ್ಣ ಹಚ್ಚುತ್ತಿದ್ದಾರೆ. ಮೋಹನ್ ಚಿಕ್ಕಿ ಮೂರನೇ ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಉತ್ತರಕಾಂಡದ ಸೋನಿಯಾ ರಾವುತ್ ಸಹ ನಿರ್ಮಾಪಕಿಯಾಗಿದ್ದು, ಹಾಡಿಗೆ ಹೆಜ್ಜೆ ಹಾಕುತ್ತಿದ್ದಾರೆ. ಚಿತ್ರ ಕನ್ನಡ ಸೇರಿ ತೆಲುಗು, ಹಿಂದಿ, ತಮಿಳು, ಮಲೆಯಾಳಂ ಭಾಷೆಗಳಲ್ಲಿ ಸಿದ್ಧಗೊಳ್ಳುತ್ತಿದೆ.

ಮುಖ್ಯಪಾತ್ರದಲ್ಲಿ ಎ.ಟಿ.ಎಂ.ಮಂಜು, ತನಿಷಾ ಕುಪ್ಪಂಡ, ಖಳನಾಗಿ ದೀಪು, ಅಲ್ಲದೇ ವರ್ಧನ್, ವಿಜಿ, ಪೂಜಾ ಇದ್ದಾರೆ. ಶಶಿಕುಮಾರ್ ಜೆ.ಕೆ ಅವರ ಸಾಹಿತ್ಯ, ಮುಂಜಾನೆ ಮಂಜು ಅವರ ಛಾಯಾಗ್ರಹಣ, ರಘು ಶಿವರಾಮ್ ಸಂಕಲನ, ವೈಲೆಂಟ್ ವೇಲು ಅವರ ಸಾಹಸವಿದೆ.

ನಿರ್ಮಾಣ ನಿರ್ವಹಣೆ ಮಂಜುನಾಥ್ ದೈವಜ್ಞ ಅವರದಾಗಿದೆ. ನಿರ್ದೇಶಕ ಮೋಹನ್ ಚಿಕ್ಕಿ ಅವರು, ‘ಚಿಕ್ಕಮಗಳೂರು ಭಾಗದಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಯಲಿದೆ’ ಎಂದು ತಿಳಿಸಿದರು. ❖



ತನಿಷಾ ಕುಪ್ಪಂಡ

ಉದ್ಯಮಿ ಕೊಲೆ: ‘ಹೂಡಿ’ ಧರಿಸಿ ಸಿಕ್ಕಿಬಿದ್ದ ಆರೋಪಿ

ಪ್ರಿಯಕರನ ನೆರವಿನೊಂದಿಗೆ ಭಾವಿ ಪತಿಯನ್ನು ಕಣಿವೆಗೆ ತಳ್ಳಿ ಹತ್ಯೆ



ಪುಣೆ (ಪಿಟಿಐ): 33 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶ ಇದ್ದರೂ ತಲೆ, ಕುತ್ತಿಗೆ, ಮುಖದ ಭಾಗವನ್ನು ಆವರಿಸುವಂತೆ ಬೆಚ್ಚನೆಯ ಉಡುಪು ‘ಹೂಡಿ’ ಧರಿಸಿದ್ದ ವ್ಯಕ್ತಿಯೊಬ್ಬನ ಅಸಹಜ ವರ್ತನೆ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಲೋಹಾಗಢದಲ್ಲಿ ನಡೆದಿದ್ದ ಉದ್ಯಮಿ ಕೊಲೆ ಪ್ರಕರಣ ಭೇದಿಸುವಲ್ಲಿ ಪೊಲೀಸರಿಗೆ ಇದೇ ನಿರ್ಣಾಯಕ ಸುಳಿವಾಗಿದೆ.

ಚಾರಣದ ನೆಪದಲ್ಲಿ ಭಾವಿ ಪತಿ ಕೇತನ್ ವಿಶಾಲ್ ಅಗರವಾಲ್ (26) ಅವರನ್ನು ಜೂನ್ 18ರಂದು ಐತಿಹಾಸಿಕ ಲೋಹಾಗಢಕ್ಕೆ ಕರೆದೊಯ್ದಿದ್ದ ಸಿಯಾ ಗೋಯಲ್ (20) ಅಲ್ಲಿಂದ 400 ಅಡಿ ಆಳದ ಕಂದಕಕ್ಕೆ ನೂಕಿ ಕೊಲೆ ಮಾಡಿದ್ದರು. ಬಳಿಕ ಕೇತನ್ ಆಕಸ್ಮಿಕವಾಗಿ ಕಣಿವೆಗೆ ಬಿದ್ದು ಮೃತಪಟ್ಟಿದ್ದಾಗಿ ಬಿಂಬಿಸಿದ್ದರು.

ಈ ಪ್ರಕರಣವನ್ನು ಬೆನ್ನುಬಿದ್ದ ಲೋಣಾವಳಾ ಗ್ರಾಮೀಣ ಠಾಣೆಯ ಪೊಲೀಸರು ಮತ್ತು ಸ್ಥಳೀಯ ಅಪರಾಧ ಘಟಕವು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಸೇರಿ ತಾಂತ್ರಿಕ ಸಾಕ್ಷ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಸಿಯಾಳ ಪ್ರಿಯಕರ ಚೇತನ್ ಬಾಬುಲಾಲ್ ಚೌಧರಿಯನ್ನು (22) ಬಂಧಿಸಿದ್ದಾರೆ. ಕೃತ್ಯ ನಡೆದ ದಿನ ಲೋಹಾಗಢದ ಆವರಣದಲ್ಲಿ ಕೇತನ್ ಮತ್ತು ಸಿಯಾಳನ್ನು ‘ಹೂಡಿ’ ಧರಿಸಿಕೊಂಡಿದ್ದ ಚೇತನ್ ಚೌಧರಿ ಹಿಂಬಾಲಿಸುತ್ತಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

‘ಸಿಯಾ, ಕೇತನ್‌ನನ್ನು ಕೊಲೆ ಮಾಡಲು ನಿರ್ಧರಿಸಿದ್ದಳು. ಇದಕ್ಕಾಗಿ ಪ್ರಿಯಕರನ ಜತೆಗೂಡಿ ಸಿದ್ಧತೆ ಮಾಡಿಕೊಂಡಿದ್ದಳು. ನಿಶ್ಚಿತಾರ್ಥ ಮುಗಿದ ನಂತರ ಎರಡು ಬಾರಿ ಸಿಯಾ ಕೇತನ್‌ನನ್ನು ಲೋಹಾಗಢಕ್ಕೆ ಕರೆದುಕೊಂಡು ಹೋಗಿದ್ದಳು. ಪದೇ ಪದೇ ಅಲ್ಲಿಗೆ ಚಾರಣ ಹೋಗಬೇಕೆಂದು ಪಟ್ಟು ಹಿಡಿದಿದ್ದಳು. ವಿವಾಹಪೂರ್ವ ಫೋಟೊ ಶೂಟ್‌ಗಾಗಿ ಬಾಲಿಗೆ ಹೋಗಲು ನಿರ್ಧರಿಸಲಾಗಿತ್ತು. ಆದರೆ, ಕೇತನ್ ಪಾಸ್‌ಪೋರ್ಟ್ ನಾಪತ್ತೆಯಾಗಿತ್ತು ಇದಕ್ಕಿದ್ದಂತೆ ಇದರ ಹಿಂದೆಯೂ ಸಿಯಾ ಸಂಚು ಇದೆ’ ಎಂದು ಕೇತನ್ ಸಹೋದರಿ ಸಂಜನಾ ಮತ್ತು ಕುಟುಂಬ ಸದಸ್ಯರು ಪೊಲೀಸರಿಗೆ ತಿಳಿಸಿದ್ದಾರೆ.

ಹಿಂದೆಯೇ ನಡೆದಿತ್ತು ಕೊಲೆಗೆ ಯತ್ನ: ಜೂನ್ 18ರ ಘಟನೆಗೂ ಮುನ್ನ ಅಂದರೆ, ಜೂನ್ 14ರಂದು ಕೇತನ್ ಅವರನ್ನು ಲೋಹಾಗಢಕ್ಕೆ ಕರೆದುಕೊಂಡು ಬಂದಿದ್ದ ಸಿಯಾ ಅಲ್ಲಿಂದ ಅವರನ್ನು ಉಪಾಯದಿಂದ ಕೆಳಗೆ ನೂಕಿದ್ದಳು. ಆದರೆ, ಅದೃಷ್ಟವಶಾತ್ ಕೇತನ್ ಪೊದೆಯನ್ನು ಹಿಡಿದುಕೊಂಡು ಬದುಕುಳಿದಿದ್ದರು. ಆಘಾತಗೊಂಡ ಕೇತನ್, ಈ ಬಗ್ಗೆ ಸಿಯಾಳನ್ನು ಪ್ರಶ್ನಿಸಿದಾಗ, ಹಾವೊಂದು ಸಮೀಪದಲ್ಲಿ ಹೋಗುತ್ತಿದ್ದನ್ನು ನೋಡಿ ಹೆದರಿ ಈ ರೀತಿ ಮಾಡಿದೆ ಎಂದು ಕೇತನ್‌ಗೆ ನಂಬಿಸಿ, ವಾಪಸ್ ಕರೆದುಕೊಂಡು ಬಂದಿದ್ದಳು’ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಯಾ ಮತ್ತು ಪ್ರಿಯಕರ ಚೇತನ್ ನಡುವೆ ನಡೆದಿರುವ ದೂರವಾಣಿ ಸಂಭಾಷಣೆ, ವಿನಿಮಯಗೊಂಡಿರುವ ಸಂದೇಶಗಳು ಕೊಲೆಯ ಸಂಚನ್ನು ದೃಢಪಡಿಸಿವೆ ಎಂದು ಪೊಲೀಸರು ತಿಳಿಸಿದ್ದಾರೆ.

‘ನಿಶ್ಚಿತಾರ್ಥ ರದ್ದುಗೊಳಿಸುವುದು ಇಷ್ಟವಿರಲಿಲ್ಲ’

ಸಿಯಾ ಮತ್ತು ಕೇತನ್ ನಡುವಿನ ನಿಶ್ಚಿತಾರ್ಥ ಫೆಬ್ರುವರಿಯಲ್ಲಿ ನಡೆದಿತ್ತು. ಮದುವೆ ನವೆಂಬರ್‌ನಲ್ಲಿ ನಿಗದಿಯಾಗಿತ್ತು. ಉದಯಪುರ ಅರಮನೆಯನ್ನು ಮದುವೆ ಸಮಾರಂಭಕ್ಕಾಗಿ ಕಾಯ್ದಿರಿಸಲಾಗಿತ್ತು.

‘ಕೇತನ್ ಅವರನ್ನು ಕೊಲೆ ಮಾಡುವ ಬದಲು, ನೀವಿಬ್ಬರೂ ಮದುವೆ ಆಗಬಹುದಿತ್ತಲ್ಲಾ’ ಎಂದು ತನಿಖಾಧಿಕಾರಿಗಳು ಚೇತನ್ ಅವರನ್ನು ವಿಚಾರಣೆ ವೇಳೆ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಚೇತನ್, ‘ನಿಶ್ಚಿತಾರ್ಥ ರದ್ದುಗೊಳಿಸಿ ಓಡಿಹೋಗಿ ಮದುವೆ ಆಗುವುದು ಸಿಯಾಳಿಗೆ ಇಷ್ಟ ಇರಲಿಲ್ಲ. ಹಾಗೆ ಮಾಡುವುದರಿಂದ ತನ್ನ ಕುಟುಂಬದ ಪ್ರತಿಷ್ಠೆಗೆ ಧಕ್ಕೆಯಾಗುತ್ತದೆ ಎಂದು ಆಕೆ ಹೇಳಿದ್ದಳು. ಹಾಗಾಗಿ, ಕೇತನ್ ಅವರನ್ನು ಲೋಹಾಗಢ ಕೋಟೆಗೆ ಚಾರಣಕ್ಕೆ ಕರೆದುಕೊಂಡು ಹೋಗಿ ಕೊಲೆ ಮಾಡಿ ಅನಿರೀಕ್ಷಿತ ಅವಘಡದಂತೆ ಬಿಂಬಿಸಲು ಯೋಜನೆ ರೂಪಿಸಲಾಗಿತ್ತು’ ಎಂದು ಹೇಳಿದ್ದಾನೆ.

ಆಂಧ್ರ ಯುವಕನ ಲಾಕಪ್ ಸಾವು: ಎಸ್‌ಐಟಿ ವರದಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಯುವಕ ಗದೆ ಸಾಯಿ ಕೃಷ್ಣ (25) ಸಾವಿನ ಕುರಿತು ತನಿಖೆ ನಡೆಸಿದ ವಿಶೇಷ ತನಿಖಾ ತಂಡವು (ಎಸ್‌ಐಟಿ), ಮಾರಕ ಗಾಯಗಳಿಂದ ಲಾಕಪ್ ಸಾವು ಸಂಭವಿಸಿದೆ ಎಂದು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ.

ಅಪರಾಧ ಹಿನ್ನೆಲೆ ಹೊಂದಿದ್ದ ಗದೆ ಸಾಯಿ ಕೃಷ್ಣ ಅವರನ್ನು ಮೇ 6ರಂದು ಮಾರ್ಕಪುರಂ ಎಂಬಲ್ಲಿ ವಶಕ್ಕೆ ಪಡೆದಿದ್ದ ಸರ್ಕಲ್ ಇನ್‌ಸ್ಪೆಕ್ಟರ್ ಎಸ್. ನಾಗರಾಜು ಅವರು, ವಿಜಯವಾಡದ ಕೃಷ್ಣ ಲಂಕಾ ಪೊಲೀಸ್ ಠಾಣೆಯಲ್ಲಿ ಅಕ್ರಮವಾಗಿ ವಶದಲ್ಲಿ ಇರಿಸಿಕೊಂಡಿದ್ದರು. ‘ಇನ್‌ಸ್ಪೆಕ್ಟರ್ ನಡೆಸಿದ ಹಲ್ಲೆಯಿಂದ ಗಾಯಗೊಂಡು ಸಾವು ಸಂಭವಿಸಿದೆ’ ಎಂದು ಎಸ್‌ಐಟಿ ವರದಿಯಲ್ಲಿ ಉಲ್ಲೇಖಿಸಿದೆ.

ಆರೋಪಿ ನಾಗರಾಜು ಅವರನ್ನು ಎಸ್‌ಐಟಿ ಮಂಗಳವಾರ ಬಂಧಿಸಿತ್ತು. ಬುಧವಾರ ಅವರನ್ನು ವಿಜಯವಾಡದ ಪ್ರಥಮ ದರ್ಜೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ವಿಚಾರಣೆಗಾಗಿ ವಶಕ್ಕೆ ಪಡೆಯಲಾಯಿತು.

‘ಆರೋಪಿಯನ್ನು ವಶಕ್ಕೆ ಪಡೆದ ನಂತರ ಅನಗತ್ಯ ವಿಳಂಬ ಮಾಡದೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಬೇಕಾಗಿತ್ತು. ಆದರೆ, ಹಾಜರುಪಡಿಸಿಲ್ಲ, ಇದಕ್ಕೆ ಕಾನೂನುಬದ್ಧ ವಿವರಣೆಯನ್ನೂ ನೀಡಿಲ್ಲ. ಜತೆಗೆ ಸಾಯಿಕೃಷ್ಣ ಬಂಧನದ ಅವಧಿಯಲ್ಲಿನ ಠಾಣೆಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳು ಕಣ್ಮರೆ ಆಗಿವೆ. ಉದ್ದೇಶಪೂರ್ವಕವಾಗಿ ಸಾಕ್ಷ್ಯಗಳನ್ನು ಮರೆಮಾಚಲಾಗಿರುವುದು, ಸಾಯಿಕೃಷ್ಣ ಅವರದ್ದು ಲಾಕಪ್ ಸಾವು ಎನ್ನುವುದನ್ನು ದೃಢಪಡಿಸಿದೆ’ ಎಂದು ಎಸ್‌ಐಟಿ ವರದಿ ಹೇಳಿದೆ.

ಬಾಲಕಿಯ ಮೇಲೆ ಅತ್ಯಾಚಾರ, ಕೊಲೆ

ಒಂದನೇ ಪುಟದಿಂದ...

ಘಟನೆ ನಡೆದ ಆರು ಗಂಟೆಗಳಲ್ಲಿ ಆರೋಪಿಯನ್ನು ಬಂಧಿಸಲಾಯಿತು. ಆತ ಬಿಹಾರ ಮೂಲದವನಾಗಿದ್ದು, ವಿವಾಹಿತ ಮತ್ತು ಮಕ್ಕಳನ್ನು ಹೊಂದಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಘಟನೆ ವಿವರ: ಮೆಹ್ರೌಲಿಯ ಛತ್ತರ್‌ಪುರ ಮೆಟ್ರೊ ನಿಲ್ದಾಣ ಬಳಿಯ ಪಾದಚಾರಿ ಮಾರ್ಗದಲ್ಲಿ ತನ್ನ ಹೆತ್ತವರ ಜತೆ (ದಿನಗೂಲಿ ಕಾರ್ಮಿಕರು) ಬಾಲಕಿ ಮಲಗಿದ್ದಳು. ಅಲ್ಲಿಯೇ ಸಮೀಪದಲ್ಲಿ ಆರೋಪಿ ಸಿಂಗ್ ತನ್ನ ಬಿಳಿ ಬಣ್ಣದ ಕಾರನ್ನು ನಿಲ್ಲಿಸಿದ್ದ. ಆತ ಸೋಮವಾರ ಬೆಳಗಿನ ಜಾವ 4.15ರ ಸುಮಾರಿಗೆ ಬಾಲಕಿಯನ್ನು ಅಪಹರಿಸಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ‘ಕೆಲ ಕ್ಷಣದಲ್ಲೇ ಬಾಲಕಿಯ ತಂದೆಗೆ ಎಚ್ಚರವಾಗಿದೆ. ಈ ವೇಳೆ ವಾಹನ ವೇಗವಾಗಿ ಚಲಿಸಿದ್ದನ್ನು ಅವರು ಗಮನಿಸಿದ್ದಾರೆ. ಅಲ್ಲದೆ ಮಗಳು ಕಾಣೆಯಾಗಿರುವುದನ್ನೂ ಕಂಡುಕೊಂಡಿದ್ದಾರೆ. ಮಗಳು ಕಾಣೆಯಾದ ಬಗ್ಗೆ ಅವರು ಬೆಳಿಗ್ಗೆ 4.58ರ ಸುಮಾರಿಗೆ ಮೆಹ್ರೌಲಿ ಪೊಲೀಸ್ ಠಾಣೆಗೆ ಕರೆ ಮಾಡಿ ತಿಳಿಸಿದ್ದಾರೆ. ಕೂಡಲೇ ಬಾಲಕಿಯ ಶೋಧಕ್ಕೆ ಕಾರ್ಯಾಚರಣೆ ನಡೆಸಲಾಯಿತು’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

200 ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ: ‘ಸುಮಾರು 200 ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ, ಗುಪ್ತಚರ ಮಾಹಿತಿಯ ಜಾಡು ಹಿಡಿದು, ಪಶ್ಚಿಮ ದೆಹಲಿಯ ವಿಕಾಸಪುರ ಬಳಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಅವರು ಹೇಳಿದ್ದಾರೆ.

ಒಮ್ಮೆ ಕಾರಿನೊಳಗೆ, ಮತ್ತೊಮ್ಮೆ ಏಕಾಂತ ಅರಣ್ಯ ಪ್ರದೇಶದಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ. ಬಳಿಕ ಆಕೆಯನ್ನು ಕತ್ತು ಹಿಸುಕಿ ಕೊಂದು, ಕಲ್ಲಿನಿಂದ ಜಜ್ಜಿರುವುದಾಗಿಯೂ ತಿಳಿಸಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಅಪರಾಧ ಎಸಗಿದ ಸ್ಥಳಕ್ಕೆ ಆರೋಪಿಯನ್ನು ಕರೆದೊಯ್ದು ಬಾಲಕಿಯ ಶವವನ್ನು ಹೊರತೆಗೆಯಲಾಯಿತು. ವಿಧಿವಿಜ್ಞಾನ ಪ್ರಯೋಗಾಲಯದ ತಂಡದವರು ಆರೋಪಿಯ ಕಾರು ಮತ್ತು ಘಟನಾ ಸ್ಥಳದಿಂದ ಮಾದರಿಗಳನ್ನು ಸಂಗ್ರಹಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮೃತದೇಹವನ್ನು ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಮಂಗಳವಾರ ಛತ್ತರ್‌ಪುರದ ಸ್ಮಶಾನದಲ್ಲಿ ಬಾಲಕಿಯ ಅಂತ್ಯಕ್ರಿಯೆ ನಡೆಯಿತು. ತೀವ್ರ ದುಃಖಿತರಾಗಿದ್ದ ಪೋಷಕರು, ಆರೋಪಿಗೆ ಮರಣದಂಡನೆ ವಿಧಿಸುವಂತೆ ಆಗ್ರಹಿಸಿದರು.

ಪೋಕ್ಸೊ ಕಾಯ್ದೆಯ ಸೆಕ್ಷನ್ 6 ಮತ್ತು ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣ ದಾಖಲಿಸಲಾಗಿದೆ. ಆರೋಪಿ ಸಿಂಗ್ ವಿರುದ್ಧ ಬಿಹಾರದಲ್ಲಿ ಎರಡು ಕೊಲೆ ಯತ್ನ ಸೇರಿದಂತೆ ಐದು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

2036ರ ಒಲಿಂಪಿಕ್ಸ್ ಆತಿಥ್ಯ: 2029ರಲ್ಲಿ ನಿರ್ಧಾರ

ನವದೆಹಲಿ (ಪಿಟಿಐ): 2036ರ ಒಲಿಂಪಿಕ್ ಆತಿಥ್ಯಕ್ಕೆ ಮಹತ್ವಾಕಾಂಕ್ಷೆಯಿಂದ ಸಲ್ಲಿಸಿರುವ ಬಿಡ್‌ನ ‘ಹಣೆಬರಹ’ ತಿಳಿದುಕೊಳ್ಳಲು ಭಾರತ ಇನ್ನಷ್ಟು ಸಮಯ ಕಾಯಬೇಕಾಗಿದೆ. ಆತಿಥ್ಯ ವಹಿಸುವ ದೇಶ ಯಾವುದೆಂಬುದು 2029ರ ಮಧ್ಯದಲ್ಲಷ್ಟೇ ನಿರ್ಧಾರವಾಗಲಿದೆ.

ಆತಿಥ್ಯ ನಿರ್ಧಾರದ ಪ್ರಕ್ರಿಯೆಯಲ್ಲಿ ‘ಪಾರದರ್ಶಕತೆ ತರಲು ಮತ್ತು ವೆಚ್ಚ ಕಡಿತ ಮಾಡುವ ಉದ್ದೇಶದಿಂದ’ ಮಾತಕತೆ ಹಂತಕ್ಕೆ ಇನ್ನಷ್ಟು ಸಮಯ ನೀಡಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ನಿರ್ಧರಿಸಿದೆ.

ಐಒಸಿಯ 146ನೇ ಅಧಿವೇಶನ ಬುಧವಾರ ಸ್ವಿಟ್ಜರ್ಲೆಂಡ್‌ನ ನಗರ ಲುಸಾನ್‌ನಲ್ಲಿ ನಡೆಯಿತು. ಐಒಸಿಯ ‘ಭಾವಿ ಆತಿಥ್ಯ ಆಯೋಗ’ದ ಮುಖ್ಯಸ್ಥರಾದ ಕ್ರೊವೇಷ್ಯಾದ ಕೊಲಿಂದಾ ಗ್ರೇಬರ್-ಕಿಟ್ರಾವಿಚ್ ಅವರು ಮಾತುಕತೆ ಹಂತದ ಪ್ರಸ್ತಾವವನ್ನು ಸಭೆಯ ಮುಂದಿಟ್ಟರು. ಸಭೆ ಇದನ್ನು ಮತದಾನದ ಮೂಲಕ ಅನುಮೋದಿಸಿತು. ‘ಸಂಭಾವ್ಯ ಆತಿಥೇಯ ರಾಷ್ಟ್ರಗಳು ಹೆಚ್ಚಿನ ಸ್ಪಷ್ಟತೆ ಬಯಸಿವೆ. ಎಲ್ಲ ಭಾಗೀದಾರರು ಪಾರದರ್ಶಕತೆ ಬಯಸುತ್ತಿದ್ದಾರೆ’ ಎಂದು ಕಿಟ್ರಾವಿಚ್ ಹೇಳಿದರು. ಈ ಪ್ರಕ್ರಿಯೆಯ ಭಾಗವಾಗಿ ಅಂತಿಮಗೊಳಿಸಿದ ರಾಷ್ಟ್ರಗಳ ಜೊತೆ ಮಾರ್ಚ್ 2027ರಲ್ಲಿ ಮಹತ್ವದ ಮಾತುಕತೆ ನಡೆಯಲಿದೆ ಎಂದರು.

ಆತಿಥ್ಯ ಪ್ರಕ್ರಿಯೆಗೆ 2025ರಲ್ಲಿ ಐಒಸಿ ಮುಖ್ಯಸ್ಥೆ ಕಿರ್ಸ್ಟಿ ಕೊವೆಂಟ್ರಿ ಅವರು ತಡೆ ನೀಡಿದ್ದರು.

ಟ್ರೀಸಾ–ಗಾಯತ್ರಿ ಜೋಡಿ ಶುಭಾರಂಭ

ಫುಲರ್‌ಟನ್ (ಪಿಟಿಐ): ಭಾರತದ ಟ್ರೀಸಾ ಜೋಳಿ- ಗಾಯತ್ರಿ ಗೋಪಿಚಂದ್ ಜೋಡಿಯು ಮಂಗಳವಾರ ಆರಂಭವಾದ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಡಬಲ್ಸ್‌ನಲ್ಲಿ ಶುಭಾರಂಭ ಮಾಡಿತು.

ಟ್ರೀಸಾ ಮತ್ತು ಗಾಯತ್ರಿ ಅವರು ಮೊದಲ ಸುತ್ತಿನ ಪಂದ್ಯದಲ್ಲಿ 21-12, 14-21, 21-13ರಿಂದ ಸ್ಪೇನ್‌ನ ಪೌಲಾ ಲೋಪೆಝ್- ಲೂಸಿಯಾ ರಾಡ್ರಿಗಸ್ ಜೋಡಿಯನ್ನು ಸೋಲಿಸಿದರು. ಮೊಣಕಾಲು ನೋವಿನಿಂದಾಗಿ ವಿಶ್ರಾಂತಿಗೆ ತೆರಳಿದ್ದ ಟ್ರೀಸಾ ಅವರು ಈ ಟೂರ್ನಿಯೊಂದಿಗೆ ಪುನರಾಗಮನ ಮಾಡಿದರು.


ಭಾರತದ ಜೋಡಿ ಎರಡನೇ ಸುತ್ತಿನಲ್ಲಿ ಜಪಾನ್‌ನ ಸೂಮಿರೇ ನಾಕಾಡೆ ಮತ್ತು ಮಿಯು ತಕಾಹಶಿ ಅವರನ್ನು ಎದುರಿಸಲಿದೆ.

ಉದಯೋನ್ಮುಖ ಆಟಗಾರ ರೋನಕ್ ಚೌಹಾನ್ ಪುರುಷರ ಸಿಂಗಲ್ಸ್‌ನಲ್ಲಿ ಮುಖ್ಯ ಸುತ್ತು ಪ್ರವೇಶಿಸಿದರು. ಅವರು ಅರ್ಹತಾ ಸುತ್ತಿನ ಪಂದ್ಯಗಳಲ್ಲಿ 21-19, 21-16ರಿಂದ ಇನೊಗಟ್ ರಾಯ್ (ಫ್ರಾನ್ಸ್) ಮತ್ತು 13-21, 21-14, 21-10ರಿಂದ ಕುವೊ ಕ್ವಾನ್ ಲಿನ್ (ಚೈನೀಸ್ ತೈಪೆ) ಅವರನ್ನು ಸೋಲಿಸಿದರು.

ರಾಯಪುರದ ಆಟಗಾರ ಮೊದಲ ಸುತ್ತಿನಲ್ಲಿ ಸ್ವದೇಶದ ಅನುಭವಿ ಆಟಗಾರ ಎಸ್.ಶಂಕರ್ ಮುತ್ತುಸ್ವಾಮಿ ಅವರನ್ನು ಎದುರಿಸಲಿದ್ದಾರೆ. ಐದನೇ ಶ್ರೇಯಾಂಕದ ಆಟಗಾರ ಕಿದಂಬಿ ಶ್ರೀಕಾಂತ್, ಸ್ವದೇಶದ ಸನೀತ್ ದಯಾನಂದ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.



ಭಾರತದ ಟ್ರೀಸಾ ಜೋಳಿ (ಹಿಂದೆ) ಹಾಗೂ ಗಾಯತ್ರಿ ಗೋಪಿಚಂದ್ ಜೋಡಿ



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,824
ಇಂದಿನ ಅಂತ್ಯ: 24,021
ದಿನದ ಗರಿಷ್ಠ: 24,090
197

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹705
12 ಕ್ಕೆ ₹94
ಮೈಸೂರು: 100 ಕ್ಕೆ ₹720

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹267
ಆರ್‌ಎಸ್‌ಎಸ್-5 ₹261
ಗುಡ್ ಲಾಟ್ ₹228

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ)₹422-711
ದ್ವಿತಳಿ (ಬಿ.ವಿ) ₹320-866

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1590 (1590)
ಸೋಯಾ (ರಿಫೈನ್ಡ್) ₹1460 (1450)
ಸೂರ್ಯಕಾಂತಿ (ರಿಫೈನ್ಡ್) ₹1650 (1650)
ಪಾಮೋಲಿನ್ ₹1460 (1470)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹18000-21800
ಹಿರಿಯೂರು ₹10000-10000
ಪುತ್ತೂರು ₹5000-14500

ಟ್ರೆಂಟ್‌ನಿಂದ ನೋಯಲ್ ನಿವೃತ್ತಿ

ನವದೆಹಲಿ (ಪಿಟಿಐ): ಟಾಟಾ ಸಮೂಹಕ್ಕ ಸೇರಿರುವ ಟ್ರೆಂಟ್ ಲಿಮಿಟೆಡ್‌ನ ಅಧ್ಯಕ್ಷ ಸ್ಥಾನದಿಂದ ನೋಯಲ್ ಟಾಟಾ ಅವರು ನವೆಂಬರ್‌ನಲ್ಲಿ ನಿವೃತ್ತರಾಗಲಿದ್ದಾರೆ.

'ನಿಮಗೆ ತಿಳಿದಿರುವಂತೆ, ಇದು ಅಧ್ಯಕ್ಷನಾಗಿ ನನ್ನ ಕೊನೆಯ ವಾರ್ಷಿಕ ಮಹಾಸಭೆಯಾಗಲಿದೆ' ಎಂದು ನೋಯಲ್ ಟಾಟಾ ಅವರು ಕಂಪನಿಯ ವಾರ್ಷಿಕ ಮಹಾಸಭೆಯಲ್ಲಿ ತಿಳಿಸಿದ್ದಾರೆ.

ಟಾಟಾ ಟ್ರಸ್ಟ್ಸ್‌ನ ಅಧ್ಯಕ್ಷರೂ ಸಹ ಆಗಿರುವ ನೋಯಲ್ ಟಾಟಾ ಅವರು ಇದೇ ನವೆಂಬರ್‌ನಲ್ಲಿ 70ನೇ ವರ್ಷಕ್ಕೆ ಕಾಲಿಡಲಿದ್ದಾರೆ.

70 ವರ್ಷ ವಯಸ್ಸಾದ ನಂತರ, ಕಾನೂನಿನ ಅನ್ವಯ, ವ್ಯವಸ್ಥಾಪಕ ನಿರ್ದೇಶಕ ಅಥವಾ ಪೂರ್ಣಾವಧಿ ನಿರ್ದೇಶಕ ಸ್ಥಾನದಲ್ಲಿ ಮುಂದುವರಿಯಲು ಅವಕಾಶವಿಲ್ಲ. 1998ರಲ್ಲಿ ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಟ್ರೆಂಟ್ ಮಳಿಗೆ ಆರಂಭವಾಗಿತ್ತು.

ವಂಚನೆ: 5 ದಿನದಲ್ಲಿ ಹಣ ಮರುಪಾವತಿ

ಆನ್‌ಲೈನ್ ಮೂಲಕ ನಡೆಯುವ ವಂಚನೆಗಳಿಗೆ ಸಂಬಂಧಿಸಿದಂತೆ ಬ್ಯಾಂಕ್‌ಗಳಿಗೆ ಆರ್‌ಬಿಐ ನಿರ್ದೇಶನ

ಮುಂಬೈ (ಪಿಟಿಐ): ಕ್ರೆಡಿಟ್ ಕಾರ್ಡ್ ಬಳಸಿ ವಂಚನೆಯ ಉದ್ದೇಶದ ವಹಿವಾಟು ನಡೆದಾಗ, ಗ್ರಾಹಕ ಆ ವಹಿವಾಟಿನ ಬಗ್ಗೆ ದೂರು ನೀಡಿದಾಗ ಬ್ಯಾಂಕ್‌ಗಳು ವಹಿವಾಟಿನ ಮೊತ್ತವನ್ನು ತಾತ್ಕಾಲಿಕವಾಗಿ ಆ ಗ್ರಾಹಕನಿಗೆ ಮರುಭರ್ತಿ ಮಾಡಿಕೊಡಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬುಧವಾರ ಸೂಚನೆ ನೀಡಿದೆ.

ವಂಚನೆಯ ಬಗ್ಗೆ ಗ್ರಾಹಕ ಮಾಹಿತಿ ಒದಗಿಸಿದ ಐದು ದಿನಗಳ ಒಳಗೆ ಬ್ಯಾಂಕ್‌ಗಳು ಮೊತ್ತವನ್ನು ತಾತ್ಕಾಲಿಕ ವಾಗಿ ಮರುಪಾವತಿ ಮಾಡಬೇಕು ಎಂದು ಹೇಳಿದೆ.

ಇದಕ್ಕೆ ಸಂಬಂಧಿಸಿದ ನಿಯಮಗಳನ್ನು ಆರ್‌ಬಿಐ ಪ್ರಕಟಿಸಿದೆ. ಎಲೆಕ್ಟ್ರಾನಿಕ್ ವೇದಿಕೆಯ ಮೂಲಕ ಬ್ಯಾಂಕಿಂಗ್ ವಹಿವಾಟು ನಡೆಸುವುದು ಸುರಕ್ಷಿತ ಎಂಬ ಭಾವನೆ ಗ್ರಾಹಕರಲ್ಲಿ



ಮೂಡುವಂತೆ ಬ್ಯಾಂಕ್‌ಗಳು ತಮ್ಮ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಹೇಳಿದೆ.

'ಎಲೆಕ್ಟ್ರಾನಿಕ್ ವೇದಿಕೆಯ/ಮಾಧ್ಯಮದ ಮೂಲಕ ನಡೆಯುವ ಬ್ಯಾಂಕಿಂಗ್ ವಹಿವಾಟಿನ (ಇಬಿಟಿ) ಮೊತ್ತ ₹500ಕ್ಕಿಂತ ಹೆಚ್ಚಿದ್ದಲ್ಲಿ ಆ ವಹಿವಾಟಿನ ಕುರಿತಾಗಿ ಬ್ಯಾಂಕ್‌ಗಳು ತಕ್ಷಣವೇ ಕಡ್ಡಾಯವಾಗಿ ಎಸ್‌ಎಂಎಸ್ ರವಾನಿಸಬೇಕು. ₹500ರವರೆಗಿನ ಮೊತ್ತಕ್ಕೆ ಬ್ಯಾಂಕ್‌ಗಳು ತಮ್ಮ ಆಂತರಿಕ ನಿಯಮಗಳಿಗೆ ಅನುಗುಣವಾಗಿ ತಕ್ಷಣವೇ ಎಸ್‌ಎಂಎಸ್ ರವಾನಿಸುವ ಬಗ್ಗೆ ತೀರ್ಮಾನಿಸಬಹುದು. ಆದರೆ ಅಂತಹ ಸಂದೇಶಕ್ಕೆ ಶುಲ್ಕ ವಿಧಿಸುವಂತಿಲ್ಲ' ಎಂದು ಆರ್‌ಬಿಐ ತಾಕೀತು ಮಾಡಿದೆ. ಹೊಸ ನಿಯಮಗಳು 2027ರ ಜನವರಿ 1ರಿಂದ ಜಾರಿಗೆ ಬರಲಿವೆ.

ಗ್ರಾಹಕರಿಗೆ ಸಂದೇಶ ರವಾನಿಸಲು ಹಾಗೂ ಗ್ರಾಹಕರ ಪ್ರತಿಕ್ರಿಯೆ ಸ್ವೀಕರಿಸಲು ಇರುವ ಸಂವಹನ ವ್ಯವಸ್ಥೆಯು, ಸಂದೇಶವು ಗ್ರಾಹಕರಿಗೆ ತಲುಪಿದ ಸಮಯ ಮತ್ತು ದಿನಾಂಕವನ್ನು ದಾಖಲಿಸಬೇಕು, ಗ್ರಾಹಕರಿಂದ ಪ್ರತಿಕ್ರಿಯೆ ಬಂದಲ್ಲಿ ಅದರ ಸಮಯ ಮತ್ತು ದಿನಾಂಕವನ್ನೂ ದಾಖಲಿಸಬೇಕು ಎಂದು ಸೂಚಿಸಿದೆ.

ವಂಚನೆಯ ಉದ್ದೇಶದ ಇಬಿಟಿ ನಡೆದಿದೆ ಎಂದು ಗ್ರಾಹಕರಿಂದ ದೂರು ಬಂದಲ್ಲಿ, ಆ ಗ್ರಾಹಕರ ಖಾತೆಯಲ್ಲಿ ಇನ್ನಷ್ಟು ಅಂತಹ ವಹಿವಾಟುಗಳು ನಡೆಯುವುದನ್ನು ತಡೆಯಲು ಬ್ಯಾಂಕ್ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಆರ್‌ಬಿಐ ಹೇಳಿದೆ.

'ಬ್ಯಾಂಕ್‌ನ ಉಪೇಕ್ಷೆ ಅಥವಾ ಲೋಪದಿಂದಾಗಿ ವಂಚನೆಯ ಇಬಿಟಿ ನಡೆದಿದ್ದರೆ, ಗ್ರಾಹಕರು ಅದರ ಬಗ್ಗೆ ದೂರು ನೀಡಲಿ ಅಥವಾ ನೀಡದೆ ಇರಲಿ, ಅವರಿಗೆ ವಹಿವಾಟಿನ ಪೂರ್ಣ ಮೊತ್ತವನ್ನು ಮರುಪಾವತಿ ಮಾಡಬೇಕು' ಎಂದು ಸೂಚಿಸಿದೆ.

ಅನ್ಯರಿಂದ ವಂಚನೆಯ ಇಬಿಟಿ ನಡೆದಲ್ಲಿ, ಅದನ್ನು ಗ್ರಾಹಕರು ಬ್ಯಾಂಕಿಗೆ ಐದು ದಿನಗಳಲ್ಲಿ ವರದಿ ಮಾಡಿದಲ್ಲಿ, ಆ ವಹಿವಾಟಿನ ಮೊತ್ತವನ್ನು ಬ್ಯಾಂಕ್ ಪೂರ್ತಿಯಾಗಿ ಮರಳಿಸಬೇಕಾಗುತ್ತದೆ. ಇಂತಹ ವಹಿವಾಟಿನ ಬಗ್ಗೆ ಐದು ದಿನಗಳ ನಂತರ ವರದಿ ಮಾಡಿದರೆ, ಗ್ರಾಹಕರ ಬಾಧ್ಯತೆ ಏನು ಎಂಬುದನ್ನು ಬ್ಯಾಂಕ್ ತನ್ನ ಆಂತರಿಕ ನೀತಿಗೆ ಅನುಗುಣವಾಗಿ ತೀರ್ಮಾನಿಸಬಹುದು ಎಂದು ಆರ್‌ಬಿಐ ತಿಳಿಸಿದೆ.

ಆರ್‌ಬಿಐನ ಇತರ ಸೂಚನೆಗಳು

- ವಂಚನೆಯ ಉದ್ದೇಶದ ಇಬಿಟಿ ಗ್ರಾಹಕರ ಅಲಕ್ಷ್ಯದಿಂದ ನಡೆದಿದ್ದಲ್ಲಿ, ಪರಿಹಾರಕ್ಕೆ ಅರ್ಹವಲ್ಲದ ನಷ್ಟದ ಮೊತ್ತಕ್ಕೆ ಗ್ರಾಹಕರನ್ನೇ ಹೊಣೆ ಮಾಡಬೇಕು
- ಗ್ರಾಹಕರು ಬ್ಯಾಂಕ್‌ಗೆ ಮಾಹಿತಿ ನೀಡಿದ ನಂತರವೂ ವಂಚನೆಯ ಇಬಿಟಿ ನಡೆದಲ್ಲಿ, ಅದರಿಂದ ಆಗುವ ನಷ್ಟವನ್ನು ಬ್ಯಾಂಕ್‌ಗಳೇ ಭರಿಸಬೇಕು
- ₹50 ಸಾವಿರವರೆಗಿನ ಮೊತ್ತದ, ವಂಚನೆಯ ಉದ್ದೇಶದ ಇಬಿಟಿಯ ಬಗ್ಗೆ ಗ್ರಾಹಕರು ದೂರು ಸಲ್ಲಿಸಿದಾಗ ಒಟ್ಟು ನಷ್ಟದ ಶೇ 85ರಷ್ಟು ಮೊತ್ತ ಅಥವಾ ₹25 ಸಾವಿರದವರೆಗೆ (ಇವೆರಡರಲ್ಲಿ ಯಾವುದು ಕಡಿಮೆಯೋ ಅದು) ಪರಿಹಾರ ಪಡೆಯಲು ಆ ಗ್ರಾಹಕ ಜೀವಿತಾವಧಿಯಲ್ಲಿ ಒಂದು ಬಾರಿಗೆ ಅರ್ಹನಾಗಿರುತ್ತಾನೆ

ಸುದ್ದಿ 2 ನಿಮಿಷ

ಬಿಟಿಎ: ಮಾತುಕತೆ ಮುಕ್ತಾಯ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ಮಧ್ಯಂತರ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ (ಬಿಟಿಎ) ಬಗ್ಗೆ ಎರಡು ದಿನ ನಡೆದ ಸಚಿವರ ಮಟ್ಟದ ಮಾತುಕತೆ ಮುಕ್ತಾಯಗೊಂಡಿದ್ದು, ಸಭೆಯಲ್ಲಿ ಒಪ್ಪಂದದ ಪ್ರಮುಖ ಅಂಶಗಳು ಚರ್ಚೆ ಆಗಿವೆ.

ಆದರೆ, ಮಧ್ಯಂತರ ವ್ಯಾಪಾರ ಒಪ್ಪಂದದ ಕುರಿತಾಗಿನ ಪ್ರಮುಖ ಭಿನ್ನಾಭಿಪ್ರಾಯಗಳು ಇತ್ಯರ್ಥಗೊಂಡಿರುವ ಯಾವುದೇ ಸೂಚನೆ ಸಿಕ್ಕಿಲ್ಲ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮತ್ತು ಅಮೆರಿಕದ ವ್ಯಾಪಾರ ಪ್ರತಿನಿಧಿ (ಯುಎಸ್‌ಟಿಆರ್) ಜೇಮಿಸನ್ ಗ್ರೀರ್ ನಡುವೆ ಜೂನ್ 22ರಿಂದ 24ರವರೆಗೆ ಒಪ್ಪಂದದ ಮಾತುಕತೆಗಳು ನಡೆದವು.

ಮಾರುಕಟ್ಟೆ ಪ್ರವೇಶ, ಡಿಜಿಟಲ್ ವಹಿವಾಟು, ಪ್ರಮುಖ ವಲಯಗಳಲ್ಲಿ ಸಹಕಾರ ಸೇರಿದಂತೆ ಪ್ರಸ್ತಾವಿತ ಒಪ್ಪಂದದ ಪ್ರಮುಖ ಅಂಶಗಳ ಬಗ್ಗೆ ಗೋಯಲ್ ಮತ್ತು ಗ್ರೀರ್ ಸಮಗ್ರವಾಗಿ ಪರಿಶೀಲನೆ ನಡೆಸಿದ್ದಾರೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ತಿಳಿಸಿದೆ.



ಮಾತುಕತೆ ಉತ್ತಮವಾಗಿ ನಡೆದಿದೆ ಎಂದು ಸಚಿವಾಲಯವು ತಿಳಿಸಿದ್ದರೂ, ಬಾಕಿ ಇರುವ ಸಮಸ್ಯೆಗಳನ್ನು ಪರಿಹರಿಸಲಾಗಿದೆಯೇ ಎಂಬುದನ್ನು ತಿಳಿಸಿಲ್ಲ.

ಸಿಂಗಲ್ ಮಾಲ್ಟ್ ವಿಸ್ಕಿಗೆ ಹಾಲೋಗ್ರಾಮ್

ನವದೆಹಲಿ (ಪಿಟಿಐ): ಕಳೆದ ಮೂರರಿಂದ ನಾಲ್ಕು ವರ್ಷಗಳಲ್ಲಿ ಗುಣಮಟ್ಟದ ಕಾರಣದಿಂದಾಗಿ ಜಾಗತಿಕ ಮಟ್ಟದಲ್ಲಿ ಮನ್ನಣೆ ಗಿಟ್ಟಿಸಿಕೊಂಡಿರುವ ಭಾರತದ ಸಿಂಗಲ್ ಮಾಲ್ಟ್ ವಿಸ್ಕಿಗಳು ಅಧಿಕೃತತೆ ಹಾಗೂ ಗುಣಮಟ್ಟವನ್ನು ಹೇಳುವ ಹಾಲೋಗ್ರಾಮ್ ಹೊಂದಲಿವೆ.

ಸಿಂಗಲ್ ಮಾಲ್ಟ್ ವಿಸ್ಕಿಗಳ ಗುಣಮಟ್ಟವನ್ನು ಖಾತರಿಪಡಿಸುವ ಹಾಲೋಗ್ರಾಮ್ ಬಳಸಲಾಗುತ್ತದೆ ಎಂಬುದಾಗಿ ಭಾರತೀಯ ಮಾಲ್ಟ್ ವಿಸ್ಕಿಗಳ ಸಂಘವು (ಐಎಂಡಬ್ಲ್ಯುಎ) ಬುಧವಾರ ಹೇಳಿದೆ. ಭಾರತದ ಸಿಂಗಲ್ ಮಾಲ್ಟ್ ವಿಸ್ಕಿಗಳು ದೇಶಿ ಮಾರುಕಟ್ಟೆಯಲ್ಲಿಯೂ ತ್ವರಿತಗತಿಯ ಬೆಳವಣಿಗೆ ಕಾಣುತ್ತಿವೆ.

ಐಎಂಡಬ್ಲ್ಯುಎ ವ್ಯಾಖ್ಯಾನಿಸುವ ಉತ್ಪಾದನಾ ಗುಣಮಟ್ಟವನ್ನು ಪಾಲಿಸುವ ವಿಸ್ಕಿ ತಯಾರಕರಿಗೆ ಹಾಲೋಗ್ರಾಮ್ ಬಳಕೆಗೆ ಅವಕಾಶ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಪುತ್ತೂರು	
ಚಿಪ್ಪು	28999-33909	ಸರಕು	56699-90896	ಕೋಕ	20000-33500
ಕೋಕ	17099-32599	ಬೆಟ್ಟೆ	50009-50109	ಹೊಸತು	30000-47000
ಫ್ಯಾಕ್ಟರಿ	10379-26569	ರಾಶಿ	41366-52599	ಹಳತು	49000-55000
ಹಳೆಚಾಲಿ	43599-47898	ಗೊರಬಲು	19030-40069		
ಹೊಸಚಾಲಿ	39189-46019				

300 ನಗರಕ್ಕೆ 'ಅಮೆಜಾನ್ ನೌ' ವಿಸ್ತರಣೆ

ನವದೆಹಲಿ (ಪಿಟಿಐ): ಕ್ವಿಕ್-ಕಾಮರ್ಸ್ ಸೇವೆಯಾದ 'ಅಮೆಜಾನ್ ನೌ'ಅನ್ನು ದೇಶದ 300ಕ್ಕೂ ಹೆಚ್ಚಿನ ನಗರಗಳಿಗೆ ವಿಸ್ತರಣೆ ಮಾಡುವ ಆಲೋಚನೆ ಇರುವುದಾಗಿ ಅಮೆಜಾನ್ ಕಂಪನಿಯು ಬುಧವಾರ ತಿಳಿಸಿದೆ.

ಕಂಪನಿಯ ಸಿಇಒ ಆ್ಯಂಡಿ ಜಾಸ್ಸಿ ಅವರು ಭಾರತಕ್ಕೆ ಭೇಟಿ ನೀಡಿರುವ ಸಂದರ್ಭದಲ್ಲಿ ಈ ಘೋಷಣೆ ಹೊರಬಿದ್ದಿದೆ. ಉತ್ಪನ್ನಗಳನ್ನು ಕೆಲವೇ ನಿಮಿಷಗಳಲ್ಲಿ ಗ್ರಾಹಕರಿಗೆ ತಲುಪಿಸುವ 'ದೇಶದ ಅತಿದೊಡ್ಡ ಜಾಲವನ್ನು' ಕಟ್ಟುವ ಘೋಷಣೆ ಕೂಡ ಆಗಿದೆ.

ಜಾಸ್ಸಿ ಅವರು ಕಂಪನಿಯ ಮುಂಬೈ ಘಟಕವೊಂದಕ್ಕೆ ಬುಧವಾರ ಭೇಟಿ ನೀಡಿದರು. 'ಅತ್ಯಂತ ತ್ವರಿತವಾಗಿ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸುವ ಸೇವೆಯನ್ನು ದೇಶದ 300ಕ್ಕೂ ಹೆಚ್ಚು ನಗರಗಳಿಗೆ ವಿಸ್ತರಿಸುವ ಯೋಜನೆಯು ಜಾರಿಯಾಗುತ್ತಿದೆ' ಎಂದು ಹೇಳಿದೆ.

ಜಾಸ್ಸಿ ಅವರು ಭಾರತಕ್ಕೆ ಮೂರು ದಿನಗಳ ಭೇಟಿ ನೀಡುತ್ತಿದ್ದಾರೆ. ಅವರು ನೌಕರರನ್ನು ಹಾಗೂ ಉದ್ಯಮಿಗಳನ್ನು ಭೇಟಿ ಮಾಡಲಿದ್ದಾರೆ.

ಅಮೆಜಾನ್ ಇಂಡಿಯಾ ಕಂಪನಿಯ 'ಅಮೆಜಾನ್ ನೌ' ಸೇವೆಯು ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿದೆ. ಈ ಸೇವೆಯ ಮೂಲಕ ಗ್ರಾಹಕರು ಖರೀದಿ ಮಾಡುತ್ತಿರುವ ಪ್ರಮಾಣವು ಒಂದು ತ್ರೈಮಾಸಿಕದಿಂದ ಇನ್ನೊಂದು ತ್ರೈಮಾಸಿಕಕ್ಕೆ ದುಪ್ಪಟ್ಟು ಬೆಳವಣಿಗೆ ಕಾಣುತ್ತಿದೆ.

ಅಮೆಜಾನ್ ನೌ ಸೇವೆಯು ಈಗ ಮಹಾನಗರಗಳಲ್ಲಿ, ಇತರ ಕೆಲವು ನಗರಗಳಲ್ಲಿ ಐದು ಕೋಟಿ ಜನರಿಗೆ ಲಭ್ಯವಿದೆ. ಉತ್ಪನ್ನಗಳನ್ನು ತ್ವರಿತವಾಗಿ ತಲುಪಿಸಲು ನೆರವಾಗುವ ಘಟಕಗಳ ಜಾಲವನ್ನು ಹಿಗ್ಗಿಸಲು ಕಂಪನಿಯು ಮುಂದಾಗಿದೆ.

ಗ್ರಾಹಕರ ಆದ್ಯತೆಗಳು ಬದಲಾಗುತ್ತಿರುವುದು, ಉತ್ಪನ್ನಗಳನ್ನು ತ್ವರಿತವಾಗಿ ತಲುಪಿಸುವ ಸೇವೆಗೆ ಬೇಡಿಕೆ ಹೆಚ್ಚುತ್ತಿರುವ ಕಾರಣದಿಂದಾಗಿ ದೇಶದ ಡಿಜಿಟಲ್ ಅರ್ಥ ವ್ಯವಸ್ಥೆಯಲ್ಲಿ ಕ್ವಿಕ್-ಕಾಮರ್ಸ್ ವಿಭಾಗವು ವೇಗವಾಗಿ ಬೆಳವಣಿಗೆ ಹೊಂದುತ್ತಿದೆ.

ಕ್ವಿಕ್-ಕಾಮರ್ಸ್ ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲು ಹೊಂದಲು ಬ್ಲಿಂಕಿಟ್, ಜೆಪ್ಟೊ, ಸ್ವಿಗ್ಗಿ ಇನ್‌ಸ್ಟಾಮಾರ್ಟ್, ಫ್ಲಿಪ್‌ಕಾರ್ಟ್, ಬಿಗ್‌ಬಾಸ್ಕೆಟ್ ಮತ್ತು ಅಮೆಜಾನ್ ಪೈಪೋಟಿ ನಡೆಸಿವೆ.



ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಕಚ್ಚಾ ತೈಲ ದರ ಇಳಿಕೆ ಮತ್ತು ಬ್ಯಾಂಕ್, ಹಣಕಾಸು ಮತ್ತು ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ಬುಧವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಬಗ್ಗೆ ಹೆಚ್ಚುತ್ತಿರುವ ನಿರೀಕ್ಷೆ ಹಾಗೂ ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವ ಬದಲು ಖರೀದಿಸಲು ಮುಂದಾಗಿರುವುದು ಸಹ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 790 ಅಂಶ ಏರಿಕೆಯಾಗಿ, 76,991ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 197 ಅಂಶ ಹೆಚ್ಚಳವಾಗಿ, 24,021ಕ್ಕೆ ಕೊನೆ ಗೊಂಡಿದೆ.

ಮುಂಬೈ ಧಾರಣೆ (ಶೇಂಗಾ)

24-06-2026

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1580)
ಒಂದು ವಾರದ ಡೆಲಿವರಿ	1595 (1575)
ಪಾಮ್ ವಾರದ ಡೆಲಿವರಿ	1458 (1458)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1580)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,41,000 (1,44,000)
ಬೆಳ್ಳಿ ಕೆ.ಜಿಗೆ	2,21,000 (2,27,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23500
ಎಸಿ	₹14000
ಆರ್‌ಪಿ	₹18500
ಆರ್‌ಸಿ	₹10100

'ಮಾವಿಗೆ ತಕ್ಷಣವೇ ಬೆಂಬಲ ಬೆಲೆ'

ಕರ್ನಾಟಕ ಮಾವು ಬೆಳೆಗಾರರಿಗೆ ಚೌಹಾಣ್ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹವಾಮಾನ ವೈಪರೀತ್ಯ ಹಾಗೂ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಗುರಿಯಾಗಿರುವ ಕರ್ನಾಟಕದ ಮಾವು ಬೆಳೆಗಾರರ ನೆರವಿಗೆ ಧಾವಿಸುವುದಾಗಿ ಕೇಂದ್ರದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭರವಸೆ ನೀಡಿದರು.

ನವದೆಹಲಿಯಲ್ಲಿ ಬುಧವಾರ ಸಂಜೆ ಚೌಹಾಣ್ ನಿವಾಸಕ್ಕೆ ತೆರಳಿ ಮಾವು ಬೆಳೆಗಾರರ ಸಂಕಷ್ಟದ ಬಗ್ಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಚರ್ಚೆ ನಡೆಸಿದರು.

ಈ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಚೌಹಾಣ್, ತಕ್ಷಣವೇ ಮಾವು ಬೆಳೆಗಾರರಿಗೆ ಅನುಕೂಲವಾಗುವ ನಿರ್ಧಾರ ಕೈಗೊಳ್ಳುವುದಾಗಿ ಅಭಯ ನೀಡಿದರು.

ಪ್ರಸಕ್ತ ಹಂಗಾಮಿನಲ್ಲಿ ರೈತರು ಎದುರಿಸುತ್ತಿರುವ ಬೆಲೆ ಕುಸಿತ ಸಂಕಷ್ಟ ತಗ್ಗಿಸಲು ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ (ಎಂಐಎಸ್) ಮೂಲಕ ನೆರವಾಗಬೇಕು ಹಾಗೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ಬೆಂಬಲ ಬೆಲೆ ನೀಡಬೇಕು ಎಂದು ಕುಮಾರಸ್ವಾಮಿ ಕೋರಿದರು. ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಹಾವೇರಿ ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಮಾವು ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟದ ಬಗ್ಗೆ ವಿವರಿಸಿದರು.

ನಿರಂತರ ಬೆಲೆ ಕುಸಿತ ಮತ್ತು ಹೆಚ್ಚಾಗುತ್ತಿರುವ ಕೃಷಿ ವೆಚ್ಚಗಳಿಂದಾಗಿ ಮಾವು ಬೆಳೆಗಾರರು ಈ ವರ್ಷವೂ ಸಂಕಷ್ಟಕ್ಕೆ ತುತ್ತಾಗಿದ್ದಾರೆ. ರೈತರು, ತೋಟಗಾರಿಕೆ ಕ್ಷೇತ್ರ ರಕ್ಷಿಸುವ ಉದ್ದೇಶದಿಂದ ನಿರ್ಧಾರ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.



ಶಿವರಾಜ್ ಸಿಂಗ್ ಚೌಹಾಣ್ ಜತೆಗೆ ಎಚ್‌.ಡಿ.ಕುಮಾರಸ್ವಾಮಿ ಚರ್ಚಿಸಿದರು

ಕರ್ನಾಟಕವು ಅತಿಹೆಚ್ಚು ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ಗಳಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ ಸುಮಾರು 10 ಲಕ್ಷ ಟನ್ ಮಾವು ಬೆಳೆಯಲಾಗಿದೆ. ಆದರೆ, ಬೆಲೆ ಕುಸಿತ, ಪ್ರತಿಕೂಲಕರ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎಂದು ಸಚಿವರ ಗಮನ ಸೆಳೆದರು.

ಕರ್ನಾಟಕ ಕೃಷಿ ಬೆಲೆ ಆಯೋಗದ ಅಂದಾಜಿನ ಪ್ರಕಾರ ಮಾವಿನ ಕೃಷಿಯ (ಸಿ-3) ವೆಚ್ಚವನ್ನು ಕ್ವಿಂಟಲ್‌ಗೆ ₹3,951 ಎಂದು ಅಂದಾಜಿಸಲಾಗಿದೆ. ಆದರೆ, ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗಳು ಈ ಮಟ್ಟಕ್ಕಿಂತ ಗಣನೀಯವಾಗಿ ಕಡಿಮೆ ಇರುವುದರಿಂದ ರೈತರು ದೊಡ್ಡ ಪ್ರಮಾಣದಲ್ಲಿ ಆರ್ಥಿಕ ನಷ್ಟಕ್ಕೆ ಒಳಗಾಗಿದ್ದಾರೆ ಎಂದು ಅವರು ವಿವರಿಸಿದರು.

ಗೃಹಲಕ್ಷ್ಮಿ: ₹225 ಕೋಟಿ ಅಕ್ರಮ

ಒಂದನೇ ಪುಟದಿಂದ...

ಆದರೆ, ಈ ಬಗ್ಗೆ ಇಲಾಖೆಗೆ ಮಾಹಿತಿ ನೀಡಿ ಕುಟುಂಬದ ನೂತನ ಫಲಾನುಭವಿ ಯನ್ನು ನೋಂದಾಯಿಸಿದ್ದು 1.03 ಲಕ್ಷ ಪ್ರಕರಣಗಳಲ್ಲಿ ಮಾತ್ರ. 1.08 ಲಕ್ಷ ಮೃತ ಫಲಾನುಭವಿಗಳ ಖಾತೆಗೆ 5.79 ಲಕ್ಷ ಪಾವತಿಗಳ ಮೂಲಕ ₹116 ಕೋಟಿ ಜಮೆಯಾಗಿದೆ.

1.08 ಲಕ್ಷ ಮೃತ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗಿದೆ ಎಂಬ ವಿವರದೊಂದಿಗೆ 'ಪ್ರಜಾವಾಣಿ'ಯ ಜೂನ್ 12ರ ಸಂಚಿಕೆಯಲ್ಲಿ 'ಗೃಹಲಕ್ಷ್ಮಿಗೆ ಸತ್ತವರ ನೆರಳು' ಎಂಬ ವರದಿ ಪ್ರಕಟವಾಗಿತ್ತು.

2.88 ಲಕ್ಷ ಮೃತ ಫಲಾನುಭವಿಗಳ ಪೈಕಿ ಒಟ್ಟು 2.11 ಲಕ್ಷ ಫಲಾನುಭವಿಗಳ ಲೆಕ್ಕ ಸಿಕ್ಕಿದೆ. ಇನ್ನೂ 77,376 ಫಲಾನು ಭವಿಗಳ ವಿವರವನ್ನು ಇಲಾಖೆಯು ಒದಗಿ ಸಿಲ್ಲ. ಈ ಫಲಾನುಭವಿಗಳು ಮೃತಪಟ್ಟ ನಂತರವೂ ಅವರ ಖಾತೆಗಳಿಗೆ ಎಷ್ಟು ಹಣ ಪಾವತಿಯಾಗಿದೆ ಎಂಬ ವಿವರ ಹಾಗೂ ಈ ಲೋಪವನ್ನು ತಡೆಯಲು ಏಕೆ ಕ್ರಮ ತೆಗೆದುಕೊಂಡಿಲ್ಲ ಎಂಬ ವಿವರಣೆ ನೀಡಿ ಎಂದು ಸಿಎಜಿ ಕೇಳಿದೆ.

ಯೋಜನಾ ದತ್ತಾಂಶದಲ್ಲಿ, 19,020 ಫಲಾನುಭವಿಗಳ ಹೆಸರಿನ ಮುಂದೆ ಕೆಲವೇ ಬ್ಯಾಂಕ್ ಖಾತೆಗಳ ವಿವರ ನಮೂದಿಸಿರುವುದನ್ನು ಸಿಎಜಿ ಪ್ರಾಥಮಿಕ ಹಂತದ ದತ್ತಾಂಶ ವಿಶ್ಲೇಷಣೆಯಲ್ಲಿ ಗುರುತಿಸಿದೆ. ಈ ಕೆಲವೇ ಖಾತೆಗಳಿಗೆ 3.03 ಲಕ್ಷ ಪಾವತಿಗಳ ಮೂಲಕ ₹60.70 ಕೋಟಿ ಹಣ ಜಮೆ ಮಾಡಲಾಗಿದೆ. ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಫಲಾನುಭವಿಗಳು ಒಂದೇ ಬ್ಯಾಂಕ್ ಖಾತೆ ಹೊಂದಿರುವುದು ಹೇಗೆ ಸಾಧ್ಯ ಎಂದು ಸಿಎಜಿ ಪ್ರಶ್ನಿಸಿದೆ.

ಫಲಾನುಭವಿ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ದಾಖಲಿಸದೆ ₹46.52 ಕೋಟಿ ಪಾವತಿ ಮಾಡಲಾಗಿದೆ. ಈ ರೀತಿ ಹಣ ಪಡೆದಿರುವ ಫಲಾನುಭವಿಗಳು ಮತ್ತು ಅವರ ಬ್ಯಾಂಕ್ ಖಾತೆಗಳ ವಿವರಗಳನ್ನು ಒದಗಿಸಿ. ಈ ಯಾವ ವಿವರಗಳನ್ನೂ ದಾಖಲಿಸದೆ ₹46.52 ಕೋಟಿಯನ್ನು ಹೇಗೆ ಪಾವತಿ ಮಾಡಿದ್ದೀರಿ ಎಂಬುದಕ್ಕೆ ವಿವರಣೆ ನೀಡಿ ಸಿಎಜಿ ಕೇಳಿದೆ.

ಡಿಜಿಟಲ್ ಸೇವೆ: 24 ಗಂಟೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ದತ್ತಾಂಶ ಕೇಂದ್ರದಲ್ಲಿ ಯುಪಿಎಸ್ ಹಾಗೂ ಬ್ಯಾಟರಿ ವ್ಯವಸ್ಥೆಯ ಮೂಲಸೌಕರ್ಯ ಉನ್ನತೀಕರಣ ಕಾಮಗಾರಿಯನ್ನು ಜೂನ್ 25ರಂದು ರಾತ್ರಿ 9ರಿಂದ 26ರ ರಾತ್ರಿ 9ರವರೆಗೆ ಹಮ್ಮಿಕೊಳ್ಳಲಾಗಿದ್ದು, ವಿವಿಧ ಇಲಾಖೆಗಳ ಡಿಜಿಟಲ್ ಸೇವೆಗಳು ಸ್ಥಗಿತಗೊಳ್ಳಲಿವೆ.

ಈ ಕುರಿತು ಮಾಹಿತಿ ನೀಡಿರುವ ಇ-ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ, 'ರಾಜ್ಯ ಸರ್ಕಾರದ ಹಲವು ಇಲಾಖೆಗಳ ವೆಬ್ ಪೋರ್ಟಲ್‌ಗಳು, ನಾಗರಿಕ ಸೇವಾ ವ್ಯವಸ್ಥೆಗಳು, ವಿವಿಧ ಪ್ರಮಾಣಪತ್ರಗಳಿಗೆ ಸಂಬಂಧಿಸಿದ ಆನ್‌ಲೈನ್ ಸೇವೆಗಳು, ಇ-ಆಫೀಸ್ ವ್ಯವಸ್ಥೆಗಳು, ಇಲಾಖೆಗಳ ಡಿಜಿಟಲ್ ಡೇಟಾಬೇಸ್‌ಗಳು ಸೇರಿದಂತೆ ಹಲವು ತಂತ್ರಜ್ಞಾನ ಆಧಾರಿತ ಸರ್ಕಾರಿ ಸೇವೆಗಳು ರಾಜ್ಯ ದತ್ತಾಂಶ ಸಂಗ್ರಹ ಕೇಂದ್ರದ ಮೂಲಕ ಕಾರ್ಯನಿರ್ವಹಿಸುತ್ತಿವೆ. ನಿರ್ವಹಣಾ ಕಾರ್ಯ ನಡೆಯುವ ಅವಧಿಯಲ್ಲಿ ಕೆಲವು ಸೇವೆಗಳ ಲಭ್ಯತೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ. ಅದಕ್ಕಾಗಿ ರಜಾ ದಿನಗಳಲ್ಲಿ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ' ಎಂದು ವಿವರಿಸಿದ್ದಾರೆ.

ಕರ್ನಾಟಕ ಸರ್ಕಾರದ ಸಚಿವಾಲಯ ಮತ್ತು ವಿವಿಧ ಇಲಾಖೆಗಳು ಬಳಸುತ್ತಿರುವ ಇ-ಆಫೀಸ್ ತಂತ್ರಾಂಶವನ್ನು ಜೂನ್ 27 ಮತ್ತು 29ರಂದು ಉನ್ನತೀಕರಣ ಗೊಳಿಸಲಾಗುತ್ತಿದೆ. ಉನ್ನತೀಕರಣ ಪ್ರಕ್ರಿಯೆ ಪೂರ್ಣಗೊಂಡ ನಂತರ ಇ-ಆಫೀಸ್ ವ್ಯವಸ್ಥೆಯು ಜೂನ್ 29ರ ಬೆಳಿಗ್ಗೆಯಿಂದಲೇ ಪುನರಾರಂಭಗೊಳ್ಳಲಿವೆ ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯದ ಇ-ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಬಲಿಷ್ಠ, ಸುರಕ್ಷಿತ ಹಾಗೂ ಹೆಚ್ಚಿನ ಸಾಮರ್ಥ್ಯವುಳ್ಳದಾಗಿಸಲು ಈ ನಿರ್ವಹಣಾ ಕಾರ್ಯ ಕೈಗೊಳ್ಳಲಾಗುತ್ತಿದೆ. ಭವಿಷ್ಯದಲ್ಲಿ ನಾಗರಿಕರಿಗೆ ವೇಗವಾಗಿ, ತಾಂತ್ರಿಕ ಅಡಚಣೆಗಳಿಲ್ಲದೆ, ಸುರಕ್ಷಿತವಾಗಿ ಸರ್ಕಾರಿ ಸೇವೆಗಳನ್ನು ಒದಗಿಸಲಾಗುವುದು. ದತ್ತಾಂಶ ಸಂಸ್ಕರಣಾ ಸಾಮರ್ಥ್ಯ, ಸೈಬರ್ ಭದ್ರತೆ, ಸರ್ವರ್ ಕಾರ್ಯಕ್ಷಮತೆ ಹಾಗೂ ಸೇವೆಗಳ ಸ್ಥಿರತೆಯನ್ನು ಇನ್ನಷ್ಟು ಸುಧಾರಿಸಲಾಗುತ್ತಿದೆ ಎಂದಿದ್ದಾರೆ.





ಹಡಗುಗಳಿಗೆ ಇರಾನ್ ಶುಲ್ಕ ವಿಧಿಸಲ್ಲ: ಅಮೆರಿಕ

ವಾಷಿಂಗ್ಟನ್ (ಎಎಫ್‌ಪಿ): ಪಶ್ಚಿಮ ಏಷ್ಯಾ ಯುದ್ಧವನ್ನು ಕೊನೆಗೊಳಿಸುವ ಸಂಬಂಧ ಮಾತುಕತೆ ನಡೆಯುತ್ತಿರುವುದರಿಂದ ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳಿಂದ ಯಾವುದೇ ಶುಲ್ಕ ಸಂಗ್ರಹಿಸುವುದಿಲ್ಲ ಎಂದು ಇರಾನ್ ಭರವಸೆ ನೀಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ತಿಳಿಸಿದ್ದಾರೆ.



ಡೊನಾಲ್ಡ್ ಟ್ರಂಪ್

'ಇರಾನ್ ಯಾವುದೇ ಶುಲ್ಕ, ವಿಮಾ ವೆಚ್ಚವನ್ನು ಸ್ವೀಕರಿಸಿಲ್ಲ' ಎಂದು ಟ್ರಂಪ್ ಅವರು ತಮ್ಮ 'ಟ್ರೂಥ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

60 ದಿನಗಳ ಮಾತುಕತೆ ಅವಧಿಯ ನಂತರವೂ ಆ ಭರವಸೆಯು ಚಾಲ್ತಿಯಲ್ಲಿ ಇರುತ್ತದೆಯೇ ಎಂಬ ಬಗ್ಗೆ ಅವರು ಸ್ಪಷ್ಟಪಡಿಸಿಲ್ಲ.

ಜಲಸಂಧಿಯನ್ನು ದಾಟಲು ಹಡಗುಗಳಿಗೆ ಶುಲ್ಕದ ಬದಲಾಗಿ ಸಮುದ್ರ ಸೇವಾ ಶುಲ್ಕ ವಿಧಿಸಲು ಇರಾನ್ ಯೋಜಿಸುತ್ತಿದೆ. ಇದನ್ನು ಅಮೆರಿಕ ವಿರೋಧಿಸಿದೆ.

ಹೊರ್ಮುಜ್ ಜಲಸಂಧಿಯಲ್ಲಿ ಒದಗಿಸುವ ಸೇವೆಗಳಿಗೆ ಶುಲ್ಕ ವಿಧಿಸುವ ಬಗ್ಗೆ ಚಿಂತನೆ ನಡೆಸಿರುವುದಾಗಿ ಇರಾನ್ ಮತ್ತು ಒಮಾನ್ ಮಂಗಳವಾರ ಹೇಳಿದ್ದವು. 'ಜಲಮಾರ್ಗದ ಮೇಲೆ ತಾವು ಸಾರ್ವಭೌಮತ್ವವನ್ನು ಹೊಂದಿದ್ದೇವೆ' ಎಂದೂ ಈಗ ಹೇಳಿವೆ.

ಒಮಾನ್‌ಗೆ ಕತಾರ್ ಪ್ರಧಾನಿ: ಹೊರ್ಮುಜ್ ಜಲಸಂಧಿಯ ಕಾರ್ಯಾಚರಣೆ ಕುರಿತು ಕೊಲ್ಲಿ ರಾಷ್ಟ್ರಗಳು, ಇರಾಕ್ ಮತ್ತು ಇರಾನ್ ನಡುವೆ ಮಾತುಕತೆ ನಡೆಸುವ ಸಂಬಂಧ ಕತಾರ್ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್‌ರಹಮಾನ್ ಅಲ್ ಥನಿ ಅವರು ಒಮಾನ್‌ಗೆ ಬುಧವಾರ ಪ್ರಯಾಣ ಬೆಳೆಸಿದ್ದಾರೆ ಎಂದು ರಾಜತಾಂತ್ರಿಕ ಅಧಿಕಾರಿ ತಿಳಿಸಿದ್ದಾರೆ.

ಹಡಗುಗಳ ಪ್ರಯಾಣಕ್ಕೆ ಅನುವು

ಲಂಡನ್ (ಎಪಿ): ಪಶ್ಚಿಮ ಏಷ್ಯಾ ಸಂಘರ್ಷದಿಂದ ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿದ್ದ ಹಡಗುಗಳು ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಮುದ್ರಯಾನ ಸಂಘಟನೆಯು (ಐಎಂಒ) ಬುಧವಾರ ತಿಳಿಸಿದೆ.

'ಸುಮಾರು 11 ಸಾವಿರ ನಾವಿಕರನ್ನು ಹೊಂದಿರುವ ನೂರಾರು ಹಡಗುಗಳು ಜಲಸಂಧಿಯಲ್ಲಿ ಸಿಲುಕಿದ್ದವು. ಇವುಗಳನ್ನು ಸ್ಥಳಾಂತರಿಸಲು ಹೊಸ ಯೋಜನೆಯನ್ನು ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಹಡಗುಗಳು ಈಗಾಗಲೇ ಹೊರ್ಮುಜ್ ಜಲಸಂಧಿ ಮೂಲಕ ಹಾದುಹೋಗಲು ಪ್ರಾರಂಭಿಸಿವೆ' ಎಂದು ಐಎಂಒ ವಕ್ತಾರರು ತಿಳಿಸಿದ್ದಾರೆ. ಮೂಲಗಳ ಪ್ರಕಾರ, ಎರಡು ಖಾಲಿ ಹಡಗು ಹಾಗೂ ಒಂದು ಸರಕು ಸಾಗಣೆ ಹಡಗುಗಳು ಸಾಗಿವೆ. 35 ವಾಣಿಜ್ಯ ಹಡಗುಗಳು ಜಲಸಂಧಿಯ ಮೂಲಕ ಸಾಗಲು ತಯಾರಿ ನಡೆಸಿವೆ.

ಪರಮಾಣು ಘಟಕದ ಸ್ಥಿತಿ ನೋಡಲು ಅಮೆರಿಕ ಸಮಯ ನಿಗದಿ ಮಾಡಿಲ್ಲ: ಬಘಾಯ್

'ಒಪ್ಪಂದದ ನಂತರವಷ್ಟೇ ಪರಿಶೀಲನೆ'

ಟೋಕಿಯೊ (ಎಎಫ್‌ಪಿ): ಬಾಂಬ್ ದಾಳಿಗೆ ಒಳಗಾಗಿರುವ ಇರಾನ್‌ನ ಪರಮಾಣು ಘಟಕಗಳ ಪರಿಶೀಲನೆಗೆ ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ ಅಧಿಕಾರಿಗಳು ತೆರಳಲಿದ್ದಾರೆ ಎಂದು ವಿಶ್ವಸಂಸ್ಥೆಯ ಅಣುಶಕ್ತಿ ವಿಭಾಗದ ಮುಖ್ಯಸ್ಥ ರಫೈಲ್ ಮರಿಯಾನೊ ಗ್ರೊಸ್ಸಿ ಅವರು ತಿಳಿಸಿದ್ದಾರೆ.

'ನಾಳೆ ಅಥವಾ ವಾರದ ಒಳಗಾಗಿ ಅಥವಾ 10 ದಿನ ಒಳಗಾಗಿ ಪರಿಶೀಲನೆ ನಡೆಸುತ್ತೇವೆ. ಈ ಪ್ರಕ್ರಿಯೆಯು ಮುಖ್ಯವೇನೋ ಹೌದು. ಆದರೆ ಅತ್ಯಗತ್ಯವಲ್ಲ' ಎಂದು ಹೇಳಿದ್ದಾರೆ.

ಈ ಹೇಳಿಕೆಗೆ ಪ್ರತಿಕ್ರಿಯಿಸಿರುವ ಇರಾನ್‌ನ ಉಪ ವಿದೇಶಾಂಗ ಸಚಿವ ಕಜೇಮ್ ಘಾರೀಬಾಬಾದಿ ಅವರು 'ಒಪ್ಪಂದದ ಅಂತಿಮ ಕರಡು ಸಿದ್ಧವಾದ ನಂತರವಷ್ಟೇ ಅಣುಶಕ್ತಿ ಘಟಕಗಳ ಪರಿಶೀಲನೆ ಬಗ್ಗೆ ಚಿಂತನೆ ನಡೆಸಲಾಗುವುದು' ಎಂದಿದ್ದಾರೆ.

ಇದಕ್ಕೂ ಮುನ್ನ ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯ್ ಅವರು, 'ಪರಮಾಣು ಘಟಕಗಳ ಪರಿಶೀಲನೆಗೆ ಅಮೆರಿಕವು ಸಮಯವನ್ನು ನಿಗದಿ ಮಾಡಿಲ್ಲ' ಎಂದು ಹೇಳಿದ್ದರು.

ಪರಮಾಣು ಸ್ಥಾವರ ಪರಿಶೀಲನೆ- ಮತ್ತೆ ಸಂಘರ್ಷ: ಅಮೆರಿಕದ ದಾಳಿಗೆ ತುತ್ತಾಗಿರುವ ಪರಮಾಣು ಘಟಕಗಳ ಪರಿಶೀಲನೆಗೆ ಇರಾನ್ ನಿರಾಕರಿಸಿದ್ದು, ಈ ವಿಚಾರವಾಗಿ ಅಮೆರಿಕ ಮತ್ತು ಇರಾನ್ ಮಧ್ಯೆ ಮತ್ತೆ ಸಂಘರ್ಷ ಆರಂಭವಾಗಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ, 'ಪರಿಶೀಲನೆಗೆ ಇರಾನ್ ಅವಕಾಶ ನೀಡದಿದ್ದರೆ ಉಭಯ ದೇಶಗಳ ನಡುವಣ ಶಾಂತಿ ಮಾತುಕತೆಯನ್ನು ಕೂಡಲೇ ಸ್ಥಗಿತಗೊಳಿಸುತ್ತೇವೆ' ಎಂದು ಹೇಳಿದ್ದಾರೆ. ಪರಿಶೀಲನೆಗೆ ಯಾವುದೇ ತರಾತುರಿ ಇಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಇರಾನ್‌ಗೆ ಭೇಟಿ ನೀಡದಂತೆ ಸಲಹೆ

ದುಬೈ: ಇರಾನ್‌ಗೆ ಅನಗತ್ಯ ಪ್ರಯಾಣ ಮಾಡದಿರುವಂತೆ ಭಾರತ ಮೂಲದವರಿಗೆ ಟೆಹರಾನ್‌ನಲ್ಲಿನ ಭಾರತದ ರಾಯಭಾರ ಕಚೇರಿ ಸಲಹೆ ನೀಡಿದೆ.

ಭದ್ರತಾ ಪರಿಸ್ಥಿತಿಯು ಇತ್ತೀಚೆಗೆ ಸುಧಾರಣೆಗೊಂಡಿದ್ದರೂ ಮುಂದಿನ ನಿರ್ದೇಶನದ ತನಕ ಭೇಟಿ ನೀಡದಿರುವಂತೆ ಸಲಹೆ ನೀಡಿದೆ.

ಅಮೆರಿಕದ ಸೋಲಿನ ಘೋಷಣೆ: ಪಶ್ಚಿಮ ಏಷ್ಯಾದ ಯುದ್ಧವನ್ನು ಕೊನೆಗಾಣಿಸುವ ಶಾಂತಿ ಒಪ್ಪಂದವನ್ನು 'ಅಮೆರಿಕದ ಸೋಲಿನ ಘೋಷಣೆ' ಎಂದು ಇರಾನ್ ವ್ಯಾಖ್ಯಾನಿಸಿದೆ. ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಫೆ. 28ರಂದು ದಾಳಿ ನಡೆಸಿದ ನಂತರ ಆರಂಭವಾಗಿದ್ದ ಯುದ್ಧವು, ಅಮೆರಿಕ-ಇರಾನ್ ನಡುವಣ ಒಪ್ಪಂದದಿಂದಾಗಿ ಸದ್ಯಕ್ಕೆ ನಿಂತಿದೆ. ಆದರೆ ಈ ಒಪ್ಪಂದನ್ನು ಇರಾನ್, 'ತನಗೆ ಸಿಕ್ಕ ಜಯ' ಎಂದು ಪ್ರತಿಪಾದಿಸಿದೆ.

ಘಾನಾ ರಕ್ಷಣೆ ಆಟ; ಇಂಗ್ಲೆಂಡ್‌ಗೆ ಹತಾಶೆ

ಮಳೆಯ ನಡುವೆ ನಡೆದ ಎಲ್ ಗುಂಪಿನ ಪಂದ್ಯ ಗೋಲಿಲ್ಲದೇ 'ಡ್ರಾ'

ಫಾಕ್ಸ್‌ಬರೊ (ಅಮೆರಿಕ), (ಎಪಿ): ಘಾನಾದ ರಕ್ಷಣೆ ಆಟಗಾರರ ಶಿಸ್ತುಬದ್ಧ ಪ್ರದರ್ಶನದ ಎದುರು ಪ್ರಬಲ ಇಂಗ್ಲೆಂಡ್ ತಂಡ ಗೋಲು ಗಳಿಸಲಾಗದೇ ಹತಾಶವಾಯಿತು. ಮಂಗಳವಾರ ತಡರಾತ್ರಿ ಬಾಸ್ಟನ್ ಕ್ರೀಡಾಂಗಣದಲ್ಲಿ ನಡೆದ ಈ ಎರಡು ತಂಡಗಳ ನಡುವಣ ಪಂದ್ಯ ಗೋಲಿಲ್ಲದೇ ಡ್ರಾ ಆಯಿತು.

2018ರ ರನ್ನರ್ ಅಪ್ ಕ್ರೊವೇಷ್ಯಾ ವಿರುದ್ಧ 4–2 ಗೆಲುವಿನೊಡನೆ ಅಮೋಘವಾಗಿ ಅಭಿಯಾನ ಆರಂಭಿಸಿದ್ದ ಇಂಗ್ಲೆಂಡ್, ಮಳೆಯ ನಡುವೆ ನಡೆದ ಎಲ್ ಗುಂಪಿನ ಈ ಪಂದ್ಯದಲ್ಲಿ ಬಹುತೇಕ ಅವಧಿಯಲ್ಲಿ ಪ್ರಾಬಲ್ಯ ಸಾಧಿಸಿತು. ಆದರೆ ಘಾನಾದ ರಕ್ಷಣಾ ಕೋಟೆ ಭೇದಿಸಲಾಗಲಿಲ್ಲ.

86ನೇ ನಿಮಿಷ ನಿಕೊ ಓ'ರೀಲಿ ಅವರ 'ಹೆಡರ್'ನಲ್ಲಿ ಚೆಂಡು ಗೋಲು ಅಡ್ಡಪಟ್ಟಿಗೆ ಹೊಡೆಯಿತು. ಮರಳಿ ಬಂದ ಚೆಂಡನ್ನು ಹ್ಯಾರಿ ಕೇನ್ ಅವರು ನಿಯಂತ್ರಿಸಿ ಎಡಗಾಲಿನಲ್ಲಿ ಒದ್ದರೂ ಚೆಂಡು ಗೋಲಿನ ಮೇಲಿಂದ ಹೋಯಿತು.

'ಆರಂಭದಿಂದಲೇ ಎದುರಾಳಿ ತಂಡವನ್ನು ಗೋಲಿನತ್ತ ಸಾಗದಂತೆ ತಡೆಯುವುದು ಮತ್ತು ಹತಾಶಗೊಳಿಸುವುದು ನಮ್ಮ ಯೋಜನೆಯಾಗಿತ್ತು. ಅದನ್ನು ಈಡೇರಿಸಿದೆವು' ಎಂದು 'ಬ್ಲ್ಯಾಕ್ ಸ್ಟಾರ್ಸ್' ಕೋಚ್ ಕಾರ್ಲೋಸ್ ಕ್ವಿರೋಝ್ ಪ್ರತಿಕ್ರಿಯಿಸಿದರು.

ಘಾನಾಕ್ಕೆ 78ನೇ ನಿಮಿಷ ಉತ್ತಮ ಅವಕಾಶವಿತ್ತು. ಅಬ್ದುಲ್ ಫತಾವು ಅವರು ಇಂಗ್ಲೆಂಡ್ ಮಿಡ್‌ಫೀಲ್ಡರ್ ಇಬೆರೆಚಿ ಇಝೆ ಅವರನ್ನು ದಾಟಿ ಗೋಲಿನ ಮುಂದಿದ್ದ ಪ್ರಿನ್ಸ್ ಅಬು ಅವರಿಗೆ ಚೆಂಡನ್ನು ಪಾಸ್ ಮಾಡಿದರು. ಆದರೆ ಅಬು ಗೋಲಿಗೆ ಯತ್ನಿಸುವ ವೇಳೆಯೇ ಹಿಂದಿನಿಂದ ಧಾವಿಸಿದ ಇಂಗ್ಲೆಂಡ್ ಡಿಫೆಂಡರ್ ಇಝ್ರಿ ಕೊನ್ಸಾ ಅವರನ್ನು ಟ್ಯಾಕಲ್ ಮಾಡಿದರು. ಅಬು ಅವರ ಪೆನಾಲ್ಟಿ ಮನವಿಯನ್ನು ರೆಫ್ರಿ ಅನುಮೋದಿಸಲಿಲ್ಲ.

ನಾಲ್ಕು ವರ್ಷಗಳ ಹಿಂದೆ, ಕತಾರ್ ವಿಶ್ವಕಪ್‌ನಲ್ಲಿ ಇರಾನ್ ತಂಡಕ್ಕೆ ಕ್ವಿರೋಝ್ ಕೋಚ್ ಆಗಿದ್ದರು. ಆಗ ಇಂಗ್ಲೆಂಡ್ ತಂಡವು 6–2 ಗೋಲುಗಳಿಂದ ಇರಾನ್ ಮೇಲೆ ಜಯಗಳಿಸಿತ್ತು.

'ಅವರ ರಕ್ಷಣೆಯ ಆಟ, ವ್ಯೂಹ ರಚಿಸಿದ ರೀತಿಯಿಂದ ಕೊಂಚ ಹತಾಶೆಯಾಯಿತು. ಅವರು ನಮ್ಮ ಫಾರ್ವರ್ಡ್‌ಗಳಿಗೆ ಸರ್ಪಗಾವಲು ಹಾಕಿದರು' ಎಂದು ಇಂಗ್ಲೆಂಡ್ ಮಿಡ್‌ಫೀಲ್ಡರ್ ಜೂಡ್ ಬೆಲ್ಲಿಂಗಮ್ ಹೇಳಿದರು.

ಇಂಗ್ಲೆಂಡ್ ಮತ್ತು ಘಾನಾ ತಂಡಗಳು ಗುಂಪಿನ ಮೊದಲ ಪಂದ್ಯಗಳನ್ನು ಜಯಿಸಿದ್ದವು. ಟೂರ್ನಿಯ ಮಾದರಿ ಈ ವರ್ಷ ಬದಲಾಯಿಸಲಾಗಿದೆ. ಗುಂಪುಗಳಲ್ಲಿ ಮೊದಲ ಎರಡು ಸ್ಥಾನ ಗಳಿಸುವ ತಂಡಗಳ ಜೊತೆ ಮೂರನೇ ಸ್ಥಾನ ಪಡೆಯುವ ಎಂಟು ಅತ್ಯುತ್ತಮ ತಂಡಗಳೂ ನಾಕೌಟ್‌ಗೆ ಮುನ್ನಡೆಯಲಿವೆ. ಹೀಗಾಗಿ ಎರಡೂ ತಂಡಗಳ ನಾಕೌಟ್ ಅವಕಾಶ ಜೀವಂತವಾಗಿದೆ.

ಇಂಗ್ಲೆಂಡ್ ಶನಿವಾರ ನ್ಯೂಜರ್ಸಿಯಲ್ಲಿ ನಡೆಯುವ ಪಂದ್ಯದಲ್ಲಿ ಪನಾಮಾ ಎದುರು ಆಡಲಿದೆ. ಘಾನಾ ತಂಡವು ಅದೇ ದಿನ ಫಿಲಡೆಲ್ಫಿಯಾದಲ್ಲಿ ಕ್ರೊವೇಷ್ಯಾ ತಂಡವನ್ನು ಎದುರಿಸಲಿದೆ.

ಪಂದ್ಯಗಳು

ಕ್ಯುರಸಾವೊ– ಐವರಿಕೋಸ್ಟ್
ಈಕ್ವೆಡಾರ್– ಜರ್ಮನಿ
ಗುರುವಾರ, ರಾತ್ರಿ 1.30
ಜಪಾನ್– ಸ್ವೀಡನ್
ಟ್ಯುನೀಷಿಯಾ– ನೆದರ್ಲೆಂಡ್ಸ್
ಶುಕ್ರವಾರ ಬೆಳಗಿನ, ಜಾವ 4.30
ಟರ್ಕಿ– ಅಮೆರಿಕ
ಪರಗ್ವೆ– ಆಸ್ಟ್ರೇಲಿಯಾ
ಶುಕ್ರವಾರ, ಬೆಳಿಗ್ಗೆ 7.30
(ಸಮಯ: ಭಾರತೀಯ ಕಾಲಮಾನ)
ನೇರಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5 ಆ್ಯಪ್

ಇಂಗ್ಲೆಂಡ್	ಘಾನಾ
0	0


ಗೋಲು ಗಳಿಸುವ ಯತ್ನ ವಿಫಲವಾಗಿದ್ದರಿಂದ ಇಂಗ್ಲೆಂಡ್ ತಂಡದ ತಾರಾ ಆಟಗಾರ ಹ್ಯಾರಿ ಕೇನ್ ಅವರು ಹತಾಶರಾಗಿ ತಲೆಯ ಮೇಲೆ ಕೈ ಹೊತ್ತು ಕುಳಿತರು ಎಎಫ್‌ಪಿ ಚಿತ್ರ

ಕ್ರೊವೇಷ್ಯಾಕ್ಕೆ ಜಯ; ಸೋಲಿನೊಡನೆ ಪನಾಮಾ ನಿರ್ಗಮನ

ಟೊರಾಂಟೊದಲ್ಲಿ ಮಂಗಳವಾರ ನಡೆದ ಎಲ್ ಗುಂಪಿನ ಇನ್ನೊಂದು ಪಂದ್ಯದಲ್ಲಿ ಕ್ರೊವೇಷ್ಯಾ ತಂಡ ತೀವ್ರ ಪೈಪೋಟಿಯ ನಂತರ ಪನಾಮಾ ತಂಡವನ್ನು 1–0 ಗೋಲಿನಿಂದ ಸೋಲಿಸಿತು.

ಮೊದಲ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ಶರಣಾಗಿದ್ದ ಕ್ರೊವೇಷ್ಯಾ ಈಗ ಪುಟಿದೇಳಲು ಯತ್ನಿಸಿದೆ. ಈ ತಂಡ 2018 ಮತ್ತು 2022ರಲ್ಲಿ ಸೆಮಿಫೈನಲ್ ತಲುಪಿತ್ತು.

ಆ್ಯಂಟೆ ಬುದಿಮಿರ್ ಅವರು 54ನೇ ನಿಮಿಷ ಗಳಿಸಿದ ಗೋಲು ಕ್ರೊವೇಷ್ಯಾ ಪಾಲಿಗೆ ನಿರ್ಣಾಯಕವಾಯಿತು.

ಕ್ರೊವೇಷ್ಯಾ	ಪನಾಮಾ
1	0


ಆ್ಯಂಟೆ ಬುದಿಮಿರ್ ಸಂಭ್ರಮ

ಎರಡನೇ ಸೋಲಿನಿಂದ ಪನಾಮಾಗೆ ನಾಕೌಟ್ ಅವಕಾಶ ದೂರವಾಯಿತು.

ಡಿಫೆಂಡರ್ ಡೇನಿಯಲ್ ನಿರ್ಣಾಯಕ ಗೋಲು

ನಾಕೌಟ್‌ಗೆ ಕೊಲಂಬಿಯಾ ಲಗ್ಗೆ



ವದಲಹಾರ (ಮೆಕ್ಸಿಕೊ) (ಎಎಫ್‌ಪಿ): ಅನುಭವಿ ಡಿಫೆಂಡರ್ ಡೇನಿಯಲ್ ಮುನೋಝ್ ಅವರು ಹೊಡೆದ ನಿರ್ಣಾಯಕ ಗೋಲಿನ ಬಲದಿಂದ ಕೊಲಂಬಿಯಾ ತಂಡವು ಮಂಗಳವಾರ 1–0ಯಿಂದ ಕಾಂಗೊ ರಿಪಬ್ಲಿಕ್ ತಂಡವನ್ನು ಮಣಿಸಿತು. ಸತತ ಎರಡು ಗೆಲುವಿನೊಂದಿಗೆ ಕೊಲಂಬಿಯಾ 32ರ ಘಟ್ಟಕ್ಕೆ ಲಗ್ಗೆ ಇಟ್ಟಿತು.

ವದಲಹಾರ ಕ್ರೀಡಾಂಗಣದಲ್ಲಿ ನಡೆದ 'ಕೆ' ಗುಂಪಿನ ಪಂದ್ಯದಲ್ಲಿ ಕೊಲಂಬಿಯಾ ಆರಂಭದಿಂದಲೂ ಹಿಡಿತ ಸಾಧಿಸಿತು. ಮೊದಲಾರ್ಧದಲ್ಲಿ ಉಭಯ ತಂಡಗಳಿಂದ ಗೋಲು ದಾಖಲಾಗಲಿಲ್ಲ. ಪಂದ್ಯ 'ಡ್ರಾ'ನತ್ತ ಸಾಗುತ್ತಿದ್ದಾಗ ಕಾಲ್ಚಳಕ ಮೆರೆದ ಮುನೋಝ್ (76ನೇ ನಿ.) ಗೋಲು ಹೊಡೆದರು. ತಮ್ಮ ತಂಡಕ್ಕೆ ಗೆಲುವು ತಂದುಕೊಟ್ಟರು.

ಈ ಗೆಲುವಿನೊಂದಿಗೆ ಕೊಲಂಬಿಯಾ (6 ಅಂಕ) ತಂಡವು ಪೋರ್ಚುಗಲ್ (4 ಅಂಕ) ತಂಡವನ್ನು ಹಿಂದೆಹಾಕಿ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ದಕ್ಷಿಣ ಆಫ್ರಿಕಾದ ತಂಡವು ತನ್ನ ಮೊದಲ ಪಂದ್ಯದಲ್ಲಿ 3–1ರಿಂದ ಉಜ್ಬೇಕಿಸ್ತಾನ ತಂಡವನ್ನು ಸೋಲಿಸಿತ್ತು.

1972ರ ಬಳಿಕ ವಿಶ್ವಕಪ್‌ಗೆ ಪುನರಾಗಮನ ಮಾಡಿರುವ ಕಾಂಗೊ ತಂಡವು ತನ್ನ ಮೊದಲ ಪಂದ್ಯದಲ್ಲಿ ಬಲಿಷ್ಠ ಪೋರ್ಚುಗಲ್ ಜೊತೆಗೆ 1–1ರ ಡ್ರಾ ಸಾಧಿಸಿತ್ತು.

ಕೊಲಂಬಿಯಾ	ಕಾಂಗೊ ರಿಪಬ್ಲಿಕ್
1	0

ಗೋಲು ಗಳಿಸಿದ ಸಂಭ್ರಮದಲ್ಲಿ ಕೊಲಂಬಿಯಾದ ಡೇನಿಯಲ್ ಮುನೋಝ್ ಎಎಫ್‌ಪಿ ಚಿತ್ರ

ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್

ಬೆಂಗಳೂರು ಚಾಂಪ್ಸ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಚಾಂಪ್ಸ್ ಅಕಾಡೆಮಿ ತಂಡವು ಬುಧವಾರ ನಡೆದ ಫೈನಲ್‌ನಲ್ಲಿ 3–0ಯಿಂದ ಬ್ಲೂ ಸ್ಟಾರ್ ಎಫ್‌ಸಿ ತಂಡವನ್ನು ಸೋಲಿಸಿ, ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ (ದಕ್ಷಿಣ ವಲಯ) ಕಿರೀಟ ಗೆದ್ದುಕೊಂಡಿತು. ಅದರೊಂದಿಗೆ, ಮುಂದಿನ ಋತುವಿನಲ್ಲಿ ಬಿ ಡಿವಿಷನ್ ಲೀಗ್‌ನಲ್ಲಿ ಆಡಲು ಬಡ್ತಿ ಪಡೆಯಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಚಾಂಪ್ಸ್ ಅಕಾಡೆಮಿ ತಂಡದ ಮೊಹಮ್ಮದ್ ಆತಿಫ್ (11ನೇ ನಿ.), ಮಟ್ಟು ಸೇಥನನ್ (18ನೇ ನಿ.) ಹಾಗೂ ಲೋಕ ಸುಬ್ರಮಣಿ (57ನೇ ನಿ.) ತಲಾ ಒಂದು ಗೋಲು ಹೊಡೆದರು.

ಉತ್ತರ ವಲಯದ ಫೈನಲ್‌ನಲ್ಲಿ ಆಲ್ಕೆಮಿ ಇಂಟರ್‌ನ್ಯಾಷನಲ್ ಫುಟ್‌ಬಾಲ್ ಅಕಾಡೆಮಿ ತಂಡವು ಶೂಟೌಟ್‌ನಲ್ಲಿ 4–1ರಿಂದ ರೊನಾಲ್ಡೊ ಎಫ್‌ಸಿ ಬೆಂಗಳೂರು ತಂಡವನ್ನು ಸೋಲಿಸಿ ಚಾಂಪಿಯನ್ ಆಯಿತು. ನಿಗದಿತ ಅವಧಿಯ ಆಟ 1–1ರಲ್ಲಿ ಡ್ರಾ ಆಗಿತ್ತು. ಆಲ್ಕೆಮಿ ತಂಡವೂ 'ಬಿ' ಡಿವಿಷನ್ ಲೀಗ್‌ಗೆ ಅರ್ಹತೆ ಗಿಟ್ಟಿಸಿಕೊಂಡಿತು.



ಟ್ರೋಫಿಯೊಂದಿಗೆ ಬೆಂಗಳೂರು ಚಾಂಪ್ಸ್ ಅಕಾಡೆಮಿ ತಂಡದ ಆಟಗಾರರು ಮತ್ತು ಸಿಬ್ಬಂದಿ

ಸಂಕ್ಷಿಪ್ತ ಸುದ್ದಿ

ಇಂಗ್ಲೆಂಡ್ ಪ್ರವಾಸ: ವೈಭವ್‌ಗೆ ಪ್ರತ್ಯೇಕ 'ಚೇಂಜಿಂಗ್ ರೂಮ್'



ನವದೆಹಲಿ (ಪಿಟಿಐ): ಉದಯೋನ್ಮುಖ ಬ್ಯಾಟಿಂಗ್ ತಾರೆ ವೈಭವ್ ಸೂರ್ಯವಂಶಿ ಅವರು ತಮ್ಮ ಚೊಚ್ಚಲ ಅಂತರ ರಾಷ್ಟ್ರೀಯ ಪ್ರವಾಸದಲ್ಲಿ ಅಪರೂಪದ ಅನುಭವಕ್ಕೆ ಒಳಗಾಗಲಿದ್ದಾರೆ. ಟಿ20 ಸರಣಿಯನ್ನಾಡಲು ಇಂಗ್ಲೆಂಡ್ ಪ್ರವಾಸದ ವೇಳೆ ಅವರಿಗೆ ಪ್ರತ್ಯೇಕ 'ಚೇಂಜಿಂಗ್ ರೂಮ್' ವ್ಯವಸ್ಥೆ ಮಾಡಲಾಗುವುದು.

ಅಲ್ಲಿನ ಶಿಷ್ಟಾಚಾರದಂತೆ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಐಸಿಸಿಯ ಸುರಕ್ಷತಾ ನಿಯಮ ಮತ್ತು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯ ನಿಯಮಗಳ ಅನ್ವಯ 16 ವರ್ಷದೊಳಗಿನವರು, ಉಡುಪು ಬದಲಾಯಿಸಲು ವಯಸ್ಕರ ಕೊಠಡಿ ಬಳಸುವಂತಿಲ್ಲ. ಈ ಕೊಠಡಿಯಲ್ಲಿ ಅವರು ಪಂದ್ಯಕ್ಕೆ ಮೊದಲು ಮತ್ತು ನಂತರ ಉಡುಪು ಬದಲಾಯಿಸುವುದರ ಜೊತೆಗೆ ವಿಶ್ರಾಂತಿ ಪಡೆಯಲು, ಕಿಟ್ ಇಡಲು ಅವಕಾಶವಿದೆ.

ನಿರ್ಭೀತ ಆಟದಿಂದ ಹೆಸರು ಮಾಡಿರುವ 15 ವರ್ಷದ ವೈಭವ್ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದಲ್ಲಿ, ಈ ಸಾಧನೆ ಮಾಡಿದ ಅತಿ ಕಿರಿಯ ಆಟಗಾರ ಎನಿಸಲಿದ್ದಾರೆ.

ಸೂರ್ಯವಂಶಿ ಅವರಿಗೆ ತಂಡದ ಡ್ರೆಸಿಂಗ್ ರೂಮ್ ಪ್ರವೇಶಿಸಲು ಅವಕಾಶವಿದೆ. ಅವರು ತಂಡದ ತಂತ್ರಗಾರಿಕೆ ಸಭೆಯಲ್ಲಿ ಪಾಲ್ಗೊಳ್ಳಬಹುದು. ಆದರೆ ಪಂದ್ಯದ ಪೂರ್ವ ಮತ್ತು ನಂತರ ಮಾತ್ರ ಈ ನಿಯಮ ಅನ್ವಯವಾಗಲಿದೆ. ಜುಲೈ 1ರಂದು ಇಂಗ್ಲೆಂಡ್ ಸರಣಿಯ ಮೊದಲ ಪಂದ್ಯ ನಡೆಯಲಿದೆ.

ಅನುಷ್ಕಾ, ದೇವ್ ರಾಷ್ಟ್ರೀಯ ದಾಖಲೆ

ಭುವನೇಶ್ವರ (ಪಿಟಿಐ): ಪೋಲ್‌ವಾಲ್ಟ್ ತಾರೆ ದೇವ್ ಮೀನಾ ಹಾಗೂ ಉತ್ತರ ಪ್ರದೇಶದ 'ಹ್ಯಾಮರ್ ಥ್ರೋ'ಪಟು ಅನುಷ್ಕಾ ಯಾದವ್ ಅವರು ಬುಧವಾರ ಆರಂಭಗೊಂಡ 65ನೇ ರಾಷ್ಟ್ರೀಯ ಅಂತರ ರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟದಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದರು.

18 ವರ್ಷ ವಯಸ್ಸಿನ ಅನುಷ್ಕಾ 67.02 ಮೀ. ಎಸೆದು, 2017ರಲ್ಲಿ ಸರಿತಾ ಸಿಂಗ್ ಹೆಸರಿನಲ್ಲಿದ್ದ ದಾಖಲೆ (65.25 ಮೀ) ಮುರಿದರು. ಆರು ಯತ್ನಗಳಲ್ಲಿ ಎರಡು ಬಾರಿ ರಾಷ್ಟ್ರೀಯ ದಾಖಲೆ ಸುಧಾರಿಸಿದರು.

ಅಥ್ಲೆಟಿಕ್ಸ್‌ನಲ್ಲಿ ಹಾಲಿ ರಾಷ್ಟ್ರೀಯ ದಾಖಲೆ ಹೊಂದಿರುವರ ಅಥ್ಲೀಟುಗಳಲ್ಲಿ ಅವರು ಅತಿ ಕಿರಿಯರೆನಿಸಿದರು.

ಪುರುಷರ ಪೋಲ್‌ವಾಲ್ಟ್‌ನಲ್ಲಿ ದೇವ್ 5.46 ಮೀ. ಜಿಗಿದು ತಮ್ಮದೇ ಹೆಸರಿನಲ್ಲಿದ್ದ ಜಂಟಿ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿಕೊಂಡರು.

ಗಾಯದಿಂದಾಗಿ ವರ್ಷದ ಬಳಿಕ ಪುನರಾಗಮನ ಮಾಡಿದ ಜ್ಯೋತಿ ಯರ್ರಾಜಿ ಅವರು ಮಹಿಳೆಯರ 100 ಮೀ. ಹರ್ಡಲ್ಸ್ ಸ್ಪರ್ಧೆಯನ್ನು 12.99 ಸೆಕೆಂಡುಗಳಲ್ಲಿ ಪೂರೈಸಿ, ಚಿನ್ನ ಗೆದ್ದರು. ಆದರೆ, ಗುಲ್ವೀರ್ ಸಿಂಗ್ ಅವರು ಪುರುಷರ 5,000 ಮೀ. ಓಟದಲ್ಲಿ ಏಷ್ಯನ್ ಗೇಮ್ಸ್ ಅರ್ಹತಾ ಮಾನದಂಡ (13ನಿ., 39.18ಸೆ.) ಪೂರೈಸಲು ವಿಫಲರಾದರು.

ನಿರ್ಣಾಯಕ ಪಂದ್ಯದಲ್ಲಿ ದೌರ್ಬಲ್ಯಗಳನ್ನು ಮೆಟ್ಟಿನಿಲ್ಲುವತ್ತ ಕೌರ್ ಪಡೆ ಚಿತ್ತ

ಭಾರತಕ್ಕೆ ಇಂದು ಬಾಂಗ್ಲಾ ಸವಾಲು

ಮ್ಯಾಂಚೆಸ್ಟರ್ (ಪಿಟಿಐ): ಮಧ್ಯಮ ಕ್ರಮಾಂಕದ ವೈಫಲ್ಯ ಮತ್ತು ಕಳಪೆ ಫೀಲ್ಡಿಂಗ್ ಸಮಸ್ಯೆಯು ಹರ್ಮನ್‌ಪ್ರೀತ್ ಕೌರ್ ಪಡೆಯನ್ನು ಕಾಡುತ್ತಿದೆ. ಈ ಹಿನ್ನಡೆಗಳನ್ನು ಮೆಟ್ಟಿನಿಲ್ಲುವ ಪ್ರಯತ್ನದಲ್ಲಿರುವ ಭಾರತ ತಂಡವು ಮಹಿಳಾ ಟಿ20 ವಿಶ್ವಕಪ್‌ನ ಒಂದನೇ ಗುಂಪಿನ ನಿರ್ಣಾಯಕ ಪಂದ್ಯದಲ್ಲಿ ಗುರುವಾರ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

12 ತಂಡಗಳ ಈ ಟೂರ್ನಿಯಲ್ಲಿ ಕಣಕ್ಕಿಳಿಯುವ ಮೊದಲೇ ತಂಡದಲ್ಲಿ ಅಗ್ರ ಸರದಿಯ ಆಟಗಾರ್ತಿಯರ ವೈಫಲ್ಯ ಕಾಣಿಸಿಕೊಂಡಿತ್ತು. ಆದರೆ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರ ಸ್ಥಿರ ಆಟದಿಂದಾಗಿ ಈ ದೌರ್ಬಲ್ಯ ಎದ್ದುಕಂಡಿಲ್ಲ. ಮಂದಾನ 3 ಪಂದ್ಯಗಳಿಂದ 159 ರನ್ ಕಲೆಹಾಕಿದ್ದಾರೆ. ಶಫಾಲಿ 92 ರನ್ ಪೇರಿಸಿದ್ದಾರೆ. ಇಬ್ಬರ ಸ್ಟ್ರೈಕ್‌ರೇಟ್ ಸಹ 154ರ ಮೇಲಿದ್ದು, ತಂಡಕ್ಕೆ ಉತ್ತಮ ಆರಂಭ ಸಿಗುತ್ತಿದೆ.

ಆದರೆ ಈ ಆರಂಭದ ಮೇಲೆ ರನ್ ಸೌಧ ಕಟ್ಟಲು ತಂಡ ವಿಫಲವಾಗುತ್ತಿರುವುದು ಚಿಂತಕರ ಚಾವಡಿಗೆ ತಲೆನೋವು ಉಂಟುಮಾಡಿದೆ. ಹರ್ಮನ್‌ಪ್ರೀತ್ ಕೌರ್ (ಸ್ಟ್ರೈಕ್‌ರೇಟ್ 109), ಜೆಮಿಮಾ ರಾಡ್ರಿಗಸ್ (94.11), ಯಸ್ತಿಕಾ ಭಾಟಿಯಾ (106) ಅವರು ರನ್‌ವೇಗ ಹೆಚ್ಚಿಸಲು ಯಶಸ್ವಿಯಾಗಿಲ್ಲ. ಹೀಗಾಗಿ ರಿಚಾ ಘೋಷ್, ದೀಪ್ತಿ ಶರ್ಮಾ ಅವರ ಮೇಲೆ ಒತ್ತಡ ಹೆಚ್ಚುತ್ತಿದೆ. ಈ ಸವಾಲಿಗೆ ರಿಚಾ (176.92) ಮತ್ತು ದೀಪ್ತಿ (159.37) ಅವರು ತಕ್ಕಮಟ್ಟಿಗೆ ಹೆಗಲು ನೀಡಿದ್ದಾರೆ. ಆದರೆ ಅವರಿಗೆ ಹೆಚ್ಚಿನ ಓವರುಗಳು ಸಿಗುತ್ತಿಲ್ಲ.

ಇದರ ಹೊರತಾಗಿಯೂ ತಂಡ 3 ಪಂದ್ಯಗಳಿಂದ 4 ಅಂಕ ಗಳಿಸಿದ್ದು, 2.511 ನಿವ್ವಳ ರನ್ ದರ ಹೊಂದಿದೆ. ಪಾಕಿಸ್ತಾನ ವಿರುದ್ಧ 64 ರನ್ ಮತ್ತು ನೆದರ್ಲೆಂಡ್ಸ್ ವಿರುದ್ಧ 95 ರನ್‌ಗಳ ಜಯ ಸಾಧಿಸಿದೆ. ಗುಂಪಿನಲ್ಲಿ ಎರಡನೇ ಸ್ಥಾನ ಉಳಿಸಿಕೊಂಡಿದೆ. ಆದರೆ ದಕ್ಷಿಣ ಆಫ್ರಿಕಾ ಎದುರಿನ ಸೋಲು ತಂಡದ ದೋಷಗಳಿಗೆ ಕನ್ನಡಿ ಹಿಡಿದಿತ್ತು.

ಆಸ್ಟ್ರೇಲಿಯಾ ತಂಡವು ಗುಂಪಿನಲ್ಲಿ 4 ಗೆಲುವುಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಗುಂಪಿನಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯುತ್ತವೆ.

ಬೌಲರ್‌ಗಳ ಪೈಕಿ ಶ್ರೀಚರಣಿ ಮಾತ್ರ ಪರಿಣಾಮಕಾರಿಯಾಗಿದ್ದಾರೆ. ಇತರ ಬೌಲರ್‌ಗಳೂ ಎದುರಾಳಿಗಳನ್ನು ಕಟ್ಟಿಹಾಕಬೇಕಾಗಿದೆ. ಈ ಹಿಂದಿನ ಪಂದ್ಯದಲ್ಲಿ ರಾಧಾ ಯಾದವ್ ಅವರು ಮರ್ಯೆಝುನ್ ಕಾಪ್ ಅವರಿಗೆ ಜೀವದಾನ ನೀಡಿದ್ದು ದುಬಾರಿಯಾಯಿತು. ಬಾಂಗ್ಲಾ ವಿರುದ್ಧ ಪಂದ್ಯದ ನಂತರ ಭಾರತ ತಂಡವು, ಅತ್ಯುತ್ತಮವಾಗಿ ಆಡುತ್ತಿರುವ ಆಸ್ಟ್ರೇಲಿಯಾವನ್ನು ಎದುರಿಸಬೇಕಿದ್ದು ಆದಷ್ಟು ಬೇಗ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಿದೆ.

ಪಾಕಿಸ್ತಾನ ವಿರುದ್ಧ 23 ರನ್‌ಗಳಿಂದ, ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ವಿರುದ್ಧ 6 ವಿಕೆಟ್‌ಗಳಿಂದ ಜಯಗಳಿಸಿರುವ ಬಾಂಗ್ಲಾದೇಶ ತಂಡವು, ಭಾರತ ವಿರುದ್ಧ ವಿಶ್ವಾಸದಿಂದ ಕಣಕ್ಕಿಳಿಯಲು ಸಜ್ಜಾಗಿದೆ. ತಂಡ ಸಾಂಘಿಕ ಪ್ರದರ್ಶನವನ್ನು ನೀಡುತ್ತಿರುವುದು ಇದುವರೆಗಿನ ಪಂದ್ಯಗಳಲ್ಲಿ ವ್ಯಕ್ತವಾಗಿದೆ.



ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್ ಅಭ್ಯಾಸ 'ಎಕ್ಸ್' ಚಿತ್ರ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಇಂದಿನ ಪಂದ್ಯ

ಭಾರತ	V/s	ಬಾಂಗ್ಲಾದೇಶ
ತಾಣ: ಮ್ಯಾಂಚೆಸ್ಟರ್, ಆರಂಭ: ರಾತ್ರಿ 7		
ದಕ್ಷಿಣ ಆಫ್ರಿಕಾ	V/s	ನೆದರ್ಲೆಂಡ್ಸ್
ತಾಣ: ಬ್ರಿಸ್ಟಲ್, ಆರಂಭ: ರಾತ್ರಿ 11		
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್		

ಆಸ್ಟ್ರೇಲಿಯಾಕ್ಕೆ ಸಾಟಿಯಾಗದ ಪಾಕ್

ಲೀಡ್ಸ್ (ಎಪಿ): ಆಸ್ಟ್ರೇಲಿಯಾ ತಂಡವು, ಮಂಗಳವಾರ ರಾತ್ರಿ ಹೆಡಿಂಗ್ಲೆಯಲ್ಲಿ ನಡೆದ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಒಂದನೇ ಗುಂಪಿನ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಮೇಲೆ 113 ರನ್‌ಗಳ ನಿರಾಯಾಸ ಜಯ ಸಾಧಿಸಿತು.


ಎಲಿಸ್ ಪೆರಿ

ಇದು ಆಸ್ಟ್ರೇಲಿಯಾ ತಂಡಕ್ಕೆ ಸತತ ನಾಲ್ಕನೇ ಗೆಲುವಾಗಿದ್ದು ಸೆಮಿಫೈನಲ್ ಖಾತರಿಯಾಯಿತು.

ಆಸ್ಟ್ರೇಲಿಯಾ 7 ವಿಕೆಟ್‌ಗೆ 199 ರನ್ ಗಳಿಸಿತು. ನಂತರ ಪಾಕಿಸ್ತಾನ ತಂಡವನ್ನು 14ನೇ ಓವರಿನಲ್ಲಿ 86 ರನ್‌ಗಳಿಗೆ ಉರುಳಿಸಿತು. ಆಲ್‌ರೌಂಡರ್ ಎಲಿಸ್ ಪೆರಿ 71 ರನ್ (48 ಎಸೆತ, 4x9, 6x1) ಗಳಿಸಿದರಲ್ಲದೇ, ಬೌಲಿಂಗ್‌ನಲ್ಲೂ ಮಿಂಚಿ 2 ವಿಕೆಟ್ ಪಡೆದರು. ಪಾಕ್ ಆರಂಭ ಆಟಗಾರ್ತಿ–ವಿಕೆಟ್ ಕೀಪರ್ ಮುನೀಬಾ ಅಲಿ (32, 25ಎ) ಅವರ ವಿಕೆಟ್ ಇದರಲ್ಲಿ ಸೇರಿತ್ತು. ಪಂದ್ಯದ ಆಟಗಾರ್ತಿ ಗೌರವ ಅವರಿಗೆ ಒಲಿಯಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರುಗಳಲ್ಲಿ 7 ವಿಕೆಟ್‌ಗೆ 199 (ಜಾರ್ಜಿಯಾ ವೋಲ್ 39, ಎಲಿಸ್ ಪೆರಿ 71; ಸಾದಿಯಾ ಇಕ್ಬಾಲ್ 31ಕ್ಕೆ2, ರಮೀನ್ ಶಮೀಮ್ 34ಕ್ಕೆ2, ನಶ್ರಾ ಸಂಧು 33ಕ್ಕೆ2); ಪಾಕಿಸ್ತಾನ: 13.4 ಓವರುಗಳಲ್ಲಿ 86 (ಮುನೀಬಾ ಅಲಿ 32; ಸೋಫಿ ಮೊಲಿನೆ 6ಕ್ಕೆ2, ಅನ್ನಾಬೆಲ್ ಸದರ್‌ಲ್ಯಾಂಡ್ 12ಕ್ಕೆ2, ಎಲಿಸ್ ಪೆರಿ 9ಕ್ಕೆ2).

ಸೂರಜ್, ಕಾರ್ತಿಕ್ ಹೋರಾಟಕ್ಕೆ ಸಿಗದ ಫಲ

ಬೆಂಗಳೂರು ಬ್ಲಾಸ್ಟರ್ಸ್ ಅಗ್ರಸ್ಥಾನಕ್ಕೆ

• ಆರ್. ಜಿತೇಂದ್ರ

ಮೈಸೂರು: ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವನ್ನು ಬುಧವಾರ 20 ರನ್‌ಗಳಿಂದ ಮಣಿಸಿದ ಬೆಂಗಳೂರು ಬ್ಲಾಸ್ಟರ್ಸ್ ತಂಡ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಬೆಂಗಳೂರು ನೀಡಿದ 227 ರನ್‌ಗಳ ದೊಡ್ಡ ಮೊತ್ತ ಬೆನ್ನತ್ತಿದ ಮಂಗಳೂರು ಗೆಲುವಿನ ಸನಿಹಕ್ಕೆ ಬಂದಿತಾದರೂ, ಆರಂಭದ ಓವರ್‌ಗಳಲ್ಲಿನ ಮಂದಗತಿಯ ಆಟಕ್ಕೆ ಬೆಲೆ ತೆತ್ತಿತು. 5 ವಿಕೆಟ್‌ಗೆ 206 ರನ್‌ಗಳೊಡನೆ ಹೋರಾಟ ಮುಗಿಸಿತು.

56ಕ್ಕೆ4 ವಿಕೆಟ್ ಕಳೆದುಕೊಂಡಿದ್ದ ಮಂಗಳೂರು ಪರ ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್ ಸೂರಜ್ ಅಹುಜಾ (ಔಟಾಗದೇ 96, 38ಎ, 4X5, 6X8) ಮಿಂಚಿನ ಇನಿಂಗ್ಸ್ ಆಡಿದರು. ಆರನೇ ವಿಕೆಟ್‌ಗೆ ಸೂರಜ್ ಹಾಗೂ ಸಿ.ಎ. ಕಾರ್ತಿಕ್ (49) ಜೋಡಿ 51 ಎಸೆತಗಳಲ್ಲಿ 109 ರನ್‌ಗಳ ಅಜೇಯ ಜೊತೆಯಾಟದ ಮೂಲಕ ಹೋರಾಟ ನಡೆಸಿತು. ಆದರೆ ಗೆಲುವು ಎಟಕಲಿಲ್ಲ.

ಉತ್ತಮ ಮೊತ್ತ: ಇದಕ್ಕೆ ಮೊದಲು ಬೆಂಗಳೂರು ತಂಡಕ್ಕೆ ಕೆ.ಎಲ್. ಶ್ರೀಜಿತ್ (59 ರನ್, 33 ಎ, 4X7, 6X2) ಉತ್ತಮ ಬುನಾದಿ ಹಾಕಿದರು. ಮಧ್ಯಮ ಕ್ರಮಾಂಕದಲ್ಲಿ ಸಮಿತ್ ದ್ರಾವಿಡ್ (39), ನಾಯಕ ಶುಭಾಂಗ್ ಹೆಗ್ಡೆ (34) ಹಾಗೂ ಪ್ರವೀಣ್ ದುಬೆ (ಅಜೇಯ 45) ಉಪಯುಕ್ತ ಆಟವಾಡಿದರು.

ಮಂಗಳೂರು ಪರ ಆಲ್‌ರೌಂಡ್ ಪ್ರದರ್ಶನ ನೀಡಿದ ಸಿ.ಎ. ಕಾರ್ತಿಕ್ 49ಕ್ಕೆ 3 ವಿಕೆಟ್ ಉರುಳಿಸಿದರು. ಬೆಂಗಳೂರು ತಂಡವು ಟೂರ್ನಿಯ ಮೈಸೂರು ಚರಣದ 4 ಪಂದ್ಯಗಳಲ್ಲಿ 3 ಗೆಲುವು, ಒಂದು ಸೋಲಿನೊಂದಿಗೆ 6 ಅಂಕ ಸಂಪಾದಿಸಿ ಹುಬ್ಬಳ್ಳಿಯತ್ತ ಪ್ರಯಾಣಿಸಿತು.


ಶುಭಾಂಗ್ ಹೆಗ್ಡೆ ಬೌಲಿಂಗ್ ಚಿತ್ರ: ಅನೂಪ್ ರಾಘ್ ಟಿ.

ಸಂಕ್ಷಿಪ್ತ ಸ್ಕೋರ್: ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 226 (ಕೆ.ಎಲ್. ಶ್ರೀಜಿತ್ 59, ಪ್ರವೀಣ್ ದುಬೆ ಔಟಾಗದೇ 45, ಸಮಿತ್ ದ್ರಾವಿಡ್ 39; ಸಿ.ಎ. ಕಾರ್ತಿಕ್ 49ಕ್ಕೆ 3); ಕೋಸ್ಟಲ್ ಕಿಂಗ್ಸ್ ಮಂಗಳೂರು: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 206 (ಸೂರಜ್ ಅಹುಜಾ ಔಟಾಗದೇ 96, ಸಿ.ಎ. ಕಾರ್ತಿಕ್ ಔಟಾಗದೇ 49. ಶುಭಾಂಗ್ ಹೆಗ್ಡೆ 31ಕ್ಕೆ 2).

ಪಂದ್ಯದ ಆಟಗಾರ: ಶುಭಾಂಗ್ ಹೆಗ್ಡೆ

ಯೋಧಾಸ್‌ಗೆ ಮಣಿದ ಟೈಗರ್ಸ್

ಮೈಸೂರು: ಆಲ್‌ರೌಂಡ್ ಆಟವಾಡಿದ ಶಿವಮೊಗ್ಗ ಯೋಧಾಸ್ ತಂಡವು 42 ರನ್‌ಗಳಿಂದ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಸುಲಭ ಜಯ ಸಾಧಿಸಿತು.

ಬುಧವಾರದ ಎರಡನೇ ಪಂದ್ಯದಲ್ಲಿ ಶಿವಮೊಗ್ಗ ನೀಡಿದ 221 ರನ್‌ಗಳ ದೊಡ್ಡ ಮೊತ್ತ ಬೆನ್ನಟ್ಟಿದ ಹುಬ್ಬಳ್ಳಿ 19.3 ಓವರ್‌ಗಳಲ್ಲಿ 178 ಗಳಿಸಲಷ್ಟೇ ಶಕ್ತವಾಯಿತು. ಆರಂಭಿಕರಾದ ಮೊಹಮ್ಮದ್ ತಾಹಾ (44), ಹಾರ್ದಿಕ್ ರಾಜ್ (43) ಹಾಗೂ ಕೊನೆಯಲ್ಲಿ ಮಯಂಕ್ ಅಗರವಾಲ್ (28) ಗೆಲುವಿಗಾಗಿ ಹೋರಾಟ ನಡೆಸಿದರು. ಅಭಿಲಾಷ್ 17ಕ್ಕೆ3 ವಿಕೆಟ್ ಗಳಿಸಿದರು.

ಟಾಸ್ ಗೆದ್ದು ಬ್ಯಾಟ್ ಮಾಡಿದ ಶಿವಮೊಗ್ಗ, ಎಂ.ಜಿ. ನವೀನ್ (75) ಹಾಗೂ ಲವನೀತ್ ಸಿಸೋಡಿಯ (57) ಅವರ ಅರ್ಧಶತಕಗಳ ನೆರವಿನಿಂದ 5 ವಿಕೆಟ್‌ಗೆ 220 ರನ್ ಪೇರಿಸಿತ್ತು.

ಇಂದಿನ ಪಂದ್ಯಗಳು:
ಕೋಸ್ಟಲ್ ಕಿಂಗ್ಸ್ ಮಂಗಳೂರು– ಮೈಸೂರು ವಾರಿಯರ್ಸ್ (ಮಧ್ಯಾಹ್ನ 2.30)
ಹುಬ್ಬಳ್ಳಿ ಟೈಗರ್ಸ್– ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 7)

ಏಕದಿನ ರ‍್ಯಾಂಕಿಂಗ್: ಎರಡನೇ ಸ್ಥಾನಕ್ಕೆ ಗಿಲ್

ದುಬೈ (ಪಿಟಿಐ): ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಐಸಿಸಿ ಏಕದಿನ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ವಿಭಾಗದಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ. ನ್ಯೂಜಿಲೆಂಡ್‌ನ ಡೇರಿಲ್ ಮಿಚೆಲ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ಬುಧವಾರ ನೂತನ ಕ್ರಮಾಂಕಪಟ್ಟಿಯನ್ನು ಪ್ರಕಟಿಸಿದೆ. ಟೆಸ್ಟ್ ಬೌಲರ್‌ಗಳ ವಿಭಾಗದಲ್ಲಿ ನ್ಯೂಜಿಲೆಂಡ್ ವೇಗಿ ಮ್ಯಾಟ್ ಹೆನ್ರಿ ಅವರು ಜಸ್‌ಪ್ರೀತ್ ಬೂಮ್ರಾ ಅವರೊಂದಿಗೆ ಜಂಟಿ ಅಗ್ರಸ್ಥಾನ ಪಡೆದಿದ್ದಾರೆ. ಇಂಗ್ಲೆಂಡ್ ಪ್ರವಾಸದಲ್ಲಿ ಎರಡು ಪಂದ್ಯಗಳಿಂದ ಒಟ್ಟು 12 ವಿಕೆಟ್ ಗಳಿಸಿರುವ ಹೆನ್ರಿ ಅವರು ಆರು ಸ್ಥಾನಗಳಷ್ಟು ಏರಿಕೆ ಕಂಡಿದ್ದಾರೆ. ಇಬ್ಬರೂ ತಲಾ 870 ರೇಟಿಂಗ್ ಅಂಕ ಹೊಂದಿದ್ದಾರೆ.


ಶುಭಮನ್ ಗಿಲ್


ಮ್ಯಾಟ್ ಹೆನ್ರಿ

ಗಿಲ್ ಅವರು ಅಫ್ಗಾನಿಸ್ತಾನ ಎದುರಿನ ಏಕದಿನ ಸರಣಿಯಲ್ಲಿ ಎರಡು ಪಂದ್ಯಗಳಿಂದ ಒಂದು ಶತಕ ಸೇರಿ 238 ರನ್ ಗಳಿಸಿದ್ದಾರೆ. ಇದರಿಂದಾಗಿ ಅವರು ಮೂರು ಸ್ಥಾನಗಳಷ್ಟು ಬಡ್ತಿ ಪಡೆದಿದ್ದರೆ, ಗಾಯದಿಂದಾಗಿ ಸರಣಿ ತಪ್ಪಿಸಿಕೊಂಡ ವಿರಾಟ್ ಕೊಹ್ಲಿ ಅವರು ಮೂರನೇ ಸ್ಥಾನಕ್ಕೆ ಇಳಿದಿದ್ದಾರೆ. ರೋಹಿತ್ ಶರ್ಮಾ ನಾಲ್ಕನೇ ಸ್ಥಾನ ಕಾಯ್ದುಕೊಂಡಿದ್ದಾರೆ. ಬೌಲರ್‌ಗಳ ಪಟ್ಟಿಯಲ್ಲಿ ರಶೀದ್ ಖಾನ್ ಅಗ್ರಸ್ಥಾನದಲ್ಲಿ ಮುಂದುವರಿದ್ದಾರೆ.

ಇಂಗ್ಲೆಂಡ್‌ನ ಜೋ ರೂಟ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಅಗ್ರಮಾನ್ಯ ಬ್ಯಾಟರ್ ಆಗಿದ್ದಾರೆ. 871 ರೇಟಿಂಗ್ ಅಂಕ ಸಂಪಾದಿಸಿರುವ ಅವರು ಸ್ವದೇಶದ ಹ್ಯಾರಿ ಬ್ರೂಕ್ (866) ಅವರನ್ನು ಎರಡನೇ ಸ್ಥಾನಕ್ಕೆ ತಳ್ಳಿದ್ದಾರೆ.